TIGHT BINDING BOOK

UNIVERSAL
LIBRARY
OU_202131
UNIVERSAL
LIBRARY

**OSMANIA UNIVERSITY LIBRARY**

Call No. K181.1 A935 — Accession No. K7597

Author [illegible]

Title [illegible] 1953

This book should be returned on or before the date last marked below.

ಮುದ್ರಕರು :
**ಶ್ರೀ. ಶಂ. ಬಾ. ಮನಗೋಳಿ**
ಆದರ್ಶ ಮುದ್ರಣ
**೪೧೩೪, ಕಿಲ್ಲೆ, ಹುಬ್ಬಳ್ಳಿ**

( ಎಲ್ಲ ಹಕ್ಕುಗಳನ್ನು ಕಾದಿರಿಸಲಾಗಿದೆ. )

**ಬೆಲೆ : ೩ ರೂಪಾಯಿ**

ಪ್ರಕಾಶಕರು :
**ಶ್ರೀ. ನಾಡಿಗೇರ ಲಕ್ಷ್ಮಣರಾಯರು,**
ಶ್ರೀ ಅರವಿಂದ ಮತ್ತು ಶ್ರೀ ಮಾತಾ ಮಂಡಲ,
ದೇಶಪಾಂಡೆ ನಗರ, ಹುಬ್ಬಳ್ಳಿ.

# ಪ ರಿ ವಿ ಡಿ

## ವಿಭಾಗ ೧: ಶ್ರೀ ಅರವಿಂದರ ಲೇಖನಗಳು


| ಸಂಖ್ಯೆ ವಿಷಯ | | ಲೇಖಕರು | | ಪುಟ |
|---|---|---|---|---|
| ಈಶೋಪನಿಷತ್ತು (ಭಾಗ ೪) | .... | ಅನು: ರಂ. ಶ್ರೀ. ಮುಗಳಿ | ... | ೧ |
| ಸ್ವಪ್ನ | .. | ಅನು: ಸಿಂಪಿ ಲಿಂಗಣ್ಣ | .... | ೩೪ |
| ಸತ್ | ... | ಅನು: ರಾ. ಕೃ. ಪಾಳವೇಕರ | .... | ೪೩ |
| ಸಾಧಕನು ಸದಾಕಾಲ ನೆನಪಿಡಬೇಕಾದುದು | ... | ಅನು: ವಸಂತ ಕುಲಕರ್ಣಿ | ... | ೫೨ |
| ಮಾನವ ಐಕ್ಯದ ಆದರ್ಶ (ಮುನ್ನುಡಿ) | ... | ಅನು: ಸದಾನಂದ ನಾಯಿಕ | .. | ೫೪ |


## ವಿಭಾಗ ೨: ಶ್ರೀ ಮಾತೆಯವರ ಲೇಖನಗಳು



| | | | | |
|---|---|---|---|---|
| ಪ್ರಾರ್ಥನೆ-ಸಂದೇಶಗಳು | ... | ಅನು: ಸ. ಸ. ಮಾಳವಾಡ | ... | ೬೫ |
| ಶ್ರೀ ಮಾತೆಯವರ ಸ್ವನಿವೇದನೆ | .... | ಅನು: ನಾರಾಯಣ ಸಂಗಮ | ... | ೬೯ |
| ಅಂತರಾಷ್ಟ್ರೀಯ ವಿದ್ಯಾ ಕೇಂದ್ರ | ... | ಅನು: ವಸಂತ ಕುಲಕರ್ಣಿ | ... | ೭೨ |
| "ಮಾತೃವಾಣಿ" | ... | ಅನು: ಸಿಂಪಿ ಲಿಂಗಣ್ಣ | ... | ೮೦ |
| ಆಶ್ರಮದೊಳಗಿನ ಬಾಲಕರಿಗಾಗಿ | ... | ಅನು: ಎನ್ ಕೆ. ಪಾಟೀಲಕುಲಕರ್ಣಿ | | ೮೭ |


## ವಿಭಾಗ ೩: ಕವನಗಳು


| | | | | |
|---|---|---|---|---|
| ಮಹಾ ಪ್ರಸ್ಥಾನ | ... | ಅಂಬಿಕಾತನಯದತ್ತ | ... | ೮೯ |
| ಹಗಲು ಕನಸು | ... | ಗೋವಿಂದ ಪೈ | . | ೯೨ |
| ದಿವ್ಯಜೀವನ ದರ್ಶನ | ... | ಸದಾನಂದ ನಾಯಿಕ | ... | ೯೩ |
| ಮೀರಾ ಮಾತೆ | ... | ಹ. ಮ. ಬಬಲೇಶ್ವರ | ... | ೯೫ |
| ಶ್ರೀ ಮಹಾ ತಾಯಿಯವರಿಗೆ | .. | ಆದಮ ಸಾಹೇಬ | ... | ೯೬ |
| ನವೋದಯದ ಭಾಗ್ಯ | ... | ಸದಾನಂದ ನಾಯಿಕ | ... | ೯೭ |
| ಕಂಡೆ | ... | ದೇಸಾಯಿ ದತ್ತಮೂರ್ತಿ | ... | ೧೦೪ |
| ಮಹಾ ಮೌನ ಮುಕ್ತಿ | . | ದೇವದತ್ತ | ... | ೧೩೩ |
| ಗೋವಳಕೊಂಡದಲ್ಲಿಯ ತಾವರೆಗೊಳ | ... | ವಿನಾಯಕ | ... | ೧೪೨ |

## ವಿಭಾಗ ೪: ಸಂಕೀರ್ಣ ಲೇಖನಗಳು


| | | | |
|---|---|---|---|
| ಶ್ರೀ ಅರವಿಂದರ ಸಂದೇಶ | ... | ನಲಿನಿಕಾಂತ ಗುಪ್ತ<br>ಅನು: ಎ. ವೆಂಕಪ್ಪ ಶಾಸ್ತ್ರಿ | ... ೯೮ |
| ಶ್ರೀ ಅರವಿಂದರ ಅಂತರಾಷ್ಟ್ರೀಯ ವಿಶ್ವವಿದ್ಯಾನಿಲಯ ಕೇಂದ್ರ | ... | ಮಾಧವರಾವ ಪಂಡಿತ<br>ಅನು: ಪ್ರಲ್ಹಾದ ನರೇಗಲ್ಲ | ... ೧೦೫ |
| ಪೂರ್ಣಯೋಗದ ಸ್ವರೂಪ | ... | ನಾರಾಯಣ ಪ್ರಸಾದ('ಬಿಂದು')<br>ಅನು: ದೇಸಾಯಿ ದತ್ತಮೂರ್ತಿ | ... ೧೧೦ |
| ಇಂದಿನ ದಾರ್ಶನಿಕರಲ್ಲಿ ಶ್ರೀ ಅರವಿಂದರ ಸ್ಥಾನ | ... | ಎಂ. ಯಾಮುನಾಚಾರ್ಯ | ... ೧೧೫ |
| ಭಾರತ ಇತಿಹಾಸ ದರ್ಶನ | .. | "ಶಿಶು" ಮುಧುರ ಚೆನ್ನ | ... ೧೩೦ |
| ಶ್ರೀ ಅರವಿಂದರೂ ರಸಶಾಸ್ತ್ರವೂ | ... | ವಿ. ಕೃ. ಗೋಕಾಕ<br>ಅನು: ಜಿ. ಎಚ್. ಶ್ರೀಧರ | ... ೧೩೪ |
| ಜಗನ್ಮಾತೆ | ... | ಆದಮ ಸಾಹೇಬ | ... ೧೪೦ |



SRI AUROBINDO

# ಸಂದೇಶ

**ಆಗಸ್ಟ ೧೫, ೧೯೫೩**

ಎಲ್ಲರೂ ನೆನಪಿನಲ್ಲಿಡತಕ್ಕ ಸಂಗತಿಯೊಂದೇ: ಅದೆಂದರೆ, ಎಲ್ಲವನ್ನೂ ಯೋಗದ ಸಾಧನೆಯ ದೃಷ್ಟಿಯಿಂದ ಮಾಡತಕ್ಕದ್ದು; ಎಲ್ಲವನ್ನೂ ಮಾತೃಚೈತನ್ಯದಿಂದ ದಿವ್ಯ ಜೀವನವನ್ನು ಬೆಳೆಯಿಸುವಂತೆ ಮಾಡತಕ್ಕದ್ದು. ಇಲ್ಲಿ ಜೀವನದ ನಿಯಮವು ತನ್ನ ಮನಸ್ಸು ಹಾಗು ಅದರ ಕಲ್ಪನೆಗಳನ್ನೇ ಸಾಧಿಸುವೆವೆಂಬ ಹಟವೆಂದಾಗಲಿ, ಅಥವಾ ತನ್ನ ಪ್ರಾಣಮಯ ಭಾವನೆಗಳ ಹಾಗು ಪ್ರತಿಕ್ರಿಯೆಗಳ ಆಳಿಕೆಗೊಳಗಾಗುವುದೆಂದಾಗಲಿ ಎಂದೂ ಆಗಲಾರದು. ಅವುಗಳಿಂದ ನಾವು ವಿಮುಖರಾಗಿ ನಿಲ್ಲಬೇಕಾಗುವುದು; ಅಂದರೇನೇ ಒಂದು ವಿರತಿ, ಅವುಗಳ ಪ್ರತಿಯಾಗಿ ಉಚ್ಚತಮವಾದ ನಿಜವಾದ ಜ್ಞಾನವು ಲಭಿಸುವುದು. ಆಂತರಿಕ ಜ್ಞಾನದ ನಿಜವಾದ ಭಾವನೆಗಳು ಒಳಗಿಂದೊಳಗೇ ಸ್ಫುರಿಸುವುವು. ಮನಸ್ಸು ಪ್ರಾಣಗಳು ಶರಣಾಗತರಾಗದ ವಿನಹ ಹಾಗು ಸತ್ಯ, ಬಾಧ್ಯತೆ, ನ್ಯಾಯವೆಂದು ಅವು ಸಂಬೋಧಿಸುತ್ತಿರುವ ಸ್ವಾಭಾವಿಕ ಅಜ್ಞಾನದ ವಿಷಯವಾಗಿ ತಮ್ಮಲ್ಲಿರುವ ಅನುರಾಗವನ್ನು ತೊರೆದ ವಿನಹ ಅದು ಸಾಧಿಸಲಾರದು. ಅದರಿಂದಲೇ ಸದ್ಯದ ಎಲ್ಲ ತೊಡಕುಗಳೂ ಉದ್ಭವಿಸುವವು. ಅದನ್ನು ದಾಟಿದೆವೆಂದರೆ, ಜೀವನದ, ಕರ್ಮದ, ಸಾಮರಸ್ಯದ ಹಾಗು ಭಗವದೈಕ್ಯದ ನಿಜವಾದ ಮೂಲವು ಸದ್ಯದ ತೊಡಕು ತೊಂದರೆಗಳನ್ನು ಅಧಿಕಾಧಿಕವಾಗಿ ತೊಡೆದು ಹಾಕುವುದು.

—ಶ್ರೀ ಅರವಿಂದರು

# ಈಶೋಪನಿಷತ್ತು (ಭಾಗ ೪)

### ೩ ನೆಯ ಚಲನ (೧)

## ಈಶ

(ಪದ್ಯ ೮)*

**ಅವನು**

ತನ್ನ ಮೂರನೆಯ ಚಲನದಲ್ಲಿ, ಎರಡನೆಯ ಪದ್ಯದಲ್ಲಿ ಸಾಮಾನ್ಯ ಸ್ವರೂಪದಲ್ಲಿ ಈ ಮೊದಲು ಹೇಳಿದ ಕರ್ಮಗಳ ಸಮರ್ಥನೆಯನ್ನು ಈ ಉಪನಿಷತ್ತು ಎತ್ತಿಕೊಳ್ಳುತ್ತದೆ. ಮತ್ತು ಬ್ರಹ್ಮನೆಂದರೆ ಈಶನೆಂಬ ಕಲ್ಪನೆಯ ಮೇಲೆ ಅದನ್ನು ಹೆಚ್ಚು ಯಥಾರ್ಥವಾಗಿ ನಿಲ್ಲಿಸುತ್ತದೆ. 'ಈಶ, ಈಶ್ವರ. ಪರ ಪುರುಷ, ಸಃ (ಅವನು)' ವ್ಯಕ್ತಿರೂಪಕ್ಕೆ ಕಾರಣನು. ತನ್ನ ಸ್ವಯಂಭುಸ್ಥಿತಿಯಲ್ಲಿ ಶಾಶ್ವತವಾದ ಕಾಲದಲ್ಲೆಲ್ಲ ತಾನು ಬಗೆದು ಸತ್ಯ ಸೃಷ್ಟಿಗೆ ಇಳಿಸುವ ಜಗತ್ತುಗಳ ಪ್ರಕ್ರಿಯೆಯನ್ನು ಹಾಗೂ ಚಲನದ ಲಯವನ್ನು ತನ್ನ ಕರ್ಮಸಂಬಂಧಿಯಾದ ನಿಯಮದಿಂದ ನಿಯಂತ್ರಿಸುತ್ತಾನೆ.

ಉಪನಿಷತ್ತುಗಳು ನಿರ್ವ್ಯಕ್ತಿಕವಾದ (ನಿರ್ಗುಣ) ಮತ್ತು ನಿಷ್ಕ್ರಿಯವಾದ ಬ್ರಹ್ಮ ಅಂದರೆ ಗುಣ ಇಲ್ಲವೆ ಶಕ್ತಿ ಇಲ್ಲದ ನಿರ್ಗುಣ ಬ್ರಹ್ಮನೊಬ್ಬನೇ ನಿಜವಾಗಿ ಇರುವನೆಂದು ತಿಳಿಸುತ್ತವೆಯೆಂದು ತಿಳಿಯುವುದು ತಪ್ಪಾಗುತ್ತದೆ. ಆದರೆ ವ್ಯಕ್ತಿರೂಪ ಮತ್ತು ನಿರ್ವ್ಯಕ್ತಿರೂಪ ಈ ಎರಡೂ ಮುಖಗಳಲ್ಲಿ ಅಜ್ಞೇಯ ಶಕ್ತಿಯೊಂದು ನಮಗೆ ಪ್ರಕಟಗೊಳ್ಳುವದೆಂದು ಅವು ಸಾರುತ್ತವೆ ಈ ಅಜ್ಞೇಯವನ್ನು ಕುರಿತು ಅತ್ಯಂತ ವ್ಯಾಪಕ ಮತ್ತು ಸಾಮಾನ್ಯ ರೀತಿಯಲ್ಲಿ ಮಾತಾಡಬೇಕೆಂದು ಅವು ಬಯಸಿದಾಗ, ನಪುಂಸಕ ಲಿಂಗವನ್ನು ಉಪಯೋಗಿಸಿ ಅದಕ್ಕೆ ತತ್ (ಅದು) ಎಂದು ಕರೆಯುತ್ತವೆ. ಆದರೆ ಜಗತ್ತನ್ನು ನಿಯಾಮಿಸುವ ವಿಶ್ವವ್ಯಾಪಿಯಾದ ಮತ್ತು ವಿಶ್ವಾತೀತವಾದ ವ್ಯಕ್ತಿರೂಪದ ಮುಖವನ್ನು ಈ ನಪುಂಸಕ ರೂಪವು ಹೊರಪಡಿಸುವುದಿಲ್ಲ. (ನೋ-ಕೇನೋಪನಿಷತ್ ೩) ಆದರೂ ಅವು ಯಾವಾಗ ಆ ಕಲ್ಪನೆಯನ್ನು ಎತ್ತಿ ತೋರಿಸಬೇಕೆನ್ನುವವೋ ಆಗ ಪುಲ್ಲಿಂಗದ ಸಃ (ಅವನು) ಎಂಬ ರೂಪವನ್ನೇ ಹೆಚ್ಚಾಗಿ ಬಳಸುತ್ತವೆ ಅಥವಾ ದೇವ ಇಲ್ಲವೆ . ಸಚೇತನಪುರುಷ ಎಂಬುದನ್ನು ಉಪಯೋಗಿಸುತ್ತವೆ. ಪ್ರಕೃತಿ ಅಥವಾ ಮಾಯೆ ಆ ಸಚೇತನ ಪುರುಷನ ಕಾರ್ಯಪರವಾದ ಶಕ್ತಿಯೆಂದು ಹೇಳುತ್ತವೆ.

---

* ಅವನೇ ಸರ್ವತ್ರ ಹೋದವನು—ಶುಭ್ರ, ಅಶರೀರ, ಅಪೂರ್ಣತೆಯ ಕಲಂಕರಹಿತ, ಸಿರಗಳಿಲ್ಲದಾತ, ಶುದ್ಧ, ಪಾಪ ಇಲ್ಲವೆ ಕೆಡುಕಿನಿಂದ ಅವಿದ್ಧನಾದ ಅವನು, ದ್ರಷ್ಟಾ, ಮನೀಷಿ, ಪರಿಭೂ (ಸರ್ವತ್ರ ಆಗತಕ್ಕವನು), ಸ್ವಯಂಭು ಆದ ಅವನು ಶಾಶ್ವತವಾದ ಕಾಲದಿಂದ ಸ್ವಭಾವಕ್ಕನುಗುಣವಾಗಿ ಪದಾರ್ಥಗಳನ್ನು ಪರಿಪೂರ್ಣವಾಗಿ ವಿಧಿಸಿದ್ದಾನೆ.

ಅನೇಕ ಅಂಗ ಮತ್ತು ರೂಪಗಳಲ್ಲಿ ಅಭಿವ್ಯಕ್ತವಾಗುವ ಕೇವಲ ಸತ್ಯವೆಂದರೆ ಬ್ರಹ್ಮನು, ಈ ಬ್ರಹ್ಮನೆಂದರೆ ನಮ್ಮೊಳಗಿನ ಆತ್ಮನು, ಎಲ್ಲ ಪ್ರಪಂಚಗತ ವಸ್ತುಗಳು ಅವನ ಸತ್ತೆಯಿಂದ ಆಗುತ್ತವೆ, ಅವನನ್ನು ನಾವು ನಮ್ಮಲ್ಲಿ, ಎಲ್ಲ ವಸ್ತುಗಳಲ್ಲಿ ಮತ್ತು ಎಲ್ಲ ವಸ್ತುಗಳಾಚೆಯಲ್ಲಿ ಕಾಣಬೇಕು ಎಂದು ಆತ್ಮನಿಷ್ಠವಾಗಿ ಹೇಳಿದ ಈಶೋಪನಿಷತ್ತು ಅದೇ ಬ್ರಹ್ಮನನ್ನು ಈಶ, ಜಗತ್ತನ್ನು ತನ್ನಲ್ಲಿ ಧರಿಸಿ ಅದರಲ್ಲಿ ವಾಸವಾಗಿರುವವನು ಎಂದು ಹೆಚ್ಚು ವಸ್ತುಗತವಾಗಿ ಸ್ಫುಟಗೊಳಿಸುತ್ತದೆ.

## ಆತನೇ

ಸರ್ವತ್ರ ಹೋದವನು. ಈ ಬ್ರಹ್ಮ, ಈ ಆತ್ಮ ಎಂದರೂ ಒಂದೇ, 'ಈಶಾವಾಸ್ಯಮಿದಂ' ಎಂಬ ಪ್ರಾರಂಭದ ಶ್ಲೋಕದಲ್ಲಿ ಹೇಳಿದ ಈಶ ಎಂದರೂ ಒಂದೇ. ೧೬ನೆಯ ಶ್ಲೋಕದಲ್ಲಿ 'ಯೊಸಾವಸೌಪುರುಷಃಸೋಹಮಸ್ಮಿ' (ಆ ಪುರುಷನೆಂದರೆ ನಾನೇ) ಎಂದು ಮುಂದೆ ಹೇಳಲಾದ ಸರ್ವಗತನಾದ ಪುರುಷನೆಂದರೂ ಅವನೇ. ಆತನೇ ಎಲ್ಲ ವಸ್ತು, ಎಲ್ಲ ಸತ್ತೆಗಳಾಗಿರುವವನು. ಅವನು ಚಿತ್ ಪುರುಷ, ಕೇವಲ ಸತ್ತೆ, ಸ್ವಯಂಭು, ತಾನು ಆಗಿರುವುದೆಲ್ಲದರ ಒಡೆಯನಾಗಿ ಅದನ್ನು ಭೋಗಿಸತಕ್ಕವನು. ಜಗತ್ತು ಎಂದು ನಾವು ಯಾವುದಕ್ಕೆ ಕರೆಯುತ್ತೇವೆಯೊ ಅದು ಈಶ್ವರನ ಸಂಭೂತಿ (ಆಗುವಿಕೆ). ಈ ಸಂಭೂತಿಯ ಸ್ವರೂಪ, ಕ್ರಮ, ಸಾಮಾನ್ಯ ನಿಯಮ ಇವನ್ನು ಈ ಉಪನಿಷತ್ತು ಸೂತ್ರ ಬದ್ಧವಾಗಿ ಹೇಳಲು ಸಾಗುತ್ತದೆ. ಯಾಕಂದರೆ ಮೃತ್ಯು ಮತ್ತು ಅಮೃತತ್ವ ಈ ಎರಡು ತುದಿಗಳ ಬಗ್ಗೆ ವೈದಿಕಕಲ್ಪನೆ, ಅವಿದ್ಯೆಯ ಅಸ್ತಿತ್ವಕ್ಕೆ ಕಾರಣ, ಜಗತ್ತಿನಲ್ಲಿ ಕರ್ಮಗಳ ಸಮರ್ಥನೆ ಇವು ಈ ವಿಚಾರ ಇಲ್ಲವೆ ವಿಭಾವನವನ್ನು ಅವಲಂಬಿಸಿರುತ್ತವೆ.

## ಸಂಕ್ರಮಣಾತ್ಮಕ ವಿಚಾರ

ದಿವ್ಯ ವ್ಯಕ್ತಿರೂಪ

ವ್ಯಕ್ತಿಗತ ಇಲ್ಲವೆ ಸಗುಣ ಈಶ್ವರನ ರೂಢಕಲ್ಪನೆಗಳೊಡನೆ ಆತ, ದೇವ, ಈಶ್ವರ, ಎಂಬಲ್ಲಿಯ ವೇದಾಂತಿಕ ಕಲ್ಪನೆಯನ್ನು ಒಂದುಗೊಳಿಸಿ ಗೊಂದಲಿಸಬಾರದು. ಸಾಮಾನ್ಯವಾಗಿ ವ್ಯಕ್ತಿರೂಪವೆಂದರೆ ವ್ಯಕ್ತಿತ್ವವೆಂದು ತಿಳಿಯುತ್ತಾರೆ. ವ್ಯಕ್ತಿಗತ ಈಶ್ವರನೆಂದರೆ ಆತನ ಸ್ವಭಾವವುಳ್ಳ ಮನುಷ್ಯನಂತೆ ದೊಡ್ಡದುಮಾಡಿದ ವ್ಯಕ್ತಿ, ಆದರೂ ಮನುಷ್ಯನಿಗಿಂತ ಬೇರೆ, ಹೆಚ್ಚು ವಿಶಾಲ ಮತ್ತು ಸರ್ವಶಕ್ತನೆಂದೂ ವಾಡಿಕೆಯ ಕಲ್ಪನೆಯಿರುತ್ತದೆ. ಮನುಷ್ಯರೂಪದಲ್ಲಿ ಮನುಷ್ಯನ ಸಲುವಾಗಿ ಬ್ರಹ್ಮನು ಪ್ರಕಟಗೊಳ್ಳುವನೆಂಬುದನ್ನು ವೇದಾಂತವು ಒಪ್ಪುತ್ತದೆ, ಆದರೆ ಅದು ಈಶ್ವರನ ನಿಜ ಸ್ವರೂಪವೆಂದು ಒಪ್ಪುವುದಿಲ್ಲ.

ದೇವನೆಂದರೆ ಸಚ್ಚಿದಾನಂದ. ಅನಂತ ಸತ್ತಾರೂಪದಲ್ಲಿ ದೇವನು ಪ್ರಕಟನಾಗುತ್ತಾನೆ. ಅದರ ಸಾರಭೂತ ಅಂಶವೆಂದರೆ ಪ್ರಜ್ಞೆ, ಅತ್ಯಂತಸುಖ, ಸ್ವಾನಂದ. ಆನಂದವು ತನ್ನ ವಿವಿಧತೆಯನ್ನು ತಾನು ಅರಿತು ಅದನ್ನು ಅರಸುತ್ತಲಿರುವಾಗಲೇನೊ ವಿಶ್ವವಾಗುವುದೆಂದೆನಿಸುತ್ತದೆ. ಆದರೆ ಇವು ಅಮೂರ್ತಪದಗಳು. ಅಮೂರ್ತಕಲ್ಪನೆಗಳು ತಮ್ಮಷ್ಟಕ್ಕೆ ಮೂರ್ತ ವಸ್ತುಗಳನ್ನು ಹುಟ್ಟಿಸಲಾರವು. ಅವು ನಿರ್ವ್ಯಕ್ತಿಕವಾದ ಅವಸ್ಥೆಗಳು, ನಿರ್ವ್ಯಕ್ತಿಕ ಅವಸ್ಥೆಗಳು ತಮ್ಮಷ್ಟಕ್ಕೆ ವ್ಯಕ್ತಿಪರವಾದ ಪ್ರವೃತ್ತಿಗಳನ್ನು ಹುಟ್ಟಿಸಲಾರವು.

ಸಚ್ಚಿದಾನಂದದ ಅಭಿವ್ಯಕ್ತಿ ಹೇಗೆಂಬುದನ್ನು ನೋಡಿದರೆ ಇದು ಇನ್ನಷ್ಟು ಸ್ಫುಟವಾಗುತ್ತದೆ. ಆ ಅಭಿವ್ಯಕ್ತಿಯಲ್ಲಿ ಆನಂದವು ಪ್ರೇಮವಾಗಿ ಪರಿವರ್ತನಗೊಳ್ಳುತ್ತದೆ; ಪ್ರಜ್ಞೆ ಮಾನಸ ಪ್ರತ್ಯಯ ಮತ್ತು ಕಾರ್ಯಶಕ್ತಿ ಇವುಗಳ ಇಬ್ಬಗೆಯಲ್ಲಿ ರೂಪಾಂತರವಾಗುತ್ತದೆ; ಸತ್ತೆ ಇದು ವ್ಯಕ್ತಿ ಮತ್ತು ಪದಾರ್ಥ ಇವುಗಳಲ್ಲಿ ಮಾರ್ಪಡುತ್ತದೆ. ಆದರೆ ಪ್ರೇಮಿ ಮತ್ತು ಪ್ರೇಮದ ವಸ್ತು ಇಲ್ಲದೆ ಪ್ರೇಮವು ಅಪೂರ್ಣವಾಗುತ್ತದೆ,

ಜ್ಞಾನವು ಜ್ಞಾನಿ ಮತ್ತು ಜ್ಞಾನ ವಿಷಯವಿಲ್ಲದೆ ಅಪೂರ್ಣವಾಗುತ್ತದೆ, ಕರ್ಮಿ ಮತ್ತು ಕರ್ಮವಿಲ್ಲದೆ ಶಕ್ತಿ ಅಪೂರ್ಣವಾಗುತ್ತದೆ, ತನ್ನನ್ನು ಅರಿತು ರಚಿಸುವ ವ್ಯಕ್ತಿ ಇಲ್ಲದೆ ಸಾರವಸ್ತು ಅಪೂರ್ಣವಾಗುತ್ತದೆ.

ಮೂಲವಸ್ತುಗಳೂ ಸಹ ಅವ್ಯಕ್ತಿಕವಾದ ಅಮೂರ್ತಭಾವಗಳಲ್ಲವೆಂಬುದು ಇದಕ್ಕೆ ಕಾರಣ. ಬ್ರಹ್ಮಾನಂದದಲ್ಲಿ ಆನಂದ ಭೋಗಿ ಒಬ್ಬನಿರುತ್ತಾನೆ, ಬ್ರಹ್ಮ ಪ್ರಜ್ಞೆಯಲ್ಲಿ ಒಬ್ಬ ಚಿತ್‌ಪುರುಷನಿದ್ದಾನೆ, ಬ್ರಹ್ಮ ಸತ್ತೆಯಲ್ಲಿ ಒಬ್ಬ ಸತ್ತೆಯುಳ್ಳವನಿರುತ್ತಾನೆ. ಆದರೆ ಬ್ರಹ್ಮನ ಆನಂದ, ಪ್ರಜ್ಞೆಗಳ ಉದ್ದೇಶ ಮತ್ತು ಅದರ ಸತ್ತೆಯ ಮೂಲವಸ್ತು ಹಾಗೂ ಸಾರ ಇವೆಲ್ಲವೂ ಅದೊಂದೇ ಬ್ರಹ್ಮ ಆಗಿರುತ್ತವೆ. ದಿವ್ಯ ಸತ್ತೆಯಲ್ಲಿ ಜ್ಞಾನ, ಜ್ಞಾನಿ ಮತ್ತು ಜ್ಞಾತ ಅಂತೇ ಅವಶ್ಯವಾಗಿ ಆನಂದ, ಭೋಗಿ ಮತ್ತು ಭೋಗ್ಯ ಎಲ್ಲವೂ ಒಂದೇ.

ಬ್ರಹ್ಮನ ಆತ್ಮಪ್ರಜ್ಞೆ ಮತ್ತು ಆತ್ಮಾನಂದಕ್ಕೆ ಅದರ ಶಕ್ತಿಯು ಎರಡು ಪ್ರಕಾರಗಳಿರುತ್ತವೆ. ಪ್ರಕೃತಿ ಅಥವಾ ಮಾಯೆಯೆಂಬ ಈ ಶಕ್ತಿ ತನ್ನಲ್ಲಿ ತಾನು ಲೀನವಾಗಿರುವುದರಲ್ಲಿ ಉತ್ಕಟವಾಗಿರುವುದೊಂದು, ತನ್ನನ್ನು ವಿಸ್ತರಗೊಳಿಸುವುದರಲ್ಲಿ ವ್ಯಾಪಕವಾಗಿರುವುದಿನ್ನೊಂದು. ಶುದ್ಧ ಮತ್ತು ಶಾಂತಬ್ರಹ್ಮನಿಗೆ ಉತ್ಕಟ ಪ್ರಕಾರ ಉಚಿತವಾದರೆ ಸಕ್ರಿಯಬ್ರಹ್ಮನಿಗೆ ವ್ಯಾಪಕ ಪ್ರಕಾರ ಯೋಗ್ಯ. ಸ್ವಯಂಭು ಆದ ಈಶ್ವರನು ತನ್ನ ಅಸ್ತಿತ್ವದ ಮೂಲವಸ್ತು ಮತ್ತು ಸಾರದಲ್ಲಿ ಹೊಂದುವ ವಿಸ್ತರಣೆಗೇ ನಾವು ಜಗತ್ತು, ಭುವನ, ಶಾಶ್ವತವಾದ ಚಲನ ಎಂದು ಕರೆಯುತ್ತೇವೆ. ಬ್ರಹ್ಮನೇ ಆಗುತ್ತಾನೆ, ಅವನೇನು ಆಗುತ್ತಾನೋ ಅದೂ ಬ್ರಹ್ಮವೇ. ಪ್ರೇಮದ ಉದ್ದೇಶವೆಂದರೆ ಪ್ರೇಮಿಯ ಆತ್ಮ; ಕರ್ಮವೆಂದರೆ ಕರ್ಮನಿರತನ ಆತ್ಮರೂಪಣ; ವಿಶ್ವವೆಂದರೆ ಈಶನ ಶರೀರ ಮತ್ತು ಕಾರ್ಯ.

ಆದ್ದರಿಂದ ಅನಂತ ಸತ್ತೆಯ ಅಮೂರ್ತ ಮತ್ತು ಅವ್ಯಕ್ತಿಕ ಅಂಗವನ್ನು ಪರಿಶೀಲಿಸುವಾಗ 'ಅದು' ಎನ್ನುತ್ತೇವೆ; ಸ್ವಯಂ ಪ್ರಜ್ಞವಾದ ಮತ್ತು ಸ್ವಾನಂದಿಯಾದ ಶಕ್ತಿಯನ್ನು ಪರಿಶೀಲಿಸುವಾಗ 'ಅವನು ಎನ್ನುತ್ತೇವೆ. ಎರಡರಲ್ಲಿ ಯಾವೊಂದು ಕಲ್ಪನೆಯೂ ಸಮಗ್ರವಾಗಿ ಪೂರ್ಣವಲ್ಲ. ಬ್ರಹ್ಮನು ವ್ಯಕ್ತಿ-ಅವ್ಯಕ್ತಿಗಳ ವಿಚಾರಗಳಾಚೆ ಇರುವ ಅಜ್ಞೇಯನಾಗಿದ್ದಾನೆ. ಅದನ್ನು ನಾವು 'ಅದು' ಎಂದು ಕರೆಯಬಹುದು. ಹೀಗೆ ಕರೆದರೆ ಎಲ್ಲ ತರದ ಲಕ್ಷಣ ಹೇಳುವುದನ್ನು ನಮ್ಮ ಮಾತಿನಿಂದ ನಾವು ಹೊರಪಡಿಸುತ್ತೇವೆ. 'ಅವನು'ಎಂದೂ ನಾವು ಕರೆಯಬಹುದು. ಹೀಗೆ ಕರೆಯುವಾಗಲೂ ಅದೇ ರೀತಿಯ ನಿಷ್ಕೃಷ್ಟವಾದ ಬಹಿಷ್ಕರಣದ ಉದ್ದೇಶ ವಿರಬೇಕು. ತತ್ (ಅದು) ಮತ್ತು ಸಃ (ಅವನು) ಇವು ಯಾವಾಗಲೂ ಒಂದೇ, ಲಕ್ಷಣವನ್ನು ಮೀರಿದ ಒಂದು ವಸ್ತು.

ಒಂದುತನ ಮತ್ತು ಹಲವುತನ ಇವುಗಳ ನಿತ್ಯಸಂಬಂಧವು ವಿಶ್ವದಲ್ಲಿರುತ್ತದೆ. ವಿಶ್ವವ್ಯಕ್ತಿರೂಪ ಮತ್ತು ಅನೇಕ ವ್ಯಕ್ತಿಗಳು, ಏಕ ಮತ್ತು ಅನೇಕ ಇವುಗಳಲ್ಲಿ ಅದು ಅಭಿವ್ಯಕ್ತವಾಗುತ್ತದೆ. ಅನೇಕ ಎಂಬವುಗಳೊಳಗೆ ಸಹ ಅನಂತವಾದ ಸಂಬಧಗಳ ವೈವಿಧ್ಯವಿರುವ ಸಂಬಧವಿರುತ್ತದೆ. ದಿವ್ಯಸತ್ತೆಯಾದ ಈಶ್ವರನು ತನ್ನ ಪ್ರಕಟವಾದ ಆವಾಸಗಳಲ್ಲಿ ನೇರ ನಡೆಸುವ ಲೀಲೆಯಿಂದ ಈ ಸಂಬಂಧಗಳ ನಿರ್ಣಯವಾಗುತ್ತದೆ. ಮೊದಲು ವೈಯಕ್ತಿಕ ಜೀವಗಳಲ್ಲಿ ಸಜ್ಞಾನ ಸಂಬಂಧಗಳಾಗಿ ಅವು ಇರುತ್ತವೆ. ಆಮೇಲೆ ಏಕವಸ್ತುವಿನಕೂಡ ಸಜ್ಞಾನ ಸಂಬಂಧವನ್ನು ಬೆಳೆಸಲು ಸಾಧನವೆಂದು ಆ ಜೀವಗಳು ಅವನ್ನು ಬಳಸುತ್ತವೆ. ಏಕವಸ್ತುವಿನ ಕೂಡ ತರತರದ ಸಂಬಂಧಗಳನ್ನು ಬೆಳೆಸುವುದೇ ಧರ್ಮದ ಉದ್ದೇಶ ಮತ್ತು ಕಾರ್ಯವಾಗಿದೆ. ಈ ಮೂಲ ಭೂತವಾದ ಆವಶ್ಯಕತೆ ಎಲ್ಲ ಧರ್ಮಗಳನ್ನು ಸಮರ್ಥಿಸುತ್ತದೆ; ಎಲ್ಲ ಧರ್ಮಗಳು ಒಂದೇ ಸತ್ಯವನ್ನು ವಿವಿಧ ರೀತಿಯಲ್ಲಿ ಹೇಳುತ್ತವೆ, ಒಂದೇ ಗುರಿಯತ್ತ ವಿವಿಧ ಮಾರ್ಗಗಳಿಂದ ನಡೆಯುತ್ತವೆ.

ದಿವ್ಯವ್ಯಕ್ತಿರೂಪವು ವೈಯಕ್ತಿಕ ಜೀವಕ್ಕೆ ಹಲವಾರು ನಾಮರೂಪಗಳಲ್ಲಿ ಪ್ರಕಟವಾಗುತ್ತದೆ. ಈ ನಾಮರೂಪಗಳು ಒಂದರ್ಥದಲ್ಲಿ ಮನುಷ್ಯಪ್ರಜ್ಞೆಯಲ್ಲಿ ಹುಟ್ಟಿದುವು; ಆದರೆ ಇನ್ನೊಂದು ಅರ್ಥದಲ್ಲಿ ಅವು ದಿವ್ಯವು ಪ್ರಕಟಗೊಳಿಸಿದ ನಿತ್ಯಪ್ರತೀಕಗಳು. ಹೀಗೆ ಅದು ಮನೋರೂಪದಲ್ಲಿ ಅನೇಕ ಪ್ರಜ್ಞೆಗೆ ತನ್ನನ್ನು ಮೂರ್ತಗೊಳಿಸಿ ತನ್ನ ಏಕತ್ವಕ್ಕೆ ಅದು ತಿರುಗಿ ಬರುವಂತೆ ನೆರವಾಗುತ್ತದೆ.[೧]

ಅವನೇ ಸಾಪೇಕ್ಷ ಪ್ರಜ್ಞೆಯಲ್ಲಿ ತನ್ನನ್ನು ಹರಡಿಕೊಂಡಿದ್ದಾನೆ. ಈ ಪ್ರಜ್ಞೆಯ ಸಾಂತ ಮತ್ತು ವಿಕಾರಹೊಂದುವ ಪರಿಸ್ಥಿತಿಗಳ ಸಾಕಲ್ಯವು ಅಷ್ಟೇ ಅವಿಕಾರ್ಯ ಮತ್ತು ನಿತ್ಯವಾದ ಅನಂತವನ್ನು ಅವಲಂಬಿಸಿರುತ್ತದೆ. ಇದಕ್ಕೆ ನಾವು ವಿಶ್ವ ಎನ್ನುತ್ತೇವೆ. 'ಸಪರ್ಯಗಾತ್' ಆದ್ದರಿಂದ ಈ ವಿಸ್ತರಣೆಯಲ್ಲಿ ಎರಡು ಅಂಗಗಳಿವೆ, ಒಂದು ಶುದ್ಧ, ಅನಂತ ಸಂಬಂಧ ರಹಿತವಾದ ಅವಿಕಾರ್ಯತೆಯದು, ಇನ್ನೊಂದು ಕಾಲದೇಶದಲ್ಲಿ ಕಾರ್ಯಕಾರಣ ಭಾವದಿಂದ ತಮ್ಮ ಸಂಬಂಧಗಳನ್ನು ಬೆಳೆಸಿಕೊಳ್ಳುವ ವಸ್ತುಗಳ ಸಾಕಲ್ಯದ್ದು. ಎರಡೂ ಬೇರೆಯಾಗಿದ್ದು, ಅದೇ ಅಜ್ಞೇಯವಾದ 'ಅವನ' ಅನ್ಯೋನ್ಯಪೋಷಕ ಅಭಿವ್ಯಕ್ತಿಗಳಾಗಿರುತ್ತವೆ.

ಅನಂತ ಅವಿಕಾರ್ಯತೆಯನ್ನು ತಿಳಿಸಲು ಉಪನಿಷತ್ತು ನಪುಂಸಕಲಿಂಗದಲ್ಲಿಯ ವಿಶೇಷಣ ಮಾಲಿಕೆಯನ್ನು ಉಪಯೋಗಿಸುತ್ತದೆ; "ಶುಭ್ರ, ಅಶರೀರ, ಕಲಂಕರಹಿತ, ಸಿರಗಳಿಲ್ಲದಾತ, ಶುದ್ಧ, ಕೆಡುಕಿನಿಂದ ಅವಿದ್ಧನಾದ". ಅದೇ ಕೇವಲವನ್ನು ವಸ್ತುಗಳ ಸಾಕಲ್ಯಕ್ಕೆ ಮತ್ತು ಆ ಸಾಕಲ್ಯದಲ್ಲಿಯ ಪ್ರತಿಯೊಂದು ವಸ್ತುವಿಗೆ (ಭಗತ್ಯಾಂಜಗತ್)

ಕಾರಣ, ಈಶ ಎಂಬುದನ್ನು ತಿಳಿಸಲು ಉಪನಿಷತ್ತು ನಾಲ್ಕು ಪುಲ್ಲಿಂಗ ವಿಶೇಷಣಗಳನ್ನು ಉಪಯೋಗಿಸುತ್ತದೆ. "ದ್ರಷ್ಟಾ, ಮನೀಷಿ, ಪರಿಭು, ಸ್ವಯಂಭು"

'ಸಮಂ ಬ್ರಹ್ಮ' (ಭಗವದ್ಗೀತೆ) ಎಲ್ಲ ವಸ್ತುಗಳಲ್ಲಿ ಸಮಾನವಾಗಿ ನಿಷ್ಪಕ್ಷಪಾತವಾಗಿ ವಿಸ್ತರಣೆ ಹೊಂದಿದ ಲೀಲೆ ಮತ್ತು ಚಲನಕ್ಕೆ ಸ್ತಬ್ಧ ಮತ್ತು ಗುಪ್ತವಾದ ಅಧಿಷ್ಠಾನವಾಗಿ ಅವಿಕಾರ್ಯವಾದ ಸ್ವರೂಪವು ಇರುತ್ತದೆ. ಅದು ಆಯ್ಕೆ ಮಾಡದೆ ಅಥವಾ ಕ್ರಿಯಾಶೀಲವಾದ ಭಾಗವನ್ನು ವಹಿಸದೆ ಎಲ್ಲದಕ್ಕೂ ತನ್ನ ಬೆಂಬಲ ಕೊಡುತ್ತದೆ. ತನ್ನ ನಿತ್ಯವಾದ ಅವಿಕಾರ್ಯತೆಯಲ್ಲಿ ಸ್ವತಂತ್ರನೂ ಸ್ಥಿರನೂ ಆಗಿದ್ದು, ಲೀಲೆ ಚಲನಗಳಲ್ಲಿ ಈಶ್ವರನು ತನ್ನನ್ನು ಪಸರಿಸಿಕೊಳ್ಳುತ್ತಾನೆ. ಹೀಗೆ ತನ್ನ ಸತ್ತೆಯಲ್ಲಿ ತನ್ನಲ್ಲಿಯ ದ್ರಷ್ಟಾರನು ಕಂಡದ್ದು ಮತ್ತು ಮನೀಷಿ ಬಗೆದದ್ದು ಎರಡೂ ಆಗುತ್ತಾನೆ: 'ಕವಿರ್ಮನೀಷೀ ಪರಿಭೂಃ ಸ್ವಯಂಭೂಃ'

## ಶುದ್ಧ ಅವಿಕಾರ್ಯ

ಈಶನ ಶುದ್ಧ ಅವಿಕಾರ್ಯ ಸ್ವರೂಪವು 'ಶುಭ್ರ'ವಾಗಿರುತ್ತದೆ. ಶುದ್ಧ ಮತ್ತು ಏಕಾಗ್ರವಾದ ಆತ್ಮ ಪ್ರಜ್ಞೆಯ ಪ್ರಭೆಯದು. ವಕ್ರೀಕರಣದಿಂದ ಅದು ಒಡೆದುದಲ್ಲ, ರೂಪ ವರ್ಣಗಳಲ್ಲಿ ಹರಿಹಂಚಾದುದಲ್ಲ. ಅದು ಪುರುಷನ ಕೇವಲ ಆತ್ಮ ಜ್ಞಾನ, ಚಿದಾತ್ಮ. ಅದರ ಶಕ್ತಿ, ಕಾರ್ಯ ಸಾಮರ್ಥ್ಯ ಅದರೊಳಗೆ ಅಕ್ರಿಯವಾಗಿ ಸೇರಿರುತ್ತದೆ.

ಅದು ಅಶರೀರ,— ರೂಪವಿಲ್ಲದ್ದು ಅಭೇದ್ಯ, ಭೇದದ ತೋರಿಕೆ ಕೂಡ ಇಲ್ಲದ್ದು.

---

೧ ಈ ವಿಚಾರಗಳು ತಮ್ಮ ಸಾರದಲ್ಲಿ ತಾತ್ವಿಕ ಹಿಂದೂ ಧರ್ಮದಲ್ಲಿ ತರುವಾಯದ ಸೇರ್ಪಡೆಯೆಂದು ತಿಳಿಯುವುದು ತಪ್ಪಾಗುತ್ತದೆ. ಏಂದರೆ ಹಲವು ನಾಮರೂಪಗಳ ಕಲ್ಪನೆ ಋಗ್ವೇದದಲ್ಲಿಯೆ ಬಂದಿದ್ದು ಅಷ್ಟು ಪ್ರಾಚೀನವಾಗಿದೆ.

ಎಲ್ಲ ವಸ್ತುಗಳಲ್ಲಿರುವ ಒಂದು ಸಮಾನ ಪುರುಷ, ಕಾಲದೇಶಾದಿ ವಿಭಾಗಗಳಿಂದ ಅಭಿನ್ನವಾದ, ಶುದ್ಧವಾದ, ಆತ್ಮ ಪ್ರಜ್ಞವಾದ ಕೇವಲತೆಯದು.

ಅದಕ್ಕೆ ಕಲಂಕವಿಲ್ಲ, ಅಂದರೆ ಅದು ದೋಷರಹಿತ, ಭಂಗ ಇಲ್ಲವೆ ಕೊರತೆಯಿಲ್ಲದ್ದು. ವಿಕಾರ್ಯತೆಗಳಿಂದ ಅದು ಅಸ್ಪೃಷ್ಟ ಮತ್ತು ಅಬಾಧಿತವಾಗಿರುತ್ತದೆ.

ಅವುಗಳ ಸಂಬಂಧಗಳ ತಿಕ್ಕಾಟಕ್ಕೆ ಅದು ಆಶ್ರಯಕೊಡುತ್ತದೆ. ಅವುಗಳ ಹೆಚ್ಚುಕಡಿಮೆ ವೃದ್ಧಿ ಚ್ಯುತಿ, ಅಭಿಯೋಗ-ಅನುಪ್ರವೇಶ ಇವಕ್ಕೆ ಆಧಾರವಾಗಿರುತ್ತದೆ. ಅದು ಸ್ವತಃ ಕರ್ಮರಹಿತವಾದುದು 'ಅಚಲಃ ಸನಾತನಃ' ಅದಕ್ಕೆ ಸಿರಗಳಿಲ್ಲ. ಕಲಂಕವಿಲ್ಲದೆ ಅದು ಇರುವುದಕ್ಕೆ ಕಾರಣವೆಂದರೆ ಅದು ಶಕ್ತಿಯನ್ನು ಹೊರಚೆಲ್ಲುವುದಿಲ್ಲ, ಅನೇಕ ವಾಹಕಗಳಲ್ಲಿ ಅದನ್ನು ಹರಿಬಿಡುವುದಿಲ್ಲ, ಇಲ್ಲಿ ಅದನ್ನು ಕಳೆದು, ಅಲ್ಲಿ ಹೆಚ್ಚಿಸಿ, ಹಾನಿಯನ್ನು ತುಂಬಿಕೊಂಡು, ಪ್ರೀತಿಯಿಂದ ಇಲ್ಲವೆ ಹಿಂಸೆಯಿಂದ ಅದರ ಪೂರಕ ಇಲ್ಲವೆ ಆಹಾರವನ್ನು ಹುಡುಕುವುದಿಲ್ಲ. ಅದಕ್ಕೆ ಶಕ್ತಿಯ ನರಗಳಿಲ್ಲ. ಮಾತರಿಶ್ವ, ಪ್ರಾಣ, ಪ್ರಾಣಿಕ ಗತಿಶೀಲತೆಯ ಶಕ್ತಿಗಳಲ್ಲಿ ಅದು ತನ್ನನ್ನು ತೂರಿಕೊಳ್ಳುವುದಿಲ್ಲ.

ಅದು ಶುದ್ಧ, ಅಪಾಪವಿದ್ಧ. ನಾವು ಪಾಪಇಲ್ಲವೆ ಕೆಡುಕು ಎಂದು ಯಾವುದನ್ನು ಕರೆಯುತ್ತೇವೆಯೊ ಅದು ಬರೀ ಹೆಚ್ಚುಕುಂದು, ತಪ್ಪಾದ ವಿನ್ಯಾಸ, ಅಸಂಗತವಾದ ಕ್ರಿಯೆ ಮತ್ತು ಪ್ರತಿಕ್ರಿಯೆ. ತನ್ನ ಸಮತ್ವದಿಂದ, ಕ್ರಿಯೆಗೆ ಆಧಾರವಾಗಿದ್ದಾಗಲೂ ಉಳ್ಳ ನಿಷ್ಕ್ರಿಯೆಯಿಂದ, ಚಿದಾತ್ಮವು ತನ್ನ ಶಾಶ್ವತವಾದ ಸ್ವಾತಂತ್ರ್ಯ ಮತ್ತು ಶುದ್ಧತೆಯನ್ನು ಉಳಿಸಿಕೊಂಡಿರುತ್ತದೆ. ಯಾಕಂದರೆ ಅದಕ್ಕೆ ಬದಲಾವಣೆಯಿಲ್ಲ. ಸಾಕ್ಷಿಯಾಗಿ ಅದು ಪ್ರಕೃತಿಯಿಂದಾಗುವ ಬದಲಾವಣೆಗಳನ್ನು ನಿರೀಕ್ಷಿಸುತ್ತದೆ. ಆದರೆ ಅವುಗಳಲ್ಲಿ ಭಾಗ ವಹಿಸುವುದಿಲ್ಲ,ಅವುಗಳಿಂದ ತೊಡರು ಮಾಡಿಕೊಳ್ಳುವುದಿಲ್ಲ, ಅವುಗಳ ಸಂಸ್ಕಾರ ಪಡೆಯುವುದಿಲ್ಲ, 'ನಲಿಪ್ಯತೆ'

## ಆತ್ಮವು ಅನನ್ಯ ಪರತಂತ್ರ

ಸಕ್ರಿಯ ಬ್ರಹ್ಮ ಮತ್ತು ಜೀವಾತ್ಮ ಇವಕ್ಕೂ ಈ ಶುದ್ಧ ಅಕ್ರಿಯ ವಸ್ತುವಿಗೂ ಸಂಬಂಧವೇನು? ಅವು ಸಹ **ಅದೇ** ಆಗಿರುತ್ತವೆ. ಕ್ರಿಯೆ ಆತ್ಮದ ಸ್ವರೂಪವನ್ನು ಬದಲಿಸುವುದಿಲ್ಲ, ಆದರೆ ವಿವಿಧರೂಪಗಳ ಸ್ವರೂಪವನ್ನು ಮಾತ್ರ ಬದಲಿಸುತ್ತದೆ. ಆತ್ಮವು ಯಾವಾಗಲೂ ಶುದ್ಧ, ಆನಂದಮಯ, ಪರಿಪೂರ್ಣವಾದುದು-ಅದು ಅಕ್ರಿಯವಾಗಿರಲಿ, ಕ್ರಿಯಾನಿರತವಾಗಿರಲಿ.

ಆತ್ಮವು ಎಲ್ಲ ವಸ್ತುಗಳಾಗಿದ್ದು ಅದನ್ನು ದಾಟಿರುತ್ತದೆ. ಮನಸ್ಸು ಯಾವುದರಲ್ಲಿ ತೊಡಗಿರುತ್ತದೆಯೊ ಮತ್ತು ಯಾವುದನ್ನು ವಿಶಿಷ್ಟ ಕಾಲದೇಶದಲ್ಲಿ ತನ್ನ ಆಕೃತಿಯೆಂದು ತಿಳಿಯುತ್ತದೆಯೊ ಅದನ್ನು ಆತ್ಮವು ಮೀರಿರುತ್ತದೆ· ಮೇರೆಯಿಲ್ಲದ ಇಡಿಯದು ಯಾವಾಗಲೂ ಪೂರ್ಣವಾದುದು. ವಸ್ತುಗಳ ಸಾಕಲ್ಯವು ಕ್ಷತಿ–ಚ್ಯುತಿಗಳಿಲ್ಲದೆ ಸಂಪೂರ್ಣ ಸಾಮರಸ್ಯವಾಗಿರುತ್ತದೆ. ಬಿಡಿಯಃದನ್ನು ಇಡಿಯದಾಗಿ ತಿಳಿದುಕೊಳ್ಳುವ ದೃಷ್ಟಿಕೋನ ಅಂದರೆ ಅಜ್ಞಾನವು ಒಡೆದ ಪ್ರತಿಬಿಂಬವಾಗಿ ಮಿತಿಮರ್ಯಾದೆಯ, ಅಪೂರ್ಣತೆಯ ಮತ್ತು ಅಪಸ್ವರದ ಅರಿವನ್ನು ಹುಟ್ಟಿಸುತ್ತದೆ.ಬ್ರಹ್ಮನ ಲೀಲೆಯಲ್ಲಿ ಈ ಅಜ್ಞಾನ ಇಲ್ಲವೆ ಅವಿದ್ಯೆಗೆ ಸ್ಥಾನವಿದೆಯೆಂಬುದನ್ನು ಮುಂದೆ ನೋಡುತ್ತೇವೆ, ಆದರೆ ತನ್ನಷ್ಟಕ್ಕೆ ಅದು ಕೇವಲ ಕೆಡುಕಿನ ಜನ್ಮದಾತೆಯೆಂದು ಮೊದಲಿಗೆ ತೋರುತ್ತದೆ.

ಮನಸ್ಸು—ಶರೀರ—ಪ್ರಾಣಗಳನ್ನು ಅವುಗಳ ಉಗಮವಾದ ಸಚ್ಚಿದಾನಂದದಿಂದ ಬೇರ್ಪಡಿಸುವ ಪಡದೆಯೆಂದರೆ ಅಜ್ಞಾನ. ಹೀಗೆ ಮುಸುಕಿಸಲಾದ ಮನಸ್ಸು ಅಜ್ಞಾನ ಹುಟ್ಟಿಸಿದ ಕೆಡುಕು ತನ್ನಲ್ಲಿ ನಟ್ಟಿದೆ

ಯೆಂದು ಭಾವಿಸುತ್ತದೆ. ಆದರೆ ಮನ, ಶರೀರ, ಪ್ರಾಣಗಳ ರೂಪಗಳನ್ನು ತನ್ನ ಸ್ವಯಂಭೂತಿಗಾಗಿ ಸಚ್ಚಿದಾನಂದವು ಉಪಯೋಗಿಸುತ್ತಿರುತ್ತದೆ. ಅದೇ ಯಾವಾಗಲೂ ಸಕ್ರಿಯ ಬ್ರಹ್ಮ. ಆದ್ದರಿಂದ ಅವೆಲ್ಲವುಗಳ ಅನುಭವಗಳನ್ನು ಅದು ಸಚ್ಚಿದಾನಂದ ರೂಪಗಳಲ್ಲಿ ಕಾಣುತ್ತಿರುತ್ತದೆ. ಕೆಡುಕು ಅದರಲ್ಲಿ ಸೇರಲಾರದು. ಯಾಕೆಂದರೆ ಅದು ಏಕವಾಗಿದ್ದು ಎಲ್ಲೆಡೆಗೆ ಏಕತ್ವವನ್ನು ಕಾಣುತ್ತದೆ. ಅದು ಅಜ್ಞಾನದ ಆಳಾಗುವುದಿಲ್ಲ. ತನ್ನ ವಿಭಾವನದ ಒಂದು ಗೌಣಪದವೆಂದು ಅಜ್ಞಾನವನ್ನು ಉಪಯೋಗಿಸುತ್ತದೆ. ಜೀವಾತ್ಮವು ಈಶನೊಡನೆ ಒಂದಾಗಿರುತ್ತದೆ. ಅದು ಸಹ ತನ್ನ ಪೂರ್ಣತೆಯಲ್ಲಿ ಅಜ್ಞಾನವನ್ನು ತನ್ನ ಸತ್ತೆಯ ಒಂದು ಗೌಣಪದವೆಂದು ಬಳಸುವ ಸಚ್ಚಿದಾನಂದವಾಗಿರುತ್ತದೆ. ಆದರೆ ಅದು ತನ್ನ ಈ ಗೌಣಪದದಲ್ಲಿ ತನ್ನ ವಿಭಾವನಗಳನ್ನು ಚಾಚಿಕೊಂಡು, ಮರ್ಯಾದಿತವಾದ ಮನಸ್ಸಿನಲ್ಲಿ ತನ್ನ ದರ್ಶನದ ಕೇಂದ್ರ, ತನ್ನ ದೃಷ್ಟಿಕೋನವನ್ನು ಸ್ಥಾಪಿಸುತ್ತದೆ. ಅಪೂರ್ಣತೆ ಮತ್ತು ತತ್ಪರಿಣಾಮವಾಗಿ ತೋರುವ ಕೊರತೆಯ ಭಾವ, ವಿರಸ, ಕಾಮನೆ, ವೇದನೆ ಇವೆಲ್ಲ ತನ್ನವೆಂದು ಗ್ರಹಿಸುತ್ತದೆ. ಈ ಎಲ್ಲ ಗೊಂದಲವು ಒಂದಿರುವ ನೈಜಪುರುಷನನ್ನು ಬಾಧಿಸುವುದಿಲ್ಲ, ಆದರೆ ತೋರಿಕೆಯ ಅಥವಾ ಹೊರಗಿನ ಪುರುಷನನ್ನು ಬಾಧಿಸುತ್ತದೆ. ತನ್ನ ಸ್ವಾತಂತ್ರ್ಯವನ್ನು ಮರಳಿಗಳಿಸಲು ಅದು ತನ್ನ ಪೂರ್ಣತೆಯನ್ನು ಪಡೆಯಬೇಕು. ಒಳಗಿದ್ದ ದಿವ್ಯ ಅಂತರ್ಯಾಮಿಯೊಡನೆ ಒಂದಾಗಬೇಕು. ಅದೇ ಅದರ ನೈಜ ಮತ್ತು ಪೂರ್ಣ ಆತ್ಮ. ಆಗ ಅದು ಈಶನಂತೆ ಕರ್ಮದ ಪರಿಣಾಮಗಳೊಡನೆ ಒಂದೆಂಬ ಸುಳ್ಳು ಸಂಸ್ಕಾರವನ್ನು ಪಡೆಯದೆ ಪ್ರಕೃತಿಯ ವ್ಯಾಪಾರಗಳನ್ನು ನಡೆಸಬಲ್ಲುದು 'ಕರ್ಮವು ಮನುಷ್ಯನಿಗೆ ಅಂಟುವುದಿಲ್ಲ' ('ನಕರ್ಮ ಲಿಪ್ಯತೆನರೆ')ಎಂದು ಉಪನಿಷತ್ತು ಇದೇ ವಿಚಾರದ ಬಲದಿಂದ ಸಾರಿ ಹೇಳುತ್ತದೆ.

ಈ ಗುರಿಯನ್ನು ಕಣ್ಣಮುಂದಿರಿಸಿ ಜೀವಾತ್ಮವು ಒಳಗಿನ ಶಾಂತಬ್ರಹ್ಮನನ್ನು ಮರಳಿಪಡೆಯಬೇಕು. ಈಶನಿಗೆ ಯಾವಾಗಲೂ ಎರಡು ಪದಗಳಿರುತ್ತವೆ. ಅವನು ತನ್ನಲ್ಲಿ ಬಿತ್ತರಿಸಿದ ವಿಶ್ವದ ಕರ್ಮವನ್ನು ನಡೆಸುತ್ತಾನೆ. ಆದರೆ ತನ್ನ ಕರ್ಮಗಳಲ್ಲಿ ಆಸಕ್ತನಾಗಲಿ ಅವರಿಂದ ಪರಿಸೀಮಿತನಾಗಲಿ ಆಗಿರುವುದಿಲ್ಲ. ಜೀವಾತ್ಮವು ಮನಸ್ಸಿನಲ್ಲಿ ತೊಡರಿಕೊಂಡು ಪ್ರಕೃತಿವ್ಯಾಪಾರಗಳ ವೇಗದ ಪ್ರವಾಹದಿಂದ ತನ್ನ ದರ್ಶನವನ್ನು ಮುಸುಕಿಸಿಕೊಳ್ಳುತ್ತದೆ, ತಾನು ಆ ಪ್ರವಾಹದ ಒಂದು ಅಂಗವೆಂದು ಕಲ್ಪಿಸಿಕೊಂಡು ಅದರ ತೆರೆ ತಿರುಗಣಿಗಳ ಸೆಳೆತಕ್ಕೆ ಸಿಲುಕುತ್ತದೆ. ಪ್ರಕೃತಿಯ ಚಲನವಲನದಲ್ಲಿ ತನ್ನ ಸಂಭೂತಿ (ಆಗುವಿಕೆ) ಯಲ್ಲಿ ಭಾಗವಹಿಸುತ್ತಲೂ ತನ್ನಲ್ಲಿಯ ಶಾಂತ ಬ್ರಹ್ಮನ ಕಡೆಗೆ ಅದು ತಿರುಗಿ ಹೋಗಬೇಕು. ಆಗ ಶಾಂತ ಪುರುಷನಂತೆ ಅದು ಸಾಕ್ಷಿ ಮತ್ತು ಆಧಾರವಾಗುವುದಲ್ಲದೆ ಪ್ರಕೃತಿಯ ಮತ್ತು ಅದರ ಕ್ರಿಯೆಗಳ ಈಶನೂ ಭೋಗಿಯೂ ಆಗುತ್ತದೆ. ಒಳಗೆ ಸಂಪೂರ್ಣ ಶಾಂತಿ, ನಿವೃತ್ತಿ, ಶುದ್ಧಿ, ಸಮತ್ವಗಳೂ ಹೊರಗೆ ಪರಮೋಚ್ಚವಾದ ಅವಿಶ್ರಾಂತವಾದ ಚಟುವಟಿಕೆ ಎಂಬುದೇ ಬ್ರಹ್ಮನ ಸ್ವರೂಪವೆಂದು ವಿಶ್ವದಲ್ಲಿ ಅದು ಪ್ರಕಟವಾದ ಬಗೆಯಲ್ಲಿ ನಾವು ತಿಳಿಯುತ್ತೇವೆ. ಆದ್ದರಿಂದ ಕರ್ಮಗಳನ್ನು ಮಾಡಲು ಹೆಚ್ಚಿನ ಆಕ್ಷೇಪಕ್ಕೆ ಕಾರಣವಿಲ್ಲ. ಇಷ್ಟೇ ಅಲ್ಲ, ಈಶ್ವರನ ನಿವೃತ್ತಿ ಮತ್ತು ಪ್ರವೃತ್ತಿ ಈ ಇಬ್ಬಗೆಯಲ್ಲಿ ಆತ್ಮವು ಭಾಗವಹಿಸಿ ಅದರಲ್ಲಿ ಸಮರಸವಾಗುವುದೇ ಕರ್ಮಗಳಿಗೆ ಸಮರ್ಥನೆಯಾಗಿದೆ. ಆತ್ಮಕ್ಕೆ ಶಾಂತಿ, ಪ್ರಾಣಶಕ್ತಿಗೆ ಪ್ರವೃತ್ತಿ ಇದು ಮನುಷ್ಯನಲ್ಲಿಯ ದಿವ್ಯ ಲಯದ ಸಮತೋಲತೆ.

## ವಸ್ತುಧರ್ಮ

ವಸ್ತುಗಳ ಸಮೂಹವೆಂದರೆ (ಅರ್ಥಾತ್) ತನ್ನ ಸತ್ತೆಯ ವಿಸ್ತರಣೆಯಲ್ಲಿ ಈಶ್ವರನ ಸಂಭೂತಿ (ಆಗುವಿಕೆ). ಅದರ ತತ್ವ ಎರಡು ತೆರನಾಗಿವೆ, ಪ್ರಜ್ಞೆ ಇಲ್ಲವೆ ಚೈತನ್ಯವೊಂದಿರುತ್ತದೆ, ಸತ್ತೆಯೊಂದಿರುತ್ತದೆ. ಚೈತನ್ಯವು ತನ್ನ ಸ್ವಯಂಭೂ ಸ್ಥಿತಿಯ ಮೇಲೆ ತಪಸ್ಸನ್ನು ಪ್ರಯೋಗಿಸಿ ತನ್ನ 'ವಿಜ್ಞಾನ'ವನ್ನು ಆದಕ್ಕನುಗುಣ

ವಾದ ರೂಪಕರ್ಮಗಳನ್ನೂ ನಿರ್ಮಿಸುತ್ತದೆ. ಸ್ವ-ನಿರ್ಮಾಣ ಅಥವಾ ರೂಪದಲ್ಲಿ ಪ್ರಕ್ಷೇಪಣ–ಇದೇ ಸೃಷ್ಟಿಯ ಬಗ್ಗೆ ಮೂಲ ಭಾರತೀಯ ಕಲ್ಪನೆಯಾಗಿತ್ತು. ಸತ್ತೆಯೆಂಬುದು ರೂಪದಲ್ಲಿರುವ ಅಂತರ್ಗತ ವಿಜ್ಞಾನಕ್ಕೆ ಅನುಸರಿಸಿ ತನ್ನ ಅನಂತ ರೂಪಗಳನ್ನು ವಿಕಾಸಗೊಳಿಸಲು ಸ್ವಪ್ರಜ್ಞೆಯನ್ನು ಬಳಸುತ್ತದೆ. ಇದು ಸಾಂಖ್ಯ ಮುಂತಾದ ಕೆಲವು ದರ್ಶನಗಳಲ್ಲಿ ಪ್ರಮುಖವಾದ ಭಾರತೀಯ ವಿಕಾಸವಾದ (ಪರಿಣಾಮ, ವಿಕಾರ, ವಿವರ್ತ) ವಾಗಿದೆ. ಅದೇ ಸಂಗತಿಯನ್ನು ಬೇರೆಬೇರೆಯಾಗಿ ಹೇಳಿದೆ.

ಕೆಲವು ತತ್ತ್ವಜ್ಞಾನಿಗಳ ವಿಚಾರವೆಂದರೆ ಜಗತ್ತು ಬಾಹ್ಯವಸ್ತುಗಳಂತೆ ಸತ್ಯವಲ್ಲ, ಅದು ಕೇವಲ ಆತ್ಮ ಕೇಂದ್ರೀಯವಾದ ವಿಕಾಸ ಅಂದರೆ ವಿವರ್ತ. ಬೇರೆ ಕೆಲವರ ಪ್ರಕಾರ ಅದು ಬಾಹ್ಯ ಸಂಗತಿ, ಸತ್ಯ ವಾದ 'ಪರಿಣಾಮ'. ಈ ಪರಿಣಾಮದಿಂದ ಆತ್ಮದ ಮೂಲ ಸ್ವರೂಪಕ್ಕೆ ಮಾತ್ರ ಬಾಧೆಯಿಲ್ಲ. ಎರಡೂ ವಿಚಾರಗಳು ಉಪನಿಷತ್ತನ್ನು ಪ್ರಮಾಣವೆಂದು ತಿಳಿಯುತ್ತವೆ. ನಾವೀ ಪದ್ಯದಲ್ಲಿ ಗಮನಿಸುವಂತೆ ಪ್ರಾಚೀನ ವೇದಾಂತದಲ್ಲಿ ಯಾವುದನ್ನು ಒಂದಾಗಿ ಗ್ರಹಿಸಲಾಗಿತ್ತೋ ಅದನ್ನು ಬೇರ್ಪಡಿಸುವುದರಿಂದ ಈ ವಿರೋಧ ಉಂಟಾಗಿದೆ.

ಬ್ರಹ್ಮನು ತನ್ನ ವಿಷಯಿ ಮತ್ತು ವಿಷಯ ಎರಡೂ ತಾನೇ. ತನ್ನ ಶುದ್ಧವಾದ ಸ್ವಯಂಭೂ ಸತ್ತೆ ಯಲ್ಲಿರಲಿ ಅಥವಾ ವಿವಿಧವಾದ ಸ್ವಯಂ ಸಂಭೂತಿಯಲ್ಲಿರಲಿ ಎರಡೂ ಅವನೇ. ತನ್ನ ಆತ್ಮ ಪ್ರಜ್ಞೆಗೆ ಅವನೇ ವಿಷಯ, ತನ್ನ ಸ್ವಸತ್ತೆಗೆ ಅವನೇ ಜ್ಞಾನಿ. ಇವೆರಡೂ ಅಂಗಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಒಂದ ರೊಳಗೊಂದು ಅಡಗುವಂತೆ ಮತ್ತು ಒಂದರಿಂದೊಂದು ಹೊರಬೀಳುವಂತೆ ಅವು ತೋರಬಹುದು ಅಷ್ಟೆ. ಕೇವಲ ಆತ್ಮ ಕೇಂದ್ರೀಯದ ತೋರಿಕೆ ತನ್ನ ಆತ್ಮ ಕೇಂದ್ರೀಯತೆಯಲ್ಲಿಯೇ ತನ್ನನ್ನು ವಿಷಯವನ್ನಾಗಿಸಿ ಅಧ್ಯಾಹೃತವಾಗಿ ಇರಿಸಿರುತ್ತದೆ; ಹಾಗೇ ಕೇವಲ ವಸ್ತುಕೇಂದ್ರೀಯದ ತೋರಿಕೆ ತನ್ನ ವಸ್ತು ಕೇಂದ್ರೀಯ ದಲ್ಲಿಯೇ ತನ್ನನ್ನು ವಿಷಯಿಯಾಗಿ ಅಧ್ಯಾಹೃತವಾಗಿ ಧರಿಸಿರುತ್ತದೆ.

ಎಲ್ಲ ವಸ್ತು ಕೇಂದ್ರೀಯವಾದ ಸತ್ತೆಯೆಂದರೆ ಸ್ವಯಂಭೂ ಸತ್ತೆಯೆ, ಸ್ವಯಂ ಸಂಭೂತಿ, ತನ್ನ ಲ್ಲಿದ್ದ ಭಾವ ಬಲದಿಂದ ಸ್ವಯಂಭು ಸಂಭೂತಿಯಾಗುತ್ತದೆ. ಭಾವವು ತನ್ನೊಳಗೇ ಇರುತ್ತದೆ, ಅದು ಆಗು ವುದು ಸಂಗತಿ ಮಾತ್ರ. ಸ್ವಯಂಭು ತನ್ನನ್ನು ಸಂಗತಿಯ ಸಾರದಲ್ಲಿ ಕವಿಯಾಗಿ ತನ್ನನ್ನು ಕಾಣುತ್ತದೆ, ಮನೀಷಿಯಾಗಿ ತನ್ನ ಸಾಧ್ಯತೆಗಳ ವಿಕಾಸವನ್ನು ಸಮಗ್ರವಾಗಿ ತನ್ನೊಳಗಿಂದ ಆಲೋಚಿಸುತ್ತದೆ, ಪರಿಭೂ ಆಗಿ ದೇಶಕಾಲ ಪರಿಮಿತವಾದ ಚಲನದಲ್ಲಿ ಸ್ವ-ರೂಪವಾಗುತ್ತದೆ. ಈ ಮೂರೂ ಸಾಪೇಕ್ಷ, ಕಾಲಾತ್ಮಕ ಮತ್ತು ದೇಶಾತ್ಮಕ ಪ್ರಜ್ಞೆಗೆ ಅನುಕ್ರಮ ಬದ್ಧವೆಂದು ತೋರುವ ಒಂದೇ ಕ್ರಿಯೆಯಾಗಿರುತ್ತವೆ.

ಪ್ರತಿಯೊಂದು ವಸ್ತು ತನ್ನಲ್ಲಿ ಶಾಶ್ವತವಾಗಿ ತನ್ನ ಆತ್ಮದ ನಿಯಮವನ್ನು ಧರಿಸಿಕೊಂಡಿರುತ್ತದೆ ಎಂಬುದು ಇದರಿಂದ ಹೊರಡುತ್ತದೆ (ಶಾಶ್ವತೀಭ್ಯಃ ಸಮಾಭ್ಯಃ). ವಸ್ತುಸಮಷ್ಟಿಯಲ್ಲಿಯ ಎಲ್ಲ ಸಂಬಂಧಗಳು ಹೀಗೆ ಅವುಗಳ ಅಪರ್ಯಾಮಿ, ಸ್ವಯಂಭು, ಸ್ವಯಂಸಂಭೂತಿಯಿಂದ ನಿರ್ಣಯವಾಗುತ್ತವೆ. ಅವು ಏಕಮೇವ ಈಶನ ಸರ್ವವ್ಯಾಪಿತ್ವದ ಮೂಲಕವೂ ಅವುಗಳಲ್ಲಿ ಅಂತರ್ಗತ. ಆತ್ಮಕೇಂದ್ರೀಯ ಸತ್ಯವಾದ ಆತನ ಸ್ವದರ್ಶನ ದಿಂದಲೂ ಅಮರ್ಯಾದಸಾಧ್ಯತೆಗಳ ಹಿನ್ನೆಲೆಯಲ್ಲಿ ವಸ್ತುಗತ ಸಂಗತಿಯಲ್ಲಿ ಆಗುವ ಅಪರಿಹಾರ್ಯ ವಿಕಾ ಸದ ನಿಯಮವಾಗಿರುವ ಆತನ ಸ್ವಯಂಸಂಭೂತಿಯಿಂದಲೂ ವಸ್ತುಗಳ ಮೂಲಸ್ವರೂಪದಲ್ಲಿ ಅಡಕವಾಗಿ ರುತ್ತವೆ.

ಆದ್ದರಿಂದ ಎಲ್ಲ ವಸ್ತುಗಳು ತಮ್ಮ ಸ್ವಭಾವದಲ್ಲಿ ಹೇಗಿರಬೇಕೋ ಹಾಗೆ 'ಯಾಥಾತಥ್ಯತಃ.' ಅವನಿಂದ ವ್ಯವಸ್ಥೆಗೊಳಿಸಲ್ಪಟ್ಟಿರುತ್ತವೆ. ವ್ಯಕ್ತೀಕರಣದ ಭಾಸಮಯ ವಿರಸಗಳನ್ನು ನಿಯಾಮಿಸುವ ಒಂದು ಅವಶ್ಯಭಾವಿಯಾದ ಸಾಮರಸ್ಯವು ಎಲ್ಲದರಲ್ಲಿರುತ್ತದೆ. ಜಗತ್ತಿನಲ್ಲಿ ವೈಯಕ್ತಿಕವಾದ ರೂಪಗಳ

ಮತ್ತು ಶಕ್ತಿಗಳ ಸಮೂಹಮಾತ್ರ ಇದ್ದರೆ, ಪ್ರತಿಯೊಂದು ರೂಪ ಮತ್ತು ಶಕ್ತಿ ಸ್ವಯಂಭುವಾದ ಸರ್ವವನ್ನು, ಈಶನನ್ನು ತನ್ನಲ್ಲಿ ಧರಿಸಿ ತಾನೇ ದಿಟವಲ್ಲಿ ಅದಾಗಿರದಿದ್ದರೆ, ಆ ವಿರಸವು ನೈಜವಾದದ್ದಾಗಿ ನಿತ್ಯಪ್ರಲಯ ದಲ್ಲಿ ಪರಿಣಮಿಸಬಹುದಾಗಿತ್ತು.

## ಸೃಷ್ಟಿಪ್ರಕ್ರಿಯೆ

ಸೃಷ್ಟಿಪ್ರಕ್ರಿಯೆಯು ಸಾಪೇಕ್ಷಭಾವದಲ್ಲಿ ಈಶನು ನಮಗೆ ಮೊದಲು ಕವಿ, ಪ್ರಾಜ್ಞ, ದ್ರಷ್ಟಾ ಎಂದು ತೋರುತ್ತಾನೆ. ಕವಿ ಸತ್ಯವಿದ್ದಂತೆ ಕಾಣುತ್ತಾನೆ. ಅಂದರೆ ಸಂಭೂತಿಯಲ್ಲಿ,ಸತ್ವದಲ್ಲಿ, ಸಾಧ್ಯತೆಯಲ್ಲಿ, ವಸ್ತುಸ್ಥಿತಿಯಲ್ಲಿ ಸತ್ಯವನ್ನು ಕಾಣುತ್ತಾನೆ. 'ಸತ್ಯಂ ಋತಂ' ಎಂದು ಕರೆಯಲಾದ 'ವಿಜ್ಞಾನ' ದಲ್ಲಿ ಅವನು ಎಲ್ಲವನ್ನು ಒಳಗೊಳ್ಳುತ್ತಾನೆ. ಅವನದನ್ನು ಇಡಿಯಾಗಿ ಒಳಗೊಂಡಿರುತ್ತಾನೆ, ಬಿಡಿಬಿಡಿಯಾಗಿ ಅಲ್ಲ. ವಸ್ತು ಪ್ರಪಂಚದ ಸತ್ಯ ಮತ್ತು ಋತವು ಬೃಹತ್ತಾಗಿದೆ. ತನ್ನಷ್ಟಕ್ಕೆ ನೋಡಿದರೆ ವಿಜ್ಞಾನದ ರಾಜ್ಯವು ಪೂರ್ವನಿಶ್ಚಿತ ಪ್ರಾರಬ್ಧದ, ಸಂಗ್ರಹದ, ಬಲಾತ್ಕಾರಯುಕ್ತ ಬೀಜಸ್ಥಿತಿಯ ರಾಜ್ಯವೆನಿಸಬಹುದು. ಆದರೆ ಅದು ಗತಕಾಲ ದಲ್ಲಿಯ ನಿಶ್ಚಿತಿಯಲ್ಲ, ಶಾಶ್ವತಕಾಲದಲ್ಲಿಯ ನಿರ್ಧಾರ; ಆತ್ಮನಿಂದ ಒತ್ತಾಯಿಸಲಾದ ವಿಧಿ, ಆತ್ಮನನ್ನು ಒತ್ತಾಯಿಸುವಂಥದಲ್ಲ; ಕ್ರಿಯೆ ಮತ್ತು ಪರಿಣಾಮವನ್ನು ಒತ್ತಾಯಿಸುವಂಥದು. ವಿಜ್ಞಾನದ ಸಂಗ್ರಹ ಸ್ವರೂಪದಲ್ಲಿಯೂ ಚಲನವಿಸ್ತರಣೆಯಲ್ಲಿಯೂ ಸಂನಿಧವಾದ ವಿಧಿಯದು. ಆದ್ದರಿಂದ ಆತ್ಮವಿಷಯಕವಾದ ಸತ್ಯವೆಂದರೆ ಸ್ವಾತಂತ್ರ್ಯ ಮತ್ತು ಪ್ರಭುತ್ವ, ಬಂಧನ ಮತ್ತು ದಾಸ್ಯವಲ್ಲ.

ಪುರುಷನು ಪ್ರಕೃತಿಯನ್ನು ಆಳುತ್ತಾನೆ, ಪ್ರಕೃತಿ ಪುರುಷನನ್ನು ಒತ್ತಾಯಿಸುವುದಿಲ್ಲ. 'ನಕರ್ಮಲಿಪ್ಯತೆ ನರೆ'.

ಮನೀಷಿ ಸಾಧ್ಯತೆಗಳ ಮೇಲೆ ತನ್ನ ನಿಲುವೆಯನ್ನು ಮಾಡಿಕೊಳ್ಳುತ್ತಾನೆ. ಅವನ ಹಿಂದೆ ಅನಂತದ ಸ್ವಾತಂತ್ರ್ಯ ವಿರುತ್ತದೆ,ಸಾಂತದ ನಿರ್ಧಾರದಲ್ಲಿ ಅದನ್ನವನು ಹಿನ್ನೆಲೆಯಾಗಿ ತರುತ್ತಾನೆ. ಆದ್ದರಿಂದ ಜಗತ್ತಿನಲ್ಲಿ ಪ್ರತಿಯೊಂದು ಕ್ರಿಯೆ ವಿವಿಧ ಸಾಧ್ಯತೆಗಳ ಸಮತೋಲನ ಮತ್ತು ಸಂಘರ್ಷದಿಂದ ಹೊರಪಡು ವಂತೆ ಕಾಣುತ್ತದೆ. ಆದರೆ ಯಾವುದು ಆಗತಕ್ಕದ್ದೋ ಅದರ ಋತದೊಡನೆ ಅರಿಯದ ಹೊಂದಿಕೆಯಾಗದೆ ಇದ್ದರೆ ಇವು ಯಾವ ಕ್ರಿಯೆಗಳೂ ಪರಿಣಾಮಕಾರಿಯಾಗಲಾರವು. ಮನೀಷಿಯಲ್ಲಿ ಕವಿ ನಿಂತುಕೊಂಡು ಅವನ ಕೆಲಸದಲ್ಲಿ ಆಧಾರವಾಗಿರುತ್ತಾನೆ. ಆದರೆ ತನ್ನಷ್ಟಕ್ಕೆ ನೋಡಿದರೆ ಮನೀಷಿಯ ರಾಜ್ಯವೆಂದರೆ ನಮನಶೀಲತೆಯ, ಇಚ್ಛಾ ಸ್ವಾತಂತ್ರ್ಯದ, ಶಕ್ತಿಗಳ ಅನ್ಯೋನ್ಯ ಪರಿಣಾಮದ ಒಂದು ಅವಸ್ಥೆಯೆಂದು ತೋರುತ್ತದೆ. ಆದರೆ ಇಲ್ಲಿಯ ಇಚ್ಛಾ ಸ್ವಾತಂತ್ರ್ಯ ವಸ್ತುಗಳಲ್ಲಿಯ ವಿಧಿಯನ್ನು ವಿಚಾರವಲ್ಲಿ ಸಂಧಿ ಸುವಂಥದು.

ಯಾಕಂದರೆ ಪರಿಭೂವು ಸಂಭೂತಿಯಲ್ಲಿ ಪರಿಣಮಿಸುವುದಕ್ಕಾಗಿ ಮನೀಷಿಯ ಕ್ರಿಯೆಯಿರುತ್ತದೆ. ಪರಿಭೂ ಇಲ್ಲವೆ ವಿರಾಟನು ಸಂಭವನೀಯ ಘಟನೆಗಳಲ್ಲಿ ತನ್ನನ್ನು ಬಿತ್ತರಿಸಿಕೊಳ್ಳುತ್ತಾನೆ. ಸತ್ಯದಲ್ಲಿದ್ದು ದನ್ನು, ಮನಸ್ಸಿನಿಂದ ಚಿಂತಿತವಾದ ಸಾಧ್ಯತೆಗಳಲ್ಲಿ ಮಾಡಬರುವುದನ್ನು, ಹೊರಗಣ ಸಂಗತಿಯೆಂದು ನಮಗೆ ತೋರುವುದನ್ನು ಅವನು ನೆರವೇರಿಸುತ್ತಾನೆ. ಪ್ರತ್ಯೇಕವಾಗಿ ತೆಗೆದುಕೊಂಡರೆ ವಿರಾಟದ ರಾಜ್ಯವೆಂದರೆ ತನ್ನಲ್ಲಿ ವಿಕಾಸಗೊಳ್ಳುವ ಎಲ್ಲ ಪದಾರ್ಥಗಳನ್ನು ಒತ್ತಾಯಗೊಳಿಸುವ ಒಂದು ಋತವ, ಪೂರ್ವನಿರ್ಣೀತದ, ಕರ್ಮದ ಕಬ್ಬಿಣ ಸರಪಣಿಯ, ಯಾಂತ್ರಿಕ ಅಗತ್ಯದ ನಿಯಮದ, ಗೂಢ ನಿಯಮದ ದಬ್ಬಾಳಿಕೆಯ ರಾಜ್ಯವೆಂದು ತೋರಬಹುದು.

ಆದರೆ ವಿರಾಟದ ಸಂಭೂತಿ-ಯಾವಾಗಲೂ ಸ್ವಯಂಭೂ ಈಶನ ಸಂಭೂತಿ-'ಪರಿಭೂಃ ಸ್ವಯಂಭೂಃ' ಆದ್ದರಿಂದ ಆ ಸಂಭೂತಿಯ ಸತ್ಯವನ್ನು ಕಾಣುವುದಕ್ಕಾಗಿ ನಾವು ಹಿಂದೆಹೋಗಿ ಹಿಂದೆ ನಿಂತಿರುವ ಎಲ್ಲವನ್ನು ಮರಳಿ ಅಂಗೀಕರಿಸಬೇಕು. ಸ್ವತಂತ್ರ, ಅನಂತ ಸಚ್ಚಿದಾನಂದದ ಸಂಪೂರ್ಣ ಸತ್ಯವನ್ನು ಮತ್ತೆ ಸೇರಬೇಕು.

ಇದು ಮೇಲಿನಿಂದ ಮತ್ತು ಏಕತೆಯ ನೆಲೆಯಿಂದ ನೋಡಿದ ಪ್ರಪಂಚ ಸತ್ಯ. ಇದು ದಿವ್ಯದೃಷ್ಟಿ. ಆದರೆ ಕೆಳಗಿನಿಂದ ಮೊದಲಾಗುವ ಮಾನವ ದೃಷ್ಟಿಯನ್ನು ನಾವು ಗಮನಿಸಬೇಕಾಗುತ್ತದೆ. ಮಾನವ ದೃಷ್ಟಿ ಅಜ್ಞಾನದಿಂದ ಹೊರಡುತ್ತದೆ, ಈ ತತ್ವಗಳನ್ನು ಪ್ರಜ್ಞೆಯ ಪ್ರತ್ಯೇಕ ಅವಸ್ಥೆಗಳೆಂದು ಸಮಗ್ರವಾಗಿ ಅಲ್ಲ, ಅನುಕ್ರಮವಾಗಿ ಗ್ರಹಿಸುತ್ತದೆ. ಸಚ್ಚಿದಾನಂದಕ್ಕೆ ಅನುಭವದಲ್ಲಿ ತಿರುಗಿ ಹೋಗುವುದೇ ಮಾನವತೆ. ಅದು ಕೆಳಗಿನಿಂದ ಅವಿದ್ಯೆಯಲ್ಲಿ ಮೊದಲಾಗಲೆ ಬೇಕು. ಆಗ ಜಡದಲ್ಲಿ ಮನಸ್ಸು ವೈದಾಳಿ ಮನೀಷಿ ಬಾಹ್ಯಸಂಗತಿಯಲ್ಲಿ ಬದ್ಧನಾಗಿ ಅದರಿಂದ ಪೊರಬೀಳುವಂಥದಾಗಿರುತ್ತದೆ. ಈ ಬದ್ಧನಾದ ಮನೀಷಿಯೇ ಮನುಷ್ಯ, 'ಮನು'. ಅವನು ಮೃತ್ಯು—ಭೇದಗಳಿಂದ ಆರಂಭಿಸಿ ಅಮರತ್ವ, ಏಕತ್ವಕ್ಕೇ ಮುಟ್ಟಬೇಕಾಗುತ್ತದೆ. ವ್ಯಕ್ತಿಯಲ್ಲಿ ವಿಶ್ವಭಾವವನ್ನು, ಸಾಪೇಕ್ಷದಲ್ಲಿ ಕೇವಲವನ್ನು ಅವನು ಅನುಭವಿಸಬೇಕಾಗುತ್ತದೆ. ವಸ್ತುಗತ ಅನೇಕತೆಯಲ್ಲಿ ಆತ್ಮ ಪ್ರಜ್ಞೆಯುಳ್ಳವನಾಗಿ ಬೆಳೆಯುತ್ತಿರುವ ಬ್ರಹ್ಮನೇ ಅವನು. ಎಲ್ಲದರಲ್ಲಿ ಮತ್ತು ಅದನ್ನು ಮೀರಿದ್ದರಲ್ಲಿ ತನ್ನನ್ನು ಸ್ಥಾಪಿಸಿಕೊಳ್ಳುವ ವಿಶ್ವಗತ ಅಹಂತೆ ಅವನು.

೫ - ೩ ನೆಯ ಚಲನ (೨)

# ವಿದ್ಯೆ ಮತ್ತು ಅವಿದ್ಯೆ

(ಪದ್ಯ ೯ – ೧೧)×

## ವಿದ್ಯೆ ಮತ್ತು ಅವಿದ್ಯೆ

ವಿದ್ಯೆ ಮತ್ತು ಅವಿದ್ಯೆ ಇವೆರಡರಿಂದ ಎಲ್ಲ ಅಭಿವ್ಯಕ್ತಿ ಸಾಗುತ್ತದೆ. ವಿದ್ಯೆಯೆಂದರೆ ಏಕತ್ವದ ಪ್ರಜ್ಞೆ, ಅವಿದ್ಯೆಯೆಂದರೆ ಅನೇಕತ್ವದ ಪ್ರಜ್ಞೆ. ಅವೆರಡೂ ಮಾಯೆಯ ಎರಡು ಅಂಗಗಳು. ಮಾಯೆಯೆಂಬುದು ನಿತ್ಯ ವಸ್ತುವಿನ ರಚನಾತ್ಮಕವಾದ ಆತ್ಮದರಿವು.

---

× ೯ ಅವಿದ್ಯೆ ಇಲ್ಲವೆ ಅಜ್ಞಾನವನ್ನು ಯಾರು ಅನುಸರಿಸುತ್ತಾರೋ ಅವರು ಅಂಧಕಾರಮಯವಾದ ಕತ್ತಲೆಯಲ್ಲಿ ಸೇರುತ್ತಾರೆ. ಯಾರು ವಿದ್ಯೆ ಇಲ್ಲವೆ ಜ್ಞಾನವೊಂದರಲ್ಲಿಯೆ ರತರಾಗಿರುತ್ತಾರೋ ಅವರು ಅದಕ್ಕೂ ಹೆಚ್ಚಿನ ಕತ್ತಲೆಯಲ್ಲಿ ಎಂಬಂತೆ ಸೇರುತ್ತಾರೆ.

೧೦ ವಿದ್ಯೆ ಇಲ್ಲವೆ ಜ್ಞಾನದಿಂದ ಬರುವಂಥದು ದಿಟವಾಗಿ ಬೇರೆ, ಅವಿದ್ಯೆ ಇಲ್ಲವೆ ಅಜ್ಞಾನದಿಂದ ಬರುವಂಥದು ಬೇರೆ ಎಂದು ಹೇಳುತ್ತಾರೆ. ನಮ್ಮ ಬುದ್ಧಿಗೆ ಇದು ಹೊಳೆಯುವಂತೆ ಮಾಡಿದ ಜಾಣರಿಂದ ಈ ಜ್ಞಾನವನ್ನು ಪಡೆದಿದ್ದೇವೆ.

೧೧ ಒಂದರಲ್ಲಿ ಎರಡೆಂದು ವಿದ್ಯೆ, ಅವಿದ್ಯೆಯನ್ನು ಯಾವನು ತಿಳಿಯುತ್ತಾನೋ ಅವಿದ್ಯೆಯಿಂದ ಮೃತ್ಯುವನ್ನು ದಾಟಿ ವಿದ್ಯೆಯಿಂದ ಅಮೃತಪದವಿಯನ್ನು ಅನುಭವಿಸುತ್ತಾನೆ.

## ಸಮರ್ಪಣ

ಏಕತ್ವವು ಶಾಶ್ವತವಾದ ಮೂಲಭೂತವಾದ ಸಂಗತಿ. ಅದಿಲ್ಲದೆ ಎಲ್ಲ ಅನೇಕತ್ವವು ಅಸತ್ಯವೂ ಅಶಕ್ಯವಾದ ಭ್ರಾಂತಿಯೂ ಆಗುತ್ತದೆ. ಅಂತೇ ಏಕತ್ವದ ಪ್ರಜ್ಞೆಗೆ ವಿದ್ಯೆ, ಜ್ಞಾನವೆನ್ನುತ್ತಾರೆ.

ಅನೇಕತ್ವವು ಏಕತ್ವದ ಲೀಲೆ ಅಥವಾ ವಿವಿಧವಾದ ಆತ್ಮವಿಸ್ತರಣ. ಏಕತ್ವವು ತನ್ನ ಲಕ್ಷಣ ವಾಜಿಗಳನ್ನು ಬದಲಿಸುತ್ತ, ತನ್ನ ದೃಷ್ಟಿಯಲ್ಲಿ ಭೇದ್ಯವಾಗುತ್ತದೆ. ಅದರ ಬಲದಿಂದ ಏಕವು ಹಲವಾರು ಪ್ರಜ್ಞೆಯ ಕೇಂದ್ರಗಳನ್ನು ಸೇರುತ್ತದೆ, ವಿಶ್ವಚಲನದಲ್ಲಿ ಹಲವಾರು ಶಕ್ತಿಯ ರಚನೆಗಳಲ್ಲಿ ವಾಸಿಸುತ್ತದೆ. ಬಹುತ್ವವು ಏಕತ್ವದಲ್ಲಿ ಗುಪ್ತವಾಗಿ ಇಲ್ಲವೆ ಪ್ರಕಟವಾಗಿರುತ್ತದೆ. ಅದಿಲ್ಲದೆ ಏಕತ್ವವು ಅಭಾವದ ಶೂನ್ಯ ವಾಗಲಿ ಅಥವಾ ವಿವೇಚನೆಯಿಲ್ಲದ ತಲ್ಲೀನತೆ ಇಲ್ಲವೆ ಶೂನ್ಯ ವಿಶ್ರಾಂತಿಗೆ ಹಾಕಿದ ದುರ್ಬಲ ಮತ್ತು ವ್ಯರ್ಥ ಮರ್ಯಾದೆಯಾಗಲಿ ಆಗುತ್ತದೆ.

ಅನೇಕದಲ್ಲಿ ಮೂಲಭೂತ ಏಕತ್ವದ ಜ್ಞಾನದಿಂದ ಬೇರ್ಪಟ್ಟ ಬಹುತ್ವದರಿವು ಅಂದರೆ ಬೇರೆ ಯಾವ ರೂಪ, ಮರ್ಯಾದಿತವಾದ ಕ್ರಿಯೆ ಇವುಗಳೊಡನೆ ತಾದಾತ್ಮ್ಯಹೊಂದುವ ಪ್ರತ್ಯೇಕ ಅಹಂತೆಯ ದೃಷ್ಟಿಕೋನ ಎಂಬುದು ಪ್ರಮಾದ ಮತ್ತು ಭ್ರಮೆಗಳ ಅವಸ್ಥೆ. ಬಹುತ್ವದರಿವು ಮನುಷ್ಯನಲ್ಲಿ ಈ ರೂಪವನ್ನು ತೆಗೆದುಕೊಳ್ಳುತ್ತದೆ. ಅಂತೇ ಅದಕ್ಕೆ ಅವಿದ್ಯೆಯೆಂದು ಕರೆಯುತ್ತಾರೆ.

ಬ್ರಹ್ಮ-ಈಶನು-ಒಬ್ಬನೇ ಇದ್ದು ಸಂಪೂರ್ಣಸುಖಿಯಾಗಿರುತ್ತಾನೆ, ಆದರೆ ತನ್ನ ಏಕತ್ವದ ಬಂಧನದಿಂದ ಅವನು ಮುಕ್ತನು. ಅವನು ಸರ್ವಸಮರ್ಥನಾಗಿದ್ದು ಅನೇಕ ಕೇಂದ್ರಗಳಿಂದ ಅನೇಕ ರೂಪ ಗಳಲ್ಲಿ ತನ್ನನ್ನು ಬಗೆಯಬಲ್ಲನು. ಆ ಕೇಂದ್ರಗಳಿಂದ ಮತ್ತು ಆ ರೂಪಗಳ ಮೇಲೆ ಅನೇಕ ಶಕ್ತಿಯ ಪ್ರವಾಹ ಗಳು ಹರಿಯುತ್ತವೆ. ಅವನ್ನು ನಾವು ಕ್ರಿಯೆ ಇಲ್ಲವೆ ಶಕ್ತಿಗಳ ಆಟ ಎಂದು ಕಾಣುತ್ತೇವೆ. ಹೀಗೆ ಅನೇಕವಾಗಿ ಕಂಡರೂ ಅನೇಕತ್ವದ ಬಂಧನವು ಅವನಿಗಿಲ್ಲ. ಎಲ್ಲ ವ್ಯತ್ಯಾಸಗಳ ನಡುವೆ ತನ್ನದೇ ಆದ ಏಕತ್ವದಲ್ಲಿ ಅವನು ಶಾಶ್ವತವಾಗಿ ಇರುತ್ತಾನೆ. ವಿದ್ಯೆ-ಅವಿದ್ಯೆ ಎರಡರ ಈಶನವನು. ಅವನ ಮಾಯೆಯ ಎರಡು ಬದಿಗಳವು, ಅವನ ಚಿತ್‌ಶಕ್ತಿಯ ಎರಡು ಶಕ್ತಿಗಳವು.

ಬ್ರಹ್ಮನು ತನ್ನ ಮಾಯೆಯ ಆಟದಲ್ಲಿ ಇದ್ದವನೂ ಮೀರಿದವನೂ ಆದ ಈಶನಾಗಿರುತ್ತಾನೆ. ಅದರ ಒಡೆಯ,ಅದರಿಂದ ಸ್ವತಂತ್ರ. ಆಟದಲ್ಲಿ ಇದ್ದವನಾದ ಮನುಷ್ಯನು ಅನೀಶನು, ಅಸ್ವತಂತ್ರ, ಅವಿದ್ಯೆಗೆ ಒಳಪಟ್ಟವನು. ಆದರೆ ಈ ಒಳಪಾಟವೂ ಅವಿದ್ಯೆಯ ಆಟವೇ, ಪರಮಾರ್ಥದಲ್ಲಿ ಅಸತ್ಯ, ವ್ಯವಹಾರ ಸಂಬಂಧದಲ್ಲಿ ಮಾತ್ರ, ಚಿತ್ ಶಕ್ತಿಯ ಕ್ರಿಯೆಗಳ ಬಿತ್ತರಣೆಯಲ್ಲಿ ಸತ್ಯವಾದದ್ದು. ತನ್ನ ಸ್ವಾತಂತ್ರ್ಯದ ಮೂಲ ಸಂಗತಿಗೆ ಮರಳಿ ಹೋಗಬೇಕಾದರೆ ಮನುಷ್ಯನು ಏಕತೆಯ ಅರಿವನ್ನು ಬ್ರಹ್ಮಪ್ರಜ್ಞೆಯನ್ನು ತಿರುಗಿ ಸಂಪಾದಿಸಬೇಕು, ಬ್ರಹ್ಮನಲ್ಲಿ ಈಶನಲ್ಲಿ ತನ್ನ ಒಂದುತನವನ್ನು ಅನುಭವಿಸಬೇಕು. ತನ್ನ ಸ್ವತಂತ್ರತೆ ಯನ್ನು ಸಂಪಾದಿಸಿ, 'ಸೋಹಮಸ್ಮಿ' ಎಂಬಂತೆ ಏಕಸತ್ತೆಯ ಸಂಭೂತಿಗಳೆಂದು ಎಲ್ಲ ಸತ್ತೆಗಳೊಡನೆ ತಾದಾತ್ಮ್ಯವನ್ನು ಅನುಭವಿಸಿ ಅವನು ಜಗತ್ತಿನಲ್ಲಿ ದಿವ್ಯ ಕರ್ಮಗಳನ್ನು ಮಾಡಲು ಸಮರ್ಥನಾಗುತ್ತಾನೆ. ಅವನು ಅವಿದ್ಯೆಗೆ ಆಗ ಒಳಪಟ್ಟಿರುವುದಿಲ್ಲ, ಯಾಕಂದರೆ ತನಗುಂಟಾದ ಜ್ಞಾನದಿಂದ ಸ್ವತಂತ್ರನಾಗಿರುತ್ತಾನೆ.

ಆದ್ದರಿಂದ ವಿದ್ಯೆ ಅವಿದ್ಯೆಗಳ ನಡುವಣ ಮಿಗಿಲಾದ ಹೊಂದಿಕೆಯ ಮೂಲಕ ವ್ಯಕ್ತಿಯಲ್ಲಿ ಆಗುವ ದಿವ್ಯದ ಸಂಪೂರ್ಣ ಆವಿರ್ಭಾವದಲ್ಲಿ ಮನುಷ್ಯನ ಪರಿಪೂರ್ಣತೆಯಿರುತ್ತದೆ. ಅನೇಕತ್ವವು ತನ್ನ ತತ್ವದ ಅರಿವು ಪಡೆಯಬೇಕು, ಏಕತ್ವವು ತನ್ನ ಅನೇಕತ್ವವನ್ನು ಅಪ್ಪಿಕೊಳ್ಳಬೇಕು.

## ತುತ್ತತುದಿಯ ದಾರಿಗಳು

ಕೇವಲ ವಿದ್ಯೆಯೊಂದನ್ನೇ ಇಲ್ಲವೆ ಅವಿದ್ಯೆಯೊಂದನ್ನೇ ಅನುಸರಿಸುವುದರಿಂದ ಜಗತ್ತಿನಲ್ಲಿ ಈಶ್ವರನ ಉದ್ದೇಶವು ಕೈಗೂಡಲಾರದು. ಯಾರು ಸಂಪೂರ್ಣವಾಗಿ ಬಹುತ್ವ-ಭೇದಗಳ ತತ್ವದಲ್ಲಿ ಅನುರಕ್ತರಾಗಿರುತ್ತಾರೊ ಮತ್ತು ಏಕತ್ವದಿಂದ ತಮ್ಮ ದಿಕ್ಕನ್ನು ಬೇರೆ ಕಡೆ ತಿರುಗಿಸುತ್ತಾರೋ ಅವರು ಅವಿದ್ಯೆಯ ಅಂಧಂತಮದಲ್ಲಿ ಹೊಗುತ್ತಾರೆ. ಯಾಕಂದರೆ ಇದು ಹೆಚ್ಚುತ್ತಿರುವ ಸಂಕೋಚದ ಮತ್ತು ಮಿತಿಮರ್ಯಾದೆಯ ಪ್ರವೃತ್ತಿ. ಇದರಿಂದ ಅವರು ಜ್ಞಾನದ ಲಾಭಗಳನ್ನು ಹರಿಹಂಚುತ್ತಾರೆ, ಮತ್ತು ಪ್ರಕೃತಿಯ ಯಂತ್ರಬದ್ಧ ಅವಶ್ಯಕತೆಗಳಿಗೆ ಹೆಚ್ಚೆಚ್ಚು ಒಳಗಾಗಿ ಕೊನೆಗೆ ಅವಳ ಭೇದಕಾರಕವಾದ ಆತ್ಮನಾಶಕಾರವಾದ ಶಕ್ತಿಗಳಿಗೆ ಆಧೀನರಾಗುತ್ತಾರೆ. ಒಂದುತನದತ್ತಣದ ಪ್ರಗತಿಯಿಂದ ಮೊಗ ತಿರುಗಿಸುವುದೆಂದರೆ ಸತ್ತೆಯಿಂದ, ಬೆಳಕಿನಿಂದ ಮೊಗ ತಿರುಗಿಸಿದಂತೆಯೇ ಸರಿ

ಯಾರು ವಿವೇಚನೆಯಿಲ್ಲದ ಏಕತ್ವದ ತತ್ವಕ್ಕೆ ಅಂಟಿಕೊಳ್ಳುತ್ತಾರೊ ಮತ್ತು ಬ್ರಹ್ಮನ ಸಮಗ್ರತೆಯಿಂದ ತಮ್ಮನ್ನು ದೂರವಿರಿಸುತ್ತಾರೊ ಅವರು ತಮ್ಮಿಂದ ಜ್ಞಾನವನ್ನೂ ಪೂರ್ಣತೆಯನ್ನೂ ದೂರಸರಿಸಿ ಇನ್ನೂ ದಟ್ಟವಾದ ಕತ್ತಲೆಯಲ್ಲಿ ಎಂಬಂತೆ ಹೊಗುತ್ತಾರೆ. ಒಂದು ವಿಶಿಷ್ಟ ಅವಸ್ಥೆಯಲ್ಲಿ ಪ್ರವೇಶಿಸಿ ಅದೇ ಸಮಗ್ರವೆಂದು ಅವರು ಸ್ವೀಕರಿಸುತ್ತಾರೆ. ಹೀಗಾಗಿ ಪ್ರಜ್ಞೆಯಲ್ಲಿ ಹೊರತುಪಡಿಸಿದ್ದನ್ನು ಪ್ರಜ್ಞೆಯಲ್ಲಿ ಮೀರಿದ್ದೆಂದು ತಪ್ಪು ತಿಳಿಯುತ್ತಾರೆ. ಬೇರೆಯವರು ಪ್ರಮಾದದ ಒತ್ತಾಯದಿಂದ ಅಜ್ಞಾನಿಗಳಾಗುವಂತೆ ಇವರು ಜ್ಞಾನದ ಅಯ್ಕೆಯಿಂದ ತಜ್ಞರಾಗುತ್ತಾರೆ. ಎಲ್ಲವನ್ನು ತಿಳಿದು ಎಲ್ಲವನ್ನು ಮೀರುವುದು ಇದೇ ವಿದ್ಯೆಯ ಸರಿಯಾದ ದಾರಿ.

ಇನ್ನೊಂದಕ್ಕಿಂತ ಮೇಲಿನ ಅವಸ್ಥೆಯಾದರೂ, ಈ ಅಂಧಂತಮವು ಇನ್ನೂ ದಟ್ಟವಾದ ಕತ್ತಲೆಯೆಂದು ಹೇಳಿದ್ದರ ಕಾರಣವೆಂದರೆ, ಕೆಳಗಿನದು ಅವ್ಯವಸ್ಥೆಯ ಅವಸ್ಥೆಯಾಗಿದೆ, ಅದರಿಂದ ಬಿಡುಗಡೆ ಹೊಂದಿದ ಪುನರ್ಘಟನೆ ಯಾವಾಗಲೂ ಸಾಧ್ಯವಿರುತ್ತದೆ. ಮೇಲಿನದು ಶೂನ್ಯ ಇಲ್ಲವೆ ಅಸತ್ತಿನ ಭಾವನೆ, ಆತ್ಮದ ಅಸ್ತಿತ್ವದ ಅಭಾವದಲ್ಲಿ ಆಸಕ್ತವಾಗಿದ್ದು ಅದರಿಂದ ಆತ್ಮಸಿದ್ಧಿಗೆ ಮರಳುವುದು ಹೆಚ್ಚು ಕಠಿಣವಾಗಿದೆ.

## ಎರಡೂ ಮಾರ್ಗಗಳಲ್ಲಿಯ ಲಾಭಗಳು

ಕಡಿಮೆ ಸಮಗ್ರವಾದ ಆಸಕ್ತಿಯಿಂದ ಅನುಸರಿಸಿದರೆ ವಿದ್ಯೆ-ಅವಿದ್ಯೆಗಳ ಎರಡೂ ಮಾರ್ಗಗಳು ಮಾನವನಿಗೆ ತಂತಮ್ಮ ಯೋಗ್ಯಲಾಭಗಳನ್ನು ಮಾಡಿಕೊಡುತ್ತವೆ. ಆದರೆ ವ್ಯಕ್ತಿಯ ಆವಿಷ್ಕಾರದಲ್ಲಿ ಯಾವುದೇ ಒಂದು ಪೂರ್ಣ ಮಾರ್ಗವಾಗಲಾರದು.

ವಿದ್ಯೆಯಿಂದ ಶಾಂತಬ್ರಹ್ಮ ಅಥವಾ ಅಕ್ಷರ ಪುರುಷನ ಅವಸ್ಥೆಯನ್ನು ಮುಟ್ಟಬಹುದು. ಅದರಿಂದ ವಿಶ್ವದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸದೆ ಅದನ್ನು ಗಮನಿಸುತ್ತ ಇರಬಹುದು. ಅಥವಾ ಸತ್‌ದಲ್ಲಿ ಸಲೀನವಾದ ಚಿತ್ ಅವಸ್ಥೆಯನ್ನು ಮುಟ್ಟಬಹುದು. ಯಾವುದರಿಂದ ವಿಶ್ವ ಹುಟ್ಟಿ ಬೆಳೆದು ಅದರತ್ತ ತಿರುಗುತ್ತದೆ. ಇವೆರಡೂ ಅವಸ್ಥೆಗಳು ನಿರ್ಮಲತೆ, ಪೂರ್ಣತೆ ಮತ್ತು ಲೋಕ ದುಃಖಗಳಿಂದ ಮತ್ತು ಗೊಂದಲಗಳಿಂದ ದೊರೆಯುವ ಬಿಡುಗಡೆ ಇವುಗಳಿಂದ ಕೂಡಿದವಾಗಿರುತ್ತವೆ.

ಆದರೆ ಮನುಷ್ಯನ ಉಚ್ಚತಮವಾದ ಗುರಿ ಜಗತ್ತಿನಲ್ಲಿ ಪ್ರತ್ಯೇಕ ವ್ಯಕ್ತಿಯಾಗಿ ಪಡೆಯುವ ಸಿದ್ಧಿಯಲ್ಲಿ ಅಥವಾ ಜಗತ್ತಿನಿಂದ ಸಿಡಿದಿರುವ ಮೌನ ಸಿದ್ಧಿಯಲ್ಲಿ ಇರುವುದಿಲ್ಲ. ಆದರೆ ಕ್ಷರ, ಅಕ್ಷರ ಇವೆರಡೂ ತನ್ನ ಸತ್ತೆಯ ಎರಡು ಪ್ರಕಾರಗಳೆಂದು ತನ್ನಲ್ಲಿ ಧರಿಸಿ ಸರ್ವತ್ರ ಹೋಗುವ ಈಶ, ಉತ್ತಮ

ಪುರುಷನಲ್ಲಿದೆ. ಮನುಷ್ಯನ ಆತ್ಮ-ಜೀವಾತ್ಮವು-ವ್ಯಕ್ತಿಯಲ್ಲಿ ವಿಶ್ವಕ್ಕಾಗಿ ಏಕಮೇವ ಪರಮಾತ್ಮನನ್ನು ಕಾಣುವುದಕ್ಕಾಗಿ ಇಲ್ಲಿರುತ್ತದೆ. ಅವಿದ್ಯೆಯಿಂದ ನಿರ್ಮಾಣವಾದ ಅಹಂಕಾರವು ಈ ಪರಮಸಿದ್ಧಿಗೆ ಪ್ರಾರಂಭ ಸ್ಥಳವೆಂದು ವಿಶ್ವತತ್ವದಲ್ಲಿ ವ್ಯಕ್ತಿತ್ವವನ್ನು ನೆಲೆಗೊಳಿಸುವುದಕ್ಕಾಗಿ ಬೇಕಾದ ಒಂದು ಅವಶ್ಯವಾದ ಯಂತ್ರ ಸಾಧನವಾಗಿದೆ.

ಅವಿದ್ಯೆಯಿಂದ ಒಂದುತರದ ಶಕ್ತಿ, ಆನಂದ, ಪ್ರಪಂಚಜ್ಞಾನ, ಸತ್ತೆಯ ವಿಸ್ತಾರ ಇವುಗಳ ಪೂರ್ಣತೆಯನ್ನು ಮುಟ್ಟಬಹುದು. ಅದು ಟೈಟನ್ನರು (ದೈತ್ಯರು), ದೇವತೆಗಳು, ಇಂದ್ರ, ಪ್ರಜಾಪತಿ ಇವರಲ್ಲಿರುತ್ತದೆ. ಎಲ್ಲ ಸಾಧ್ಯತೆಗಳಲ್ಲಿ ಅನೇಕತ್ವವನ್ನು ಮನವಾರೆ ಅಂಗೀಕರಿಸಿ ಮಾಡಿಕೊಂಡ ಆತ್ಮವಿಸ್ತರಣ ಮತ್ತು ವಿಶ್ವವು ತನ್ನಲ್ಲಿ ತೂರುವ ಎಲ್ಲ ಸಾಧನಗಳಿಂದ ವ್ಯಕ್ತಿಯು ನಿತ್ಯವಾದ ಅಭಿವೃದ್ಧಿ ಈ ಪಥದಲ್ಲಿ ಹೋದರೆ ಅವಿದ್ಯೆಯಿಂದ ದೊರೆಯುವ ಪೂರ್ಣತೆ ಪ್ರಾಪ್ತವಾಗುತ್ತದೆ. ಆದರೆ ಇದು ಸಹ ಮನುಷ್ಯನ ಗುರಿಯಲ್ಲ; ಯಾಕಂದರೆ ಇದರಿಂದ ಸಾಮಾನ್ಯವಾದ ಮಾನವ ಮರ್ಯಾದೆಗಳನ್ನು ಮೀರುವುದು ಸಾಧ್ಯವಾದರೂ ವಿಶ್ವದ ಈಶನಲ್ಲಿ ವಿಶ್ವದ ದಿವ್ಯ ಅತೀತವು ಸಾಧ್ಯವಾಗುವುದಿಲ್ಲ. ಅವಿದ್ಯೆಯಿಂದುಂಟಾಗುವ ಗೊಂದಲವನ್ನು ಮೀರಬಹುದು, ಆದರೆ ವಿದ್ಯೆಯ ಮಿತಿ ಮರ್ಯಾದೆಯನ್ನಲ್ಲ; ದೇಹದ ಮರಣವನ್ನು ಮೀರಬಹುದು, ಆದರೆ ಸತ್ತೆಯ ಪರಿಮಿತಿಯನ್ನಲ್ಲ; ದುಃಖದ ಅಧೀನತೆಯನ್ನು ಮೀರಬಹುದು, ಆದರೆ ಸಂತೋಷದ ಅಧೀನತೆಯನ್ನಲ್ಲ; ಕೆಳಗಣ ಪ್ರಕೃತಿಯನ್ನು ಮೀರಬಹುದು, ಮೇಲಣ ಪ್ರಕೃತಿಯನ್ನಲ್ಲ. ನಿಜವಾದ ಸ್ವಾತಂತ್ರ್ಯವನ್ನೂ ಪರಿಪೂರ್ಣವಾದ ಅಮರತ್ವವನ್ನೂ ಪಡೆಯಬೇಕಾದರೆ ನಿರಾಕರಿಸಿದ ಎಲ್ಲದರ ಬಳಿ ಇಳಿದುಹೋಗಿ ಮೃತ್ಯು, ದುಃಖ, ಅಜ್ಞಾನಗಳ ಯೋಗ್ಯವಾದ ಉಪಯೋಗವನ್ನು ಮಾಡಬೇಕು.

ಬ್ರಹ್ಮನನ್ನು ಸಮಗ್ರ ಸ್ವರೂಪದಲ್ಲಿ ಅರಿಯುವುದೇ ನಿಜವಾದ ಜ್ಞಾನ. ಒಂದು ಪ್ರಜ್ಞೆಯನ್ನು ಬಿಟ್ಟು ಇನ್ನೊಂದಕ್ಕೆ ಉತ್ಸುಕತೆಯಿಂದ ಹೋಗುವುದಲ್ಲ, ಅವಿದ್ಯೆಗಿಂತ ವಿದ್ಯೆಯಲ್ಲಿ ಹೆಚ್ಚು ಆಸಕ್ತವಾಗಿರುವುದಲ್ಲ ಇದು ಧೀರರಾದ ಪ್ರಾಚೀನ ಋಷಿಗಳ ಜ್ಞಾನವಾಗಿತ್ತು. ಅವರು ತಮ್ಮ ವಿಚಾರದ ನೋಟದಲ್ಲಿ ಸ್ಥಿರರಾಗಿದ್ದರು. ಅಂತೇ ಅವರು ಧೀರರು. ಆ ಬೆಳಕು ಈ ಬೆಳಕಿನಿಂದ ಪೂರ್ಣ ಜ್ಞಾನಕ್ಕೆ ಅವರು ಪರಾಙ್ಮುಖರಾಗುತ್ತಿರಲಿಲ್ಲ. ಅವರ ಬ್ರಹ್ಮಜ್ಞಾನವು ಅಂತೇ ಸಮಗ್ರವಾಗಿತ್ತು. ಸರ್ವಸಂಗ್ರಾಹಕವಾಗಿತ್ತು. ಅವರ ಬೋಧನೆಯೂ ಅಷ್ಟೇ ಸಮಗ್ರ ಮತ್ತು ಸರ್ವಸಂಗ್ರಾಹಕವಾದ ಜ್ಞಾನದ ಆಧಾರದ ಮೇಲೆ ನಿಂತಿದ್ದಿತು. (ಪಚಕ್ಷಿರೆ) ಈ ಪ್ರಾಚೀನರಿಂದ ಪರಂಪರೆಯಾಗಿ ಬಂದ ಜ್ಞಾನವನ್ನೇ ಈ ಉಪನಿಷತ್ತಿನಲ್ಲಿ ನಿರೂಪಿಸಲಾಗಿದೆ.

## ಸಂಪೂರ್ಣ ಮಾರ್ಗ

ಬ್ರಹ್ಮನು ತನ್ನ ಅಭಿವ್ಯಕ್ತಿಯಲ್ಲಿ ವಿದ್ಯೆ—ಅವಿದ್ಯೆ ಎರಡನ್ನೂ ಒಳಗೊಂಡಿರುತ್ತಾನೆ. ಅವೆರಡೂ ಅಭಿವ್ಯಕ್ತಿಯಲ್ಲಿದ್ದರೆ ಅದರ ಅಸ್ತಿತ್ವ ಮತ್ತು ಸಿದ್ಧಿಗೆ ಅವಶ್ಯವಾಗಿರುತ್ತವೆ. ವಿದ್ಯೆ ಆಶ್ರಯಕೊಟ್ಟು ಒಳಗೊಳ್ಳುತ್ತದೆ ಎಂದು ಅವಿದ್ಯೆ ಇರುತ್ತದೆ. ಮಹತ್ತರವಾದ ಐಕ್ಯದತ್ತ ಆತ್ಮನನ್ನು ಸಿದ್ಧಗೊಳಿಸಿ ಮುನ್ನಡೆಸಲು ಅವಿದ್ಯೆಯನ್ನು ವಿದ್ಯೆ ಅವಲಂಬಿಸಿರುತ್ತದೆ. ಒಂದಿಲ್ಲದೆ ಇನ್ನೊಂದು ಇರುವುದಿಲ್ಲ. ಯಾವುದಾದರೂ ಒಂದನ್ನು ತೆಗೆದು ಹಾಕಿದರೆ ಅವೆರಡೂ ಕೂಡಿ ಏನೋ ಒಂದು ಆಗಿ ಅಡಗಬಹುದು. ಅದೂ ಅಲ್ಲ, ಇದೂ ಅಲ್ಲ ಎಂಬಂತೆ ಆಗಬಹುದು.

ಆದೇನೊ ಒಂದು ಅಭಿವ್ಯಕ್ತಿಯ ಆಚೆಯ ಕಲ್ಪನಾತೀತ, ವರ್ಣನಾತೀತವಾಗಿ ಫಲಿಸಬಹುದು ತೀರ ಕನಿಷ್ಟವಾದ ಅವಿದ್ಯೆಯಲ್ಲಿ ಜ್ಞಾನದ ಏನಾದರೊಂದು ಅಂಶವಿರುತ್ತದೆ, ಏಕತ್ವದ ಯಾವುದಾದರೊಂದು. ಆಧಾರವಿರುತ್ತದೆ. ಅದು ಅವಿದ್ಯೆಯ ಪರಮಾವಧಿಯಾದ ಭೇದ, ಪರಿಮಿತಿ, ಅಸ್ಫುಟತೆಯಲ್ಲಿಯೂ ಶೂನ್ಯ

ದಲ್ಲಿ ಲಯಹೊಂದಿ ಇಲ್ಲದಂತಾಗುವದನ್ನು ತಡೆಯುತ್ತದೆ. ಅಸ್ತಿತ್ವದಿಂದ ನಷ್ಟವಾಗುವುದು ಅವಿದ್ಯೆಯ ಹಣೆಯ ಬರಹವಲ್ಲ, ಆದರೆ ಅದರ ಮೂಲಾಂಶಗಳು ಪ್ರಕಾಶಿತವೂ ಏಕೀಕೃತವೂ ಆಗಬೇಕು, ಅವು ಅಭಿವ್ಯಕ್ತಿಗೊಳಿಸಬೇಕೆನ್ನುವುದು ಹೊರಬರಬೇಕು, ಪೂರ್ತಿಗೊಳ್ಳಬೇಕು, ಈ ಪೂರ್ತತೆಯಲ್ಲಿ ವಸ್ತು ರೂಪಗಳ ಬದಲಾವಣೆಯಾಗಬೇಕು.

ಜ್ಞಾನಕ್ಕೆ ಸಾಧ್ಯವಾದ ಅತ್ಯಂತ ಏಕತ್ವದಲ್ಲಿ ಅನೇಕತ್ವದ ವಿಷಯಗಳು ಅಂತರ್ಗತವಾಗಿರುತ್ತವೆ. ಬೇಕಾದ ಕ್ಷಣದಲ್ಲಿ ಅವನ್ನು ಚಟುವಟಿಕೆಗಾಗಿ ಮುಕ್ತಗೊಳಿಸಬಹುದು. ಅವಿದ್ಯೆ ಎಂದಿಗೂ ವ್ಯಕ್ತವಾಗಬಾರದಾಗಿದ್ದ ವಸ್ತುವೆಂಬಂತೆ ಅದನ್ನು ನಷ್ಟಗೊಳಿಸುವುದು ವಿದ್ಯೆಯ ಕಾರ್ಯವಲ್ಲ. ಆದರೆ ಸತತವಾಗಿ ಅದನ್ನು ತನ್ನ ಕಡೆಗೆ ಎಳೆದುಕೊಳ್ಳುವುದು ವಿದ್ಯೆಯ ಕಾರ್ಯ. ಹಾಗೆ ಮಾಡುವಾಗ ಅದಕ್ಕೆ ಆಧಾರವಾಗಬೇಕು, ಅಜ್ಞಾನಗುಣದಿಂದ ಹೆಚ್ಚುಹೆಚ್ಚಾಗಿ ಅದು ಬಿಡುಗಡೆಹೊಂದಲು ನೆರವಾಗಬೇಕು. ಮೂಲಭೂತ ಏಕತ್ವದ ವಿಸ್ಮರಣದಿಂದ ಹೊರಬೀಳಲು ಅದಕ್ಕೆ ಸಹಾಯವಾಗಬೇಕು. ಆ ವಿಸ್ಮರಣದ ಮೂಲಕವೇ ಅದಕ್ಕೆ ಅವಿದ್ಯೆಯೆಂಬ ಹೆಸರು ಬಂದಿದೆ.

ವಿದ್ಯೆಯತ್ತ ಹೆಚ್ಚುಹೆಚ್ಚಾಗಿ ಹೊರಳುವುದರಿಂದ ಸಿದ್ಧಿಹೊಂದುವ ಅವಿದ್ಯೆ ವ್ಯಕ್ತಿ-ವಿಶ್ವಗಳೆರಡೂ ಈಶನು ತನ್ನಲ್ಲಿರುವಂತೆ ಆಗಿರಲು ಅನುಗೊಳಿಸುತ್ತದೆ. ತನ್ನ ಅಭಿವ್ಯಕ್ತಿಯ ಹಾಗೂ ಅನಭಿವ್ಯಕ್ತಿಯ ಅರಿವುಳ್ಳವನಾಗಿ ಜನ್ಮ, ಅಜನ್ಮ ಎರಡಕ್ಕೂ ಸ್ವತಂತ್ರವಾಗಿ ಈಶನು ತನ್ನಲ್ಲಿರುತ್ತಾನೆ.

ವಿಶ್ವದಲ್ಲಿಯ ಅನೇಕತ್ವವು ಬುದ್ಧಿ ಪೂರ್ವಕವಾಗಿ ಈ ವಿದ್ಯಾ ಸಂಮುಖತೆ ಮತ್ತು ಸಿದ್ಧಿಗಳ ಸಾಮರ್ಥ್ಯವುಳ್ಳುದಾಗುವ್ಹಹಂತವನ್ನು ಮನುಷ್ಯನು ಪ್ರತಿನಿಧಿಸುತ್ತಾನೆ. ವಿದ್ಯೆಗೆ ಅವಿದ್ಯೆ, ಏಕತ್ವಕ್ಕೆ ಬಹುತ್ವ, ಸರ್ವಾಂತರ್ಯಾಮಿಗೆ ಅಹಂತೆ ಶರಣು ಹೋಗುವಂಥ, ಹಾಗೂ ವಿದ್ಯೆ ಅವಿದ್ಯೆಯನ್ನು ತನ್ನಲ್ಲಿ ಸ್ವೀಕರಿಸುವಂಥ, ಏಕತ್ವ ಬಹುತ್ವದಲ್ಲಿ ಕೃತಾರ್ಥವಾಗುವಂಥ ವ್ಯಷ್ಟಿ ಸಮಷ್ಟಿಯಲ್ಲಿ ಏಕವು ಪ್ರಕಟವಾಗಿ ತನ್ನನ್ನು ಅಭಿವ್ಯಕ್ತಗೊಳಿಸುವಂಥ ಸಂಪೂರ್ಣ ಮಾರ್ಗವನ್ನು ಹಿಡಿಯುವುದರಿಂದ ಮನುಷ್ಯನು ತನ್ನ ಸ್ವಭಾವಕ್ಕೆ ಅನುಗುಣವಾದ ಸಿದ್ಧಿ ಪಡೆಯುತ್ತಾನೆ.

**ಮರ್ತ್ಯತೆ— ಅಮೃತತ್ವ**

ಮರ್ತ್ಯತೆ:— ಅವಿದ್ಯೆಯ ಪೂರ್ತತೆಯಿಂದ ಮನುಷ್ಯನು ಮೃತ್ಯುವನ್ನು ದಾಟುತ್ತಾನೆ, ಅವಿದ್ಯೆಯನ್ನು ವಿದ್ಯೆ ತನ್ನಲ್ಲಿ ಸ್ವೀಕಾರ ಮಾಡುವುದರಿಂದ ಅವನು ಅಮೃತತ್ವವನ್ನು ಹೊಂದುತ್ತಾನೆ.

ಇಲ್ಲಿ ಮೃತ್ಯುವೆಂದರೆ ಸುಖದುಃಖ, ಒಳಿತು ಕೆಡಕು, ಸತ್ಯ-ಅಸತ್ಯ, ರಾಗದ್ವೇಷ, ಸಂತೋಷ-ಸಂಕಷ್ಟ ಈ ದ್ವಂದ್ವಗಳಿಗೆ ಕಟ್ಟುಬಿದ್ದ ಮರ್ಯಾದಿತ ಅಹಂತೆಯಾಗಿ ಜನನ ಮರಣಗಳ ಚಕ್ರದಲ್ಲಿ ಸಿಲುಕಿರುವ ಮರ್ತ್ಯಾವಸ್ಥೆ. ಸರ್ವ ವ್ಯಾಪಿಯೂ ಸರ್ವಾತೀತವೂ ಆದ ಏಕಮೇವ ವಸ್ತುವಿನಿಂದ ತನ್ನ ಭೇದಮಾಡಿಕೊಂಡು ಪರಿಮಿತಿಗೆ ಒಳಗಾಗುವುದರಿಂದಲೂ ದೇಶ ಕಾಲದ ಪಡಿಯಚ್ಚಿನಲ್ಲಿ ದೇಹಮನ ಪ್ರಾಣಗಳ ಒಂದೇ ರಚನೆಯೆಂಬುದಾಗಿ ಆತ್ಮ ವಿಚಾರವನ್ನು ಅಂಜಿಸುವುದರಿಂದಲೂ ಈ ಮರ್ತ್ಯಾವಸ್ಥೆ ಬರುತ್ತದೆ. ಇದರಿಂದ ತಾನು ದಿಟವಾಗಿ ಇದ್ದುದನ್ನೆಲ್ಲ ಆತ್ಮವು ತನ್ನ ದೃಷ್ಟಿಯಿಂದ ಮರೆಮಾಡುತ್ತದೆ. ಒಂದು ವಿಶಿಷ್ಟ ಕೇಂದ್ರದಿಂದ ಅದರ ಮೇಲೆ ಪ್ರವಹಿಸುತ್ತಿರುವ ಮತ್ತು ವಿಶಿಷ್ಟವಾದ ಮಾನಸಿಕ ಪ್ರಾಣಿಕ ಶಾರೀರಿಕ ರಚನೆಯ ಸಾಮರ್ಥ್ಯಗಳಿಂದ ಮರ್ಯಾದಿತವಾದ ಅನುಭವ ರಾಶಿಯೊಂದನ್ನೇ ಅದು ತನ್ನದೆನ್ನುತ್ತದೆ. ಈ

ಅನುಭವ ರಾಶಿಯನ್ನು ಮನಸ್ಸಿನಲ್ಲಿಯ ಅಹಂ ಕೇಂದ್ರದ ಸುತ್ತು ಅದು ಏರ್ಪಡಿಸುತ್ತದೆ ಹಾಗೂ ವೃತ್ತಿಯಲ್ಲಿ ತಟಸ್ಥ, ಕೃತಿಯಲ್ಲಿ ಸಕ್ರಿಯ ಆದ ಸ್ಮೃತಿಯ ದ್ವಿವಿಧ ಕಾರ್ಯದಿಂದ ಆ ಅನುಭವಗಳನ್ನು ಜೋಡಿಸಿ ತಿರುತಿರುಗಿ ಅನ್ನುತ್ತದೆ: ''ಇದು ನಾನು ಇರುತ್ತೇನೆ''.

ಇದರ ಪರಿಣಾಮವಾಗಿ ಪ್ರಕೃತಿ ಅಥವಾ ಚಿತ್‌ಶಕ್ತಿಯ ಲೀಲೆಯ ಒಂದು ಭಾಗವನ್ನು ಮಾತ್ರ ಜೀವಾತ್ಮವು ತನಗೆ ಆರೋಪಿಸುತ್ತದೆ. ಅದರಿಂದ ಚೈತನ್ಯದ ಮರ್ಯಾದಿತ ಶಕ್ತಿ ಮಾತ್ರ ತನ್ನದೆಂದು ತಿಳಿಯುತ್ತದೆ. ತನ್ನದಲ್ಲವೆಂದೂ ಪರಕೀಯ ಶಕ್ತಿಗಳ ದಾಳಿಯೆಂದೂ ತಾನು ತಿಳಿಯುವುದನ್ನೆಲ್ಲ ಈ ಮರ್ಯಾದಿತ ಶಕ್ತಿ ತಡೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಇದಿರುಕೊಡುವುದಕ್ಕಾಗಿ ಪ್ರಕೃತಿಯಲ್ಲಿ ವಿಲೀನವಾಗದಂತೆ ಇಲ್ಲವೆ ಪ್ರಕೃತಿ ತನ್ನ ಸ್ವಾಮಿಯಾಗದಂತೆ ತನ್ನ ಪ್ರತ್ಯೇಕವಾದ ವ್ಯಕ್ತಿತ್ವರಚನೆಯನ್ನು ಸಂರಕ್ಷಿಸಿಕೊಳ್ಳುತ್ತದೆ. ವ್ಯಕ್ತಿರೂಪದಲ್ಲಿ ತನ್ನನ್ನು ಸಾಧಿಸಲು ಮತ್ತು ಅದರ ಸಹಾಯದಿಂದ ತನ್ನಲ್ಲಿಯ ಈಶತ್ವದ ಸಹಜ ಗುಣವನ್ನು ಸಾಧಿಸಿ ಜಗತ್ತನ್ನು ತನ್ನದಾಗಿ ಮಾಡಿಕೊಂಡು ಭೋಗಿಸಲು ಬಯಸುತ್ತದೆ.

ಆದರೆ ಅಹಂಕಾರದ ಲಕ್ಷಣದ ಮೂಲಕವೇ ಅದರ ಸಾಮರ್ಥ್ಯ ಮರ್ಯಾದಿತವಾದದ್ದು. ಪ್ರಕೃತಿಯ ಚಲನದಿಂದುಂಟಾದ ರೂಪವೊಂದನ್ನು ಅದು ತಾನೆಂದು ಅಂಗೀಕರಿಸುತ್ತದೆ. ಒಟ್ಟಿನ ಪ್ರಪಂಚ ಪ್ರವಾಹದಲ್ಲಿ ಆರೂಪ ವುಳಿಯಲಾರದಂಥದು. ಚಲನದ ವಿಧಾನದಿಂದ ಅದನ್ನದು ರಚಿಸಬೇಕು ಇದೇ ಜನನ. ಅದರದೇ ವಿಧಾನದಿಂದ ಅದನ್ನದು ಕರಗಿಸುತ್ತದೆ. ಇದೇ ಮರಣ.

ತನ್ನ ಅನುಭವಗಳಲ್ಲಿ ತನ್ನ ದೃಷ್ಟಿಕೋನಕ್ಕೆ ಸರಿಹೋಗುವವನ್ನಿಷ್ಟು ಅದು ತಿಳಿವಳಿಕೆಯಿಂದ ತನ್ನದಾಗಿ ಮಾಡಿಕೊಳ್ಳಬಲ್ಲದು. ಆದರೆ ಈ ರೀತಿ ಯಾವಾಗಲೂ ಅಪೂರ್ಣವಾದದ್ದು ಮತ್ತು ಪ್ರಮಾದ ವಶವಾದದ್ದಿರಲೇಬೇಕು. ಯಾಕೆಂದರೆ ಅದು ಎಲ್ಲದರ ದೃಷ್ಟಿ ಅಥವಾ ಸರ್ವವ್ಯಾಪಿಯ ದೃಷ್ಟಿಯಲ್ಲ. ಅದರ ಜ್ಞಾನವೆಂದರೆ ಅಂಶತಃ ಪ್ರಮಾದ. ಉಳಿದದ್ದನ್ನೆಲ್ಲ ಅದು ಅಲಕ್ಷಿಸುತ್ತದೆ,

ತನ್ನ ಅನುಭವಗಳಲ್ಲಿ ಕೆಲವನ್ನು ಮಾತ್ರ ಅದು ಸ್ವೀಕರಿಸಿ ಸಮರಸಮಾಡಿಕೊಳ್ಳಬಲ್ಲದು. ಯಾಕೆಂದರೆ ತಾನು ಅರಗಿಸಿಕೊಳ್ಳಲು ಸಾಲುವಷ್ಟು ಈ ಅನುಭವಗಳನ್ನು ಮಾತ್ರ ಅದು ತಿಳಿದುಕೊಳ್ಳಬಲ್ಲದು. ಇದು ಅದರ ಆನಂದ, ಉಳಿದ್ದೆಲ್ಲ ದುಃಖ ಅಥವಾ ಉದಾಸೀನತೆ.

ತನ್ನ ದೇಹ, ನರಗಳು, ಮನಸ್ಸಿನ ಶಕ್ತಿಯ ಕೂಡ ಪರಕೀಯ ಶಕ್ತಿಗಳ ಆಘಾತಗಳಲ್ಲಿ ಕೆಲವೊಂದನ್ನು ಮಾತ್ರ ಅದು ಹೊಂದಿಸಿಕೊಳ್ಳಬಲ್ಲದು. ಇದನ್ನು ಮಾಡುವುದು ಅದಕ್ಕೆ ಸಂತೋಷದ ವಿಷಯ. ಉಳಿದ್ದನ್ನು ಅದು ಸಂವೇದನೆಯ ಅಭಾವದಿಂದ ಅಥವಾ ನೋವಿನಿಂದ ಬರಮಾಡುತ್ತದೆ.

ಆದ್ದರಿಂದ ಮರಣವೆಂದರೆ ಮನಸ್ಸು, ಪ್ರಾಣ, ಶರೀರಗಳ ವೈಯಕ್ತಿಕ ರಚನೆಯಲ್ಲಿ ಅಹಂಕಾರವು ಸುಳ್ಳಾಗಿ ಹಾಕಿಕೊಂಡ ಪರಿಮಿತಿಯನ್ನು ಸರ್ವಾಂತರ್ಯಾಮಿ ನಿರಂತರವೂ ಮಾಡುವ ನಿರಾಕರಣೆ.

ಪ್ರಮಾದವೆಂದರೆ ಸರ್ವ ತತ್ವದಿಂದ ಮರ್ಯಾದಿತ ಜ್ಞಾನದಲ್ಲಿ ಅಹಂತೆ ಪಡೆಯುವ ಸುಳ್ಳು ತೃಪ್ತಿಯ ನಿರಂತರ ನಿರಾಕರಣೆ.

ದೇಹ ಮನಸ್ಸುಗಳ ಸಂಕಷ್ಟವೆಂದರೆ ಪರಿಮಿತವಾದ ಮತ್ತು ಬೇರೆ ಯಾವುದನ್ನೂ ಒಲ್ಲದ ಭೋಗಗಳ ಅಸತ್ಯವಾದ ಮತ್ತು ಸ್ವಾರ್ಥನಿಷ್ಠವಾದ ರಚನೆಗೆ ವಿಶ್ವಾನಂದವನ್ನು ಕಟ್ಟಿಹಾಕುವ ಅಹಂತೆಯ ಪ್ರಯತ್ನವನ್ನು ಸರ್ವತತ್ವವು ನಿರಂತರವಾಗಿ ಮಾಡುವ ನಿರಾಕರಣೆ.

ಸರ್ವಾಂತರ್ಯಾಮಿಯ ಏಕತೆಯನ್ನು ಒಪ್ಪಿಕೊಳ್ಳುವುದರಿಂದಲೇ ವ್ಯಕ್ತಿ ಈ ನಿರಂತರ ನಿರಾಕರಣೆಯಿಂದ ಪಾರಾಗಿ ಮೀರಿದ ಸ್ಥಿತಿಯನ್ನು ಹೊಂದಬಹುದು. ಆಗ ಸರ್ವಸತ್ತೆ, ಸರ್ವಶಕ್ತಿ, ಸರ್ವಪ್ರಜ್ಞೆ, ಸರ್ವಸತ್ಯ, ಸರ್ವಾನಂದ ಜೀವಾತ್ಮನ ವಶವಾಗುವವು. ಮರ್ತ್ಯತೆ ಅಮರತ್ವದಲ್ಲಿ ವ್ಯತ್ಯಾಸ ಹೊಂದುವುದು.

## ಮರ್ತ್ಯತೆ ಮತ್ತು ಅವಿದ್ಯೆ

ವ್ಯಕ್ತಿ ರೂಪವನ್ನು ಪ್ರಕೃತಿ ಪ್ರವಾಹದಲ್ಲಿ ಸ್ವಂತವಾಗಿ ನಾಶಪಡಿಸುವುದಾಗಲಿ ಪ್ರಕೃತಿಯಲ್ಲಿ ಅಭಿವ್ಯಕ್ತವಾಗುವ ಸರ್ವಾತ್ಮನಲ್ಲಿ (ಅಕಾಲಿಕವಾಗಿ) ವಿಲೀನಗೊಳಿಸುವುದಾಗಲಿ ಅಮೃತತ್ವವನ್ನು ಹೊಂದುವ ಮಾರ್ಗವಲ್ಲ. ಮನುಷ್ಯನು ವಿಶ್ವವು ಸಾರ್ಥಕವಾಗುವ ಗುರಿಯ ಕಡೆಗೆ ಅದನ್ನು ಮೀರುತ್ತ ಸಾಗುತ್ತಾನೆ. ತನ್ನ ಜೀವಾತ್ಮವನ್ನು ಈ ಮೀರುವಿಕೆ ಮತ್ತು ಸಾರ್ಥಕತೆಗಾಗಿ ಅವನು ಅಣಿಗೊಳಿಸಬೇಕು.

ಅವಿದ್ಯೆ ಮರ್ತ್ಯತೆಯ ಕಾರಣವಾದರೆ, ಮರ್ತ್ಯತೆಯಿಂದ ಹೊರಬೀಳುವುದಕ್ಕೆ ಅದು ಹಾದಿಯೂ ಆಗಿದೆ. ಜೀವಾತ್ಮನು ಪ್ರಕೃತಿ ಪ್ರವಾಹಕ್ಕೆ ಇದುರಾಗಿ ತನ್ನನ್ನು ಗಟ್ಟಿಗೊಳಿಸಿ, ಮುಂದೆ ಅದನ್ನು ಮೀರಿ, ಅದರೊಡೆಯನಾಗಿ ಅದನ್ನು ಬದಲಿಸಬೇಕೆಂಬುದಾಗಿ ಈ ಪರಿಮಿತಿಯನ್ನು ನಿರ್ಮಿಸಲಾಗಿದೆ. ಆದ್ದರಿಂದ ಅಹಂತೆಯ ಪರಿಮಿತಿಯಲ್ಲಿ ಸತ್ತೆ, ಜ್ಞಾನ, ಆನಂದ, ಶಕ್ತಿಗಳಲ್ಲಿ ಒಂದೇ ಸವನೆ ತನ್ನನ್ನು ವಿಸ್ತರಿಸಿಕೊಳ್ಳುವುದು ಮನುಷ್ಯನ ಮೊದಲನೆಯ ಅಗತ್ಯ. ಹೀಗಾದರೆ ತನ್ನಲ್ಲಿ ಈ ಅಂಶಗಳಲ್ಲಿ ಪ್ರಗತಿಪರವಾಗಿ ಪ್ರಕಟಗೊಳ್ಳುವ ಯಾವುದೋ ಒಂದಿದೆ ಎಂಬ ವಿಚಾರಕ್ಕೆ ಅವನು ಬಂದು ನಿಲ್ಲುವನು. ಮತ್ತು ಪ್ರಕೃತಿಯ ವಿರೋಧಗಳನ್ನು ಇದುರಿಸಲು ಹೆಚ್ಚೆಚ್ಚು ಗಟ್ಟಿಗನಾಗುತ್ತ ತನ್ನಲ್ಲಿ ವ್ಯಕ್ತಿಶಃ ಅಜ್ಞಾನ, ಸಂಕಷ್ಟ, ದೌರ್ಬಲ್ಯಗಳನ್ನು ಜ್ಞಾನ, ಆನಂದ, ಶಕ್ತಿಗಳಾಗಿ ಪರಿವರ್ತಿಸಲು ಮರಣವನ್ನು ಸಹ ವಿಸ್ತಾರವಾದ ಜೀವನಕ್ಕೆ ಸಾಧನವಾಗಿ ತಿದ್ದಲು ಬಲ್ಲವನಾಗುವನು.

ಈ ಆತ್ಮ ವಿಸ್ತರಣವು ಆ ಮೇಲೆ ತನ್ನನ್ನು ಮೀರಿದ ಯಾವುದೋ ಒಂದರ ಅರಿವನ್ನು, ವ್ಯಕ್ತಿಪರವಾದ ಅಭಿವ್ಯಕ್ತಿಯನ್ನು ಮೀರಿದ್ದರ ಪ್ರಜ್ಞೆಯನ್ನು ಎಚ್ಚರಿಸಬೇಕು. ತನ್ನಲ್ಲಿ ಎಲ್ಲವನ್ನು, ಎಲ್ಲವನ್ನು ತನ್ನಲ್ಲಿ ಕಾಣುವಷ್ಟರ ಮಟ್ಟಿಗೆ ಮನುಷ್ಯನು ತನ್ನ ಆತ್ಮದ ಕಲ್ಪನೆಯನ್ನು ಹಿಗ್ಗಲಿಸಬೇಕು (ಪದ್ಯ ೬) ಈ 'ನಾನು' ಎಂಬುದು ಎಲ್ಲವನ್ನು ಒಳಗೊಂಡು ಎಲ್ಲದರಲ್ಲಿ ಒಳಸೇರಿ ವಿಶ್ವವ್ಯಾಪಿಯಾದ **ಒಂದು** ಎಂಬುದಾಗಿದೆ, ತನ್ನ ವೈಯಕ್ತಿಕ ಅಹಂತೆಯಲ್ಲ ಎಂದು ಅವನು ಕಾಣಬೇಕು. ಅದಕ್ಕೆ ಅವನು ತನ್ನ ಅಹಂತೆಯನ್ನು ಅಧೀನಗೊಳಿಸಬೇಕು, ಅದನ್ನು ತನ್ನ ಸ್ವಭಾವದಲ್ಲಿ ಅವನು ಇಳಿಸಿ ಅದಾಗಬೇಕು, ಅದರೆಲ್ಲ ರೂಪಗಳಲ್ಲಿಯೂ ಚಲನಗಳಲ್ಲಿಯೂ ಸಮಾನವಾದ ಆತ್ಮದಿಂದ (ಆತ್ಮೌಪಮ್ಯದಿಂದ) ತನ್ನದಾಗಿಸಿಕೊಂಡು ಭೋಗಿಸಬೇಕು.

ಈ ವಿಶ್ವವ್ಯಾಪಿಯಾದ **ಒಂದು** ಎಂಬುದು ಸಂಪೂರ್ಣವಾಗಿ ಅತೀತವಾದದ್ದು, ಕೇವಲ ಸತ್ತೆಯೆಂದೂ ವಿಶ್ವ ಮತ್ತು ಅದರೆಲ್ಲ ರೂಪ, ಕ್ರಿಯೆ, ಅಹಂತೆಗಳು ಆ ಸತ್ತೆಯ ಸಂಭೂತಿ ಮಾತ್ರವೆಂದೂ ಅವನರಿಯಬೇಕು (ಪದ್ಯ ೭). ಎಲ್ಲ ಸಂಭೂತಿಯ ಆಚೆ, ಕಾಲದೇಶಗಳಾಚೆ, ಮನಸ್ಸು ಪ್ರಾಣ ಶರೀರಗಳಾಚೆ ಇರುವುದನ್ನು ಕಾಲದೇಶಗತಿಯಲ್ಲಿ, ಮನಸ್ಸು ಪ್ರಾಣ ಶರೀರಗಳಲ್ಲಿಯ ಪ್ರಗತಿಯಿಂದ ಸತತವಾಗಿ ಅಭಿವ್ಯಕ್ತಗೊಳಿಸ ಬಯಸುವ ಸಂಭೂತಿಯೆಂದರೆ ಜಗತ್ತು.

ಹೀಗೆ ಅವಿದ್ಯೆ ವಿದ್ಯೆಯೊಡನೆ ಒಂದಾಗುತ್ತದೆ. ಅವಿದ್ಯೆಯಿಂದ ಮನುಷ್ಯನು ಮರಣ, ಯಾತನೆ, ಅಜ್ಞಾನ, ದೌರ್ಬಲ್ಯ ಇವನ್ನು ದಾಟಿ ಹೋಗುತ್ತಾನೆ. ಇವು ಅವನು ಮೊದಲು ಇದುರಿಸಬೇಕಾದ ಸಂಗತಿ

ಗಳಾಗಿದ್ದುವು, ಏಕಮೇವ ವಸ್ತು ಅನೇಕತ್ವದ ನಿರ್ಬಂಧ ಮತ್ತು ಭೇದಗಳ ನಡುವೆ ಜನನದಲ್ಲಿ ತನ್ನನ್ನು ಸ್ಥಾಪಿಸಿಕೊಳ್ಳುವಾಗಿನ ಮೊದಲಿನ ಆತ್ಮ ಸಮರ್ಥನೆಗಳಾಗಿದ್ದುವು. ವಿದ್ಯೆಯಿಂದ ಈ ಜನ್ಮದಲ್ಲಿ ಸಹ ಅವನು ಅಮೃತತ್ವವನ್ನು ಅನುಭವಿಸುತ್ತಾನೆ.

**ಅಮೃತತ್ವ**

ಅಮೃತತ್ವವೆಂದರೆ ದೇಹ ನಾಶವಾದ ಮೇಲೆ ಆತ್ಮ ಇಲ್ಲವೆ ಅಹಂತೆಯು ಉಳಿವು ಎಂದರ್ಥವಲ್ಲ. ಆತ್ಮವು ಯಾವಾಗಲೂ ದೇಹನಾಶದ ತರುವಾಯ ಉಳಿಯುತ್ತದೆ. ಯಾಕಂದರೆ ಅದು ದೇಹಕ್ಕಿಂತ ಮುಂಚೆ ಇದ್ದಿತು. ಆತ್ಮಕ್ಕೆ ಜನನವಿಲ್ಲ, ಮರಣವಿಲ್ಲ. ಅಹಂತೆಯು ಉಳಿವು ಇದು ಜೀವಾತ್ಮವು ಅವಿದ್ಯೆಯಲ್ಲಿಯ ತನ್ನ ಅನುಭವಗಳನ್ನು ಮುಂದರಿಸಿ ಸಂಬಂಧ ಜೋಡಿಸಲು ಅವಶ್ಯವಾದ ಮೊದಲನೆಯ ಸಮಯವಾಗಿದೆ. ಅಂದರೆ ಹೆಚ್ಚುತ್ತಿರುವ ಆತ್ಮವಶಿತ್ವದಿಂದ ಮತ್ತು ಪ್ರಭುತ್ವದಿಂದ ವಿದ್ಯೆಯಲ್ಲಿ ಪರಿಣತವಾಗುವ ಆತ್ಮವಿಸ್ತರಣದ ಪ್ರಕ್ರಿಯೆಯನ್ನು ಜೀವಾತ್ಮವು ಅನುಸರಿಸಬಲ್ಲುದು.

ಅಮೃತತ್ವವೆಂದರೆ ಜನನಮರಣಗಳಾಚೆ ಇರುವ, ಕಾರ್ಯಕಾರಣ ಸಂಬಂಧದ ಆಚೆಯಿರುವ, ಬಂಧನ-ಪರಿಮಿತಿಗಳಾಚೆ ಇರುವ, ಮುಕ್ತ, ಆನಂದಮಯ, ಜಾಗೃತಸತ್ತೆಯಲ್ಲಿಯ ಸ್ವಯಂಭು ಆದ ಪ್ರಜ್ಞೆ; ಈಶ; ಪುರುಷೋತ್ತಮ, ಸಚ್ಚಿದಾನಂದದ ಪ್ರಜ್ಞೆ;

**ಅಮೃತತ್ವ ಮತ್ತು ಜನ್ಮ**

ಈ ಅನುಭೂತಿಯ ತಳಹದಿಯ ಮೇಲೆ ಮನುಷ್ಯನು ವಿಶ್ವದಲ್ಲಿ ತನ್ನ ಸ್ವತಂತ್ರ ಕಾರ್ಯಗಳನ್ನು ನಡಸಬಹುದು. ಆದರೆ ಇಷ್ಟು ಪ್ರಾಪ್ತಿಯಾದ ಮೇಲೆ ಜೀವಕ್ಕೆ ಜನ್ಮ ಅಥವಾ ಕರ್ಮಗಳ ಅಗತ್ಯವೇನಿದೆ ? ಸ್ವಂತಕ್ಕಾಗಿ ಏನೂ ಇಲ್ಲ; ಎಲ್ಲವೂ ದೇವರಿಗಾಗಿ, ವಿಶ್ವಕ್ಕಾಗಿ.

ವಿಶ್ವದಾಚೆಯ ಅಮೃತತ್ವವು ವಿಶ್ವದಲ್ಲಿಯ ಅಭಿವ್ಯಕ್ತಿಯ ಗುರಿಯಲ್ಲ. ಯಾಕಂದರೆ ಅದು ಆತ್ಮದಲ್ಲಿ ಇದ್ದೇ ಇದ್ದಿತು. ತನ್ನ ಮೂಲಕ ಆತ್ಮವು ಜನ್ಮದಲ್ಲಿ ಮತ್ತು ಅಸಂಭೂತಿಯಲ್ಲಿ ಅಮರತ್ವವನ್ನು ಅನುಭವಿಸಬೇಕೆಂದು ಮನುಷ್ಯನು ಜೀವಿಸುತ್ತಾನೆ.

ವೈಯಕ್ತಿಕ ಮೋಕ್ಷವೂ ಗುರಿಯಲ್ಲ; ಯಾಕಂದರೆ ಅದು ಅಹಂತೆಯ ಭವ್ಯ ಸ್ವರೂಪವಾಗಬಹುದು, ಎಲ್ಲದರಲ್ಲಿಯ ಈಶನ ಮುಖಾಂತರ ಆತ್ಮ ಸಾಕ್ಷಾತ್ಕಾರವಲ್ಲ.

ತನ್ನ ಅಮೃತತ್ವವನ್ನು ಪಡೆದ ವ್ಯಕ್ತಿ ವಿಶ್ವದಲ್ಲಿ ದೇವರ ಕಾರ್ಯವನ್ನು ಪೂರೈಸುವುದಿರುತ್ತದೆ. ಎಲ್ಲ ಪ್ರಾಣಿಗಳಲ್ಲಿಯ ಪ್ರಾಣ, ಮನಸ್ಸು, ಶರೀರಗಳು ಪ್ರಗತಿಪರವಾಗಿ ಮರ್ತ್ಯತೆಯನ್ನಲ್ಲ, ಅಮೃತತ್ವವನ್ನು ವ್ಯಕ್ತಗೊಳಿಸುವಂತೆ ನೆರವಾಗುವುದಿರುತ್ತದೆ.

ಜನ್ಮ ಎಂದು ನಾವು ಯಾವುದಕ್ಕೆ ಕರೆಯುತ್ತೇವೆಯೊ ಆ ಭೌತಿಕ ಶರೀರದಲ್ಲಿಯ ಆಗುವಿಕೆಯಿಂದ, ಬೇರೆ ಲೋಕದ ಯಾವುದಾದರೊಂದು ನೆಲೆಯಿಂದ ಅಥವಾ ಜಗತ್ತಿನ ಆಚೆಯಿಂದ – ಇದೂ ಸಹ ಶಕ್ಯವಿದೆ – ಇದನ್ನು ಅವನು ಮಾಡಬಹುದು. ಆದರೆ ಅವಿದ್ಯೆಯ ತೀರ ಕೆಳಗಿನ ಲೋಕದಲ್ಲಿ ಜನನ ಚಕ್ರದಲ್ಲಿ ಸಿಲುಕಿರುವಂಥವರಿಗೆ ದೇಹದಲ್ಲಿ ಜನನವು ಮುಕ್ತಾತ್ಮರು ಕೊಡಬಲ್ಲ ಅತ್ಯಂತ ನಿಕಟ, ದಿವ್ಯ ಮತ್ತು ಪರಿಣಾಮಕಾರಿಯಾದ ಸಹಾಯದ ಪ್ರಕಾರವಾಗಿರುತ್ತದೆ.

೬. ಮೂರನೆಯ ಚಲನ (೩)

# ಸಂಭೂತಿ ಮತ್ತು ಅಸಂಭೂತಿ

(ಪದ್ಯ ೧೨–೧೪) ×

## ಸಂಭೂತಿ ಮತ್ತು ಅಸಂಭೂತಿ

ಪ್ರಕೃತಿಯ ಹೊರಗಣ ಆತ್ಮವು ಆಗುವುದಿಲ್ಲ; ಅದು ಅವಿಕಾರ್ಯವೂ ನಿತ್ಯವೂ ಆಗಿರುತ್ತದೆ. ಪ್ರಕೃತಿಯೊಳಗಿನ ಆತ್ಮವು ಆಗುತ್ತದೆ, ತನ್ನ ರೂಪಗಳನ್ನು ಅದು ಬದಲಿಸುತ್ತದೆ. ಕಾಲಕ್ರಮದಲ್ಲಿ ವಿವಿಧ ರೂಪ ಮತ್ತು ಅವಸ್ಥೆಗಳಲ್ಲಿ ಪ್ರವೇಶವೆಂದರೆ ಪ್ರಕೃತಿಯಲ್ಲಿ ಜನ್ಮ.

ಆತ್ಮದ ಈ ಎರಡು ಅವಸ್ಥೆಗಳ ಮೂಲಕ, ಒಂದು ಪ್ರಕೃತಿಯೊಳಗಿನದು, ಇನ್ನೊಂದು ಹೊರಗಿನದು, ಒಂದು ಚಲನದಲ್ಲಿ ಚಲಿಸುವಂಥದು, ಇನ್ನೊಂದು ಚಲನದ ಮೇಲೆ ಅಧಿಷ್ಠಿತವಾದದ್ದು, ಒಂದು ವಿಕಾಸದಲ್ಲಿ ತೊಡಗಿ ಜೀವನ ವೃಕ್ಷದ ಫಲಗಳನ್ನು ತಿನ್ನುವಂಥದು ಇನ್ನೊಂದು ಉದ್ಯೋಗಶೀಲವಾಗದೆ ಸುಮ್ಮನೆ ಗಮನಿಸುವಂಥದು, ಜಾಗೃತ ಜೀವನದಲ್ಲಿ ಒಂದಕ್ಕೊಂದು ವಿರುದ್ಧವಾಗಿದ್ದ ಮಾನವ ಜೀವದ ಎರಡು ಸಂಭಾವ್ಯ ಅವಸ್ಥೆಗಳಿರುತ್ತವೆ. ಜನ್ಮದ ಅಥವಾ ಸಂಭೂತಿಯ ಅವಸ್ಥೆಯೊಂದು, ಅಜನ್ಮದ ಅಥವಾ ಅಸಂಭೂತಿಯ ಅವಸ್ಥೆ ಇನ್ನೊಂದು.

ಮನುಷ್ಯನು ಜನ್ಮದ ತ್ರಸ್ತಸ್ಥಿತಿಯಿಂದ ಪ್ರಾರಂಭವಾಡಿ ಅಜನ್ಮವೆಂಬ ಚಲನದಿಂದ ಬಿಡುಗಡೆ ಹೊಂದಿದ ಜಾಗೃತಜೀವನದ ಸಮಾಧಾನ ಸ್ಥಿತಿಗೆ ಬಂದು ಮುಟ್ಟುತ್ತಾನೆ. ಜನ್ಮದ ಗ್ರಂಥಿಯೆಂದರೆ ಅಹಂಭಾವ; ಅಹಂಭಾವದ ವಿನಾಶವು ಅಜನ್ಮಕ್ಕೆ ಒಯ್ಯುತ್ತದೆ. ಆದ್ದರಿಂದ ಅಜನ್ಮವನ್ನು ವಿನಾಶವೆಂದು ಕರೆದಿದೆ.

ಜನ್ಮ ಮತ್ತು ಅಜನ್ಮ ಇವು ಮೂಲತಃ ದೈಹಿಕ ಅವಸ್ಥೆಗಳಲ್ಲ; ಆದರೆ ಆತ್ಮಿಕ ಅವಸ್ಥೆಗಳು. ಮನುಷ್ಯನು ಅಹಂಭಾವದ ಗ್ರಂಥಿಯನ್ನು ಭೇದಿಸಿಯೂ ದೇಹದಲ್ಲಿ ಉಳಿಯಬಹುದು, ಆದರೆ ಅಹಂಭಾವವಿನಾಶದ ಅವಸ್ಥೆಯಮೇಲೆ ಅವನು ಲಕ್ಷ್ಯವನ್ನು ಏಕಾಗ್ರಗೊಳಿಸಿದರೆ ಅವನು ದೇಹದಲ್ಲಿ ಮತ್ತೆ ಹುಟ್ಟಿ ಬರಲಾರನು. ಶರೀರಮನಸ್ಸುಗಳ ಕಾರ್ಯವನ್ನು ಮುಂದುವರಿಸುವ ಪ್ರಕೃತಿಯ ಸದ್ಯದ ಪ್ರೇರಣೆ ಸೋತು ಹೋದೊಡನೆ ಅವನು ಜನ್ಮದಿಂದ ಮುಕ್ತನಾಗುತ್ತಾನೆ. ಅದೇ ಅವನು ಜನ್ಮದಲ್ಲಿ ಆಸಕ್ತಿವಹಿಸುವವನಾದರೆ ಅವನಲ್ಲಿಯ ಅಹಂತತ್ವವು ತಿರುತಿರುಗಿ ಹೊಸ ಹೊಸ ಮಾನಸಿಕ ಮತ್ತು ಶಾರೀರಿಕ ರೂಪಗಳಲ್ಲಿ ತನ್ನನ್ನು ಆವರಿಸಿಕೊಳ್ಳಲು ಎಳಸುತ್ತದೆ.

---

× ೧೨. ಯಾರು ಅಸಂಭೂತಿಯನ್ನು ಅಂದರೆ ಜನ್ಮ ರಾಹಿತ್ಯ ಇಲ್ಲವೆ ಜನ್ಮಮುಕ್ತಿಯನ್ನು ಅನುಸರಿಸುತ್ತಾರೋ ಅವರು ಅಂಧಕಾರಮಯವಾದ ಕತ್ತಲೆಯಲ್ಲಿ ಹೋಗುತ್ತಾರೆ. ಸಂಭೂತಿ ಅಥವಾ ಜನ್ಮವೊಂದರಲ್ಲಿಯೇ ಯಾರು ತೊಡಗುತ್ತಾರೋ ಅವರು ಇನ್ನೂ ಹೆಚ್ಚಿನ ಕತ್ತಲೆಯಲ್ಲಿ ಎಂಬಂತೆ ಹೋಗುತ್ತಾರೆ.

೧೩. ಜನ್ಮದಿಂದ ಬರತಕ್ಕುದು ದಿಟವಾಗಿ ಬೇರೆಯದು, ಜನ್ಮಮುಕ್ತಿಯಿಂದ ಬರತಕ್ಕದು ಬೇರೆಯೊಂದು ಹೇಳಿದ್ದಾರೆ. ನಮ್ಮ ಮತಿಗೆ ಇದು ಹೊಳೆಯುವಂತೆ ಮಾಡಿದ ಜಾಣರಿಂದ ನಾವು ಪಡೆದ ಜ್ಞಾನವಿದು.

೧೪. ಜನ್ಮ ಮತ್ತು ಜನ್ಮಮುಕ್ತಿ ಇವೆರಡನ್ನೂ ಒಂದರಲ್ಲಿಯ ಎರಡೆಂದು ಯಾವನು ತಿಳಿಯುತ್ತಾನೋ ಅವನು ಜನ್ಮಮುಕ್ತಿಯಿಂದ ಮೃತ್ಯುವನ್ನು ದಾಟಿ ಜನ್ಮದಿಂದ ಅಮೃತತ್ವವನ್ನು ಹೊಂದುತ್ತಾನೆ.

## ಪರಮಾವಧಿಗಳ ಕೆಡುಕು

ಅಜನ್ಮದಲ್ಲಿ ಇಲ್ಲವೆ ಜನ್ಮದಲ್ಲಿ ಆಸಕ್ತಿ ಪೂರ್ಣಮಾರ್ಗವಲ್ಲ. ಯಾಕೆಂದರೆ ಎಲ್ಲ ಆಸಕ್ತಿ ಅಜ್ಞಾನದ ಕ್ರಿಯೆ, ಸತ್ಯದ ಮೇಲೆ ಮಾಡಿದ ಅತ್ಯಾಚಾರ. ಅದರ ಕೊನೆಯೂ ಅಜ್ಞಾನವೇ, ಅಂಧತಮಸ್ಸಿನ ಅವಸ್ಥೆ.

ಅಜನ್ಮದಲ್ಲಿ ಏಕಮಾತ್ರ ಆಸಕ್ತಿ ಅವಿವೇಚಕವಾದ ಪ್ರಕೃತಿಯಲ್ಲಿ ಅಥವಾ ಶೂನ್ಯದಲ್ಲಿ ವಿನಾಶ ಕ್ಕೊಯ್ಯುತ್ತದೆ. ಇವೆರಡೂ ತಾಮಸೀ ಅವಸ್ಥೆಗಳು. ಯಾಕೆಂದರೆ ಶೂನ್ಯವು ಜನ್ಮದಲ್ಲಿ ಅಸ್ತಿತ್ವದ ಅವಸ್ಥೆ ಯನ್ನು ಮೀರುವ ಪ್ರಯತ್ನವಲ್ಲ, ಅದನ್ನು ತೊಡೆದುಹಾಕುವ ಪ್ರಯತ್ನ, ಮರ್ಯಾದಿತ ಜೀವನದಿಂದ ಅಮರ್ಯಾದ ಜೀವನಕ್ಕೆ ಹೋಗುವುದಲ್ಲ, ಆದರೆ ಅಸ್ತಿತ್ವದಿಂದ ಅದರ ವಿರುದ್ಧದಿಶೆಗೆ ಹೋಗುವುದು. ಅಸ್ತಿತ್ವದ ವಿರುದ್ಧ ದಿಶೆಯೆಂದರೆ ಅಭಾವರೂಪ ಪ್ರಜ್ಞೆಯ ರಾತ್ರಿ, ಅಜ್ಞಾನದ ಅವಸ್ಥೆ, ವಿವೇಚನೆಯದಲ್ಲ.

ಇತ್ತ ಶರೀರ ಜನ್ಮದಲ್ಲಿಯ ಆಸಕ್ತಿಯೆಂದರೆ ಸತತವಾದ ಆತ್ಮಪರಿಮಿತಿ ಮತ್ತು ಪರಿಣಾಮ ಇಲ್ಲವೆ ಮುಕ್ತತೆಯಿಲ್ಲದೆ ಕೆಳಗಿನ ತರದ ಅಹಂಕಾರಗಳಲ್ಲಿ ಅಹಂಕಾರಿಕ ಜನ್ಮಗಳ ತೀರದ ಚಕ್ರದಲ್ಲಿ ಪರಿ ವರ್ತನ. ಒಂದು ದೃಷ್ಟಿಯಿಂದ ಇನ್ನೊಂದಕ್ಕಿಂತ ಇದು ಹೆಚ್ಚಿನ ಅಂಧಕಾರ. ಯಾಕೆಂದರೆ ಇದರಲ್ಲಿ ಮುಕ್ತ ತೆಯ ಪ್ರೇರಣೆ ಕೂಡ ತಿಳಿದಿರುವುದಿಲ್ಲ ಸತ್ಯದ ಆಕಲನದಲ್ಲಿ ಇದು ತಪ್ಪಲ್ಲ,ಆದರೆ ಕುರುಡುತನದಲ್ಲಿ ಕೊನೆಯ ವರೆಗಿನ ತೃಪ್ತಿಭಾವ. ಹೆಚ್ಚಿನ ಒಳಿತನ್ನು ಇದು ಮುಂದೆಯೂ ತರಲಾರದು. ಯಾಕೆಂದರೆ ಇನ್ನೂ ಎತ್ತರದ ಸ್ಥಿತಿಯ ಕನಸನ್ನೇ ಇದು ಕಾಣುವದಿಲ್ಲ.

## ಪರಮಾವಧಿಗಳ ಒಳಿತು

ಅದೇ ಒಂದಕ್ಕೊಂದು ಸಂಬಂಧ ತಿಳಿದು ಆಚರಿಸಿದರೆ ಇವೆರಡೂ ಪ್ರವೃತ್ತಿಗಳಿಗೆ ತನ್ನ ಫಲ ಮತ್ತು ತನ್ನ ಹಿತ ಇರುತ್ತವೆ. ಜನ್ಮದ ಧ್ಯೇಯವೆಂದೂ ಉಚ್ಚತರ, ಪೂರ್ಣತರ, ಸತ್ಯತರ ಜೀವನದ ಗುರಿ ಯೆಂದೂ ಅಜನ್ಮವನ್ನು ಅನುಸರಿಸಿದಾಗ ಶಾಂತ ಬ್ರಹ್ಮನಲ್ಲಿ ಅಥವಾ ಅ-ಸತ್ತೆಯ ಕೇವಲ ಸ್ವಾತಂತ್ರ್ಯದಲ್ಲಿ ಅದು ಕೊನೆಮುಟ್ಟಬಹುದು. ಪ್ರಗತಿ ಮತ್ತು ಆತ್ಮ ವಿಸ್ತರಣದ ಸಾಧನವೆಂದು ಅನುಸರಿಸಿದರೆ ಜನ್ಮವು ಹೆಚ್ಚು ವಿಶಾಲವಾದ, ಪೂರ್ಣವಾದ ಜೀವನಕ್ಕೆ ಒಯ್ದು ಮುಟ್ಟಿಸಬಹುದು. ಅದು ತನ್ನ ಸರತಿಯಲ್ಲಿ ಅಂತಿಮ ಸಿದ್ಧಿಗೆ ಮಹಾದ್ವಾರವಾಗಬಹುದು.

## ಪೂರ್ಣ ಮಾರ್ಗ

ಇವುಗಳಲ್ಲಿ ಯಾವೊಂದು ಪರಿಣಾಮವೂ ತನ್ನಷ್ಟಕ್ಕೆ ಪೂರ್ಣವಾಗಿರುತ್ತದೆ. ಮಾನವತೆಯ ನಿಜವಾದ ಗುರಿಯೂ ಅದಲ್ಲ. ಒಂದರಿಂದ ಇನ್ನೊಂದು ಪೂರ್ಣಗೊಂಡರೆ ಮಾತ್ರ ಮಾನವ ಆತ್ಮದ ಪರಿಪೂರ್ಣವಾದ ಒಳಿತಿಗೆ ಪ್ರತಿಯೊಂದು ತನ್ನ ಉದ್ದಿಷ್ಟವಾದ ಅಂಶವನ್ನು ಸಲ್ಲಿಸುತ್ತದೆ. ಬ್ರಹ್ಮವಿದ್ಯೆ, ಅವಿದ್ಯೆ ಎರಡೂ, ಸಂಭೂತಿ, ಅಸಂಭೂತಿ ಎರಡೂ ಇರುತ್ತವೆ. ಆತ್ಮವು ಜನ್ಮರಹಿತ ವೆಂಬ ಅರಿವು, ಅನಂತ ಅತೀತ ಸತ್ತೆಯಲ್ಲಿ ಜನನ ಮರಣಗಳ ಜೋಡಿನಾಚೆ ಇರುವ ಆತ್ಮದ ಸಮತ್ವ ಇವು ಇದ್ದರೇನೇ ಸಂಭೂತಿಯಲ್ಲಿ ಮುಕ್ತ ಮತ್ತು ದಿವ್ಯಜೀವನವು ಸಾಧ್ಯ. ಒಂದು ಇನ್ನೊಂದಕ್ಕೆ ಅಗತ್ಯ ವಾಗಿದೆ. ಅಕ್ಷರ ಬಹ್ಮನ ಶುದ್ಧ ಏಕತೆಯಲ್ಲಿ ಭಾಗವಹಿಸಿದರೆ ಚಲನದ ಸೆಳವಿನಲ್ಲಿಯ ಮುಳುಗಿನಿಂದ ಆತ್ಮಕ್ಕೆ ಬಿಡುಗಡೆ ದೊರೆಯುತ್ತದೆ. ಹೀಗೆ ಬಿಡುಗಡೆ ಹೊಂದಿ, ಸಂಭೂತಿ ಅಸಂಭೂತಿಗಳು ಸ್ವಸತ್ತೆಯ ಪ್ರಕಾರ ಗಳೆಂದಿರುವ ಈಶನೊಡನೆ ಅದು ಒಂದಾಗುತ್ತದೆ ಮತ್ತು ಸೃಷ್ಟಿಯ ಮಾಯಾ ಚಕ್ರದಲ್ಲಿ ತೊಡಕದೆ ಪ್ರಕಟ

ಪ್ರಪಂಚದಲ್ಲಿ ಅಮೃತತ್ವವನ್ನು ಅನುಭವಿಸುತ್ತದೆ. ಜನ್ಮದ ಆಗತ್ಯ ಇಲ್ಲದಾಗುತ್ತದೆ, ಯಾಕೆಂದರೆ ಅದರ ವೈಯಕ್ತಿಕ ಉದ್ದೇಶವು ಸಿದ್ಧಿಸಿದೆ. ಸಂಭೂತಿಯು ಸ್ವಾತಂತ್ರ್ಯ ಉಳಿದಿರುತ್ತದೆ. ಯಾಕಂದರೆ ದಿವ್ಯಶಕ್ತಿ ತನ್ನ ನಿತ್ಯತೆಯ ಸ್ವಾತಂತ್ರ್ಯ ಹಾಗೂ ತನ್ನ ಸಂಭೂತಿಯ ಸ್ವಾತಂತ್ರ್ಯ ಇವೆರಡನ್ನೂ ಸಮಾನವಾಗಿ ಮತ್ತು ಏಕ ಕಾಲಕ್ಕೆ ಭೋಗಿಸುತ್ತದೆ.

ಸತ್ತೆಯ ಕಲ್ಪನೆಯನ್ನೇ ಪರಾತ್ಪರವಾದ ಅಸತ್ತೆಯಲ್ಲಿ ವಿಲೀನಗೊಳಿಸುವಂಥ ಜಾಗೃತ ಅನುಭವವು ಸ್ವಸತ್ತೆಯ ಸಂಪೂರ್ಣ ಮತ್ತು ಸ್ವತಂತ್ರತಮವಾದ ಒಡೆತನಕ್ಕೆ ಆವಶ್ಯಕವೆಂದೂ ಹೇಳಬಹುದು. ಅತ್ಯಂತ ವಿಶಾಲವಾದ ಅಥವಾ ಶುದ್ಧತಮವಾದ ಮೂಲ ಸ್ವರೂಪದಲ್ಲಿ ಎಲ್ಲ ಭಾವರೂಪ ಸತ್ತೆಯ ಕಲ್ಪನೆಯನ್ನು ಮೀರಿನಿಲ್ಲಬೇಕೆಂಬ ಬೌದ್ಧ ಪ್ರಯತ್ನಕ್ಕೆ ಸಮನ್ವಯ ದೃಷ್ಟಿಯಿಂದ ಇದು ಸಮರ್ಥನೆಯಾಗಬಹುದು.

ಹೀಗೆ ಅಹಂಕಾರ ಮತ್ತು ಜನ್ಮದಲ್ಲಿ ಆಸಕ್ತಿ ಇವುಗಳ ವಿಲಯನದಿಂದ ಆತ್ಮವು ಮೃತ್ಯುವಿನಾಚೆ ದಾಟಿಹೋಗುತ್ತದೆ.; ದ್ವಂದ್ವಗಳ ಪರಿಮಿತಿಯಿಂದ ಅದಕ್ಕೆ ಮುಕ್ತಿದೊರೆಯುತ್ತದೆ. ಈ ಮುಕ್ತಿಯನ್ನು ಪಡೆದು ಸಂಭೂತಿಯನ್ನು ಪ್ರಕೃತಿಯ ಪ್ರಕ್ರಿಯೆಯೆಂದು ಸ್ವೀಕರಿಸುತ್ತದೆ. ಈ ಪ್ರಕ್ರಿಯೆ ಆತ್ಮಕ್ಕೆ ಅಧೀನವಾಗಿರುತ್ತದೆ, ಅದಕ್ಕೆ ಬಂಧನಕಾರಿಯಾಗಿರುವುದಿಲ್ಲ. ಈ ಸ್ವತಂತ್ರ ಮತ್ತು ದಿವ್ಯ ಸಂಭೂತಿಯಿಂದ ಅಮೃತತ್ವವನ್ನು ಸವಿಯುತ್ತದೆ.

**ಜೀವನದ ಸಮರ್ಥನೆ**

ಹೀಗೆ, ಎರಡನೆಯ ಪದ್ಯದಲ್ಲಿ ಸತ್ಯಾನ್ವೇಷಿಗೆ ವಿಧಿಸಲಾದ ಜೀವನ ಮತ್ತು ಕರ್ಮಗಳ ಸಮರ್ಥನೆಯಾಗಿ ಮೂರನೆಯ ಚಲನವು ಇರುತ್ತದೆ. ಕರ್ಮಗಳು ಜೀವನದ ಸಾರ. ಜೀವನವು ಬ್ರಹ್ಮದ ಆವಿಷ್ಕಾರ; ಬ್ರಹ್ಮನಲ್ಲಿ ಜೀವನತತ್ವವು ಜಾಗೃತಸತ್ತೆಯ ಏಳುತತ್ವಗಳ ಸಾಮರಸ್ಯವನ್ನು ರಚಿಸುತ್ತದೆ. ಇದರಿಂದ ಆ ಆವಿಷ್ಕಾರವು ತನ್ನ ನಿವರ್ತನ ಮತ್ತು ವಿವರ್ತನವನ್ನು ಆಗಿಸುತ್ತದೆ. ಬ್ರಹ್ಮನಲ್ಲಿ ಮಾತರಿಶ್ವನು ದಿವ್ಯಜೀವನದ ಸಪ್ತವಿಧ ಚಲನವಾದ ತತ್ವಗಳನ್ನು (ಅಪಃ) ನೆಲೆಗೊಳಿಸುತ್ತಾನೆ.

ಆ ದಿವ್ಯಸತ್ತೆಯೇ ಚಲನದಲ್ಲಿ ಸರ್ವಗತನಾಗಿರುವ ಈಶನಾಗಿ ಪ್ರಪಂಚಸತ್ಯದ ದ್ರಷ್ಟಾರ (ಕವಿ) ಅವುಗಳ ಸಾಧ್ಯತೆಗಳ ಪರ್ಯಾಲೋಚಕ (ಮನೀಷಿ) ಅವುಗಳ ಪ್ರತ್ಯಕ್ಷಗಳ ಅನುಭವಿ (ಪರಿಭೂ) ಎಂಬ ಮೂರು ಪರಿಗಳಲ್ಲಿ ವಿಶ್ವವನ್ನು ಬಿಚ್ಚಿಡುತ್ತಾನೆ. ಎಲ್ಲ ವಸ್ತುಗಳ ಸ್ವಭಾವ, ವಿಕಾಸ ಮತ್ತು ಗುರಿಯನ್ನು ಶಾಶ್ವತ ಕಾಲದವರೆಗೆ ಸ್ವಾಯತ್ತವಾಗಿ ನಿರ್ಧರಿಸಿದ್ದಾನೆ.

ಆ ನಿರ್ಧಾರವು ಅವನ ವಿದ್ಯೆ–ಅವಿದ್ಯೆ, ಮೂಲಭೂತ ಏಕತೆಯ ಅರಿವು, ಮತ್ತು ಪ್ರಪಂಚಗತ ಅನೇಕತೆಯ ಅರಿವು ಈ ಇಬ್ಬಗೆಯ ಶಕ್ತಿಯ ಮೂಲಕ ಆಗಬರುತ್ತದೆ.

ಇನ್ನೊಂದು ತುದಿಗೆ ಹೋದರೆ ಅನೇಕತ್ವವು ಅಜ್ಞಾನದ ಆಟವನ್ನು ಮೊದಲು ಅನುಭವಿಸುತ್ತಿರುವ ಮತ್ತು ಚಲನದ ರೂಪಗಳಲ್ಲಿ ವಾಸವಾಗಿದ್ದ ಈಶ ಎಂದರೆ ಸಜ್ಞಾನ ವ್ಯಕ್ತಿಯಲ್ಲಿ ತನ್ನ ಮೇಲೆ ತಿರುಗಿ ಬೀಳುತ್ತದೆ. ಆಮೇಲೆ ಅಜ್ಞಾನದಲ್ಲಿ ವಿಕಾಸ ಹೊಂದಿದಂತೆ ಜ್ಞಾನಶಕ್ತಿಗೆ ಹಿಂದಿರುಗಿ ಜ್ಞಾನದಿಂದ ಅಮೃತತ್ವವನ್ನು ಅನುಭವಿಸುತ್ತದೆ.

ಮರ್ಯಾದಿತ ಅಹಂತೆ ಮತ್ತು ಅದರ ಜನನ ಶೃಂಖಲೆ ಇವು ಜನ್ಮಮರಣರಹಿತವಾದ ಸರ್ವಸ್ವತಂತ್ರವೂ ನಿತ್ಯವೂ ಆದ ಈಶ ಪ್ರಜ್ಞೆಯಲ್ಲಿ ವಿಲೀನವಾಗುವುದರಿಂದ ಅಮೃತತ್ವ ಪ್ರಾಪ್ತಿಯಾಗುತ್ತದೆ,

ದೈಹಿಕ ಸತ್ತೆಯನ್ನು ರಚಿಸಲು ಒಂದು ಮಧ್ಯಂತರವಿರಲೇಬೇಕು. ಈ ಮಧ್ಯಂತರದಲ್ಲಿ ಅದು ಆಚೆಯ ಅವಸ್ಥೆ ಇಲ್ಲವೆ ಲೋಕಗಳಲ್ಲಿ ವಾಸಿಸಬೇಕು. ಅವು ಅದರ ಮುಂದಿನ ವಿಕಾಸಕ್ಕೆ ಅನುಕೂಲವಿರಬಹುದು, ಪ್ರತಿಕೂಲವಿರಬಹುದು. ಸೂರ್ಯನು ಸಂಕೇತವಾಗಿರುವ ಪರಾತ್ಪರ ಸತ್ಯದ ಬೆಳಕು ಅವುಗಳಲ್ಲಿ ಸೇರಿರುವ ಪ್ರಮಾಣದಲ್ಲಿ ಅವು ಅನುಕೂಲವಾಗಿರುತ್ತವೆ. ಆದರೆ ಮಧ್ಯಕಾಲದಲ್ಲಿಯು ಅಜ್ಞಾನ ಇಲ್ಲವೆ ಕತ್ತಲೆಯ ಅವಸ್ಥೆಗಳು ಆತ್ಮದ ಪ್ರಗತಿಗೆ ಬಾಧಕವಾಗಿರುತ್ತವೆ. ಮೂರನೆಯ ಪದ್ಯದಲ್ಲಿ ಹೇಳಿದಂತೆ ಬೆಳಕಿಗೆ ವಿಮುಖರಾಗಿ ಅಥವಾ ತಮ್ಮ ವಿಕಾಸದ ಸ್ವಾಭಾವಿಕ ಗತಿಯನ್ನು ವಿಕೃತಗೊಳಿಸಿ ತಮಗೆ ತಾವು ಯಾರು ಕೇಡುಬಗೆಯುತ್ತಾರೋ ಅವರಲ್ಲಿ ಅವು ಸೇರುತ್ತವೆ. ವೇದಾಂತಿಕ ಸ್ವರ್ಗಗಳೆಂದರೆ ಪ್ರಕಾಶದ ಮತ್ತು ಆತ್ಮವಿಸ್ತಾರದ ಅವಸ್ಥೆಗಳು; ಕತ್ತಲೆ, ಆತ್ಮದಅಸ್ಫುಟತೆ, ವಿಕೃತಿ ಇವು ಅದು ತಪ್ಪಿಸಬೇಕಾದ ನರಕಗಳು.

ಆತ್ಮದ ವೈಯಕ್ತಿಕ ವಿಕಾಸದ ದೃಷ್ಟಿಯಿಂದ ಆಚೆಯ ಲೋಕಗಳಲ್ಲಿಯ ಜೀವನವು ಭೂಲೋಕದಲ್ಲಿಯ ಜೀವನದಂತೆ ತನ್ನಷ್ಟಕ್ಕೆ ಒಂದು ಸಾಧ್ಯವಾಗಿರದೆ ಸಾಧನವಾಗಿದೆ. ಮುಕ್ತಿಯ ನಂತರ ದಿವ್ಯ ಆವಿಷ್ಕಾರಕ್ಕೆ ಸಾಧನವೆಂದು ಭೌತಿಕ ಜನ್ಮದಂತೆ ಈ ಲೋಕಗಳನ್ನೂ ತನ್ನವಾಗಿಸಿಕೊಳ್ಳಬಹುದು. ಈ ಆವಿಷ್ಕಾರದ ಪೂರ್ಣತೆಗೆ ಅವು ಅವಶ್ಯ ಸಮಯಗಳಾಗಿರುತ್ತವೆ. ಸುಸಂಘಟಿತವಾದ ಜಾಗೃತ ಸತ್ತೆಯ ಅವಸ್ಥೆಗಳ ಮಾಲಿಕೆಯಲ್ಲಿ ಅವುಗಳಲ್ಲಿ ಪ್ರತಿಯೊಂದು ಭಾಗವಾಗಿ ಇನ್ನುಳಿದುದಕ್ಕೆ ಸಂಬಂಧವಾಗಿ ಆಧಾರವಾಗಿರುತ್ತವೆ.

**ಪರಾತ್ಪರತೆ**

ಪರಾತ್ಪರತೆ ಅಂದರೆ ಅತೀತಾವಸ್ಥೆ ವಿಕಾಸದ ಧ್ಯೇಯವಾಗಿರುತ್ತದೆ. ಆದರೆ ಅದು ಅತೀತವಾದದ್ದರ ಒಡೆತನವನ್ನು ಹೊರತುಪಡಿಸುವುದಿಲ್ಲ ತನ್ನ ನಿರ್ಮೂಲನವೇ ಗುರಿಯಾಗುವಷ್ಟರವರೆಗೆ ಪರಾತ್ಪರತೆಯನ್ನು ಆತ್ಮವು ನುಗ್ಗಿಸಬೇಕಾಗಿಲ್ಲ ನುಗ್ಗಿಸಬಾರದು. ನಿರ್ವಾಣವೆಂದರೆ ಅಹಂತೆಯ ಪರಿಮಿತಿಗಳ ವಿನಾಶ, ಎಲ್ಲ ಆವಿಷ್ಕಾರದ ಸಾಧ್ಯತೆಯ ವಿನಾಶವಲ್ಲ. ಯಾಕಂದರೆ ಶರೀರದಲ್ಲಿಯೂ ಅದನ್ನು ಪಡೆಯಬಹುದು.

ತನ್ನ ಹೆಚ್ಚುತ್ತಿರುವ ಜ್ಞಾನದಲ್ಲಿ ಆತ್ಮವು ಕೊನೆಯದಾಗಿ ತ್ಯಾಗಮಾಡಬೇಕಾದ ಕಾಮನೆಯೆಂದರೆ ಎಲ್ಲವನ್ನೂ ಹೊರತುಪಡಿಸುವ ಮುಕ್ತಿ; ಜನ್ಮದಿಂದ ಅದು ಬದ್ಧವಾಗಿರುತ್ತದೆ ಎಂಬುದು ಅದು ಕೊನೆಯದಾಗಿ ನಾಶಗೊಳಿಸಬೇಕಾದ ಭ್ರಮೆ.

**ಸೂರ್ಯ ಮತ್ತು ಅಗ್ನಿ**

ಲೋಕಗಳ ಈ ಕಲ್ಪನೆಯ ತಳಹದಿಯ ಮೇಲೆ ಮತ್ತು ಈ ಎಲ್ಲ ಭಿನ್ನಭಿನ್ನ ಆತ್ಮಾವಸ್ಥೆಗಳ ಅನ್ಯೋನ್ಯಸಂಬಂಧದ ಕಲ್ಪನೆಯಮೇಲೆ ಪರಮದರ್ಶನ ಮತ್ತು ದಿವ್ಯಸೌಖ್ಯ ಇವಕ್ಕೆ ಒಯ್ದು ಮುಟ್ಟಿಸುವ ಜ್ಞಾನಕರ್ಮಗಳ ಎರಡು ದಾರಿಗಳನ್ನು ಸೂಚಿಸಲು ಈ ಉಪನಿಷತ್ತು ಮುಂದೆ ಸಾಗುತ್ತದೆ. ಸೂರ್ಯ, ಅಗ್ನಿ ಈ ವೈದಿಕ ದೇವತೆಗಳನ್ನು ಕುರಿತು ಮಾಡಿದ ಆವಾಹನ ರೂಪದಲ್ಲಿ ಇದನ್ನು ಮಾಡಲಾಗಿದೆ. ಸೂರ್ಯನು ಪರಂಸತ್ಯ ಮತ್ತು ಅದರ ಉದ್ದೀಪನಗಳ ಪ್ರತೀಕವಾಗಿದ್ದರೆ ಅಗ್ನಿ ಮಾನವ ಕರ್ಮಗಳನ್ನು ಎತ್ತರಿಸಿ, ಹಸನುಗೊಳಿಸಿ ಪೂರ್ಣಗೊಳಿಸುವ ದಿವ್ಯಸಂಕಲ್ಪದ ಪ್ರತೀಕವಾಗಿದೆ.

ಸೂರ್ಯನ ಸ್ಥಾನ ಮತ್ತು ಕಾರ್ಯವನ್ನು ಸಂಪೂರ್ಣವಾಗಿ ತಿಳಿಯಬೇಕಾದರೆ ಸಪ್ತಲೋಕಗಳು ಮತ್ತು ಅವು ಪ್ರತಿನಿಧಿಸುವ ಪ್ರಜ್ಞಾತತ್ವಗಳ ವಿಷಯದಲ್ಲಿ ವೈದಿಕ ವಿಚಾರವನ್ನು ಇನ್ನಿಷ್ಟು ಗಂಭೀರವಾಗಿ ಅರಿತುಕೊಳ್ಳಬೇಕು.

ಸಚೇತನ ಸತ್ತೆಯೆಲ್ಲ ಒಂದೇ ಇದ್ದು ತನ್ನಷ್ಟಕ್ಕೆ ಅಭೇದ್ಯವಾಗಿದೆ. ಆದರೆ ಆವಿಷ್ಕಾರದಲ್ಲಿ ಅದು ಜಟಿಲವಾದ ಲಯ, ಸಾಮರಸ್ಯಗಳ ಕ್ರಮ, ಅವಸ್ಥೆಗಳ ಅಥವಾ ಚಲನಗಳ ತರತಮ ಶ್ರೇಣಿಯಾಗುತ್ತದೆ. ನಾವು ಅವಸ್ಥೆಯೆಂದು ಯಾವುದನ್ನೂ ಕರೆಯುತ್ತೇವೆಯೋ ಅದು ಒಂದು ಜಟಿಲವಾದ ಚಲನದ ಸಂಘಟನೆಯಾಗಿರುತ್ತದೆ. ಈ ತರತಮಶ್ರೇಣಿ ಅವರೋಹದಲ್ಲಿರುವ ಅಥವಾ ನಿವರ್ತನ ಶೀಲವಾದ ಕ್ರಮದಿಂದ ಮತ್ತು ಆರೋಹದಲ್ಲಿರುವ ಅಥವಾ ವಿವರ್ತನ ಶೀಲವಾದ ಕ್ರಮದಿಂದ ಕೂಡಿದ್ದಾಗಿರುತ್ತದೆ. ಅದರಲ್ಲಿ ಚೈತನ್ಯ (ಆತ್ಮ) ಮತ್ತು ಜಡ ಇವೆರಡೂ ತೀರ ಮೇಲಿನ ಮತ್ತು ತೀರ ಕೆಳಗಿನ ಸ್ಥಾನಗಳಲ್ಲಿರುತ್ತವೆ.

ಚೈತನ್ಯವೆಂದರೆ ಸತ್, ಶುದ್ಧಸತ್ತೆ ಶುದ್ಧಚಿತ್ತು, ಶುದ್ಧ ಆನಂದ. ಆದ್ದರಿಂದ ಚೈತನ್ಯವನ್ನು ಎಲ್ಲ ಸಚೇತನ ಸತ್ತೆಯ ತ್ರಿದಲತಳಹದಿಯೆಂದು ತಿಳಿಯಬಹುದು. ಇಲ್ಲಿ ಮೂರು ಪದಗಳಿವೆ, ಆದರೆ ಅವು ನಿಜವಾಗಿ ಒಂದೇ. ಯಾಕಂದರೆ ಎಲ್ಲ ಶುದ್ಧಸತ್ತೆ ತನ್ನ ಮೂರಾಂಶದಲ್ಲಿ ಶುದ್ಧ ಸ್ವಚಿತ್ತಾಗಿರುತ್ತದೆ ಮತ್ತು ಎಲ್ಲ ಶುದ್ಧ ಸ್ವಚಿತ್ತೆಂಬುದು ಸಾನಂದವಾಗಿರುತ್ತದೆ. ಅದೇ ಹೊತ್ತಿಗೆ ಈ ಮೂರನ್ನು ವಿಚಾರ ಮತ್ತು ಶಬ್ದದಿಂದ ಬೇರ್ಪಡಿಸುವ ಶಕ್ತಿ ನಮ್ಮ ಪ್ರಜ್ಞೆಗಿರುತ್ತದೆ. ಇಷ್ಟೇ ಅಲ್ಲ, ತನ್ನ ಭೇದವುಳ್ಳ ಅಥವಾ ಮರ್ಯಾದಿತ ಚಲನಗಳಲ್ಲಿ ಅವುಗಳ ತೋರಿಕೆಯ ವಿರೋಧದ ಭಾವವನ್ನು ತನ್ನ ಮಟ್ಟಿಗ ಸೃಷ್ಟಿಸಿಕೊಳ್ಳುವ ಶಕ್ತಿಯೂ ಅದಕ್ಕಿದೆ. ಸಚೇತನ ಸತ್ತೆಯ ಸ್ವರೂಪದ ಬಗ್ಗೆ ಸಮಗ್ರವಾದ ಸ್ಫುರಿತ ಜ್ಞಾನವು ದಿಟವಾಗಿ ಅದು ಒಂದು ಎಂದೂ ಅನಂತ ಹಾಗೂ ಶಕ್ತಿಗರ್ಭವಾದ ಜಟಿಲತೆ ಮತ್ತು ಸ್ವಾನುಭವದ ಅನೇಕತೆ ಇವುಗಳನ್ನು ಪಡೆಯುವ ಸಾಮರ್ಥ್ಯವುಳ್ಳದೆಂದೂ ತೋರುತ್ತದೆ. ಒಂದು ಎಂಬುದರಲ್ಲಿ ಈ ಶಕ್ತಿಗರ್ಭವಾದ ಜಟಿಲತೆ ಮತ್ತು ಅನೇಕತೆಗಳ ಕಾರ್ಯ ರೀತಿಗೇ ನಾವು ನಮ್ಮ ದೃಷ್ಟಿಯಿಂದ ಅವಿಷ್ಕಾರ ಅಥವಾ ಜಗತ್ತು ಅಥವಾ ಭುವನ, ಭಾವ ಎನ್ನುತ್ತೇವೆ. ಅದಿಲ್ಲದೆ ಜಗಜ್ಜೀವನವು ಸಾಧ್ಯವಿಲ್ಲ.

ಸತ್ತತ್ವದ ಸ್ವಚಿತ್ತೇ ಯಾವಾಗಲೂ ಈ ಆಗುವಿಕೆಯ ಕರ್ತನು. ತನ್ನೊಳಗಿನ ಜಟಿಲತೆಗಳನ್ನು ಸ್ವಚಿತ್ತು ತನ್ನಿಂದ ಹೊರಪಡಿಸುವ ಶಕ್ತಿಯನ್ನು ತಪಸ್ಸು, ಪ್ರಾಣಶಕ್ತಿ ಎನ್ನುತ್ತಾರೆ. ಮತ್ತು ಅದು ಆತ್ಮಪ್ರಜ್ಞವಾಗಿರುವ ಕಾರಣ ಅದು ಸಂಕಲ್ಪರೂಪವಾಗಿರುವುದೆಂಬುದು ಸ್ಪಷ್ಟವಾಗಿದೆ. ಆದರೆ ನಾವು ತಿಳಿಯುವಂಥ ಸಂಕಲ್ಪವಲ್ಲ. ನಾವು ತಿಳಿದ ಸಂಕಲ್ಪವು ತನ್ನ ಉದ್ದೇಶಕ್ಕೆ ಹೊರಗಾದುದು, ತನ್ನ ಕೃತಿಗಳಿಂದ ಬೇರೆಯಾದದ್ದು, ತನ್ನಿಂದ ಹೊರಗಿರುವ ಸಾಮಗ್ರಿಯ ಮೇಲೆ ಕೆಲಸಮಾಡುವಂಥದು ಇರುತ್ತದೆ. ಆದರೆ ಆ ಸಂಕಲ್ಪ ಇಲ್ಲವೆ ಕ್ರತು ಸತ್ತೆಯಲ್ಲಿ ಅಂತರ್ಗತವಾದುದು, ಆಗುವಿಕೆಯಲ್ಲಿ ಅಂತರ್ಗತವಾದುದು, ಬದುಕಿನ ಚಲನದಲ್ಲಿ ಒಂದಾದುದು ಅದು ಆತ್ಮಪ್ರಜ್ಞವಾದ ಸಂಕಲ್ಪ. ತಾನು ನೋಡಿ ತನ್ನಲ್ಲಿ ತಿಳಿದದ್ದು ತಾನಾಗುತ್ತದೆ. ತನ್ನ ಕೆಲಸದ ಶಕ್ತಿಯಾಗಿ ತೋರಿ ಅದರ ಫಲದಲ್ಲಿಯೂ ತನ್ನನ್ನೇ ರೂಪಿಸಿಕೊಳ್ಳುತ್ತದೆ. ಈ ಸಂಕಲ್ಪದಿಂದ, ತಪಸ್ಸು ಇಲ್ಲವೆ ಚಿತ್‌ಶಕ್ತಿಯಿಂದ ಲೋಕಗಳು ಸೃಷ್ಟಿಯಾಗುತ್ತವೆ.

## ಮೇಲಿನ ಲೋಕಗಳು

ಶುದ್ಧ ಸತ್ತೆಯ ಏಕತೆಯನ್ನು ತನ್ನ ತಳಹದಿಯನ್ನಾಗಿ ಇಟ್ಟುಕೊಳ್ಳುವ ಚಿತ್‌ಸ್ವರೂಪ ಸತ್ತಿನ ಎಲ್ಲ ಸಂಘಟನೆ ಅತ್ಯುಚ್ಚ ಸೃಷ್ಟಿಯ-ಪರಾರ್ಧದ-ಚಿತ್ ಲೋಕಗಳಿಗೆ ಒಳಪಟ್ಟುದಾಗಿರುತ್ತದೆ

ಮೂರುಮುಖ್ಯ ರಚನೆಗಳನ್ನು ಕಲ್ಪಿಸಬಹುದು ತಪಸ್ಸು ಅಥವಾ ಸ್ವಚಿತ್ತಿನ ಶಕ್ತಿ ಸತ್ತನ್ನು ತಳಹದಿಯಾಗಿ ಮಾಡಿಕೊಂಡು ಅದರಮೇಲೆ ನೆಲೆಸಿದಾಗ **ಸತ್ಯಲೋಕ** ಅಥವಾ ನೈಜಸತ್ತೆಯ ಲೋಕ ಫಲಿಸುತ್ತದೆ. ಸತ್ಯ ಲೋಕದಲ್ಲಿಯ ಆತ್ಮವು ತನ್ನೆಲ್ಲ ಆವಿಷ್ಕಾರಗಳೊಡನೆ ಮೂಲಾಂಶದಲ್ಲಿಯ ಏಕತೆಯಿಂದ ಒಂದಾಗಿರುತ್ತದೆ. ಅಂತೇ ಸ್ವಚಿತ್ತಿನಲ್ಲಿ, ಸ್ವಚಿತ್ತಿನ ಶಕ್ತಿಯಲ್ಲಿ ಮತ್ತು ಆನಂದದಲ್ಲಿ ಒಂದಾಗಿರುತ್ತದೆ.

ಚುರುಕಾದ ಚಿತ್ ಶಕ್ತಿಯನ್ನು ತಳಹದಿ ಮಾಡಿಕೊಂಡು ತಪಸ್ಸು ಅದರ ಮೇಲೆ ನೆಲೆಸಿದಾಗ, ಸ್ವಚಿತ್ತಿನಶಕ್ತಿಯು ಅಂದರೆ **ತಪೋಲೋಕವು** ಫಲಿಸುತ್ತದೆ: ತಪೋ ಲೋಕದಲ್ಲಿ ಆತ್ಮವು ಈ ಶಕ್ತಿಯ ಎಲ್ಲ ಆವಿಷ್ಕಾರಗಳೊಂದಿಗೆ ತಾದ್ಮಾತ್ಯ ಹೊಂದುತ್ತದೆ. ಅಂತೇ ಅವುಗಳ ಆನಂದ ಸಮಷ್ಟಿಯಲ್ಲಿ ತಾದ್ಯಾತ್ಮವನ್ನು ಅನುಭವಿಸುತ್ತದಲ್ಲದೆ ಅವುಗಳ ಮೂಲ ಐಕ್ಯವನ್ನು ಸಮಾನವಾಗಿ ತನ್ನದೆನಿಸುತ್ತದೆ.

ತಪಸ್ಸು ಸತ್ತೆಯ ಆನಂದವನ್ನು ತಳಹದಿ ಮಾಡಿಕೊಂಡು ಅವರ ಮೇಲೆ ನೆಲೆಯೂರಿದಾಗ, **ಜನಲೋಕವು** ಉದಯಿಸುತ್ತದೆ. ಇದು ನಿರ್ಮಾಣ ಶೀಲವಾದ ಆನಂದದ ಲೋಕ. ಜನಲೋಕದಲ್ಲಿಯ **ಆತ್ಮವು** ಎಲ್ಲ ಆವಿಷ್ಕಾರದೊಡನೆ ಸತ್ತೆಯ ಆನಂದದಲ್ಲಿ ಸಮರಸವಾಗಿ ಆ ಆನಂದದ ಮೂಲಕ ಸಪ್ರಜ್ಞವಾದ ಶಕ್ತಿಯಲ್ಲಿಯೂ ಸತ್ತೆಯ ಮೂಲಾಂಶದಲ್ಲಿಯೂ ಒಂದಾಗುತ್ತದೆ. ಏಕತ್ವ ಮತ್ತು ಅನೇಕತ್ವಗಳು ಇನ್ನೂ ಒಂದರಿಂದೊಂದು ಅಗಲದೆ ಇರುವಂಥ ಪ್ರಜ್ಞಾವಸ್ಥೆಗಳು ಇವು. ಎಲ್ಲವೂ ಎಲ್ಲವರಲ್ಲಿ, ಪ್ರತಿಯೊಂದು ಎಲ್ಲದರಲ್ಲಿ, ಪ್ರತಿಯೊಂದರಲ್ಲಿ ಎಲ್ಲವೂ, ವಿಚಾರದ ಪ್ರಯತ್ನ ಅಥವಾ ಅರಿವಿನ ಆಯಾಸವಿಲ್ಲದೆ ಂತರ್ಗತವಾಗಿ ಅಸಜ್ಞಾನ ಸತ್ತೆಯ ಮೂಲಕವಾಗಿ ಇರುತ್ತದೆ ಅಲ್ಲಿ ರಾತ್ರಿಯಿಲ್ಲ, ಮುಸುಕಿಲ್ಲ. ನಿಜವಾಗಿ ನೋಡಿದರೆ, ಅಲ್ಲಿ ಪ್ರಕಾಶಮಯಸೂರ್ಯನ ಪ್ರಭಾವಿ ಕಾರ್ಯವೂ ಇಲ್ಲ.ಯಾಕಂದರೆ ಇಡೀ ಪ್ರಜ್ಞೆಯೆ ಸ್ವಪ್ರಕಾಶಯುತವಾಗಿದ್ದು ಅದಕ್ಕೆ ತನ್ನನ್ನುಳಿದು ಬೇರೆ ಬೆಳಕಿನ ಅಗತ್ಯವಿರುವುದಿಲ್ಲ. ಈಶ ಅಥವಾ ಪುರುಷನ ಏಕತೆಯಲ್ಲಿ ಸೂರ್ಯನ ಭಿನ್ನ ಅಸ್ತಿತ್ವವು ಕಳೆದುಹೋಗಿರುತ್ತದೆ. ಆ ಪ್ರಕಾಶಮಯವಾದ ಏಕತೆ ಸೂರ್ಯನ ಅತಿಶಯ ಪುಣ್ಯಶಾಲಿಯಾದ ಅಸ್ತಿತ್ವವೇ ಸರಿ.

## ಕೆಳಗಣ ಸೃಷ್ಟಿ

ಕೆಳಗಣ ಸೃಷ್ಟಿಯಲ್ಲಿಯೂ ಅನ್ನ (ಜಡ), ಪ್ರಾಣ ಮತ್ತು ಮನಸ್ಸು ಈ ಮೂರು ತತ್ವಗಳಿರುತ್ತವೆ. ಸತ್ ಅಥವಾ ಶುದ್ಧ ಸತ್ತೆ ಅಲ್ಲಿ ವಿಸ್ತರಗೊಂಡ ವಸ್ತು ಅಥವಾ ಜಡವಾಗಿ ತೋರುತ್ತದೆ; ಸಂಕಲ್ಪ ಅಥವಾ ಶಕ್ತಿ ಪ್ರಾಣವಾಗಿ ತೋರುತ್ತದೆ; ಈ ಪ್ರಾಣವು ಮೂಲತಃ ನಿರ್ಮಾಣಶೀಲ ಇಲ್ಲವೆ ಶಕ್ತಿಯ ಆವಿಷ್ಕಾರಿಯಾಗಿದೆ. ಆಶಕ್ತಿ ಮೂಲತಃ ಸ್ವಚಿತ್ತುಳ್ಳ ಸಂಕಲ್ಪವಾಗಿದ್ದು ಸೃಷ್ಟಿಯ ರೂಪಗಳಲ್ಲಿ ನಿವರ್ತನ ಹೊಂದಿರುತ್ತದೆ, ಅಸ್ಫುಟವಾಗಿರುತ್ತದೆ. ಕಾಮನೆ ಮತ್ತು ಸಂವೇದನೆಗಳಲ್ಲಿ ಸ್ವಪ್ರಜ್ಞವಾಗಬೇಕೆಂದು ಹಾತೊರೆಯುತ್ತಿರುವ ಸತ್ತೆಯ ಆನಂದವು ಅದನ್ನು ನಿವರ್ತನ ಮತ್ತು ಅಸ್ಫುಟತೆಯಿಂದ ಮುಕ್ತಗೊಳಿಸುತ್ತದೆ. ಇದರ ಪರಿಣಾಮವಾಗಿ ಮನಸ್ಸು ಹೊರಪಡುತ್ತದೆ. ಏರುತ್ತಿರುವ ಅಥವಾ ವಿವರ್ತನ ಶೀಲವಾದ ಚಲನದಲ್ಲಿ ಹೀಗಿರಬೇಕೆಂದು ಕನಿಷ್ಟ ನಮಗೆ ತೋರುತ್ತದೆ. ಜಡಇದ್ದಲ್ಲಿ, ಪ್ರಾಣ ಮತ್ತು ಅನ್ನ ಇವುಜಳಗೆ ಸೇರಿ ಇಲ್ಲವೆ ವಿಕಾಸಗೊಳ್ಳುತ್ತ ಸಂನಿಧವಾಗಿರುತ್ತವೆ. ಹಾಗೇ ಪ್ರಾಣ ಮತ್ತು ಮನಸ್ಸುಗಳ ಚಟುವಟಿಕೆಗಳಿಗೆ ಪೂರ್ವಸಮಯವಾಗಿ ಯಾವುದಾದರೊಂದು ತರದ ಜಡರೂಪವು ಬೇಕು. ಭೇಧಕಾರಿಯಾದ ಅವಿದ್ಯೆಯ ತತ್ವದ ವರ್ಚಸ್ಸಿನ ಮೂನಲಕ ಇವು ಮೂರು ಮುಪ್ಪುರಿಯಾಗಿ ಇಲ್ಲವೆ ತ್ರಿದಲವಾಗಿ ತೋರುವುದಿಲ್ಲ. ಆದರೆ ಮೂರರ ಗುಂಪಾಗಿ ಇಲ್ಲವೆ ತ್ರಯವಾಗಿ ತೋರುತ್ತವೆ.

ನಾವು ಸೇರಿದ ಪ್ರಜ್ಞೆಯ ಸಂಘಟನೆಯಲ್ಲಿ ತಪಸ್ಸು ಜಡವನ್ನು ತಳಹದಿಮಾಡಿಕೊಂಡು ಅದರಲ್ಲಿ ನೆಲಸುತ್ತದೆ. ತನ್ನ ತೋರಿಕೆಯ ರೂಪಗಳಲ್ಲಿ ವಿಸ್ತರಗೊಂಡ ವಸ್ತುವಿನ ಭೇದ್ಯತೆಯಿಂದ ನಮ್ಮ ಪ್ರಜ್ಞೆ ನಿರ್ಧರಿತವಾಗುತ್ತದೆ. ಇದು ಭೂಲೋಕ, ಭೌತಿಕಜಗತ್ತು, ರೂಪನಿಷ್ಠವಾದ ಸಂಭೂತಿಯ ಲೋಕ.

ಆದರೆ ಗತಿಶೀಲವಾದ ಜೀವನಶಕ್ತಿ ಹೊರಹೊಮ್ಮಿದ ಸಂವೇದನೆಯಿಂದ ಕೂಡಿ ತಳಹದಿಯಾಗಿ ಜಡದ ಸ್ಥೂಲ ಆತಂಕಗಳಿಲ್ಲದೆ ತಾನು ತಾಳುವ ರೂಪಗಳನ್ನು ಯಾವುದರಲ್ಲಿ ಗೊತ್ತುಪಡಿಸಬಹುದೋ ಅಂಥ ಒಂದು ಲೋಕವನ್ನು ನಾವು ಕಲ್ಪಿಸಬಲ್ಲೆವು. ಈ ಪ್ರಜ್ಞೆಯ ಸಂಘಟನೆಗೆ ಸ್ವತಂತ್ರ, ಸಪ್ರಾಣ, ರೂಪ ಸಂಭೂತಿಯ ಲೋಕಗಳು-ಭುವರ್ಲೋಕವು-ಕ್ಷೇತ್ರವಾಗಿರುತ್ತದೆ.

ಇನ್ನೂ ಒಂದು ಸಂಘಟಿತ ಪ್ರಜ್ಞಾವಸ್ಥೆಯನ್ನು ನಾವು ಕಲ್ಪಿಸಬಹುದು. ಅದರಲ್ಲಿ ಮನಸ್ಸು ಜಡದ ಸಂವೇದನೆಗಳ ದಾಸ್ಯದಿಂದ ಬಿಡುಗಡೆಹೊಂದಿ ವರ್ಚಸ್ವಿಯಾಗಿ, ಜೀವನ ವಿಕಾಸದ ಪರಿಣಾಮವಾಗಿ ತಾನು ಸಿಲುಕಿದ ರೂಪಗಳಿಂದ ನಿರ್ಧರಿತವಾಗುವುದರ ಬದಲು ತಾನೇ ತನ್ನ ರೂಪಗಳನ್ನು ನಿರ್ಧರಿಸಿಕೊಳ್ಳುತ್ತದೆ. ಈ ರೂಪಧಾರಣವೆಂದರೆ ಸ್ವರ್ಲೋಕ ಅಥವಾ ಸ್ವತಂತ್ರ, ಶುದ್ಧ ಮತ್ತು ಪ್ರಕಾಶಿತ ಮನೋರಚನೆ.

ಈ ಕೆಳಗಿನ ಲೋಕಗಳಲ್ಲಿ ಪ್ರಜ್ಞೆ ಸರ್ವಸಾಮಾನ್ಯವಾಗಿ ಒಡೆದು ಹಂಚಿರುತ್ತದೆ. ಸೂರ್ಯ ಪ್ರಕಾಶ ಅಂದರೆ ಸತ್ಯವು ಅವಚೇತನೆಯ ರಾತ್ರಿಯಲ್ಲಿ ಸೆರೆಯಾಗಿರುತ್ತದೆ ಇಲ್ಲವೆ ಮರ್ಯಾದಿತ ಕೇಂದ್ರಗಳಲ್ಲಿ ಪ್ರತಿಬಿಂಬಿತವಾಗಿ ಮಾತ್ರ ತೋರುತ್ತದೆ ಇಲ್ಲವೆ ಆ ಕೇಂದ್ರಗಳಿಂದ ಅದರ ಕಿರಣಗಳನ್ನು ಸ್ವೀಕರಿಸಿ ಅವುಗಳ ವೈಯಕ್ತಿಕ ಸ್ವಭಾವಕ್ಕನುಸರಿಸಿ ಬಳಸಲಾಗುತ್ತದೆ

## ಮಧ್ಯಲೋಕ

ಇವೆರಡೂ ಸೃಷ್ಟಿಗಳ ನಡುವೆ ಅವನ್ನು ಜೋಡಿಸುವಂಥ ಲೋಕವೊಂದಿರುತ್ತದೆ. ಅದು ಪ್ರಪಂಚದ ಅನಂತ ಸತ್ಯವೇ ತಳಹದಿಯಾಗಿರುವ ಪ್ರಜ್ಞೆಯ ಸಂಘಟನೆ. ಅದರಲ್ಲಿ ವರ್ಚಸ್ವಿಯಾದ ವ್ಯಕ್ತೀಕರಣವು ಸರ್ವವ್ಯಾಪಿಯಾದ ಆತ್ಮದ ಸ್ಥಾನವನ್ನು ಆಕ್ರಮಿಸುವುದಿಲ್ಲ. ಪ್ರಜ್ಞೆಯ ತಳಹದಿಯೆಂದರೆ ತನ್ನಲ್ಲಿಯೇ ವ್ಯಕ್ತೀಕೃತವಾದ ಚಲನಗಳನ್ನು ರಚಿಸಿಕೊಳ್ಳುವ ಅದರ ಭವ್ಯವಾದ ಸಮಷ್ಟಿ. ಈ ಚಲನಗಳು ತಮ್ಮ ಸಮಗ್ರತೆಯನ್ನು ಅರಿವನ್ನು ಮತ್ತು ಉಳಿದೆಲ್ಲರೊಡನೆ ಇರುವ ಸಂಪೂರ್ಣ ಐಕ್ಯದ ಪ್ರಜ್ಞೆಯನ್ನು ಎಂದೂ ಕಳೆದುಕೊಳ್ಳುವದಿಲ್ಲ. ಬಹುತ್ವವು ಎಂದಿಗೂ ತನ್ನ ವರ್ಚಸ್ಸು ಬೀರುವುದಿಲ್ಲ ಮತ್ತು ಭೇದಕಾರಿಯಾಗುವುದಿಲ್ಲ ಆದರೆ ತನ್ನ ಚಲನಗಳ ಜಟಿಲತೆಯಲ್ಲಿಯೂ ನಿರಂತರವಾಗಿ ತನ್ನ ಮೂಲ ಐಕ್ಯ ಮತ್ತು ತನ್ನ ಸಮಗ್ರ ಸಮಷ್ಟಿಗಳನ್ನು ನೆನೆದಿರುತ್ತದೆ. ಆದ್ದರಿಂದ ಈ ಲೋಕಕ್ಕೆ ಮಹರ್ಲೋಕ ಅಥವಾ ದೊಡ್ಡವಾದ ಪ್ರಜ್ಞೆಯ ಲೋಕ ಎನ್ನುತ್ತಾರೆ.

ಮಹರ್ಲೋಕದ ತತ್ತ್ವವೆಂದರೆ ವಿಜ್ಞಾನ ಆದರೆ ಈ ವಿಜ್ಞಾನ ಬೋಧಿ (ಸ್ಫುರಿತಜ್ಞಾನ) ಸ್ವರೂಪವಾಗಿರುತ್ತದೆ, ಬೌದ್ಧಿಕವಾದ ಯೋಚನೆಯಲ್ಲ[೧] ಎರಡಕ್ಕೂ ಭೇದವೇನೆಂದರೆ ಬೌದ್ಧಿಕಯೋಚನೆ

---

೧ ಬೋಧಿ (ದಿವ್ಯದರ್ಶನ, ಸ್ಫೂರ್ತಿ, ಸ್ಫುರಿತಜ್ಞಾನ, ಸ್ಫುರಿತವಿವೇಕ) ಎಂದರೆ ಮನಸ್ಸಿನ ಪರಿಸರದಲ್ಲಿ ಮತ್ತು ರೂಪಗಳಲ್ಲಿ ಕೆಲಸಮಾಡುತ್ತಿರುವ ವಿಜ್ಞಾನ, ವಿಜ್ಞಾನ ಅಥವಾ ನಿಜವಾದ ಅತಿಮಾನಸವು ಮನಸ್ಸಿನ ಮೇಲಣ ಶಕ್ತಿ. ಅದು ತನ್ನದೇ ಆದ ನಿಯಮದಂತೆ ಕಾರ್ಯಮಾಡುತ್ತದೆ. ಅತ್ಯಂತ ಪ್ರಕಾಶಮಯವಾದ ಪ್ರಯತ್ನವೂ ಇಲ್ಲದೆ ತನ್ನ ಕೇವಲ ಜ್ಯೋತಿಯ ಶಕ್ತಿಯಿಂದ ತನ್ನನ್ನು ತಿಳಿದುಕೊಳ್ಳುವ ಕೇವಲ ಸ್ವಪ್ರಜ್ಞವಾದ ಪರಾತ್ಪರ ಪುರುಷನ ಸತ್ಯ ಆ ಪುರುಷನಲ್ಲಿ ನೇರವಾದ ತಾದಾತ್ಮ್ಯಹೊಂದಿರುವುದರ ಮೂಲಕ ಆ ಅತಿಮಾನಸ ಶಕ್ತಿ ಆ ಕಾರ್ಯ ಮಾಡುತ್ತದೆ.

ರೂಪದಕಡೆಗೆ ಒಲಿಯುತ್ತದೆ. ಮಾತ್ರವಲ್ಲ, ತನ್ನನ್ನು ವಿಚಾರದ ರೂಪದಲ್ಲಿ ಗೊತ್ತು ಪಡಿಸಿಕೊಳ್ಳುತ್ತದೆ. ಮತ್ತು ಹಾಗೆ ಒಮ್ಮೆ ಗೊತ್ತಾದ ಮೇಲೆ ಉಳಿವ ಯೋಚನೆಗಳಿಂದ ತನ್ನನ್ನು ತೀಕ್ಷ್ಣವಾಗಿ ಬೇರ್ಪಡಿಸಿಕೊಳ್ಳುತ್ತದೆ. ಆದರೆ ಶುದ್ಧವಾದ ಬೋಧಿ ಅಥವಾ ವಿಜ್ಞಾನವು ತನ್ನನ್ನು ಸತ್ತಿನಲ್ಲಿ ಹೇಗೋ ಹಾಗೆ ಸಂಭೂತಿಯಲ್ಲಿಯೂ ಕಾಣುತ್ತದೆ. ರೂಪವನ್ನು ತನ್ನ ಪ್ರತೀಕವಾಗಿ ಹೊರಪಡಿಸುವ ಸತ್ತೆಯೊಡನೆ ಅದು ಒಂದಾಗಿರುತ್ತದೆ. ಅಂತೆಯೆ ತನ್ನೊಂದಿಗೆ ಯಾವಾಗಲೂ ರೂಪದ ಹಿಂದಿನ ಸತ್ಯದ ಅರಿವನ್ನು ಪಡೆದಿರುತ್ತದೆ. ತನ್ನ ಸ್ವಭಾವದಲ್ಲಿ ಅದು, ತನ್ನ ಸಮಷ್ಟಿಯನ್ನು ನಿತ್ಯವೂ ಅರಿತಿರುವ ಮತ್ತು ಎಲ್ಲ ಬದುಕಿನ ಸಮಷ್ಟಿಯಿಂದ ಆರಂಭಿಸಿ ನೇರವಾಗಿ ಅದರ ವಸ್ತುಜಾತವನ್ನು ಗ್ರಹಿಸುವ, ಏಕಮೇವ ವಸ್ತುವಿನ ಸತ್ತೆ, ಶಕ್ತಿಗಳ ಸ್ವಚಿತ್ತಾಗಿರುತ್ತದೆ. ಅದರ ಸ್ವಭಾವ ದೃಷ್ಟಿ, ನೋಡುವಿಕೆ, ಬಗೆಯುವಿಕೆ ಅಲ್ಲ. ಒಂದೇ ಸಮಯಕ್ಕೆ ಅದು ಮೂಲಾಂಶ ಮತ್ತು ರೂಪಕದ ದರ್ಶನವಾಗಿರುತ್ತದೆ. ವೈದಿಕ ಸತ್ಯ, ಸೂರ್ಯನ ಆತ್ಮದೃಷ್ಟಿ ಮತ್ತು ಸರ್ವದರ್ಶನ ಎಂಬುದಾಗಿದ್ದುದು ಇದೇ ಬೋಧಿ ಅಥವಾ ವಿಜ್ಞಾನ.

## ಸತ್ಯಧರ್ಮ

ಈ ಸತ್ಯದ ಮುಖವು ಝಗಝಗಿಸುವ ಥಾಲಿನಿಂದೆಂಬಂತೆ, ಬಂಗಾರದ ಮುಚ್ಚಳದಿಂದೆಂಬಂತೆ ಮುಚ್ಚಲಾಗಿದೆ; ಮುಚ್ಚಲಾಗಿದೆ ಎಂದರೆ ನಮ್ಮ ಮಾನವ ಪ್ರಜ್ಞೆಯ ದೃಷ್ಟಿಯಿಂದ. ಯಾಕೆಂದರೆ ನಾವು ಮನೋನಿಷ್ಠ ಪ್ರಾಣಿಗಳು. ನಮ್ಮ ತೀರ ಎತ್ತರದ ಸಾಧಾರಣ ಬಗೆಗಣ್ಣು ಮನಸ್ಸಿನ ಯೋಚನೆಗಳಿಂದಲೂ ವಿಷಯ ಗ್ರಹಣದಿಂದಲೂ ಕೂಡಿದ್ದಾಗಿದೆ. ನಿಜವಾಗಿ ಅವು ಸತ್ಯವನ್ನರಿಯಲು ಸಾಧನೆಗಳು, ಸತ್ಯಕಿರಣಗಳು, ಆದರೆ ತಮ್ಮ ಸ್ವಭಾವದಲ್ಲಿ ಸತ್ತೆಯ ಸತ್ಯವಲ್ಲ, ರೂಪದ ಸತ್ಯಮಾತ್ರ. ಅವುಗಳ ಸಹಾಯದಿಂದ ನಾವು ಪ್ರಪಂಚದ ತೋರಿಕೆಗಳ ಬಗ್ಗೆ ಜ್ಞಾನವನ್ನು ವ್ಯವಸ್ಥೆಗೊಳಿಸಿ ಹಿಂದಿರುವ ಸತ್ಯವನ್ನು ಊಹಿಸಲು ಯತ್ನಿಸುತ್ತೇವೆ. ದಿಟವಾದ ಜ್ಞಾನವೆಂದರೆ ಸತ್ತೆಯಜ್ಞಾನ, 'ಸತ್ಯ'; ಕೇವಲ ರೂಪ ಇಲ್ಲವೆ ತೋರಿಕೆಯಲ್ಲ. ಸೂರ್ಯನು ಯೋಚನೆ ಗ್ರಹಣಗಳ ಈ ಲಕಲಕಿಸುವ ಮುಚ್ಚಳವನ್ನು ತೆಗೆದು ದರ್ಶನ ಆತ್ಮ ದರ್ಶನ ಮತ್ತು ಸರ್ವದರ್ಶನ ಎಂಬುದನ್ನು ಇರಿಸುವುದರಿಂದಲೇ ನಾವು ನಿಜವಾದ ಸತ್ಯದ ನಿರ್ಣಯಕ್ಕೆ ಬರುತ್ತೇವೆ. ಇದಕ್ಕಾಗಿ ಸತ್ಯದ ಧರ್ಮ ಮತ್ತು ಕರ್ಮಗಳು ನಮ್ಮಲ್ಲಿ ಅಭಿವ್ಯಕ್ತವಾಗುವದು ಅಗತ್ಯವಾಗಿದೆ.

ವಸ್ತುಗಳು ಇದ್ದಂತೆ ಅವುಗಳನ್ನು ಕಾಣಲು ನಾವು ಕಲಿಯಬೇಕು, ನಾವು ಇದ್ದಂತೆ ನಮ್ಮನ್ನು ಕಾಣಬೇಕು. ಆತ್ಮಜ್ಞಾನ ಮತ್ತು ಸಂಕಲ್ಪ ಇವು ಒಡೆದು ಹೋಳಾಗಿರುವಂಥ ಪರಿಸ್ಥಿತಿಯಲ್ಲಿ ನಮ್ಮ ಸದ್ಯದ ಕರ್ಮವಿರುತ್ತದೆ. ಬೇರೆಯವರಿಂದ ನಮ್ಮ ಬಾಳು ಬೇರೆಯೆಂಬ ಮೂಲಭೂತವಾದ ಅಸತ್ಯದಿಂದ ನಾವು ಹೊರಡುತ್ತೇವೆ, ಬೇರೆತನದಲ್ಲಿ ಭಿನ್ನಜೀವಿಗಳ ಸಂಬಂಧಗಳನ್ನು ಅರಿತು ವೈಯಕ್ತಿಕ ಪ್ರಯೋಜನಕ್ಕಾಗಿ ಈ ಅರಿವಿನಂತೆ ನಡೆಯುತ್ತೇವೆ. ನಾವು ನಮ್ಮ ಸಮಗ್ರ ಜೀವನವನ್ನು ಉಳಿದೆಲ್ಲವನ್ನು ಒಳಗೊಂಡ ಬಗೆಯಲ್ಲಿ ಕಂಡರೆ,ಸಮಷ್ಟಿಯ ಕ್ರಿಯೆಯಿಂದ ಅದರ ರೂಪಗಳ ನಿರ್ಮಾಣವಾಗಿ ಅದರ ಶಕ್ತಿಗಳು ಸಮಷ್ಟಿಯ ಕ್ರಿಯೆಯ ಮೂಲಕ ಕಾರ್ಯಪರವಾದರೆ ಸತ್ಯಧರ್ಮವು ನಮ್ಮಲ್ಲಿ ಕೆಲಸಮಾಡಬಹುದು. ನಮ್ಮ ಆಂತರಿಕ ಮತ್ತು ಬಾಹ್ಯ ಕರ್ಮವು ನಮ್ಮ ಸ್ವಸತ್ತೆಯಿಂದ ಸ್ವಾಭಾವಿಕವಾಗಿ ನೇರವಾಗಿ, ತನ್ನ ಸ್ವಭಾವದಲ್ಲಿಯೆ ಸುಳ್ಳುಗೊಳಿಸುವ ಪಡಿನೆಳಲಾದ ಮಧ್ಯಂತರ ತತ್ವಕ್ಕೆ ಅಧೀನವಾಗಿ ಅಲ್ಲ, ವಸ್ತುಗತ ಸತ್ಯದಿಂದ ಹೊಮ್ಮಬಹುದು.

## ಮನುಷ್ಯನಲ್ಲಿ ಸೂರ್ಯಸಿದ್ಧಿ

ಆದರೂ ನಮ್ಮ ಸಾಮಾನ್ಯ ಕೃತಿಯಲ್ಲಿಯೂ ನಮ್ಮನ್ನು ಮುಕ್ತಗೊಳಿಸುವ ಸತ್ಯದ ಪ್ರಾರಂಭ,ಕನಿಷ್ಠ ಬೀಜವಾದರೂ ಇರುತ್ತದೆ. ಪ್ರತಿಯೊಂದು ಕರ್ಮ ಮತ್ತು ಜ್ಞಾನದ ಹಿಂದೆ ಒಂದು ಬೋಧಿ ಒಂದು ಸತ್ಯ

ವಿರುತ್ತದೆ. ರೂಪದಲ್ಲಿ ಅದು ತಿರುಚಿರುಗಿ ಸುಳ್ಳಾದರೂ ಮೂಲಾಂಶದಲ್ಲಿ ಮತ್ತು ಕರ್ಮದಲ್ಲಿ ತನ್ನನ್ನು ಉಳಿಸಿಕೊಂಡು ಆವಿಷ್ಕಾರದಲ್ಲಿಯ ಸತ್ಯಕ್ಕೆ ಹೆಚ್ಚುತ್ತಿರುವ ಬೆಳಕು ಮತ್ತು ವಿಶಾಲತೆಯಿಂದ ನಮ್ಮನ್ನು ಒಯ್ಯುತ್ತದೆ. ಈ ಎಲ್ಲ ಭೇದಪ್ರಪಂಚದ ಯಾತನೆಯ ಹಿಂದೆ ಒಂದು ಆಗ್ರಹ ಪೂರ್ವಕವಾದ ಏಕೀಕರಿಸುವ ಪ್ರವೃತ್ತಿಯಿರುತ್ತದೆ. ಅದು ಪರಿಣಾಮದಲ್ಲಿ ಆಗಾಗ ಸುಳ್ಳುಮಾಡಲ್ಪಟ್ಟರೂ ಕೊನೆಯದಾಗಿ ಬರುವ ಜ್ಞಾನ, ಶಕ್ತಿ, ಸಂಕಲ್ಪಗಳ ಸಮಗ್ರತೆಯತ್ತ ನಮ್ಮನ್ನು ಪಟ್ಟುಹಿಡಿದು ಕರೆದೊಯ್ಯುತ್ತದೆ.

ಸೂರ್ಯನು ಪೂಷನ್, ಪೋಷಕನು. ಭೇದಹತವಾದ ಆತ್ಮಪರಿಜ್ಞಾನ ಮತ್ತು ಸಂಕಲ್ಪ ಕರ್ಮವನ್ನು ಸಮಗ್ರಸಂಕಲ್ಪ ಮತ್ತು ಜ್ಞಾನದಲ್ಲಿ ವಿಸ್ತರಿಸುವುದು ಅವನ ಕೆಲಸ. ಅವನು ಕೇವಲ ದ್ರಷ್ಟಾರನು. ತನ್ನ ಒಂದುಗೊಳಿಸುವ ನೋಟದಿಂದ ಇತರ ಜ್ಞಾನರೂಪಗಳನ್ನು ತೆಗೆದುಹಾಕಿ ಕಟ್ಟಕಡೆಗೆ ಒಂದುತನವನ್ನು ಮುಟ್ಟಲು ನಮಗೆ ಶಕ್ತಿಕೊಡುತ್ತಾನೆ. ಈ ಸಮಗ್ರತೆಯ ಬೋಧಿರೂಪದರ್ಶನ, ಎಲ್ಲರಲ್ಲಿ ಒಂದು, ಒಂದರಲ್ಲಿ ಎಲ್ಲವೆಂಬ ದರ್ಶನ ನಮ್ಮಲ್ಲಿ ಯೋಗ್ಯಕರ್ಮದ ಧರ್ಮಶಾಸಕ, ಸತ್ಯಧರ್ಮವಾಗುತ್ತದೆ. ಯಾಕಂದರೆ ಸೂರ್ಯನೇ ಯಮನು. ಧರ್ಮದ ಪ್ರಶಾಸಕನು, ನಿಯಾಮಕನು. ಹೀಗೆ ನಾವು ನಮ್ಮಲ್ಲಿಯ ಪ್ರಕಾಶಕನ ಕರ್ಮಪೂರ್ಣತೆಯನ್ನು ಸೇರುತ್ತೇವೆ. ಋತಚೇತನೆಯ ಸಮಗ್ರತೆಯನ್ನು ಸಾಧಿಸುತ್ತೇವೆ. ಆಗ ಸೂರ್ಯಸತ್ತೆಯಲ್ಲಿ ಒಳಗೊಂಡ, ಲೋಕಗಳನ್ನು ಕಟ್ಟುವ ವಿಜ್ಞಾನದಲ್ಲಿರುವ, ಎಲ್ಲವೂ ಪುರುಷನ, ಸಚ್ಚಿದಾನಂದನ, ಎಲ್ಲ ಸಂಭೂತಿಯ ಈಶನ ಸತ್ತೆಯಲ್ಲಿಯ ಸಂಭೂತಿಯೆಂದು ನಾವು ತಿಳಿಯುತ್ತೇವೆ. ಎಲ್ಲ ಸಂಭೂತಿಗಳನ್ನು ಮೀರಿ ಅವುಗಳ ಈಶನಾದ ಪ್ರಜಾಪತಿಯ ಸತ್ತೆಯಲ್ಲಿ ಎಲ್ಲ ಸಂಭೂತಿ ಜನಿಸುತ್ತದೆ.

ಸೂರ್ಯನ ದಿವ್ಯದರ್ಶನದಿಂದ ನಿಜವಾದ ಜ್ಞಾನವು ಉಂಟಾಗುತ್ತದೆ. ಈ ರಚನೆಯಲ್ಲಿ ಉಪನಿಷತ್ತು ಎರಡು ಅನುಕ್ರಮವಾದ ಕರ್ಮಗಳನ್ನು ಸೂಚಿಸುತ್ತದೆ. ಮೊದಲನೆಯದು, ಸೂರ್ಯಕಿರಣಗಳ ವ್ಯೂಹವ್ಯವಸ್ಥೆ ಅಂದರೆ ನಮ್ಮ ಯೋಚನೆ-ಭಾವನೆಗಳ ಹಿಂದೆ ಅಡಗಿದ ಸತ್ಯಗಳು ಚಿತ್ರದ ಬೇರೆಬೇರೆ ಬೋಧಿಗಳಿಂದಲೂ ಚಿತ್ರದ ಮೂಲಾಂಶದಿಂದಲೂ ಪ್ರಕಟಗೊಂಡು ತಮ್ಮ ದಿಟವಾದ ಸಂಬಂಧಗಳಲ್ಲಿ ಜೋಡಣೆ ಹೊಂದುತ್ತವೆ. ಹೀಗೆ ನಾವು ಬೋಧಿಜ್ಞಾನದ ಸಮಗ್ರತೆಗಳನ್ನು ಮುಟ್ಟಿ ಕೊನೆಗೆ ಅದರಾಚೆಯ ಐಕ್ಯಕ್ಕೆ ಹೋಗುತ್ತೇವೆ. ಇದು ಸೂರ್ಯಪ್ರಕಾಶವನ್ನು ಸಮೂಹೀಕರಿಸುವ ಕ್ರಿಯೆ. ಮೂಲ-ಋತಚೇತನೆಯಂತೆ ಸಮಷ್ಟಿಯಿಂದ ಆರಂಭಿಸಿ ಒಳಗಿನಿಂದ ಅದರ ಆಶಯವನ್ನು ಅರಿತುಕೊಳ್ಳುವುದಕ್ಕಾಗದ ನಮ್ಮ ಮನೋರಚನೆಯ ಮೂಲಕ ಈ ದ್ವಿವಿಧ ಚಲನವು ಅವಶ್ಯವಾಗುತ್ತದೆ. ಮೊತ್ತದಲ್ಲಿ ಇಲ್ಲವೆ ಶೂನ್ಯವಾದ ಅಮೂರ್ತ ಸ್ವರೂಪದಲ್ಲಿ ಮಾತ್ರ ಮನಸ್ಸು ಏಕತೆಯನ್ನು ಗ್ರಹಿಸಬಲ್ಲದು. ಆದ್ದರಿಂದ ಅದರ ರೀತಿಯಲ್ಲಿಯೆ ಅದನ್ನು ಮೀರಿದ್ದರ ಕಡೆಗೆ ಮೆಲ್ಲಗೆ ಒಯ್ಯಬೇಕಾಗುತ್ತದೆ ತನ್ನ ವಿಶಿಷ್ಟವಾದ ವ್ಯವಸ್ಥಾಕಾರ್ಯವನ್ನು ಉನ್ನತ ತರವಾದ ಶಕ್ತಿಯ ಸಹಾಯ ಮತ್ತು ಕ್ರಿಯೆಯಿಂದ ಅದು ನಡಸಬೇಕು ಆದರೆ ಇದು ಸ್ವೇಚ್ಛಾನುಸಾರವಾಗದೆ ಜೀವನ ಸತ್ಯದ ಕಾರ್ಯವನ್ನು ಅನುಸರಿಸಿ ಆಗತಕ್ಕದ್ದು. ಆಮೇಲೆ, ತನ್ನ ವಿಶಿಷ್ಟಕಾರ್ಯವನ್ನು ಕ್ರಮೇಣ ಸುಧಾರಿಸಿಕೊಂಡು ಅದನ್ನೇ ಹೊಡೆಮುರಳಿಸುವಲ್ಲಿ ಅದು ಯಶಸ್ವಿಯಾಗಬಲ್ಲುದು, ಇನ್ನೂ ಒಂದು 'ಭಾಗ'ವಾಗಿದ್ದು ಒಂದು ಸತ್ವ, ಅಸ್ತಿತ್ವವೆಂದು ತಪ್ಪುಭಾವಿಸಲಾದ ತೋರಿಕೆಯ ಇಡಿಯದರ ಬಿಡಿ ಅಸ್ತಿತ್ವಗಳಾಗಿ 'ಭಾಗಗಳನ್ನು' ತಪ್ಪುತಿಳಿದು ಹೊರಡುವುದಕ್ಕಿಂತ ಇಡಿಯದರಿಂದ ಒಳಗಿನ ಆಶಯಕ್ಕೆ ಹೋಗಲು ಕಲಿಯಬೇಕು.[೧]

---

೧ ನಿಜವಾಗಿ ಭಾಗಗಳೆಂಬುವಿಲ್ಲ; ಬದುಕು ಅವಿಭಾಜ್ಯವಾಗಿದೆ.

### ಏಕಮೇವ ಸತ್ತೆ

ಹೀಗೆ ಸೂರ್ಯನ ಕ್ರಿಯೆಯಿಂದ ಪರಮ ಅತಿ ಚೇತನದ ಬೆಳಕನ್ನು ನಾವು ಬಂದು ಮುಟ್ಟುತ್ತೇವೆ. ಅದರಲ್ಲಿ ವಸ್ತುಗಳ ಸತ್ಯದ ವಿಷಯಕ್ಕೆ ಆಗುವ ಬೋಧಿ ಜ್ಞಾನವು ಸಹ ಸಮಗ್ರ ದರ್ಶನದಲ್ಲಿ ಅಧಿಷ್ಠಿತವಾಗಿ ಏಕಮೇವ ಸತ್ತೆಯ ಸ್ವಪ್ರಕಾಶಮಯ ಸ್ವದರ್ಶನದಲ್ಲಿ ಸರಿಯುತ್ತದೆ. ಏಕಮೇವ ಸತ್ತೆಯೆಂಬುದು ಸ್ವಾನುಭವದ ಎಲ್ಲ ಅನಂತ ಜಟಿಲತೆಗಳಲ್ಲಿ ತನ್ನ ಏಕತೆಯನ್ನು ಇಲ್ಲವೆ ತನ್ನ ಸ್ವಪ್ರಕಾಶಮಯತೆಯನ್ನು ಎಂದಿಗೂ ಕಳೆದುಕೊಳ್ಳುವುದಿಲ್ಲ. ಇದು ಸೂರ್ಯನ ಅತ್ಯಂತದಿವ್ಯವಾದರೂಪ. ಯಾಕಂದರೆ ಅದು ಪರಮ ಪ್ರಕಾಶ, ಪರಮ ಸಂಕಲ್ಪ, ಪರಮಾನಂದ.

ಇದು ಈಶ, ಪುರುಷ, ಸ್ವಪ್ರಜ್ಞವಾದ ಸತ್ತೆ. ಈ ದರ್ಶನವು ನಮ್ಮಲ್ಲಿರುವಾಗ, ಸಮಗ್ರವಾದ ಆತ್ಮ ಜ್ಞಾನವು, 'ಸೋಽಹಂ' ಎಂಬ ಉಪನಿಷತ್ತಿನ ಕೂಗಿನಲ್ಲಿ ವ್ಯಕ್ತವಾದ ಪರಿಪೂರ್ಣವಾದ ನೋಡಿಕೆ ಇರುತ್ತದೆ. ಅಲ್ಲಿ ಇಲ್ಲಿ ಪುರುಷನೇ ಪುರುಷನು. ಅವನೇ ನಾನು. ಈಶನು ಚಲನಗಳಲ್ಲಿ ಆವಿರ್ಭವಿಸುತ್ತಾನೆ, ಅನೇಕ ರೂಪಗಳಲ್ಲಿ ವಾಸಿಸುತ್ತಾನೆ, ಆದರೆ ಒಂದೆಂಬುದು ಎಲ್ಲವನ್ನು ಸೇರಿರುತ್ತದೆ. ಈ ಸ್ವಪ್ರಜ್ಞ ಸತ್ತೆ, ಈ ನಿಜವಾದ 'ನಾನು'—ಯಾವುದನ್ನು ರೂಪದಲ್ಲಿ ವ್ಯಕ್ತಿಕೃತವಾದ ಮಾನಸಿಕ ಸತ್ತೆ ತನ್ನ ನಿಜವಾದ ಆತ್ಮವೆಂದು ಅರಿತಿರುತ್ತದೋ-ಅದೇ ಅವನು ಅದೇಎಲ್ಲವು; ಅದೇ ಎಲ್ಲವನ್ನು ಮೀರಿರುವಂಥನು.

೮ ನಾಲ್ಕನೆಯ ಚಲನ (೨)

## ಕರ್ಮ ಮತ್ತು ದಿವ್ಯಸಂಕಲ್ಪ

(ಪದ್ಯ ೧೭–೧೮)+

### ಕರ್ಮದ ಪಕ್ಷ

ಹಾಗಾದರೆ ಸೂರ್ಯನ ಮುಖಾಂತರ, ಅದರಾಚೆ ಕಟ್ಟ ಕಡೆಗೆ ಹೋಗುವಂತೆ ಮಾಡುವ ಮನಸ್ಸಿನಲ್ಲಿಯ ಪ್ರಕಾಶ ವೃದ್ಧಿಯ ಮುಖಾಂತರ, ಮರ್ತ್ಯತೆಯಿಂದ ಅಮೃತ ಪದವಿಗೆ ಒಯ್ಯುವ ಮೊದಲನೆಯ ಪ್ರಗತಿಯ ತತ್ವ ದೊರೆಯುತ್ತದೆ. ಸೂರ್ಯ ದ್ವಾರದಿಂದ[೧] ವ್ಯಕ್ತಿ ಅಂದರೆ ಮರ್ಯಾದಿತ ಪ್ರಜ್ಞೆ ಏಕಮೇವ, ಪರಮಾತ್ಮನ ಸರ್ವಸತ್ವ ಶರಣ್ಯನ ಪೂರ್ಣಪ್ರಜ್ಞೆ ಮತ್ತು ಜೀವನವನ್ನು ಪಡೆಯುತ್ತದೆ.

ಪ್ರಜ್ಞೆ ಮತ್ತು ಜೀವನ ಇವೆರಡೂ ಅಮೃತತ್ವದ ಸೂತ್ರದಲ್ಲಿ ಸಮಾವಿಷ್ಟವಾಗಿವೆ. ಕರ್ಮವಿಲ್ಲದೆ ಜ್ಞಾನ ಅಪೂರ್ಣವಾದುದು. ತಪಸ್ಸಿನಿಂದ ಚಿತ್ತು ಸಿದ್ಧಿಸುತ್ತದೆ, ಪ್ರಜ್ಞೆ ಪ್ರಾಣ ಶಕ್ತಿಯಿಂದ. ಸೂರ್ಯನು

---

+ ೧೭ ವಾಯು ಅನಿಲನು. ಅಮೃತ ಜೀವನು. ಆದರೆ ಶರೀರಕ್ಕೆ ಭಸ್ಮವೇ ಕೊನೆ ಓಂ ಕ್ರತುವೆ [ಸಂಕಲ್ಪವೆ), ಮಾಡಿದ್ದನ್ನು ನೆನೆ, ಮಾಡಿದ್ದನ್ನೆಲ್ಲ ನೆನೆ.

೧೮ ಹೇ ಅಗ್ನಿ ದೇವನೇ, ಅಭಿವ್ಯಕ್ತವಾದ ಎಲ್ಲ ವಸ್ತುಗಳನ್ನು ಬಲ್ಲ ನೀನು ಒಳ್ಳೆಯ ದಾರಿಯಿಂದ ನಮ್ಮನ್ನು ಆನಂದದತ್ತ ಕರೆದೊಯ್ಯು, ಪಾಪದ ವಕ್ರವಿಲೋಭನವನ್ನು ನಮ್ಮಿಂದ ದೂರವಾಗಿಸು. ನಾವು ನಿನಗೆ ಸಂಪೂರ್ಣವಾದ ವಿನತಿಯ ವಚನವನ್ನು ಸಲ್ಲಿಸುತ್ತೇವೆ.

೧ ಸೂರ್ಯದ್ವಾರೇಣ—ಮುಂಡಕ ಉಪನಿಷತ್ತು I ೨.೧೧.

ದಿವ್ಯ ಪ್ರಕಾಶಕ್ಕೆ ಪ್ರತೀಕವಾಗಿರುವಂತೆ, ಅಗ್ನಿ ಪ್ರಾಚೀನ ಋಷಿಗಳಿಗೆ ದಿವ್ಯ ಶಕ್ತಿ ಅಥವಾ ಪ್ರಜ್ಞಾಂತರ್ಗತ ಸಂಕಲ್ಪವಾಗಿತ್ತು. ಅಗ್ನಿಗೆ ಮಾಡಿದ ಪ್ರಾರ್ಥನೆ ಸೂರ್ಯನನ್ನು ಕುರಿತು ಮಾಡಿದ ಪ್ರಾರ್ಥನೆಯನ್ನು ಪೂರ್ಣಗೊಳಿಸುತ್ತದೆ.

## ವೈಯಕ್ತಿಕ ಸಂಕಲ್ಪ

ಜ್ಞಾನದಲ್ಲಿ ಹೇಗೋ ಹಾಗೆ ಕರ್ಮದಲ್ಲಿ ಏಕತೆಯೆ ನಿಜವಾದ ಅಡಿಗಲ್ಲು. ಭೇದವನ್ನು ನಿಯಮವೆಂದು ಸ್ವೀಕರಿಸಿ ತನ್ನ ಅಹಂತೆಯ ಪರಿಮಿತಿಯಲ್ಲಿ ತನ್ನನ್ನು ಪ್ರತ್ಯೇಕಿಸಿಕೊಳ್ಳುವ ವ್ಯಕ್ತಿ ತನ್ನ ಕ್ರಿಯೆಗಳಲ್ಲಿ ಅವಶ್ಯವಾಗಿ ಮರ್ತ್ಯನೂ, ಅಸ್ಪಷ್ಟಚಿತ್ತನೂ ಅಜ್ಞನೂ ಆಗಿರುತ್ತಾನೆ. ತನ್ನ ಸಾಧ್ಯಸಾಧನಗಳಲ್ಲಿ ಅವನು ಕಾಮನೆ, ವಿಚಾರರೂಢಿ, ಅಸ್ಪಷ್ಟವಾದ ಅವಚೇತನೆಯ ಪ್ರೇರಣೆ ಅಥವಾ ಹೆಚ್ಚೆಂದರೆ ಒಡೆದುಹೋದ, ಅಂಶಮಾತ್ರನಾದ ಮತ್ತು ಚಲಿಸುತ್ತಿರುವ ಬೆಳಕಿನಿಂದ ನಿಯಾಮಿತನಾಗಿ ವೈಯಕ್ತಿಕವಾದ ಜ್ಞಾನವನ್ನು ಅನುಸರಿಸುತ್ತಾನೆ. ಕಿರಣಗಳಿಂದ ಅವನು ಬದುಕುತ್ತಾನೆ, ಸೂರ್ಯನ ಪೂರ್ಣಪ್ರಭೆಯಲ್ಲಿ ಅಲ್ಲ. ಅವನ ಜ್ಞಾನವು ವಾಸ್ತವಿಕತೆಯಲ್ಲಿ ಸಂಕುಚಿತ, ವ್ಯಕ್ತಿನಿಷ್ಠತೆಯಲ್ಲಿಯೂ ಸಂಕುಚಿತ, ಎರಡರಲ್ಲಿಯೂ ವಿಶ್ವದಲ್ಲಿಯ ಸಮಗ್ರಜ್ಞಾನ, ಸಮಗ್ರಕಾರ್ಯ, ಸಮಗ್ರಸಂಕಲ್ಪದೊಡನೆ ಒಂದಾಗದೆ ಇರುತ್ತದೆ. ಆದ್ದರಿಂದ ಅವನ ಕರ್ಮವು ಪ್ರೇರಣೆ-ದಿಗ್ದರ್ಶನಗಳಲ್ಲಿ ವಕ್ರವೂ ಅನೇಕ ಶಾಖೆಯುಳ್ಳದೂ, ಅನಿಶ್ಚಯಾತ್ಮಕವೂ ಚಂಚಲವೂ ಆಗಿರುತ್ತದೆ; ಅದು ಅಸತ್ಯಗಳ ನಡುವೆ ಸತ್ಯವನ್ನು ಹುಡುಕಿ ತೆಗೆಯಲು ಚಡಪಡಿಸುತ್ತದೆ, ಚೂರುಗಳನ್ನು ತೂರಾಡಿ ತೇಪೆ ಹಚ್ಚಿ ಇಡಿಯದನ್ನು ಭರ್ತಿಮಾಡುತ್ತದೆ, ಸರಿಯಾದುದನ್ನು ಕಂಡುಹಿಡಿಯಲು ಪ್ರಮಾದಗಳಲ್ಲಿ ಪಾಪಗಳಲ್ಲಿ ತಡವರಿಸುತ್ತದೆ. ಏಕಾಂತದೃಷ್ಟಿಯಾಗಲಿ ಸಮಗ್ರದೃಷ್ಟಿಯಾಗಲಿ ಇಲ್ಲದೆ, ವಿಶ್ವಸಂಕಲ್ಪದ ಸಮಗ್ರತೆಯಾಗಲಿ ವಿಶ್ವಾತೀತದ ಏಕಾಗ್ರತೆಯಾಗಲಿ ಇಲ್ಲದೆ, ಸತ್ಯ ಇಲ್ಲವೆ ಅಮೃತತ್ವದ ಕಡೆಗೆ ವ್ಯಕ್ತಿಸಂಕಲ್ಪವು ಸರಿಯಾದ ಇಲ್ಲವೆ ಒಳ್ಳೆಯದಾದ ದಾರಿಯಲ್ಲಿ ಸರಳವಾಗಿ ನಡೆಯಲಾರದು. ಅದರ ಅಹಂಕಾರ ಅಜ್ಞಾನಗಳು ಯಾವ ಶಕ್ತಿಗಳಕೂಡ ಸಮರಸವಾಗಲು ತಡೆಯುವವೋ ಆ ಶಕ್ತಿಗಳ ಆಘಾತಕ್ಕೆ ಎದೆತೆರೆದು, ಕಾಮವಶವಾಗಿ ಅದು ಸಂಕಷ್ಟ ಮತ್ತು ಸುಳ್ಳು ಎಂಬ ಅಜ್ಞಾನದ ಅವಳಿ ಜವಳಿಗಳಿಗೆ ವಶವಾಗಿರುತ್ತದೆ. ದಿವ್ಯವಾದ ಸತ್ಯ ಮತ್ತು ನ್ಯಾಯ ಇದಿಲ್ಲದೆ, ಅದಕ್ಕೆ ದಿವ್ಯ ಸೌಖ್ಯವೂ ದೊರೆಯಲಾರದು.

## ಅಗ್ನಿ-ದಿವ್ಯ ಸಂಕಲ್ಪ

ನಮ್ಮ ಭೌತಿಕ ಮನದ ಮತ್ತು ಬುದ್ಧಿಯ ಎಲ್ಲ ಸುಳ್ಳುಗಳಲ್ಲಿ ಮತ್ತು ಅದರ ಹಿಂದೆ ತನ್ನ ನಸುಕಿನಿಂದ ಮನುಷ್ಯನಲ್ಲಿ ಸತ್ಯದ ಪೂರ್ಣ ಉದಯವನ್ನು ಅಣಿಗೊಳಿಸುವ ಬೆಳಕಿರುವಂತೆ, ನಮ್ಮ ಎಲ್ಲ ಪ್ರಮಾದ, ಪಾಪ, ತಡವರಿಕೆಗಳಲ್ಲಿ ಮತ್ತು ಅದರ ಹಿಂದೆ ಗುಪ್ತವಾದ ಸಂಕಲ್ಪವೊಂದಿರುತ್ತದೆ. ಅದು ಪ್ರೀತಿ-ಸಾಮರಸ್ಯಗಳತ್ತ ಒಲಿದಿರುತ್ತದೆ, ತಾನೆತ್ತ ಹೊರಟಿರುವೆನೆಂಬುದು ಅದಕ್ಕೆ ಗೊತ್ತಿದ್ದು ಶಾಖೋಪಶಾಖೆಯಾಗಿರುವ ನಮ್ಮ ವಕ್ರಗತಿಗಳನ್ನು ಸರಲ ಮಾರ್ಗದ ಕಡೆಗೆ ಸಿದ್ಧಗೊಳಿಸಿ ಒಟ್ಟುಗೂಡಿಸುತ್ತದೆ. ಅವುಗಳ ಪರಿಶ್ರಮ ಮತ್ತು ಸಾಧನೆಯ ಕೊನೆಯ ಪರಿಣಾಮವೇ ಆ ದಾರಿ. ಈ ಸಂಕಲ್ಪ ಮತ್ತು ಆ ಪ್ರಕಾಶ ಇವು ಅಮೃತತ್ವಕ್ಕೆ ಪೂರ್ವಭಾಗಿಯಾಗಿ ಹೊಂದಹೊಮ್ಮಬೇಕು.

ಈ ಸಂಕಲ್ಪವೇ ಅಗ್ನಿ. ಅಗ್ನಿ ಋಗ್ವೇದದಲ್ಲಿರುತ್ತದೆ. ಅಲ್ಲಿಂದಲೆ ಈ ಉಪನಿಷತ್ತಿನ ಕೊನೆಯ ಪದ್ಯವನ್ನು ಎತ್ತಿಕೊಳ್ಳಲಾಗಿದೆ. ಅಗ್ನಿ ಇದು ಲೋಕಗಳಲ್ಲಿ ಕೆಲಸ ಮಾಡುತ್ತಿರುವ ದಿವ್ಯಸಂಕಲ್ಪದ ಜ್ವಾಲೆ ಅಥವಾ ಸತ್ತೆಯ ಶಕ್ತಿ. ಮರ್ತ್ಯರಲ್ಲಿ ಅಮರ್ತ್ಯ, ಪ್ರಯಾಣದ ಪ್ರಮುಖ, ನಮ್ಮನ್ನು ದಾರಿಗುಂಟ ಕರೆ

ದೊಯ್ಯುವ ದಿವ್ಯ ಕುದುರೆ, ಸರಳತೆಯನ್ನು ಅರಿತಿರುವ, ಅದು ಮತ್ತು ಸತ್ಯ ತಾನೇ ಆಗಿರುವ 'ವಕ್ರತೆಯ ಮಗು' ಎಂದು ಅವನನ್ನು ವರ್ಣಿಸಿದ್ದಾರೆ. ಈ ಜಗತ್ತಿನ ವ್ಯಾಪಾರಗಳಲ್ಲಿ ಅವನು ಅಡಗಿದ್ದು ಅವನನ್ನು ಹಿಡಿಯುವುದು ಕಷ್ಟ. ಯಾಕಂದರೆ ಆ ವ್ಯಾಪಾರಗಳೆಲ್ಲ ಕಾಮ - ಅಹಂಕಾರಗಳಿಂದ ಸುಳ್ಳುಗೊಳಿಸಲಾಗಿವೆ. ಅದನ್ನವನು ಮೀರುವುದಕ್ಕಾಗಿ ಉಪಯೋಗಿಸಿ ಮನುಷ್ಯನಲ್ಲಿ ವಿಶ್ವತೆ (ವೈಶ್ವಾನರ) ಯಾಗಿ ಹೊರಪಡುತ್ತಾನೆ. ಈ ವಿಶ್ವ ಶಕ್ತಿ ಅಥವಾ ವೈಶ್ವಾನರನು, ತನ್ನಲ್ಲಿ ಎಲ್ಲ ದೇವತೆಗಳನ್ನೂ ಎಲ್ಲ ಲೋಕಗಳನ್ನೂ ಒಳಗೊಂಡು, ಎಲ್ಲ ವಿಶ್ವವ್ಯಾಪಾರಗಳನ್ನೂ ಆಧರಿಸಿ, ಕೊನೆಗೆ ದೇವತ್ವ, ಅಮೃತತ್ವವನ್ನು ಪೂರ್ತಿಗೊಳಿಸುತ್ತಾನೆ. ಅವನು ದಿವ್ಯ ಕರ್ಮದ ಕರ್ಮಿ. ಈ ಪ್ರತೀಕಗಳು ಉಪನಿಷತ್ತಿನ ಕೊನೆಯ ಎರಡು ಪದ್ಯಗಳ ಅರ್ಥವನ್ನು ನಿಯಾಮಿಸುತ್ತವೆ.

## ಅಮೃತವಾದ ಜೀವನ ತತ್ವ

ಸಂಕಲ್ಪ ಮತ್ತು ಪ್ರಕಾಶಗಳು ಜೀವನವಿದ್ದಲ್ಲಿ ಹೊರಪಡುತ್ತವೆ. ವಾಯು ಅಥವಾ ಮಾತರಿಶ್ವನು ಜೀವನತತ್ವಸ್ವರೂಪನು ದೂರದ ಮತ್ತು ಎತ್ತರದ ಪರಮಲೋಕದಲ್ಲಿಯ ಸೂರ್ಯನಿಂದ ಅಗ್ನಿಯನ್ನು ತರುತ್ತಾನೆ. ಇಲ್ಲಿಯ ಜೀವನದಲ್ಲಿ ತನ್ನದೇ ಆದ ಆವಿಷ್ಕಾರಕ್ಕಾಗಿ ಸಿದ್ಧಮಾಡಲು ಜೀವನವು ಋತಸತ್ಯದಿಂದ ದಿವ್ಯಸಂಕಲ್ಪವನ್ನು ಮೈಮನಸ್ಸುಗಳ ಪ್ರಾಂತಗಳಲ್ಲಿ ಕೆಳಗಿಳಿಸಿಕೊಳ್ಳುತ್ತದೆ. ಅಗ್ನಿಯು ಜೀವನ ವಸ್ತುಗಳನ್ನು ಭೋಗಿಸಿ ನುಂಗಿ, ವಿಚಾರಶಕ್ತಿಗಳಾಗುವ ಜೀವನದ ನಾಡೀ ಶಕ್ತಿಗಳನ್ನು ಅಂದರೆ ಮರುತರನ್ನು ಹುಟ್ಟಿಸುತ್ತದೆ. ಅಗ್ನಿಯಿಂದ ಉದ್ಧೃತವಾಗಿ ಅವು ನಮ್ಮ ಜೀವನ ಬಲಕ್ಕೋಸ್ಕರ ಅವರ ಋಷಿಯಾಗಿ ಅಂದರೆ ಸತ್ಯ ನ್ಯಾಯಗಳ ಶೋಧಕನಾದ ಪ್ರಕಾಶಮಯ ಚಿತ್ತಸ್ವರೂಪಿಯಾದ ಇಂದ್ರನ ಕರ್ಮಕ್ಕೆ ಸಿದ್ಧತೆ ಮಾಡುತ್ತವೆ. ಇಂದ್ರ ವೃತ್ರನನ್ನು ಕೊಲ್ಲುತ್ತಾನೆ, ಕತ್ತಲೆಯ ಮುಸುಕನ್ನು ತೆಗೆಯಿಸುತ್ತಾನೆ, ಸೂರ್ಯನು ನಮ್ಮ ಜೀವನದಲ್ಲಿ ಉದಯವಾಗುವಂತೆ ಮಾಡುತ್ತಾನೆ ಮತ್ತು ಸತ್ಯದ ರಶ್ಮಿಗಳಿಂದ ಅದರೆಲ್ಲ ಕಾರ್ಯಕ್ಷೇತ್ರದಲ್ಲಿ ವಿಹರಿಸುತ್ತಾನೆ. ಸೂರ್ಯನು ಸೃಷ್ಟಿಕಾರ ಅಥವಾ ಅಭಿವ್ಯಕ್ತಿಕಾರ. ಈ ಮರ್ತ್ಯಲೋಕದಲ್ಲಿ ಅಮೃತತ್ವದ ಲೋಕವನ್ನು ಇಲ್ಲವೆ ಅವಸ್ಥೆಯನ್ನು ಆವಿಷ್ಕರಿಸಿ, ಅಹಂಕಾರ, ಪಾಪ-ತಾಪಗಳ ದುಸ್ವಪ್ನವನ್ನು ಚೆದುರಿಸಿ, ಜೀವನವನ್ನು ಅಮೃತತ್ವ, ಶಿವತತ್ವ, ಪರಮಾನಂದದಲ್ಲಿ ಪರಿವರ್ತಿಸುವ ಸಾವಿತ್ರಿ ಅವನು. ವೈದಿಕ ದೇವತೆಗಳು ದೇವತ್ವದತ್ತ, ಹೊರಹೊಮ್ಮಿ, ಏರಿ, ತನ್ನನ್ನು ಎತ್ತರಿಸಿಕೊಳ್ಳುತ್ತಿರುವ ಮನುಷ್ಯ ಜೀವನದ ಸಾಂಕೇತಿಕ ಕಥೆಯಾಗಿರುತ್ತದೆ.

ಪ್ರಾಣ, ಶರೀರ, ಕರ್ಮ, ಸಂಕಲ್ಪ ಇವು ನಮ್ಮ ಮೂಲ ಸಾಮಗ್ರಿಗಳು. ಜಡವು ನಮಗೆ ಶರೀರವನ್ನು ಕೊಡುತ್ತದೆ; ಆದರೆ ಅದು ಚಲನದ ತಾತ್ಪೂರ್ತಿಕವಾದ ಗ್ರಂಥ ಮಾತ್ರ. ಪ್ರಾಣತತ್ವದಿಂದ ನಿರ್ಮಿತವಾದ ಚಟುವಟಿಕೆಗಳಿಗೆ ಅಧ್ಯಕ್ಷನಾಗಿರುವ ಪುರುಷನು ವಾಸವಾಗಿರುವ ಸ್ಥಳವದು. ಒಮ್ಮೆ ಅದನ್ನು ಪ್ರಾಣತತ್ವವು ಕಳೆದೊಗೆದರೆ, ಅದು ಸ್ಪಷ್ಟವಾಗುತ್ತದೆ. ಭಸ್ಮವೇ ಅದರ ಕೊನೆ. ಆದ್ದರಿಂದ ಶರೀರವೆಂದರೆ ನಾವಲ್ಲ, ಅದು ಹೊರಗಿನ ಒಂದು ಉಪಕರಣ, ಸಾಧನ. ಯಾಕಂದರೆ ಜಡವು ಅಸ್ಪಷ್ಟತೆ, ಭೇದ, ಜನನ-ಮರಣ, ಘಟನೆ-ವಿಘಟನೆಗಳ ತತ್ವವಾಗಿದೆ. ಮರಣದ ಪ್ರತಿಪಾದನೆ ಅದು. ಅಮರನಾದ ಮನುಷ್ಯನು ಶರೀರದೊಂದಿಗೆ ತಾದಾತ್ಮ್ಯ ಹೊಂದಕೂಡದು.

ನಮ್ಮಲ್ಲಿಯ ಪ್ರಾಣ ತತ್ವವು ಉಳಿಯುತ್ತದೆ. ಅದು ಅಮೃತವಾದ ಉಸಿರು (ಅನಿಲಂ ಅಮೃತಂ) ಅಥವಾ ಆ ಪದವು ನಿಜವಾಗಿ ಅರ್ಥ ಕೊಡುವಂತೆ ಜನ್ಮ ಮರಣಗಳಿಗೆ ಮೇಲಾದ ಸತ್ತೆಯ ಸೂಕ್ಷ್ಮ ಶಕ್ತಿ. ಮೊದಲ ನೋಟಕ್ಕೆ ಹುಟ್ಟುಸಾವುಗಳು ಪ್ರಾಣದ ವಿಶೇಷಣಗಳೆಂದು ತೋರಬಹುದು, ಆದರೆ ಅದು ಸತ್ಯ

ವಲ್ಲ. ಅವು ಜಡದ, ಶರೀರದ, ಪ್ರಕ್ರಿಯೆಗಳು. ಪ್ರಾಣ ತತ್ತ್ವವು ಶರೀರದ ರಚನೆ-ವಿನಾಶಗಳಲ್ಲಿ ರಚಿತವಾಗುವುದೂ ಇಲ್ಲ, ವಿನಷ್ಟವಾಗುವುದೂ ಇಲ್ಲ. ಅದು ಹಾಗಿದ್ದರೆ, ವ್ಯಕ್ತಿ ಜೀವನದ ಸಾತತ್ಯವಿರುತ್ತಿದ್ದಿಲ್ಲ, ಎಲ್ಲವೂ ಮರಣ ಸಮಯಕ್ಕೆ ರೂಪ ರಹಿತವಾದದ್ದರಲ್ಲಿ ಹಿಂದಿರುಗಿ ಹೋಗುತ್ತಿತ್ತು. ಪ್ರಾಣವು ಶರೀರವನ್ನು ರಚಿಸುತ್ತದೆ, ಶರೀರದಿಂದ ಅದು ರಚಿತವಾಗುವುದಿಲ್ಲ. ನಮ್ಮ ಅನುಕ್ರಮುಬದ್ಧವಾದ ಶರೀರ ಜೀವನಗಳ ಸಾತತ್ಯವನ್ನು ಅದರ ದಾರದ ಮೇಲೆ ಪೋಣಿಸಲಾಗುತ್ತದೆ, ಯಾಕಂದರೆ ಅದು ಸ್ವತಃ ಅಮೃತವಾಗಿದೆ. ವಿನಾಶಿಯಾದ ಶರೀರದೊಡನೆ ಅದು ಸಂಬಂಧಪಟ್ಟುದಾಗಿ ಮಾನಸಿಕ ಸತ್ತೆಯನ್ನು, ಮನೋಗತ ಪುರುಷನನ್ನು ಜನ್ಮಯಾತ್ರೆಯಲ್ಲಿ ಮುಂದೆ ಸಾಗಿಸುತ್ತದೆ.

## ಸಂಕಲ್ಪ ಮತ್ತು ಸ್ಮೃತಿ

ಈ ಯಾತ್ರೆ ಜನ್ಮದಿಂದ ಜನ್ಮಕ್ಕೆ ಈ ಲೋಕದಲ್ಲಿ ಮುಂದುವರಿಸಲಾದ ಕಾರ್ಯಮಾಲಿಕೆಗಳಿಂದಲೂ ಬೇರೆ ಅವಸ್ಥೆಗಳಲ್ಲಿಯ ಜೀವನದ ಮಧ್ಯಂತರಗಳಿಂದಲೂ ಕೂಡಿರುತ್ತದೆ. ಪ್ರಾಣತತ್ತ್ವವು ಅವನ್ನು ಪೋಷಿಸುತ್ತದೆ; ಅವುಗಳಲ್ಲಿ ರೂಪಗೊಳ್ಳುವ ರಚನಾತ್ಮಕ ಶಕ್ತಿಯ ಸಾಮಗ್ರಿಗಳನ್ನು ಅದು ಒದಗಿಸುತ್ತದೆ. ಆದರೆ ಅವುಗಳ ಅಧಿಷ್ಠಾತೃದೇವತೆ ಪ್ರಾಣತತ್ತ್ವವಲ್ಲ, ಅದು ಸಂಕಲ್ಪ, ಸಂಕಲ್ಪವೆಂದರೆ ಕ್ರತು, ಕೃತಿಯ ಹಿಂದಿರುವ ಪ್ರಭಾವಿಯಾದ ಶಕ್ತಿ. ಅದು ಚೇತನಾಸ್ವರೂಪದ್ದಾಗಿರುತ್ತದೆ; ಅದು ಚೇತನೆಯ ಶಕ್ತಿ. ಮತ್ತು ಎಲ್ಲ ರೂಪಗಳಲ್ಲಿದ್ದರೂ-ಸಚೇತನ, ಅವಚೇತನ, ಅತಿಚೇತನ-ಪ್ರಾಣಿಕ, ಶಾರೀರಿಕ, ಮಾನಸಿಕ ಯಾವುದೇ ಇರಲಿ ಮನಸ್ಸಿನಲ್ಲಿ ಹೊರಹೊಮ್ಮಿದಾಗ ಮಾತ್ರ ಅದು ತನ್ನ ರಾಜ್ಯದಲ್ಲಿ ಕಾಲಿಡುತ್ತದೆ. ವ್ಯಕ್ತಿಯ ಗುರಿಯ ಕಡೆಗೆ ಅವನ ಚಟುವಟಿಕೆಗಳನ್ನು ಜೋಡಣೆ ಮಾಡಿ ಸಹೇತುಕವಾಗಿ ದಾರಿತೋರಿಸಲೆಂದು ಅದು ಸ್ಮೃತಿಯೆಂಬ ಮಾನಸಿಕ ಸಾಮರ್ಥ್ಯವನ್ನು ಬಳಸುತ್ತದೆ.

ಮನುಷ್ಯನಲ್ಲಿ ಮನೋಗತ ಸಂಕಲ್ಪದಿಂದ ಚೇತನೆಯ ಉಪಯೋಗವು ಅಪೂರ್ಣವಾಗಿರುತ್ತದೆ ಯಾಕಂದರೆ ಸ್ಮೃತಿ ಮರ್ಯಾದಿತವಾಗಿದೆ. ನಮ್ಮ ಕರ್ಮವು ಚೆದುರಿದಂಥದೂ ಗೆರೆಹಾಕಿರುವಂಥದೂ ಆಗಿರುತ್ತದೆ. ಯಾಕಂದರೆ ಕಾಲಪ್ರವಾಹದಲ್ಲಿ ನಾವು ಮಾನಸಿಕವಾಗಿ ಘಂಟೆಯಿಂದ ಘಂಟೆಗೆ ಬದುಕಿರುತ್ತೇವೆ ಹೀಗೆ ಬದಕುವಾಗ ನಮ್ಮಮನಸೆಳೆಯುವುದನ್ನು ಅಥವಾ ಆ ಕ್ಷಣಕ್ಕೆ ನಮ್ಮ ಅಹಂಕೃತ ಮನಸ್ಸಿಗೆ ಉಪಯುಕ್ತವೆನಿಸುವುದನ್ನು ಮಾತ್ರ ಗಟ್ಟಿ ಹಿಡಿಯುತ್ತೇವೆ.

ನಾವು ಮಾಡುವುದರಲ್ಲಿ ನಾವಿರುತ್ತೇವೆ, ಮಾಡಿದ್ದನ್ನು ನಾವು ನಿಯಂತ್ರಿಸಲಾರೆವು. ಆದರೆ ನಾವು ಮರೆತುಹೋದ ಹಿಂದಿನ ಕರ್ಮಗಳ ನಿಯಂತ್ರಣಕ್ಕೆ ಒಳಪಟ್ಟಿರುತ್ತೇವೆ. ಇದು ಯಾಕಂದರೆ ಆತ್ಮದಲ್ಲಿ ಇದ್ದು ಕಾರ್ಯಪ್ರವಾಹವನ್ನು ಹಿಂದೆ ನಿಂತು ನೋಡುವುದರ ಬದಲು ನಾವು ನಮ್ಮ ಕರ್ಮ ಮತ್ತು ಅದರ ಫಲಗಳಲ್ಲಿ ತೊಡಗಿರುತ್ತೇವೆ. ಈಶ,ನಿಜವಾದ ಕ್ರತು, ಕರ್ಮಗಳಿಂದ ಹಿಂದೆ ಸರಿದು ನಿಲ್ಲುತ್ತದೆ. ಅಂತೇ ಅದು ಅವುಗಳ ಈಶವಾಗಿರುತ್ತದೆ, ಅವುಗಳಿಂದ ಬದ್ಧರಾಗಿರುವದಿಲ್ಲ.

ಬರೀ ಪ್ರೇರಣೆಯ ಮತ್ತು ಸ್ವರಚನೆಯ ಶಕ್ತಿಯಾಗದೆ, ಆಗುವಿಕೆಯನ್ನು ತನ್ನಲ್ಲಿ ಒಳಗುಮಾಡಿ ಅದರ ಅರಿವನ್ನು ಪಡೆದು ಜ್ಞಾನದ ಮತ್ತು ಸ್ವಸ್ಥತೆಯ ಶಕ್ತಿಯಾಗುವದಕ್ಕಾಗಿ, 'ಮಾಡಿದ್ದನ್ನು ನೆನೆ, ನೆನೆ ಎಂದು ಈ ಉಪನಿಷತ್ತು ಗಂಭೀರವಾಗಿ ಕ್ರತುವನ್ನು ಆವಾಹನಿಸುತ್ತದೆ. ಹೀಗೆ ಅದು ಹೆಚ್ಚುಹೆಚ್ಚಾಗಿ ನಿಜವಾದ ಕ್ರತುವಿನ ಹತ್ತಿರ ಹೋಗಿ ಸಹೇತುಕವಾದ ನಿಯಂತ್ರಣದಿಂದ ಜನ್ಮಚಕ್ರದ ಸೂತ್ರ ಬದ್ಧತೆಯ ಮೇಲೆ ಅಧಿಷ್ಠಾನವಾಗುತ್ತದೆ. ಜನ್ಮದಿಂದ ಜನ್ಮಕ್ಕೆ ಗಾಳಿಗಳಿಂದ ಹೇಗೊ ಹಾಗೆ ವಕ್ರಪಥಗಳಲ್ಲಿ ಒಯ್ಯಲ್ಪಡುವುದರ

ಬದಲು ಅದು ಕ್ರಮಬದ್ಧ ಪಂಕ್ತಿಯಲ್ಲಿ ಹೆಚ್ಚೆಚ್ಚು ನೇರವಾಗಿ ಸಾಗಲು ಸಮರ್ಥವಾಗುವದು, ಅಮೃತ ಆನಂದದತ್ತ ಸರಳ ಪಥದಲ್ಲಿ ಪ್ರಕಾಶಸಹಿತವಾಗಿ ನಡೆಯುವ ಸಂಪೂರ್ಣ ಜಾಗೃತ ಸಂಕಲ್ಪವಾಗುವ ವರೆಗೆ ವರ್ಧಿಸುತ್ತಿರುವ ಜ್ಞಾನ ದಿಗ್ದರ್ಶಕಗಳ ಶಕ್ತಿಯಿಂದ ಜನ್ಮಕ್ಕೆ ಜನ್ಮವನ್ನು ಜೋಡಿಸುವುದು. ಈಗ ದಿವ್ಯ ಸಂಕಲ್ಪದ ಪ್ರತಿನಿಧಿ ಮಾತ್ರವಾದ ಮಾನಸಿಕ ಸಂಕಲ್ಪವು, ಕ್ರತುವು, ದಿವ್ಯಸಂಕಲ್ಪ ಅಂದರೆ ಅಗ್ನಿ ಯಾಗುತ್ತದೆ.

## ಸಂಕಲ್ಪ ಮತ್ತು ಜ್ಞಾನ

ದಿವ್ಯಸಂಕಲ್ಪದ ಮಹತ್ತ್ವಾಂಶವೆಂದರೆ ಅದರಲ್ಲಿ ಚೇತನೆ (ಪ್ರಜ್ಞೆ), ಶಕ್ತಿ, ಜ್ಞಾನ ಮತ್ತು ಶಕ್ತಿಗಳು ಒಂದೇ ಆಗಿರುತ್ತವೆ. ಎಲ್ಲ ಆವಿಷ್ಕಾರಗಳು ಅದಕ್ಕೆ ಗೊತ್ತು. ಲೋಕಗಳಲ್ಲಿ ಜನ್ಮತಾಳುವ ವಸ್ತುಗಳೆಲ್ಲ ಅದಕ್ಕೆಗೊತ್ತು. ಎಲ್ಲ ಜನ್ಮಗಳ ಯಥಾರ್ಥಜ್ಞಾನವಿರುವ ಜಾತವೇದಸ್ ಅದು. ಅವುಗಳ ಜೀವನಧರ್ಮ, ಇತರ ಜನ್ಮಗಳಕೂಡ ಸಂಬಂಧ, ಉದ್ದೇಶ ಮತ್ತು ಪದ್ಧತಿ, ಪ್ರಕ್ರಿಯೆ ಮತ್ತು ಗುರಿ, ಎಲ್ಲದರೊಡನೆ ಐಕ್ಯ ಮತ್ತು ಎಲ್ಲದರಿಂದ ಭೇದ ಇದೆಲ್ಲವನ್ನು ಅದು ಅರಿತಿರುತ್ತದೆ. ಈ ದಿವ್ಯಸಂಕಲ್ಪವು ವಿಶ್ವವನ್ನು ನಡಸಿರುತ್ತದೆ, ತಾನು ಸೇರಿಸುವ ಎಲ್ಲ ವಸ್ತುಗಳೊಡನೆ ಇದು ಒಂದಾಗಿರುತ್ತದೆ. ಇದರ ಸತ್ತೆ, ಜ್ಞಾನ, ಕರ್ಮ ಒಂದ ಕ್ಕೊಂದು ಅಗಲದೆ ಇರುತ್ತವೆ. ಅದು ತಾನು ಇದ್ದುದನ್ನು ಅರಿಯುತ್ತದೆ, ತಾನು ಅರಿತದ್ದನ್ನು ಮಾಡುತ್ತದೆ, ತಾನೇ ಅದಾಗುತ್ತದೆ.

ಆದರೆ ಅಹಂಕಾರಯುಕ್ತ ಪ್ರಜ್ಞೆ ಹೊರಪಟ್ಟು ನಡುವೆ ಕೈಹಾಕಲು, ಒಂದು ಕ್ಷೋಭೆ, ಒಂದು ಭೇದ, ಒಂದು ಸುಳ್ಳು ಕರ್ಮ ಪರಿಣಮಿಸುತ್ತದೆ. ಸಂಕಲ್ಪವು ತನ್ನ ಅಂತರ್ಗತ ಹೇತು ಮತ್ತು ಪ್ರಚೋದನೆಯನ್ನು ಅರಿಯದ ಪ್ರೇರಣೆಯಾಗುತ್ತದೆ, ಜ್ಞಾನವು ಇಚ್ಛೆ, ಕೃತಿ, ಪರಿಣಾಮಗಳನ್ನು ತನ್ನವಾಗಿಸಿಕೊಳ್ಳದೆ ಅದನ್ನು ವಶೀಕರಿಸಿಕೊಂಡು ರೂಪಿಸುವ ಸಂದಿಗ್ಧ ಮತ್ತು ಆಂಶಿಕವಾದ ಕಿರಣವಾಗುತ್ತದೆ. ನಾವು ನಮ್ಮ ಆತ್ಮವುಳ್ಳವರಾಗಿ (ಆತ್ಮವಾನ್) ಆಗದೆ ಇರುವದರಿಂದ ಹೀಗಾಗುತ್ತದೆ. ನಮ್ಮ ನಿಜವಾದ ಸತ್ತೆಯನ್ನು ನಮ್ಮದಾಗಿಸದೆ ಅಹಂತೆಯ ಒಡೆಯರಾಗುತ್ತೇವೆ. ನಾವೇನು ಇದ್ದೇವೋ ಅದು ನಮಗೆ ಗೊತ್ತಿಲ್ಲ; ನಮಗೆ ಗೊತ್ತಿದ್ದುದನ್ನು ನಾವು ಜಾರಿಯಲ್ಲಿ ತರಲಾರೆವು. ಯಾಕೆಂದರೆ ಸತ್ತೆ, ಜ್ಞಾನ ಮತ್ತು ಕರ್ಮಗಳನ್ನು ಒಂದೇ ಚಲನವಾಗಿರುವ ಸಪ್ರಜ್ಞ, ಪ್ರಕಾಶಿತ ಮತ್ತು ಸ್ವಸ್ಥರಾದ ಆತ್ಮದಿಂದ ಸಹಜವಾಗಿ ಸಾಗಿದಾಗಲೇ ಜ್ಞಾನವು ನಿಜವಾಗುತ್ತದೆ, ಕರ್ಮವು ನಿಜವಾದ ಜ್ಞಾನದಲ್ಲಿ ಸಮರಸವಾಗಿರುತ್ತದೆ.

## ದಿವ್ಯ ಸಂಕಲ್ಪದಲ್ಲಿ ಸಮರ್ಪಣ

ಮಾನಸಿಕ ಸಂಕಲ್ಪವು ಅಧಿಕಾಧಿಕವಾಗಿ ದಿವ್ಯ ಸಂಕಲ್ಪಕ್ಕೆ ಸಮೀಪಿಸಿದಂತೆ ನಮ್ಮಲ್ಲಿ ಅಗ್ನಿ ಪ್ರಜ್ವಲಿಸಿದಾಗ ಹೀಗೆ ನಮ್ಮಲ್ಲಿ ಮಾರ್ಪಾಟು ನಡೆಯುತ್ತದೆ. ಹೆಚ್ಚುತ್ತಿರುವ ಜ್ಞಾನಶಕ್ತಿಗಳು ಕೊನೆಗೆ ನಮ್ಮನ್ನು ವಕ್ರತೆಯಿಂದ ಬಿಡಿಸಿ ಸರಳವಾದ ಅಥವಾ ಒಳ್ಳೆಯ ದಾರಿಯಲ್ಲಿ ಕರೆದೊಯ್ಯುತ್ತವೆ. ದಿವ್ಯಜ್ಞಾನದೊಡನೆ ಒಂದಾದ ದಿವ್ಯಸಂಕಲ್ಪವು ಸುಖಾತಿಶಯ, ಅಮೃತಪದವಿಯತ್ತ ನಮ್ಮನ್ನು ಒಯ್ಯುತ್ತವೆ. ಅಹಂಕಾರದ ದಿಕ್ಚ್ಯುತಿಗಳನ್ನು ತನ್ನ ಸುಳ್ಳು ಆಕರ್ಷಣೆಗಳಿಂದಲೂ ಮುಗ್ಗರಿಕೆಗಳಿಂದಲೂ ಆ ಈ ಸುಳ್ಳು ದಾರಿಗಳಲ್ಲಿ ಮಬ್ಬುಮಾಡಿ ನಮ್ಮನ್ನು ನುಗಿಸಿ ಸೆಳೆದುಕೊಳ್ಳುತ್ತಿರುವುದೆಲ್ಲವನ್ನು ಆ ದಿವ್ಯ ಸಂಕಲ್ಪವು ನಮ್ಮಿಂದ ದೂರವಿರಿಸುತ್ತದೆ. ದಿವ್ಯವಾಗಿ, ಸ್ಥೈರ್ಯುಳ್ಳ ಸಂಕಲ್ಪದಿಂದ ಈ ವಿಷಯಗಳು ಕಳಚಿ ಬೀಳುತ್ತವೆ ಮತ್ತು ನಮ್ಮ ಪ್ರಜ್ಞೆಯಲ್ಲಿ ಸ್ಥಾನ ಪಡೆಯಲಾರದಾಗುತ್ತವೆ.

ಆದ್ದರಿಂದ ಯೋಗ್ಯಕರ್ಮದ ಚಿಹ್ನವೆಂದರೆ ಹೆಚ್ಚುತ್ತ ಹೋಗಿ ಕೊನೆಗೆ ಸಂಪೂರ್ಣವಾಗಿ ಸೂರ್ಯನ ಉದ್ದೀಪನವು ತೆರೆದುತೋರುವ ದಿವ್ಯ ಸಂಕಲ್ಪಕ್ಕೆ ವ್ಯಕ್ತಿಯ ಸಮರ್ಪಣ. ತನ್ನ ಪ್ರಜ್ಞೆಯಲ್ಲಿ ಆವಿಷ್ಕೃತವಾದರೂ ಈ ಸಂಕಲ್ಪವು ವೈಯಕ್ತಿಕವಾದುದಲ್ಲ. ಎಲ್ಲ ವಸ್ತುಗಳಲ್ಲಿದ್ದು ಅವನ್ನು ಮೀರಿರುವ ಪುರುಷನ ಸಂಕಲ್ಪವದು ಈಶನ ಸಂಕಲ್ಪವೆಂದರೂ ಅದೇ.

ಪೂರ್ಣವಾಗಿ ಸ್ವಪ್ರಜ್ಞವಾದ ಸತ್ತೆಯಲ್ಲಿ ಏಕವೆಂಬುದಾಗಿ ಈಶನ ಜ್ಞಾನ, ವಿಶ್ವಾತ್ಮ, ವಿಶ್ವಾತೀತನೆಂದು ಸಂಪೂರ್ಣ ಸ್ವಪ್ರಜ್ಞಕರ್ಮದಲ್ಲಿ ಈಶನಲ್ಲಿ ಸಮರ್ಪಣ, ಇವೆರಡು ಅಮೃತತ್ವದ ದ್ವಾರಗಳಿಗೆ, ದಿವ್ಯಮಹಾದ್ವಾರಗಳಿಗೆ ಬೀಗದ ಕೈಗಳು.

ಎರಡೂ ಕೂಡಿದ್ದರ ಸ್ವರೂಪವೆಂದರೆ ಪ್ರಕಾಶಿತವಾದ ಭಕ್ತಿ. ಅದು ಮಾನವ ಜೀವನದಲ್ಲಿ ದೇವನನ್ನು ಒಪ್ಪಿಕೊಳ್ಳುತ್ತದೆ, ಆಕಾಂಕ್ಷಿಸುತ್ತದೆ, ಸಿದ್ಧಿಸುತ್ತದೆ.

**ಸಮಾರೋಪ**

ಮೂರನೆಯ ಚಲನದ ವಿಷಯವಾದ ಅಮೃತತ್ವವನ್ನು ಸಾಧಿಸುವ ದ್ವಿವಿಧ ಪ್ರಕ್ರಿಯೆಯನ್ನು ಮನೋವಿಜ್ಞಾನರೀತಿಯಲ್ಲಿ ನಾಲ್ಕನೆಯ ಚಲನವು ಸೂಚಿಸುತ್ತದೆ. ಅದು ಹೇಗೆಂದರೆ, ಅಂತರಂಗದಲ್ಲಿ ಸತ್ಯ, ಆನಂದಗಳ ಅವಸ್ಥೆ ಹಾಗೂ ಸ್ವಪ್ರಕಾಶವಾದ ಏಕಮೇವ ವಸ್ತುವಿನ ತಾದಾತ್ಮ್ಯದಲ್ಲಿ ಪರ್ಯವಸಾನವಾಗುವಂಥ ಮರಣೋತ್ತರ ಜ್ಯೋತಿರ್ಲೋಕಗಳು. ಅದೇ ಸಮಯಕ್ಕೆ ವೈದಿಕ ಸಂಕೇತಗಳ ಮರೆಯಲ್ಲಿ ಎರಡನೆಯ ಚಲನದ ವಿಷಯವಾದ ಆತ್ಮಜ್ಞಾನದ ಪ್ರಕ್ರಿಯೆ ಮತ್ತು ಆತ್ಮದೊಡನೆ ಮತ್ತು ಅದರೆಲ್ಲ ಸಂಭೂತಿಗಳೊಡನೆ ಐಕ್ಯ ಇವನ್ನು ಮೊದಲನೆಯ ಚಲನದಲ್ಲಿ ಒತ್ತಿಹೇಳಲಾದ ಮುಕ್ತ ಕರ್ಮವನ್ನೂ ವಿಶೇಷೀಕರಿಸುತ್ತದೆ. ಹೀಗೆ ಅದು ಈ ಉಪನಿಷತ್ತಿಗೆ ಯೋಗ್ಯವಾದ ಸಮಾರೋಪ ಮತ್ತು ಪೂರ್ತತೆ ಆಗಿರುತ್ತದೆ.

(ಈ ಲೇಖನದ ೩ ನೆಯ ಭಾಗವು ಕಳೆದ ವರ್ಷದ 'ಸಮರ್ಪಣ' ದಲ್ಲಿ ಅಚ್ಚಾಗಿದೆ)

—ರಂ. ಶ್ರೀ. ಮುಗಳಿ

---

Impersonal (God) = ನಿರ್ವ್ಯಕ್ತಿಕ, ನಿರ್ಗುಣ
Couscious soul = ಸಚೇತನ ಪುರುಷ
Becoming = ಸಂಭೂತಿ, ಆಗುವಿಕೆ.
Self-existent = ಸ್ವಯಂಭು.
Personal (God) = ಸವ್ಯಕ್ತಿಕ, ಸಗುಣ.
Conception = ವಿಭಾವನ, ವಿಚಾರ.
Existence, Being = ಸತ್ತೆ.
Abstract = ಅಮೂರ್ತ.
Conscient = ಚಿತ್‌ಪುರುಷ.
Immutable = ಅವಿಕಾರ್ಯ.
Self-Conscious, Absolute = ಆತ್ಮಪ್ರಜ್ಞ, ಕೇವಲತೆ.
Irruption = ಅಭಿಯೋಗ.
Interpenetration = ಅನುಪ್ರವೇಶ.
Dynamism = ಗತಿಶೀಲತೆ.
Evolution = ವಿವರ್ತನ, ವಿಕಾಸ.
Involution = ನಿವರ್ತನ.
Objective = ವಸ್ತುಗತ, ವಸ್ತು.
Subjective = ಆತ್ಮನಿಷ್ಠ, ಆತ್ಮ—ಕೇಂದ್ರೀಯ.
Individualisation = ವ್ಯಕ್ತೀಕರಣ.
Transcendence = ಅತೀತತೆ, ವಿಶ್ವಾತೀತತೆ, ಪರಾತ್ಪರತೆ.
Self-possession = ಸ್ವಸ್ಥತೆ.
Intuition = ಬೋಧ, ಸ್ಫುರಿತಜ್ಞಾನ.
Self-conscions = ಸ್ವಪ್ರಜ್ಞ.
Triune = ತ್ರಿದಲ, ಮುಪ್ಪುರಿ.
Triple = ಮೂರರಗುಂಪು, ತ್ರಯು.
State of Consciousness = ಪ್ರಜ್ಞಾವಸ್ಥೆ.
Truth-Consciousness = ಋತುಚೇತನ.
Conscious = ಸಚೇತನ.
Sub-Conscious = ಅವಚೇತನ.
Super-Conscient = ಅತಿಚೇತನ.

## ಶ್ರೀ ಅರವಿಂದರು ಬಂಗಾಲಿಯಲ್ಲಿ ಬರೆದ ಒಂದು ಕತೆ.

# ಸ್ವಪ್ನ

**ಕತ್ತಲೆಯ** ಕೋಣೆಯೊಳಗೆ ಕುಳಿತುಕೊಂಡು ಒಬ್ಬ ಬಡ ಮನುಷ್ಯನು ತನ್ನ ಶೋಚನೀಯ ಅವಸ್ಥೆಯನ್ನೂ, ಪರಮೇಶ್ವರ ರಾಜ್ಯದ ಅನ್ಯಾಯ-ಅವಿಚಾರಗಳ ಸಂಗತಿಗಳನ್ನೂ ಆಲೋಚಿಸುತ್ತಿದ್ದನು. ಅಭಿಮಾನವಶನಾಗಿ ಆ ಬಡವನು ಎಣಿಸತೊಡಗಿದ್ದೇನಂದರೆ— "ಜನರು ಕರ್ಮದ ಹೆಸರು ಮುಂದೆ ಮಾಡಿ ಪರಮೇಶ್ವರನ ಒಳ್ಳೆಯ ಹೆಸರನ್ನು ಉಳಿಸಬೇಕೆನ್ನುತ್ತಾರೆ. ಹಿಂದಿನ ಜನ್ಮದ ಪಾಪದಿಂದ ನನಗಿಂಥ ದುರ್ದೆಶೆ ಯುಂಟಾಗಿದ್ದರೆ, ನಾನು ಅಷ್ಟೊಂದು ಪಾಪಿಯಾಗಿದ್ದರೆ ನಿಶ್ಚಯವಾಗಿಯೂ ಈ ಜನ್ಮದಲ್ಲಿ ಸಹ ನನ್ನ ಮನದೊಳಗೆ ಪಾಪವಿಚಾರದ ಪ್ರವಾಹವು ಈಗಲೂ ಹರಿಯುತ್ತಿತ್ತು! ಅಷ್ಟೊಂದು ಘೋರ ಪಾತಕಿಯಾದ ಮನವು ಒಂದು ದಿನದಲ್ಲಿ ನಿರ್ಮಲವಾಗಬಲ್ಲದೇ? ಆ ಅಟ್ಟದ ಮನೆಯ ನವಕೋಟಿ ನಾರಾಯಣನನ್ನು ನೋಡು. ಅವನ ಧನಧಾನ್ಯ, ಬೆಳ್ಳಿಬಂಗಾರ, ಆಳು-ತೊತ್ತು ನೋಡು. ಕರ್ಮಫಲವು ಸತ್ಯವಿದ್ದರೆ ಹಿಂದಿನ ಜನ್ಮದಲ್ಲಿ ಅವನು ಜಗದ್ವಿಖ್ಯಾತನಾದ ಒಬ್ಬ ಸಾಧುವಾಗಲಿ ಮಹಾತ್ಮನಾಗಲಿ ಇದ್ದದು ನಿಜ. ಆದರೆ ಅದೆಲ್ಲಿ? ಈ ಜನ್ಮದಲ್ಲಾದರೋ ಅದರ ಯಾವ ಚಿಹ್ನವೂ ಕಾಣಿಸುವದಿಲ್ಲ. ಅವನಂಥ ನಿಷ್ಠುರ ನೀಚನಾದ ದುಷ್ಟನು ಜಗತ್ತಿನಲ್ಲಿಯೇ ಇಲ್ಲ. ಇಲ್ಲ! ಕರ್ಮವಾದವು ಪರಮೇಶ್ವರನ ಠಕ್ಕು ವಿದ್ಯೆಯಾಗಿದೆ. ಮನಸ್ಸಿಗೆ ಧೈರ್ಯಕೊಡುವ ಒಂದು ನೆವ ಮಾತ್ರವಾಗಿದೆ. ಶಾಮಸುಂದರನು ಮಹಾ ಚತುರ ಚೂಡಾಮಣಿ ಆಗಿದ್ದಾನೆ. ನನ್ನ ಬಳಿಗೆ ಬಂದು ಸಿಗಲೊಲ್ಲನು. ಅದರಲ್ಲಿಯೇ ಅವನ ಕುಶಲತೆಯಿದೆ. ಇಲ್ಲದಿದ್ದರೆ ಒಳಿತಾಗಿ ಏಟುಹಾಕಿ ಅವನ ಸರ್ವಚಪಲತೆಯನ್ನು ದೂರಗೊಳಿಸುತ್ತಿದ್ದೆನು"

ಆ ಬಡಮನುಷ್ಯನು ಹೀಗೆ ಎಣಿಸುತ್ತಿರಲು ಒಮ್ಮೆಲೆ ಆತನ ಕತ್ತಲು ಮನೆಯು ಅತಿಶಯ ಜಾಜ್ವಲ್ಯ ವಾದ ಬೆಳಕಿನ ತೆರೆಯಲ್ಲಿ ತೇಲಿ ಹೋದಂತೆ ತೋರಿತು. ಮತ್ತು ಆ ಬೆಳಕಿನ ತೆರೆಯು ಅಂಧಕಾರವಲ್ಲಿ ಕೂಡಲೇ ಲೀನವಾಗಿ ಬಿಟ್ಟುದನ್ನೂ ಅವನು ನೋಡಿದನು. ಹಾಗೂ ತನ್ನೆದುರಿಗೆ ಒಬ್ಬ ಸುಂದರನಾದ ಕೃಷ್ಣವರ್ಣದ ಬಾಲಕನು ಕೈಯಲ್ಲಿ ದೀಪ ಹಿಡಿದುಕೊಂಡು ನಿಂತಿದ್ದಾನೆ. ಮೆಲ್ಲಮೆಲ್ಲನೆ ಮುಗುಳು ನಗುತ್ತಿದ್ದಾನೆ. ಆದರೆ ಏನೂ ಮಾತಾಡುವದಿಲ್ಲ ಆತನ ತಲೆಯ ಮೇಲಿನ ನವಿಲುಗರಿಯನ್ನೂ ಕಾಲೊಳಗಿನ ನೇವುರ ವನ್ನೂ ನೋಡಿ, ಶಾಮಸುಂದರನು ತನ್ನ ಕೈಗೆ ಸಿಕ್ಕುವ ಸಲುವಾಗಿ ಬಂದಿದ್ದಾನೆಂದು ಆ ಬಡವನು ಬಗೆದನು, ಆದರೆ ಆತನಿಗೆ ಮುಂದೇನೂ ತಿಳಿಯಲೊಲ್ಲದು. ಆತನ ಕಾಲು ಬೀಳಬೇಕೆಂದು ಒಂದುಸಾರೆ ಮನದಲ್ಲಿ ಬಂದಿತು. ಆದರೆ ಬಾಲಕನ ನಗೆಮುಖವನ್ನು ಕಂಡು ಯಾವ ಪ್ರಕಾರದಿಂದಲೂ ತಲೆವಾಗುವ ಪ್ರವೃತ್ತಿಯುಂಟಾಗಲಿಲ್ಲ. ಕಡೆಗೆ ಆತನ ಬಾಯಿಂದ– "ಎಲಾ! ಬಾಲಕೃಷ್ಣಾ, ನೀನೇತಕ್ಕೆ ಬಂದಿ?" ಎಂಬ ಮಾತು ಹೊರಬಿದ್ದಿತು.

ಬಾಲಕನು ನಕ್ಕು ಮರುನುಡಿದುದೇನಂದರೆ— ಏಕೆ? ನೀನು ನನ್ನನ್ನು ಕರೆಯಲಿಲ್ಲವೇ? ನನ್ನನ್ನು ಬಾರಕೋಲಿನಿಂದ ಥಳಿಸಬೇಕೆಂಬ ಪ್ರಬಲವಾಸನೆಯು ಇದೇ ಈಗ ನಿನ್ನ ಮನದಲ್ಲಿ ಇರಲಿಲ್ಲವೇ? ಅದಕ್ಕಾಗಿಯೇ ಬಂದು ನಾನು ನಿನ್ನ ಕೈಯಲ್ಲಿ ಸಿಕ್ಕಿದ್ದೇನೆ. ಎದ್ದು ನಿಂತು ಬಾರಕೋಲಿನಿಂದ ಥಳಿಸಲು ಆರಂಭಿಸು!"

ಅದನ್ನು ಕೇಳಿ ಆ ಒಡವನು ಮತ್ತಿಷ್ಟು ಅಪ್ರತಿಭನಾದನು, ಪರಮೇಶ್ವರನ ಮೇಲೆ ಬಾರಿತ್ತುವ ವಿಚಾರ ಮಾಡಿದ್ದರ ಸಲುವಾಗಿ ಆತನ ಹೃದಯದಲ್ಲಿ ಅನುತಾಪವಾಗಲಿಲ್ಲ. ಆದರೆ ಇಷ್ಟೊಂದು ಚೆಲುವನಾದ ಬಾಲಕನ ಮೇಲೆ ಪ್ರೀತಿ ಮಾಡುವುದನ್ನು ಬಿಟ್ಟು ಆತನ ಮೈಗೆ ಕೈ ಹಚ್ಚುವುದು ಒಳ್ಳೆಯದಲ್ಲವೆಂದು ತೋರಿತು. ಬಾಲಕನು ಮತ್ತೆ ನುಡಿದದ್ದೇನಂದರೆ— “ ನೋಡು. ಹರಿಮೋಹನ, ಯಾರು ನನಗಂಜದೆ ನನ್ನನ್ನು ಗೆಳೆಯನಂತೆ ಕಾಣುವರೋ, ಗೆಳೆತನಭಾವದಿಂದ ಅಪ್ಪಿಕೊಳ್ಳುವರೋ, ನನ್ನೊಡನೆ ಆಡಲಿಚ್ಛಿಸುವರೋ ಅವರು ನನಗೆ ಬಹಳ ಪ್ರೀತಿಯವರು. ನಾನು ಆಟದಸಲುವಾಗಿಯೇ ಜಗತ್ತನ್ನು ಹುಟ್ಟಿಸಿರುವೆನು. ಈ ಆಟದಲ್ಲಿ ಯೋಗ್ಯರಾದ ಸಂಗಡಿಗರನ್ನು ನಾನು ಯಾವಾಗಲೂ ಹುಡುಕುತ್ತಿರುವೆನು. ಆದರೆ ಅಣ್ಣಾ ಅಂಥ ಸಂಗಡಿಗರು ಎಲ್ಲಿ ಸಿಗುವರು? ಎಲ್ಲರೂ ನನ್ನ ಮೇಲೆ ಸಿಟ್ಟಾಗುತ್ತಾರೆ ನನ್ನೊಡನೆ ಜಗಳಾಡುತ್ತಾರೆ. ದಾನ–ಮಾನ, ಮುಕ್ತಿ –ಭಕ್ತಿ ಏನೇನೋ ಬೇಡುತ್ತಾರೆ ತಿಳಿಯದು. ಆದರೆ ಅದೆಲ್ಲಿ ? ನನಗಾದರೋ ಏನೂ ಬೇಡುವದಿಲ್ಲ ! ಅವರು ಬೇಡುವುದನ್ನು ನಾನು ಅವರಿಗೆ ಕೊಡಬಲ್ಲೆ. ಏನು ಮಾಡಲಿ ! ಅವರನ್ನು ಸಂತುಷ್ಟರನ್ನಾದರೂ ಮಾಡಲೇ ಬೇಕಾಗುತ್ತದೆ. ಇಲ್ಲದಿದ್ದರೆ ಅವರು ನನ್ನ ಜೀವತಿನ್ನುವವರಾಗಿ ಬಿಡುತ್ತಾರೆ. ನೀನು ಏನು ಬೇಡುತ್ತಿಯೋ ನೋಡೋಣ. ಅಸಂತುಷ್ಟನಾದ ಮೇಲೆ ಏಟು ತಿನ್ನಿಸಿಕೊಳ್ಳಲಿಕ್ಕೆ ನಿನಗೊಬ್ಬ ಮನುಷ್ಯ ಬೇಕು ! ಈ ಅಭಿಲಾಷೆಯನ್ನು ಪೂರ್ತಿಗೊಳಿಸುವ ಸಲುವಾಗಿ ನೀನು ನನ್ನನ್ನು ಕರೆದಿರುವಿ. ಇರಲಿ. ನಾನು ನಿನ್ನ ಬಾರಕೋಲಿನ ಏಟು ತಿನ್ನುವುದಕ್ಕಾಗಿಯೇ ಬಂದಿರುವೆನು — ಯೇ ಯಥಾ ಮಾಂ ಪ್ರಪದ್ಯಂತೆ ತಾಂ ತಥೈವ ಭಜಾಮ್ಯಹಂ. ಅಹುದು. ಥಳಿಸುವ ಮೊದಲು ನೀನು ನನ್ನ ಬಾಯಿಂದೇನಾದರೂ ಕೇಳಬೇಕೆನ್ನುವಿಯಾದರೆ. ನಾನು ನಿನಗೆ ನನ್ನ ರಚನೆಯನ್ನು ತೋರಿಸಿಕೊಡುವೆನು. ಏನು ? ನಿನಗೆ ಒಪ್ಪಿಗೆಯೇ ? ”

ಹರಿ ಮೋಹನನು ಕೇಳಿದನು— “ ನೀನು ಹಾಗೆ ಮಾಡಬಲ್ಲೆಯಾ ? ನೀನು ಬಹಳ ವಟವಟಿಸಬಲ್ಲೆಯೆಂದು ತೋರುತ್ತದೆ. ಆದರೆ ನಿನ್ನಂಥ ಚಿಕ್ಕ ಬಾಲಕನು ನನಗೇನಾದರೂ ಪಾಠ ಕಲಿಸಬಲ್ಲನೆಂದು ನಾನು ಹೇಗೆ ನಂಬಲಿ ? ”

ಬಾಲಕನೂ ಮತ್ತೆಯೂ ನಕ್ಕು ನುಡಿದನು— “ ಒಳ್ಳೆಯದು ಬಾ. ನೋಡು. ನಾನದನ್ನು ಮಾಡಬಲ್ಲೆನೋ— ಇಲ್ಲವೋ ! ”

ಇಷ್ಟು ನುಡಿದು ಶ್ರೀಕೃಷ್ಣನು ಹರಿ ಮೋಹನನ ತಲೆಯ ಮೇಲೆ ಕೈಯಿಟ್ಟನು. ಒಮ್ಮೆಲೆ ಆ ಬಡವನ ಸಮಸ್ತ ಶರೀರದಲ್ಲಿ ಮಿಂಚಿನ ಹೊಳೆ ಹರಿಯತೊಡಗಿತು. ಮೂಲಾಧಾರದಲ್ಲಿ ಸುಪ್ತವಾದ ಕುಂಡಲಿನೀ ಶಕ್ತಿಯು ಅಗ್ನಿಮಯ ಸರ್ಪಿಣಿಯ ರೂಪದಲ್ಲಿ ಗರ್ಜಿಸುತ್ತ, ಆತನ ಬ್ರಹ್ಮರಂಧ್ರಕ್ಕೆ ನೆಗೆದು ಬಂದಿತು. ಆತನ ಮೆದುಳು ಪ್ರಾಣ ಶಕ್ತಿಯ ತರಂಗದಿಂದ ತುಂಬಿ ತುಳುಕಿತು. ಅಷ್ಟರಲ್ಲಿ ಅವನಿಗೆ ತೋರಿಸಿಕೊಡಲಾದುದೇನಂದರೆ— ನಾಲ್ಕೂ ನಿಟ್ಟಿನಲ್ಲಿಯ ಮನೆ ಗೋಡೆಗಳೆಲ್ಲ ದೂರ ಓಡತೊಡಗಿವೆ. ನಾಮ ರೂಪಮಯವಾದ ಜಗತ್ತು ಅವನನ್ನು ಬಿಟ್ಟುಕೊಟ್ಟು ಅನಂತದಲ್ಲಿ ಅಡಗಿ ಹೋಗಿವೆ. ಹರಿ ಮೋಹನನು ಬಾಹ್ಯಜ್ಞಾನಶೂನ್ಯನಾಗಿ ಬಿಟ್ಟನು. ಆವನು ತಿರುಗಿ ಚೇತರಿಸಿದಾಗ, ತಾನು ಅದಾವುದೋ ಅಪರಿಚಿತರ ಮನೆಯಲ್ಲಿ ಬಾಲಕನೊಡನೆ ನಿಂತುಕೊಂಡಿದ್ದಾನೆ. ತನ್ನ ಎದುರಿಗೆ ಗೋಣ ಮೇಲೆ ಕೈಯಿಟ್ಟುಕೊಂಡು ಗಾದೆಯ ಮೇಲೆ ಕುಳಿತ ಒಬ್ಬ ವಯೋವೃದ್ಧ ಪುರುಷನು ಗಾಢವಾದ ಚಿಂತೆಯಲ್ಲಿ ಮುಳುಗಿದ್ದಾನೆ. ಆ ಘೋರವಾದ ಚಿಂತೆಯಿಂದ ವಿಕೃತವೂ ಹೃದಯ ವಿದಾರಕವಾದ ನಿರಾಶೆಯಿಂದ ಮಲಿನವೂ ಆದ ಆತನ ಮುಖವನ್ನು ನೋಡಿ, ಇವನೇ ತನ್ನೂರಿನ ಶಪಾದಪಿ— ಶಾರಾದಪಿ ಮುದುಕನಾದ ನವಕೋಟಿ ನಾರಾಯಣನೆಂದು

ನಂಬುವುದಕ್ಕೆ ಹರಿ ಮೋಹನನಿಗೆ ಇಚ್ಛೆಯಾಗಲಿಲ್ಲ. ಕೊನೆಯಲ್ಲಿ ಅತ್ಯಂತ ಭಯ ಭೀತನಾಗಿ ಅವನು ಬಾಲಕನಿಗೆ ಕೇಳಿದ್ದೇನಂದರೆ— '' ಎಲೈ, ಬಾಲಕೃಷ್ಣಾ ನೀನು ಇದನ್ನೇನು ಮಾಡಿದಿ ? ಕತ್ತಲು ರಾತ್ರಿಯಲ್ಲಿ ಕಳ್ಳರಂತೆ ಹೆರವರ ಮನೆಯನ್ನು ಹೊಕ್ಕು ಬಂದೆವೇ ? ಪೋಲೀಸರು ಬಂದು ನಮ್ಮನ್ನು ಹಿಡಿಯುವರಲ್ಲದೆ ಹೊಡೆದು ಬಡೆದು ನಮ್ಮಿಬ್ಬರ ಪ್ರಾಣ ತಕ್ಕೊಳ್ಳುವರು. ನವಕೋಟಿ ನಾರಾಯಣನ ಪ್ರತಾಪವು ನಿನಗೆ ಗೊತ್ತಿಲ್ಲವೇ ? ''

ಬಾಲಕನು ನಕ್ಕು ನುಡಿದದ್ದೇನಂದರೆ— '' ಚೆನ್ನಾಗಿ ಗೊತ್ತಿದೆ. ಆದರೆ ಕಳವು ನನ್ನ ಹಳೆಯ ಕಾಯಕ. ಪೋಲೀಸರೊಡನೆ ನನ್ನ ಪೂರ್ಣ ಸಂಬಂಧವಿದೆ. ನೀನು ಅಂಜಬೇಡ. ಇನ್ನು ನಿನಗೆ ನಾನು ನಿನಗೆ ಸೂಕ್ಷ್ಮ ದೃಷ್ಟಿಯನ್ನು ಕೊಡುತ್ತೇನೆ. ಮುದುಕನ ಮನಸ್ಸಿನೊಳಗೆ ಏನು ನಡೆದಿದೆಯೆಂಬುದನ್ನು ನೋಡು. ನವಕೋಟಿಯ ಪ್ರತಾಪವಂತೂ ನಿನಗೆ ಗೊತ್ತೇ ಅದೆ. ಆದರೆ ನನ್ನ ಪ್ರತಾಪವನ್ನೂ ಒಂದಿಷ್ಟು ನೋಡು. ''

ಆಗ ಹರಿಮೋಹನನು ಮುದುಕನಾದ ನವಕೋಟಿಯ ಮನಸ್ಸನ್ನು ನೋಡುವದಕ್ಕೆ ಸಮರ್ಥನಾದನು. ಅವನಿಗೆ ಕಾಣಿಸಿದ್ದೇನೆಂದರೆ—ಆ ಮುದುಕನ ಧನ್ಯಾಢ್ಯ ನಗರವು ನಾನಾಪ್ರಕಾರದ ಆಕ್ರಮಣಗಳಿಂದ ಹಾಳಾಗಿ ಹೋಗತೊಡಗಿದೆ. ಆತನ ತೀಕ್ಷ್ಣವೂ ಓಜಸ್ವಿನಿಯೂ ಆದ ಬುದ್ಧಿಯಲ್ಲಿ ಅನೇಕ ಭೀಷಣವಾದ ಮೂರ್ತಿಗಳೂ, ಪಿಶಾಚಿ ರಾಕ್ಷಸಗಳೂ, ಪ್ರವೇಶಿಸಿ, ಅವನ ಸುಖವನ್ನು ಕಸುಗೊಳ್ಳುತ್ತಿವೆ. ಮುದುಕನು ತನ್ನ ಪ್ರೀತಿಯವನಾದ ಎಲ್ಲಕ್ಕೂ ಕಿರಿಯ ಮಗನೊಡನೆ ಕಲಹಮಾಡಿದ್ದಾನೆ. ಅವನನ್ನು ಮನೆಯಿಂದ ಹೊರಗೆ ಹಾಕಲಾಗಿದೆ. ಇನ್ನು ಅವನು, ಮುಪ್ಪಿನಲ್ಲಿ ಅಕ್ಕರೆಯ ಮಗನನ್ನು ಕಳಕೊಂಡು ಶೋಕದಿಂದ ಮರಣಾತುರನಾಗಿ ಬಿಟ್ಟಿದ್ದಾನೆ. ಆದರೂ ಸಿಟ್ಟು, ಗರ್ವ, ಹಠ ಇವು ಅವನ ಹೃದಯದ್ವಾರದಲ್ಲಿ ಸರಪಳಿ ಬಿಗಿದು ಅಚ್ಚಗಾವಲು ಮಾಡುತ್ತಿವೆ. ಕ್ಷಮೆಯು ಆ ಬಾಗಿಲಿನಿಂದ ಬರುವುದಕ್ಕೆ ಅಡ್ಡಿಯಿದೆ ಅವನ ಮಗಳ ಹೆಸರಿಗೆ ದುಶ್ಚರಿತ್ರಳೆನಿಸುವಂಥ ಕಲಂಕಹತ್ತಿದೆ. ಮುದುಕನು ತನ್ನ ಮುದ್ದು ಕುವರಿಯನ್ನು ಮನೆಯಿಂದ ಹೊರದೂಡಿ, ಬಳಿಕ ಆಕೆಯ ಸಲುವಾಗಿ ಅಳುತ್ತಲಿದ್ದಾನೆ. ತನ್ನ ಕನ್ನಿಕೆಯು ನಿರ್ದೋಷಿಯೆಂಬುದನ್ನು ಆ ಮುದುಕನು ಬಲ್ಲನು. ಆದರೆ ಸಮಾಜದ ಭಯ, ಲೋಕಲಜ್ಜೆ, ಅಹಂಕಾರ ಹಾಗೂ ಸ್ವಾರ್ಥಗಳು ಸ್ನೇಹವನ್ನು ದಬ್ಬಿಟ್ಟಿವೆ. ಅದು ಅರಳುವದಕ್ಕೆ ಸುಸಂಧಿಯನ್ನೇ ಕೊಡಲೊಲ್ಲವು. ಸಾವಿರಾರು ಪಾಪಪ್ರವೃತ್ತಿಗಳನ್ನು ದಾರಿಗೆತರುವ ಸಾಹಸವಾಗಲಿ ಬಲವಾಗಲಿ ಅವನಲ್ಲಿಲ್ಲ. ನಡು ನಡುವೆ ಮೃತ್ಯುವಿನ ಹಾಗೂ ಪರಲೋಕದ ಚಿಂತೆಯು ಮುದುಕನಿಗೆ ಅತ್ಯಂತ ಕಠೋರವಾದ ಭೀಕರತೆಯನ್ನು ತೋರಿಸುತ್ತದೆ ಹರಿಮೋಹನನು ನೋಡಿದ್ದೇನಂದರೆ—ಸಾಯುವ ಚಿತೆಯ ತೆರೆಯ ಹಿಂದಿನಿಂದ ವಿಕರಾಳನಾದ ಯಮದೂತನು ಮುದುಕನನ್ನು ಇಣಕಿಣಕಿ ನೋಡತೊಡಗಿದ್ದಾನೆ. ಹಾಗೂ ಅವನ ಬಾಗಿಲ ಕದವನ್ನು ಕಟಕಟಿಸುತ್ತಿದ್ದಾನೆ. ಬಾಗಿಲ ಕದವು ಕಟಕಟವೆಂಬ ಸಪ್ಪಳ ಮಾಡಿದಾಗಲೊಮ್ಮೆ ಮುದುಕನ ಅಂತರಾತ್ಮವು ಭಯದಿಂದ ವ್ಯಾಕುಲವಾಗಿ ಚೀತ್ಕಾರ ಮಾಡುತ್ತಿದೆ. ಆ ಭಯಂಕರವಾದ ದೃಶ್ಯವನ್ನು ಕಂಡು ಹರಿಮೋಹನನು ಭಯಭೀತನಾದನು. ಹಾಗೂ ಅವನು ಬಾಲಕನ ಕಡೆಗೆ ನೋಡಿ —''ಎಲೈ ಬಾಲಕೃಷ್ಣಾ ಇದೇನು ? ಮುದುಕನು ಪರಮ ಸುಖಿಯೆಂದು ನಾನೆಣಿಸಿದ್ದೆನು.'' ಎಂದು ನುಡಿದನು.

ಬಾಲಕನು ಹೇಳಿದನು.— ''ಇದೇ ನನ್ನ ಪ್ರತಾಪ. ಹೇಳು ಯಾರ ಪ್ರತಾಪವು ಹಿರಿದು ? ಈ ಕೇರಿಯ ನವಕೋಟಿ ನಾರಾಯಣನದೋ-ವೈಕುಂಠವಾಸಿಯಾದ ಶ್ರೀಕೃಷ್ಣನದೋ? ಹರಿಮೋಹನ ನೋಡು!

ಇಲ್ಲಿಯೂ ನನ್ನ ಪೋಲೀಸರಿದ್ದಾರೆ. ಕಾವಲಿದೆ, ಸರಕಾರವಿದೆ, ಕಟ್ಟಳೆಯಿದೆ, ವಿಚಾರಣೆಯಿದೆ. ನಾನು ಸಹ ರಾಜನಾಗಿ ಆಟವಾಡಬಲ್ಲೆನು. ಈ ಆಟವು ನಿನಗೆ ಸರಿಯೆನಿಸುವದೇ?"

ಹರಿಮೋಹನನು ಕೇಳಿದನು—"ಇಲ್ಲವಪ್ಪಾ| ಇದು ಬಹು ಅನಿಷ್ಟವಾದ ಆಟ. ನಿನಗೆ ಈ ಆಟವು ಒಳ್ಳೆಯದೆನಿಸುವದೇ ?"

ಬಾಲಕನು ನಕ್ಕು ವಂರು ನುಡಿದಿದ್ದೇನಂದರೆ— ಎಲ್ಲ ಆಟಗಳಿಗೂ ನನ್ನ ಒಪ್ಪಿಗೆಯಿದೆ. ಬಾರಕೋಲಿನಿಂದ ಹೊಡೆಯುವ ಆಟಕ್ಕೂ ನನ್ನ ಒಪ್ಪಿಗೆಯಿದೆ. ಹೊಡಿಸಿಕೊಳ್ಳುವ ಆಟಕ್ಕೂ ಒಪ್ಪಿಗೆಯಿದೆ." ಆ ಮೇಲೆ ಅವನು ಮತ್ತೆ ಹೇಳಿದ್ದೇನಂದರೆ— "ನೋಡು, ಹರಿ ಮೋಹನಾ, ನೀನು ಬರಿಯ ಹೊರಮುಗ್ಗುಲನ್ನಷ್ಟೇ ನೋಡುತ್ತೀ. ಒಳಗನ್ನು ನೋಡುವ ಸೂಕ್ಷ್ಮ ದೃಷ್ಟಿಯು ನಿನ್ನಲ್ಲಿನ್ನೂ ವಿಕಾಸಗೊಂಡಿಲ್ಲ. ಅಂತೆಯೇ ನೀನು ದುಃಖಿಯೆಂದುಕೊಳ್ಳುತ್ತೀ. ನವಕೋಟಿಯು ಸುಖಿಯೆಂದು ಹೇಳುತ್ತೀ. ಆ ಮನುಷ್ಯನಿಗೆ ಯಾವ ಪಾರ್ಥಿವ ವಸ್ತುವಿನ ಕೊರತೆಯೂ ಇಲ್ಲ. ಆದರೂ ಆ ಕೋಟ್ಯಧೀಶನು ನಿನಗಿಂತ ಅದೆಷ್ಟು ಹೆಚ್ಚು ದುಃಖವನ್ನು ಅನುಭೋಗಿಸುತ್ತಿದ್ದಾನೆ! ಹೀಗೇಕೆ ಆಗುತ್ತದೆ? ಇದನ್ನು ಹೇಳಬಲ್ಲೆಯಾ ನೀನು? ಒಟ್ಟಾರೆ–ಮನದ ಅವಸ್ಥೆಯಲ್ಲಿಯೆ ಸುಖವದೆ. ಮನದ ಅವಸ್ಥೆಯಲ್ಲಿಯೇ ದುಃಖವಿದೆ. ಸುಖದುಃಖಗಳು ಮನಸ್ಸಿನ ವಿಕಾರ ಮಾತ್ರ. ಯಾರ ಬಳಿಯಲ್ಲಿ ಏನು ಇಲ್ಲವೋ ವಿಪತ್ತೋ ಯಾರಸಂಪತ್ತೋ ಅವರು ಇಚ್ಛಿಸಿದರೆ ಆ ವಿಪತ್ತಿನಲ್ಲಿ ಸಹ ಪರಮ ಸುಖಿಗಳಾಗಬಲ್ಲರು. ಇನ್ನು ನೋಡು. ಯಾವ ಪ್ರಕಾರ ನೀನು ನೀರಸವಾದ ಪುಣ್ಯದಲ್ಲಿ ದಿನ ಕಳೆಯುತ್ತ ಸುಖವನ್ನು ಪಡೆಯದೆ ಕೇವಲ ದುಃಖದ ಚಿಂತೆಯನ್ನೇ ಮಾಡುವಿಯೋ ಅದೇ ಪ್ರಕಾರ ಅವನು ಸಹ ನೀರಸವಾದ ಪಾಪದಲ್ಲಿ ತನ್ನ ದಿನಗಳನ್ನು ಕಳೆಯುತ್ತ ಕೇವಲ ದುಃಖದ ಚಿಂತೆಯನ್ನೇ ಮಾಡುತ್ತಿದ್ದಾನೆ. ಆದ್ದರಿಂದ ಪುಣ್ಯದಿಂದ ಕೇವಲ ಕ್ಷಣಿಕ ಸುಖವೂ ಪಾಪದಿಂದ ಕೇವಲ ಕ್ಷಣಿಕ ದುಃಖವೂ ಇಲ್ಲವ್ಕೆ ಪುಣ್ಯದಿಂದ ಕೇವಲ ಕ್ಷಣಿಕ ದು:ಖವೂ ಪಾಪದಿಂದ ಕೇವಲ ಕ್ಷಣಿಕ ಸುಖವೂ ಉಂಟಾಗುತ್ತವೆ. ಈ ದ್ವಂದ್ವಗಳಲ್ಲಿ ಆನಂದವಿಲ್ಲ. ಆನಂದದಾಗರದ ಕಾಂತಿಯಾದರೋ ನನ್ನ ಬಳಿಯಲ್ಲಿದೆ. ಯಾರು ನನ್ನ ಹತ್ತಿರ ಬರುವರೋ, ನನ್ನ ಪ್ರೇಮಪಾಶದಲ್ಲಿ ಕಟ್ಟು ಪಡೆಯುವರೋ, ನನ್ನನ್ನು ಪಡಕೊಳ್ಳುವ ಸಾಧನ ಮಾಡುವರೋ, ನನ್ನ ಮೇಲೆ ಬಲ್ಮೆ–ಜುಲ್ಮೆ ಮಾಡುವರೋ ಅತ್ಯಾಚಾರ ಮಾಡುವರೋ ಅವರು ನನ್ನ ಆನಂದದ ಕಾಂತಿಯನ್ನು ಕೈವಶಪಡಿಸಿಕೊಳ್ಳುವರು.

ಹರಿಮೋಹನನು ತುಂಬ ತತ್ಪರತೆಯೊಡನೆ ಶ್ರೀಕೃಷ್ಣನ ಮಾತು ಕೇಳತೊಡಗಿದನು. ಬಾಲಕನು ಮತ್ತೆಯೂ ನುಡಿದುದೇನಂದರೆ—"ಹರಿಮೋಹನ, ಇಲ್ಲಿ ನೋಡು. ಬಾಡಿ ಬತ್ತಿದ ಪುಣ್ಯವು ನಿನ್ನಲ್ಲಿ ನೀರಸವಾಗಿದೆ. ಪುನಃ ಆ ಸಂಸ್ಕಾರದ ಪ್ರಭಾವವನ್ನು ಬಿಟ್ಟು ಕೊಡುವುದೂ, ಆ ತುಚ್ಛವಾದ ಅಹಂಕಾರವನ್ನು ಗೆದಿಯುವುದೂ ನಿನಗೆ ಬಿಗಿಯಾಗಿ ಕುಳಿತಿದೆ. ಅದೇ ಪ್ರಕಾರ ಪಾಪವು ಸಹ ಆ ಮುದುಕನ ಹತ್ತಿರ ನೀರಸವಾಗಿ ಬಿಟ್ಟಿದೆ. ಪುನ: ಆ ಸಂಸ್ಕಾರದ ಪ್ರಭಾವದಿಂದ ಅವನು ಬಿಡಿಸಿಕೊಳ್ಳಲಾರನು, ಹಾಗೂ ಈ ಜೀವನದಲ್ಲಿ ನರಕದ ಸಂಕಟವನ್ನು ಭೋಗಿಸುತ್ತಿದ್ದಾನೆ. ಇದಕ್ಕೆ 'ಪುಣ್ಯ ಬಂಧನ'ವೆನ್ನುತ್ತಾರೆ. ಅಜ್ಞಾನದಿಂದ ಹುಟ್ಟಿದ ಸಂಸ್ಕಾರವು ಈ ಬಂಧನದಲ್ಲಿ ಹಗ್ಗದ ಕೆಲಸ ಮಾಡುತ್ತದೆ. ಆದರೆ ಮುದುಕನ ನರಕ ಸಂಕಟವು ಬಹಳೇ ಶುಭಾವಸ್ಥೆಯಾಗಿದೆ. ಅದರಿಂದ ಅವನಿಗೆ ಸಂರಕ್ಷಣೆಯೂ ಮಂಗಲವೂ ದೊರಕೊಳ್ಳುತ್ತವೆ.

ಹರಿಮೋಹನನು ಈವರೆಗೆ ಗಪ್ಪುಗಡದಾಗಿ ಬಾಲಕನ ಮಾತು ಕೇಳುತ್ತಿದ್ದನು. ಬಳಿಕ ಆತನು ನುಡಿದುದೇನೆಂದರೆ— "ಪ್ರಿಯ ಬಾಲಕೃಷ್ಣಾ, ನಿನ್ನ ಮಾತು ಬಹಳ ಹಿರಿಯವು. ಆದರೆ ಅವುಗಳಿಂದ ನನಗೆ ಸಮಾಧಾನವಾಗಲಿಲ್ಲ. ಸುಖದು:ಖಗಳು ಮನದ ವಿಕಾರಗಳು ಆದರೆ ಬಾಹ್ಯ ಅವಸ್ಥೆಯೇ ಅವಕ್ಕೆ ವಾಸ್ತ

ವಿಕ ಕಾರಣವು. ವಿಚಾರಿಸಿ ನೋಡು. ಹಸಿವೆಯ ಕಿಚ್ಚಿನಿಂದ ಪ್ರಾಣವು ಯಾವಾಗ ಛಟಪಟಿಸುವದೋ ಆವಾಗ ಅದಾವನು ಪರಮಸುಖಿಯಾಗಬಲ್ಲನು? ರೋಗ ಇಲ್ಲವೆ ಸಂಕಟದಿಂದ ಶರೀರವು ಯಾವಾಗ ಕಾತರಗೊಳ್ಳುವದೋ ಆವಾಗ ಅದಾವನು ನಿನ್ನ ಮಾತನ್ನು ಆಲೋಚಿಸಬಲ್ಲನು ?

"ಬಾ. ಹರಿಮೋಹನ, ಅದನ್ನೂ ನಿನಗೆ ತೋರಿಸುವೆನು" ಎಂದು ಬಾಲಕನಾಡಿದನು.

ಆ ಮೇಲೆ ಬಾಲಕನು ಹರಿಮೋಹನನ ತಲೆಯ ಮೇಲೆ ಮತ್ತೆ ತನ್ನ ಕೈಯಿಟ್ಟನು ಕೈತಗಲಿದ್ದು ತಿಳಿದ ಕೂಡಲೇ ಹರಿಮೋಹನನಿಗೆ ಕಾಣಿಸಿದ್ದೇನಂದರೆ–ನವಕೋಟಿ ನಾರಾಯಣನ ಮನೆಯ ಗುರುತು ಒಂದಿಷ್ಟು ಉಳಿದಿಲ್ಲ. ಅವನೆದುರಿಗೆ ಯಾವುದೋ ನಿರ್ಜನವೂ ಸುರಮ್ಯವೂ ಆದ ಪರ್ವತದ ವಾಯುಸೇವಿತ ಶಿಖರದ ಮೇಲೆ ಒಬ್ಬ ಸನ್ಯಾಸಿಯು ಆಸನ ಹಾಕಿ ಧ್ಯಾನಮಗ್ನಾವಸ್ಥೆಯಲ್ಲಿ ಕುಳಿತಿದ್ದಾನೆ ಅವನ ಅಡಿಗಳ ಕೆಳಗೆ ಒಂದು ಪ್ರಕಾಂಡವಾದ ಹುಲಿಯು ಪ್ರಹರಿಯಂತೆ ಒರಗಿದೆ. ಹುಲಿಯನ್ನು ಕಂಡು ಹರಿಮೋಹನನ ಕಾಲು ಮುಂದುವರಿಯದೆ ತಡೆದು ನಿಂತವು. ಆದರೆ ಬಾಲಕನು ಆತನನ್ನು ಎಳೆದುಕೊಂಡು ಸನ್ಯಾಸಿಯ ಹತ್ತಿರಕ್ಕೆ ಹೋದನು. ಬಾಲಕನೊಂದಿಗೆ ಜಗ್ಗು ಬೀಳುವುದು ಶಕ್ಯವಿಲ್ಲವಾದ ಕಾರಣ ಹರಿಮೋಹನನು ಕೈಸಾಗದವನಾಗಿ ಹೋಗಬೇಕಾಯಿತು. "ಹರಿಮೋಹನಾ, ನೋಡು" ಎಂದು ಬಾಲಕನು ಹೇಳಿದನು.

ಹರಿಮೋಹನನು ನೋಡಿದನು. ಏನಂದರೆ–ಸನ್ಯಾಸಿಯ ಮನಸ್ಸು ತನ್ನ ಕಣ್ಣೆದುರಿಗೆ ತೆರೆದಿಟ್ಟ ಒಂದು ಹೊತ್ತಿಗೆಯಂತೆ ಬಿದ್ದುಕೊಂಡಿದೆ. ಆ ಹೊತ್ತಿಗೆಯ ಪ್ರತಿ ಒಂದು ಓಲೆಯ ಮೇಲೆ ಶ್ರೀಕೃಷ್ಣನಾಮವನ್ನು ಸಾವಿರ ಸಾರೆ ಬರೆದಿದೆ. ಸನ್ಯಾಸಿಯು ನಿರ್ವಿಕಲ್ಪಸಮಾಧಿಯ ಸಿಂಹದ್ವಾರವನ್ನು ಅತಿಕ್ರಮಿಸಿ ಸೂರ್ಯನ ಬೆಳಕಿನಲ್ಲಿ ಶ್ರೀಕೃಷ್ಣನ ಜೊತೆಗೆ ಆಟವಾಡುತ್ತಿದ್ದಾನೆ. ಅವನು ಇನ್ನೂ ನೋಡಿದ್ದೇನೆಂದರೆ– ಸನ್ಯಾಸಿಯು ಕೆಲವು ದಿನಗಳಿಂದ ಅನ್ನ ನೀರುಗಳಿಲ್ಲದೆ ಜೀವಿಸುತ್ತಿದ್ದಾನೆ. ಹಾಗೂ ಕಳೆದ ಎರಡು ದಿನಗಳಲ್ಲಿ ಹಸಿವೆ–ನೀರಡಿಕೆಗಳಿಂದ ಅವನ ಶರೀರಕ್ಕೆ ಬಹಳ ಕಷ್ಟವಾಗಿದೆ. ಹರಿಮೋಹನನನು ಕೇಳಿದನು — "ಎಲೈ ಬಾಲಕೃಷ್ಣಾ ಇದು ಏನು ? ಆ ಮಹಾತ್ಮನು ನಿನ್ನನ್ನು ಇಷ್ಟೊಂದು ಪ್ರೇಮಿಸುತ್ತಿದ್ದರೂ ಆ ಹಸಿವೆ ನೀರಡಿಕೆಗಳ ಪೀಡೆಗೆ ಒಳಗಾಗಿರುವವನಲ್ಲ. ನಿನಗೆ ಸಾಮಾನ್ಯ ಬುದ್ಧಿ ಸಹ ಇಲ್ಲವೇ ? ವ್ಯಾಘ್ರಗಳಿಂದ ತುಂಬಿದ ಈ ನಿರ್ಜನವಾದ ಅರಣ್ಯದಲ್ಲಿ ಈತನಿಗೆ ಯಾರು ಆಹಾರ ಕೊಡುವರು ? "

ಬಾಲಕನು ಹೇಳಿದನು— "ನಾನು ಕೊಡುವೆನು. ಆದರೆ ಇನ್ನೊಂದು ಚಮತ್ಕಾರ ನೋಡು !"

ಹರಿಮೋಹನನು ನೋಡಿದ್ದೇನೆಂದರೆ—ಹುಲಿಯು ನಿಂತುಕೊಂಡು ತನ್ನ ಪಂಜದ ಹೊಡತದಿಂದ ಬಳಿಯಲ್ಲಿದ್ದ ಹುತ್ತವನ್ನು ಕೆದರಿ ಬಿಟ್ಟಿತು. ಇನ್ನೇನು ? ಆ ಮಣ್ಣಿನ ಡಿಗ್ಗೆಯೊಳಗಿಂದ ಸಾವಿರಾರು ಗೊರಲಿಗಳು ಹೊರಬಿದ್ದು, ಕಿಡಿಕಿಡಿಯಾಗಿ ಸನ್ಯಾಸಿಯ ಮುಖಪನ್ನೇರಿ ಅವನನ್ನು ಕಡಿಯತೊಡಗಿದವು. ಸನ್ಯಾಸಿಯು ಅದೇ ಅವಸ್ಥೆಯಲ್ಲಿಯೇ ಕುಳಿತಿದ್ದಾನೆ; ಧ್ಯಾನಮಗ್ನ, ನಿಶ್ಚಲ, ಅಚಲ! ಆಗ ಬಾಲಕನು ಸನ್ಯಾಸಿಯ ಕಿವಿಯಲ್ಲಿ ಅತಿ ಮಧುರ ಸ್ವರದಲ್ಲಿ ಕೂಗಿದನು.—'ಗೆಳೆಯಾ!" ಸನ್ಯಾಸಿಯು ಕಣ್ತೆರೆದನು. ಮೊದಮೊದಲು ಅವನು ಆ ಮೋಹ ಜ್ವಾಲಾಮಯವಾದ ದರ್ಶನದ ಅನುಭವ ಪಡೆಯಲಿಲ್ಲ ಇನ್ನೂ ವರೆಗೂ ಅವನ ಕಿವಿಯಲ್ಲಿ ಅದೇ ವಿಶ್ವವಾಂಛಿತ, ಚಿತ್ತಾಪಹಾರಕ ಕೊಳಲು ಉಲಿಯುತ್ತಿತ್ತು. ವೃಂದಾವನದಲ್ಲಿ ಶ್ರೀ ರಾಧೆಯ ಕಿವಿಯಲ್ಲಿ ಉಲಿಯುತ್ತಿದ್ದ ಹಾಗೆ. ಸಾವಿರಾರು ಗೊರಲಿಗಳು ಕಡಿದದ್ದರಿಂದ ಆತನ ಲಕ್ಷ್ಯವು ಆ ಮೇಲೆ ಶರೀರದ ಕಡೆಗೆ ಹರಿಯಿತು. ಸನ್ಯಾಸಿ ತನ್ನ ಆಸನ ಬಿಟ್ಟು ಅಲುಗಲಿಲ್ಲ. ಆಶ್ಚರ್ಯಚಕಿತನಾಗಿ ಮನಸ್ಸಿನಲ್ಲಿ ಅಂದುಕೊಳ್ಳತೊಡಗಿದನು—"ಇದೇನು? ಹೀಗೆ ಹಿಂದೆಂದೂ ಆಗಿರಲಿಲ್ಲ. ಓಹೋ! ಶ್ರೀಕೃಷ್ಣನು

ನನ್ನೊಡನೆ ಇದೇನೋ ಆಟವಾಡುತ್ತಿದ್ದಾನೆ. ಕ್ಷುಲ್ಲಕವಾದ ಗೊರಲಿಗಳ ಸಮೂಹದ ವೇಷದಲ್ಲಿ ನನ್ನನ್ನು ಕಡಿಯತೊಡಗಿದ್ದಾನೆ." ಗೊರಲಿಗಳ ಕಡಿತದ ಕಾಟವೀಗ ಸನ್ಯಾಸಿಯ ಬುದ್ಧಿಯವರೆಗೆ ತಲುಪಲಾರ ದೆಂಬುದನ್ನು ಹರಿಮೋಹನನು ಕಂಡನು. ಪ್ರತಿ ಒಂದು ಕಡಿತದಲ್ಲಿ ತೀವ್ರವಾದ ಶಾರೀರಿಕ ಆನಂದವನ್ನು ಅನುಭವಿಸುತ್ತ, ಶ್ರೀಕೃಷ್ಣನಾಮವನ್ನು ಉಚ್ಚರಿಸುತ್ತ, ಅತ್ಯಂತ ಆನಂದಪೂರ್ವಕವಾಗಿ ಚಪ್ಪಾಳೆ ಬಾರಿಸುತ್ತ ಅವನು ಕುಣಿಯತೊಡಗಿದನು. ಗೊರಲಿಗಳು ಮಣ್ಣಿನಲ್ಲಿ ಬಿದ್ದು ಓಡಿ ಹೋದವು. ಹರಿಮೋಹನನು ಆಶ್ಚರ್ಯ ಪೂರ್ವಕವಾಗಿ—"ಅಲಲಾ! ಮುದ್ದು ಮೋಹನಾ ಇದೇನು ಮಾಯೆ?" ಎಂದು ಕೇಳಿದನು.

ಬಾಲಕನು ಚಪ್ಪಾಳೆ ಬಾರಿಸಿ, ಒಂದು ಕಾಲ ಮೇಲೆ ಎರಡು ಸಾರೆ ಸುತ್ತುವರಿದು ಕುಣಿದನು. ಚೇಷ್ಟೆ ಮಾಡಿ ನಕ್ಕನು. ಹಾಗೂ ಏನು ಹೇಳಿದನೆಂದರೆ —"ಈ ಜಗತ್ತಿನ ಒಬ್ಬನೇ ಒಬ್ಬನಾದ ಗೌಳಿಗ ನಾನೇ! ಈ ಮೋಡಿಯನ್ನು ನೀನು ತಿಳಿಯಲಾರೆ. ಇದು ನನ್ನ ಪರಮ ರಹಸ್ಯ. ನೋಡು! ಸಂಕಟದಲ್ಲಿ ಸಹ ಸನ್ಯಾಸಿಯು ನನ್ನನ್ನು ಸ್ಮರಿಸಬಲ್ಲನಾದರೆ! ಇನ್ನೂ ನೋಡು!"

ಸನ್ಯಾಸಿಯು ಪುನಃ ಪ್ರಕೃತಿಸ್ಥನಾಗಿ ಕುಳಿತನು. ಅವನ ಶರೀರವೀಗ ಹಸಿವೆ-ನೀರಡಿಕೆಗಳನ್ನು ಅನುಭವಿಸತೊಡಗಿತು. ಆದರೆ ಹರಿಮೋಹನನು ನೋಡಿದ್ದೇನೆಂದರೆ--ಸನ್ಯಾಸಿಯ ಬುದ್ಧಿಯು ಆ ಶಾರೀ ರಿಕ ವಿಕಾರವನ್ನು ಮಾತ್ರ ಅನುಭವಿಸುತ್ತಿದೆ. ಆದರೆ ಅವನು ಅದರಿಂದ ವಿಕೃತಗೊಳ್ಳಲಿಲ್ಲ. ಲಿಪ್ತನೂ ಆಗ ಲಿಲ್ಲ. ಅದೇ ಸಮಯದಲ್ಲಿ ಬೆಟ್ಟದ ಮೇಲಿಂದ, ಕೊಳಲನ್ನು ಮೂದಲಿಸುವ ಸ್ವರದಿಂದ ಯಾರೋ "ಗೆಳೆಯಾ" ಎಂದು ಕೂಗಿದರು. ಹರಿಮೋಹನನು ಬೆಚ್ಚಿ ಬಿದ್ದನು. ಕೊಳಲು ಮೂದಲಿಸುವ ಈ ಸ್ವರವು ಶಾಮಸುಂದ ರನದೇ ಆಗಿದೆ. ಆ ಬಳಿಕ ಅವನು ಇನ್ನೇನು ಕಂಡನೆಂದರೆ—ಬೆಟ್ಟದ ಬಂಡೆಗಲ್ಲಿನ ಹಿಂದಿನಿಂದ ಒಬ್ಬ ಕೃಷ್ಣ ವರ್ಣದ ಬಾಲಕನು ಬಟ್ಟಲಲ್ಲಿ ಉತ್ತಮವಾದ ಆಹಾರವನ್ನೂ ಹಣ್ಣುಗಳನ್ನೂ ತಕ್ಕೊಂಡು ಬರುತ್ತಿದ್ದಾನೆ. ಹರಿಮೋಹನನು ಹತಬುದ್ಧಿಯಾಗಿ ಶ್ರೀಕೃಷ್ಣನ ಕಡೆಗೆ ನೋಡತೊಡಗಿದನು. ಬಾಲಕನು ಅವನ ಹತ್ತಿರ ನಿಂತಿ ದ್ದಾನೆ. ಅಲ್ಲದೆ ಬರುತ್ತಿರುವ ಬಾಲಕನು ಸಹ ಏನೇನೂ ಹೆಚ್ಚು ಕಡಿಮೆಯಿಲ್ಲದ ಶ್ರೀಕೃಷ್ಣನೇ ಆಗಿದ್ದಾನೆ. ಎರಡನೇ ಬಾಲಕನು ಅಲ್ಲಿಗೆ ಬಂದು ಸನ್ಯಾಸಿಗೆ ಬೆಳಕು ತೋರಿಸಿ—"ನೋಡು! ಏನು ತಂದಿದ್ದೇನೆ ?" ಎಂದು ಕೇಳಿದನು.

ಸನ್ಯಾಸಿಯು ನಕ್ಕು--"ಬಂದೆಯಾ ? ಇಷ್ಟು ದಿನಗಳ ವರೆಗೆ ಹಸಿವೆಯಲ್ಲಿಯೇ ಇರಿಸಿದೆಯಾ ? ಕಡೆಗೆ ಈಗ ಬಂದೆ. ಕುಳಿತುಕೊಂಡು ನನ್ನೊಡನೆ ಉಣ್ಣು" ಎಂದನು.

ಸನ್ಯಾಸಿಯೂ ಬಾಲಕನೂ ಆ ಬಟ್ಟಲೊಳಗಿನ ಸಾಮಗ್ರಿಗಳನ್ನು ತಿನ್ನತೊಡಗಿದರು. ಅವರವ ರಲ್ಲಿ ಇಸುಗೊಳ್ಳುವುದೂ ಕಸುಗೊಳ್ಳುವದೂ ನಡೆಯಿತು. ಆಹಾರವು ಮುಗಿದ ಬಳಿಕ ಬಾಲಕನು ಬಟ್ಟಲು ತೆಗೆದುಕೊಂಡು ಕತ್ತಲಲ್ಲಿ ಕಾಣದಾಗಿ ಹೋದನು.

ಹರಿಮೋಹನನು ತುಸು ಏನೋ ಕೇಳುವದಕ್ಕಿದ್ದನು. ಒಮ್ಮೆಲೆ ಅವನಿಗೆ ಕಂಡು ಬಂದುದೇನಂದರೆ ಶ್ರೀಕೃಷ್ಣನು ಈಗ ಅಲ್ಲಿಲ್ಲ. ಸನ್ಯಾಸಿಯೂ ಈಗ ಅಲ್ಲಿಲ್ಲ. ಹುಲಿಯಿಲ್ಲ. ಬೆಟ್ಟವಿಲ್ಲ. ಈಗ ಅವನು ಒಬ್ಬ ದೊಡ್ಡ ಮನುಷ್ಯನ ಓಣಿಯಲ್ಲಿ ವಾಸಿಸುತ್ತಿದ್ದಾನೆ. ಅವನಲ್ಲಿ ಪ್ರಗಾಢವಾದ ಧನಧಾನ್ಯ ಸಂಗ್ರಹವಿದೆ. ಅವ ನಿಗೆ ಹೆಂಡತಿಯಿದ್ದಾಳೆ. ಪರಿವಾರವಿದೆ. ದಿನಾಲೂ ಬ್ರಾಹ್ಮಣರಿಗೂ ಭಿಕ್ಷುಕರಿಗೂ ದಾನ ಕೊಡುತ್ತಾನೆ. ಮೂರೂ ಹೊತ್ತು ಸಂಧ್ಯಾವಂದನೆ ಮಾಡುತ್ತಾನೆ. ಶಾಸ್ತ್ರೋಕ್ತವಾದ ಆಚಾರ ವಿಚಾರಗಳನ್ನು ಪ್ರಯತ್ನ ಪೂರ್ವಕವಾಗಿ ಪಾಲಿಸುತ್ತ ರಘುನಂದನನು ತೋರಿಸಿದ ದಾರಿಯಲ್ಲಿ ನಡೆಯುತ್ತಿದ್ದಾನೆ. ಆದರ್ಶಪಿತ

ಆದರ್ಶಸ್ವಾಮಿ, ಆದರ್ಶ ಪುತ್ರನಾಗಿ ಜೀವನಯಾಪನ ಮಾಡುತ್ತಿದ್ದಾನೆ. ಆದರೆ ಇನ್ನೊಂದು ಕ್ಷಣದಲ್ಲಿ ಅವನು ಭಯಭೀತನಾಗಿ ನೋಡಿದ್ದೇನೆಂದರೆ ಯಾವ ಜನರು ಈ ಭದ್ರವಾದ ಕೇರಿಯಲ್ಲಿ ವಾಸವಾಗಿರುವರೋ ಅವರೊಳಗೆ ಲೇಶ ಮಾತ್ರವೂ ಸದ್ಭಾವವಾಗಲಿ ಆನಂದವಾಗಲಿ ಇಲ್ಲ. ಆ ಜನರು ಯಂತ್ರದಂತೆ ಬಾಹ್ಯಾಚಾರವನ್ನು ಪಾಲಿಸುವದೇ ಪುಣ್ಯವೆಂದು ತಿಳಿದಿದ್ದಾರೆ. ಆ ಜೀವನದಿಂದ ಹರಿಮೋಹನನಿಗೆ ಮೊದಲಿಗೆ ಅದೆಷ್ಟು ಆನಂದವಾಗಿತ್ತೋ, ಅದರಷ್ಟೇ ಸಂಕಟವು ಈಗಾಗತೊಡಗಿತು. ಅವನಿಗೆ ಭಯಂಕರವಾದ ನೀರಡಿಕೆಯಾಯಿತೆಂದು ತಿಳಿಯಿತು. ಆದರೆ ಅವನಿಗೆ ನೀರು ಸಿಗುವದಿಲ್ಲ. ಅವನು ಹುಡಿ ನುಂಗುತ್ತಿದ್ದಾನೆ. ಅಲ್ಲಿಂದ ಅವನು ಬೇರೊಂದೂರಿಗೆ ಓಡಿ ಹೋದನು. ಅಲ್ಲಿ ಒಂದು ಎತ್ತರವಾದ ಉಪ್ಪರಿಗೆಯ ಮುಂದೆ ಕಿಕ್ಕಿರಿದ ಜನಜಂಗುಳಿಯು ಹಾಗೂ ಅವನಿಂದ ಕೊಡಲಾಗುವ ಆಶೀರ್ವಾದದ ಕೋಲಾಹಲವು ಕೇಸರಿಟ್ಟಿತು. ಹರಿಮೋಹನನು ಆ ಜನ ಸಮೂಹದ ಸನಿಹಕ್ಕೆ ಹೋಗಿ ನೋಡಿದರೆ ನವಕೋಟಿ ನಾರಾಯಣನು ಮೊಗಸಾಲೆಯಲ್ಲಿ ಕುಳಿತುಕೊಂಡು ಜನರಿಗೆ ಎರಡೂ ಕೈಗಳಿಂದ ಹಣವನ್ನು ಕೊಡುತ್ತಿದ್ದಾನೆ. ಅಲ್ಲಿಂದ ಯಾರೂ ನಿರಾಶರಾಗಿ ತಿರುಗಿ ಹೋಗುವದಿಲ್ಲ. ಹರಿಮೋಹನನು ಹಾಸ್ಯಮಾಡಿ ನಕ್ಕನು. ಅವನು–"ಇದೆಂಥ ಸ್ವಪ್ನ? ನವಕೋಟಿ ನಾರಾಯಣ! ಹಾಗೂ ದಾನಿ!! ಆಶ್ಚರ್ಯ!!!" ಎಂದುಕೊಂಡನು. ಆ ತರುವಾಯ ಅವನು ನವಕೋಟಿಯ ಮನವನ್ನು ನೋಡಿದನು. ಅವನ ನೆನಪಿಗೆ ಬಂದುದೇನಂದರೆ––ನವಕೋಟಿ ನಾರಾಯಣನ ಮನದಲ್ಲಿ ಲೋಭ, ಈರ್ಷೆ, ಕಾಮ, ಸ್ವಾರ್ಥ ಮೊದಲಾದ ಸಾವಿರ ಪ್ರಕಾರದ ಅತೃಪ್ತಿಗಳೂ, ಕುಪ್ರವೃತ್ತಿಗಳೂ ಥೈಥೈಯೆಂದು ಕೂಗಾಡುತ್ತಿವೆ. ಪುಣ್ಯದ ಸಲುವಾಗಿ, ಯಶಸ್ಸಿನ ಸಲುವಾಗಿ, ಗರ್ವವಶನಾಗಿ ನವಕೋಟಿಯು ಆ ಭಾವಗಳನ್ನು ಅತೃಪ್ತ ಅವಸ್ಥೆಯಲ್ಲಿಯೇ ಅದೇತು ಗೋರಿಗೊಳಿಸಿದ್ದಾನೆ? ಆದರೆ ಆ ಭಾವಗಳು ಅವನ ಚಿತ್ತದಿಂದ ದೂರವಾಗಲೊಲ್ಲವು.ಅದೇ ಸಮಯಕ್ಕೆ ಹರಿಮೋಹನನನ್ನು ಹಿಡಿದುಕೊಂಡು ಯಾರೋ ಬೇಗ ಬೇಗನೆ ಪರಲೋಕದಲ್ಲಿ ತಿರುಗಾಡಿಸಿ ತಂದರು. ಹಿಂದುಗಳ ನರಕ, ಕ್ರಿಶ್ಚಿಯನ್ನರ ನರಕ, ಮುಸಲ್ಮಾನರ ನರಕ, ಯುನಾನಿಗಳ ನರಕ, ಹಿಂದುಗಳ ಸ್ವರ್ಗ, ಕ್ರಿಶ್ಚಿಯನ್ನರ ಸ್ವರ್ಗ, ಮುಸಲ್ಮಾನರ ಸ್ವರ್ಗ, ಯುನಾನಿಗಳ ಸ್ವರ್ಗ,– ಅವೆಷ್ಟು ನರಕಗಳನ್ನೂ ಅವೆಷ್ಟು ಸ್ವರ್ಗಗಳನ್ನೂ ಹರಿಮೋಹನನು ನೋಡಿ ಬಂದನೋ ತಿಳಿಯದು. ಆ ಬಳಿಕ ಅವನು ನೋಡಿದ್ದೇನೆಂದರೆ–ಅವನು ತನ್ನ ಮನೆಯಲ್ಲಿಯೇ ತನ್ನ ಪೂರ್ವಪರಿಚಿತ ಹರಕು ಚಾಪೆ ಮತ್ತು ತನ್ನ ಅದೇ ಕೊಳಕು ಬಟ್ಟೆಯ ಸುಪ್ಪತ್ತಿಗೆಯ ಮೇಲೆ ಕುಳಿತುಕೊಂಡಿದ್ದಾನೆ. ಹಾಗೂ ಅವನ ಮುಂದೆಯೇ ಶಾಮಸುಂದರನು ನಿಂತುಕೊಂಡಿದ್ದಾನೆ ಬಾಲಕನು ಅಂದುದೇನಂದರೆ–– ರಾತ್ರಿ ಬಹಳ ಆಯಿತು. ನಾನು ಮನೆಗೆ ಮರಳದಿದ್ದರೆ ನನ್ನ ಮನೆಯವರು ನನ್ನನ್ನು ಗದರಿಸುವರು. ಬಡಿಯುವರು. ಆದ್ದರಿಂದ ಹೆಚ್ಚು ಮಾತಾಡುವ ಅವಶ್ಯಕತೆಯಿಲ್ಲ. ಸಂಕ್ಷೇಪವಾಗಿ ಇಷ್ಟೇ ಹೇಳುವೆನು––ನೀನು ನೋಡಿದ ಸ್ವರ್ಗನರಕಗಳೆಲ್ಲ ಸ್ವಪ್ನ ಜಗತ್ತಿನ ಕಲ್ಪನೆಯಿಂದ ಹುಟ್ಟಿದವುಗಳಾಗಿವೆ. ಮನುಷ್ಯನು ಸತ್ತ ಬಳಿಕ ಸ್ವರ್ಗ ಹಾಗೂ ನರಕಕ್ಕೆ ಹೋಗುತ್ತಾನೆ. ತನ್ನ ಕಳೆದ ಜನ್ಮದ ಭಾವಗಳನ್ನು ಅಲ್ಲಿ ಭೋಗಿಸುತ್ತಾನೆ. ನೀನು ಪೂರ್ವ ಜನ್ಮದಲ್ಲಿ ಪುಣ್ಯವಂತನಾಗಿದ್ದಿ. ಆದರೆ ಆ ಜನ್ಮದಲ್ಲಿ ನಿನ್ನ ಹೃದಯದೊಳಗೆ ಪ್ರೇಮಕ್ಕೆ ಸ್ಥಾನ ದೊರೆಯಲಿಲ್ಲ. ನೀನು ಈಶ್ವರನನ್ನೂ ಪ್ರೇಮಿಸಲಿಲ್ಲ' ಮನುಷ್ಯರನ್ನೂ ಪ್ರೇಮಿಸಲಿಲ್ಲ. ಆದ್ದರಿಂದ ಪ್ರಾಣತ್ಯಾಗಮಾಡಿದ ಬಳಿಕ ಸ್ವಪ್ನ ಜಗತ್ತಿನಲ್ಲಿ, ಒಳ್ಳೆಯ ಮನುಷ್ಯರ ಆ ಕೇರಿಯಲ್ಲಿ ವಾಸಿಸಿ, ಪೂರ್ವ ಜೀವನದ ಭಾವಗಳನ್ನು ನೀನು ಭೋಗಿಸಹತ್ತಿರುವಿ. ಭೋಗಿಸಿ ಭೋಗಿಸಿ ಆ ಭಾವಗಿಂದ ನೀನು ಬೇಸರಗೊಂಡಿರುವಿ ನಿನ್ನ ಪ್ರಾಣವು ವ್ಯಾಕುಲಗೊಳ್ಳುತ್ತಿದೆ. ಹಾಗೂ ನೀನು ಅಲ್ಲಿಂದ ಹೊರವಂಟು ಹುಡಿ ತುಂಬಿದ ನರಕದಲ್ಲಿ ವಾಸ ಮಾಡತೊಡಗಿರುವೆ. ಕೊನೆಯಲ್ಲಿ ಜೀವನದ ಪುಣ್ಯ ಫಲಗಳನ್ನು ಭೋಗಿಸಿಯಾದ ಬಳಿಕ ತಿರುಗಿ ನಿನ್ನ ಜನ್ಮವಾಯಿತು. ಆ ಜೀವನದಲ್ಲಿ ಚಿಕ್ಕ ಪುಟ್ಟ ನೈಮಿತ್ತಿಕ ದಾನಗಳನ್ನು ಬಿಟ್ಟು ಕೊಟ್ಟು ನೀರಸವಾದ ಬಾಹ್ಯ ವ್ಯವಹಾರಗಳನ್ನು ದೂರಬಿಟ್ಟು, ಯಾರ ಕೊರತೆಯನ್ನಾದರೂ ದೂರ ಗೊಳಿಸುವದಕ್ಕಾಗಿ ನೀನು ಏನೂ ಮಾಡಲಿಲ್ಲ. ಅದಕ್ಕಾಗಿ ಈ ಜನ್ಮದಲ್ಲಿ

ನಿನಗೆ ಇಷ್ಟೊಂದು ಕೊರತೆಗಳಿವೆ. ಇನ್ನೂ ಸಹ ನೀನು ಅದಾವ ನೀರಸ ಪುಣ್ಯವನ್ನು ಮಾಡುತ್ತಿರುವಿಯೋ ಅದಕ್ಕೆ ಕಾರಣವೇನೆಂದರೆ— ಕೇವಲ ಸ್ವಪ್ನ ಜಗತ್ತಿನ ಭೋಗದಿಂದ ಪಾಪ ಪುಣ್ಯಗಳು ಸಂಪೂರ್ಣವಾಗಿ ಕ್ಷಯಿಸುವದಿಲ್ಲ. ಕರ್ಮ ಫಲಗಳನ್ನು ಪೃಥ್ವಿಯ ಮೇಲೆ ಭೋಗಿಸುವದರಿಂದಲೇ ಅವು ಸಂಪೂರ್ಣವಾಗಿ ಕ್ಷಯಿಸುತ್ತವೆ. ನವಕೋಟಿಯು ಕಳೆದ ಜನ್ಮದಲ್ಲಿ ದಾನಶೂರ ಕರ್ಣನಾಗಿದ್ದನು. ಸಾವಿರಾರು ವ್ಯಕ್ತಿಗಳ ಆಶೀರ್ವಾದದಿಂದ ಈ ಜನ್ಮದಲ್ಲಿ ಕೋಟ್ಯಧೀಶನಾಗಿದ್ದಾನೆ. ಅವನಿಗೆ ಯಾವ ವಸ್ತುವಿನ ಅಭಾವವೂ ಇಲ್ಲ. ಆದರೆ ಅವನ ಚಿತ್ತವು ಶುದ್ಧವಾಗಿಲ್ಲ. ಆದ್ದರಿಂದ ಅತೃಪ್ತವಾದ ಕುಪ್ರವೃತ್ತಿಗಳನ್ನು ಪಾಪ ಕರ್ಮಗಳಿಂದ ಅವನು ಈಗ ತೃಪ್ತಪಡಿಸಲು ಅಣಿಯಾಗಿದ್ದಾನೆ. ಕರ್ಮವಾದವು ತಿಳಿಯಿತೇ ? ಅದು ಬಹುಮಾನವೂ ಅಲ್ಲ, ದಂಡನೆಯೂ ಅಲ್ಲ. ಅದು ಅಮಂಗಲದಿಂದ ಮಂಗಲದ ಸೃಷ್ಟಿ. ಹಾಗೂ ಮಂಗಲದಿಂದ ಅಮಂಗಲದ ಸೃಷ್ಟಿ ಪ್ರಕೃತಿಯ ಕಟ್ಟಳೆ. ಪಾಪವು ಅಶುಭವಾದುದು. ಆದರಿಂದ ದುಃಖವು ಹುಟ್ಟಿಕೊಳ್ಳುತ್ತದೆ. ಪುಣ್ಯವು ಶುಭವಾದುದು. ಆದರಿಂದ ಸುಖವು ಹುಟ್ಟಿಕೊಳ್ಳುತ್ತದೆ. ಈ ಅವಸ್ಥೆಯು ಚಿತ್ತ ಶುದ್ಧಿಯ ಸಲುವಾಗಿ, ಅಶುಭದ ವಿನಾಶಕ್ಕಾಗಿ ಮಾಡಲಾಗಿದೆ. ನೋಡು ಹರಿ ಮೋಹನ, ಪೃಥ್ವಿಯು ನನ್ನ ವಿಚಿತ್ರ ಪೂರ್ಣವಾದ ಜಗತ್ತಿನ ಒಂದು ಸಣ್ಣಗಿನ ಅಂಶವಮಾತ್ರವಾಗಿದೆ. ಹಾಗೂ ಕರ್ಮದಿಂದ ಅಶುಭವನ್ನು ನಾಶಗೊಳಿಸುವ ಸಲುವಾಗಿ ನೀನು ಅಲ್ಲಿ ಜನ್ಮ ಗ್ರಹಣ ಮಾಡುತ್ತೀ. ಹಾಗೂ ಮತ್ತೆ ಯಾವಾಗ ಪಾಪ ಪುಣ್ಯಗಳ ಕೈಯೊಳಗಿಂದ ಉಳಿದು ಪ್ರೇಮರಾಜ್ಯದಲ್ಲಿ ಪದಾರ್ಪಣಮಾಡುವಿಯೋ ಆವಾಗ ಈ ಕಾರ್ಯದಿಂದ ಬಿಡುಗಡೆಯುಂಟಾಗುತ್ತದೆ. ಮುಂದಿನ ಜನ್ಮದಲ್ಲಿ ನೀನು ಸಹ ಬಿಡುಗಡೆ ಹೊಂದುವಿ. ನಾನು ನನ್ನ ಪ್ರಿಯ ಭಗಿನಿಯಾದ ಶಕ್ತಿ ಹಾಗೂ ಅವಳ ಒಡನಾಡಿಯಾದ ವಿದ್ಯಾ ಇವರನ್ನು ನಿನ್ನ ಹತ್ತಿರ ಕಳಿಸುವೆನು. ಆದರೆ ನೋಡು ಒಂದು ಕಟ್ಟು ಆದೆ. ಏನೆಂದರೆ- ನಿನ್ನನ್ನು ನನ್ನ ಆಟದಲ್ಲಿ ಜೊತೆಗಾರ ಮಾಡಿಕೊಳ್ಳುವೆನು. ಮುಕ್ತಿ ಬೇಡಲಾಗದು. ಒಪ್ಪಿಗೆಯೇ ? ”

ಹರಿ ಮೋಹನನು ನುಡಿದನು. —— “ ಎಲೈ ಬಾಲಕೃಷ್ಣಾ, ನೀನು ನನ್ನ ಮೇಲೆ ಮಹಾ ಉಪಕಾರ ಮಾಡಿದಿ; ನಿನ್ನನ್ನು ತೊಡೆಯ ಮೇಲೆ ತಕ್ಕೊಂಡು ಪ್ರೇಮಿಸಬೇಕೆಂಬ ಇಚ್ಛೆ ಬಹಳ ಆಗುತ್ತದೆ. ಈ ಜೀವನದಲ್ಲಿ ನನಗಿನ್ನು ಯಾವ ಉಪಾಸನೆಯೂ ಉಳಿದಿಲ್ಲವೆಂದು ತೋರುತ್ತದೆ. ”

“ ಹರಿ ಮೋಹನ, ಒಂದಿಷ್ಟು ತಿಳಿಯಿತೇ ? ” ಎಂದು ಬಾಲಕನು ನಗುತ್ತ ನುಡಿದನು

ಹರಿ ಮೋಹನನು ಮರು ನುಡಿದನು—— “ ತಿಳಿಯುವದಿಲ್ಲವೇಕೆ ? ” ಬಳಿಕ ತುಸು ಯೋಚಿಸಿ ಕೇಳಿದನು —— “ ಎಲೈ ಬಾಲಕೃಷ್ಣಾ, ನೀನು ನನ್ನನ್ನು ಮತ್ತೆ ಮೋಸಗೊಳಿಸಿದಿ. ಅಶುಭವನ್ನು ನೀನೇತಕ್ಕೆ ಸೃಷ್ಟಿಸಿದಿಯೆಂಬುದನ್ನು ವಿವರಿಸಲೇ ಇಲ್ಲ. ” ಎನ್ನುತ್ತ ಆತನು ಬಾಲಕನ ಕೈ ಹಿಡಕೊಂಡನು. ಅವನಿಂದ ತನ್ನ ಕೈ ಬಿಡಿಸಿಕೊಂಡು ಅವನನ್ನು ಗದರಿಸುತ್ತ ಬಾಲಕನು ನುಡಿದನು– “ ದೂರ ಸರಿ ಇನ್ನು ಒಂದು ಗಳಿಗೆಯಲ್ಲಿಯೆ ನನ್ನ ಸಮಸ್ತ ರಹಸ್ಯವನ್ನೆಲ್ಲ ಕೇಳಿಕೊಳ್ಳಬೇಕೆನ್ನುತ್ತೀಯಾ ? ” ಎಂದವನೇ ಬಾಲಕನು ದೀಪವನ್ನು ತಟ್ಟನೆ ಆರಿಸಿ ಬಿಟ್ಟನು ಹಾಗೂ ಹರಿಮೋಹನನಿಂದ ತುಸು ದೂರ ಓಡಿಹೋಗಿ ನಗುತ್ತ ಹೇಳಿದ್ದೇನೆಂದರೆ—— “ ನೋಡು ಹರಿ ಮೋಹನಾ, ಬಾರಕೋಲಿನಿಂದ ಬಾರಿಸುವದನ್ನಂತೂ ನೀನು ಒಮ್ಮೆಲೆ ಮರೆತು ಬಿಟ್ಟೆ. ನಾನು ನಿನ್ನ ತೊಡೆಯ ಮೇಲೆ ಏತಕ್ಕೆ ಕುಳಿತು ಕೊಳ್ಳಲಿಲ್ಲ. ಗೊತ್ತೇ ? ಯಾವುದೋ ನಿನ್ನ ಬಾಹ್ಯ ದುಃಖದಿಂದ ಕ್ರುದ್ಧನಾಗಿ ನನ್ನನ್ನು ಒಳಿತಾಗಿ ಥಳಿಸಲಾರೆಯಾ ? ನಿನ್ನ ಮೇಲೆ ನನ್ನ ವಿಶ್ವಾಸವು ಎಷ್ಟೂ ಇಲ್ಲ ”

ಹರಿಮೋಹನನು ಕತ್ತಲೆಯಲ್ಲಿ ತನ್ನ ಕೈ ಚಾಚಿದನು. ಬಾಲಕನು ಇನ್ನಿಷ್ಟು ಹೆಚ್ಚು ದೂರ ಓಡಿ ಹೋಗಿ ಹೇಳಿದನು—''ಇಲ್ಲ, ಈ ಸುಖವನ್ನು ನಾನು ನಿನ್ನ ಇನ್ನೊಂದು ಜನ್ಮದ ಸಲುವಾಗಿ ಉಳಿಸಿ ಬಿಡುವೆನು. ಒಳ್ಳೇದು. ಇನ್ನು ಬರುವೆನು''

ಇಷ್ಟು ಮಾತಾಡಿ ಆ ಕಗ್ಗತ್ತಲೆಯ ರಾತ್ರಿಯಲ್ಲಿ ಬಾಲಕನು ಅದೆಲ್ಲಿ ಅದೃಶ್ಯನಾದನೋ ತಿಳಿಯಲಿಲ್ಲ. ಹರಿಮೋಹನನು ಆತನ ನೇವುರ ದನಿಯನ್ನು ಕೇಳುತ್ತ ಕೇಳುತ್ತ ಎಚ್ಚತ್ತನು. ಎದ್ದು ಕುಳಿತು ಅವನು ಎಣಿಸತೊಡಗಿದ್ದೇನಂದರೆ—''ಇದೆಂಥ ಸ್ವಪ್ನ ಕಂಡೆನು! ನರಕನೋಡಿದೆನು, ಸ್ವರ್ಗ ನೋಡಿದೆನು. ಹಾಗೂ ಪರಮೇಶ್ವರನನ್ನು ಸಣ್ಣ ಬಾಲಕನೆಂದು ತಿಳಿದು ಗದರಿಸಿದೆನು, ಬೆದರಿಸಿದೆನು. ಬಹು ದೊಡ್ಡಪಾಪ ಮಾಡಿದೆನು. ಆದರೆ ಏನೇ ಆಗಲೊಲ್ಲದೇಕೆ, ಪ್ರಾಣದಲ್ಲಿ ಅಭೂತಪೂರ್ವವಾದ ಅದೊಂದು ಶಾಂತಿಯನ್ನು ಅನುಭವಿಸುತ್ತಿದ್ದೇನೆ."

ಬಳಿಕ ಹರಿಮೋಹನನು ಆ ಕೃಷ್ಣವರ್ಣದ ಬಾಲಕನ ಮೋಹಿನೀ ಮೂರ್ತಿಯನ್ನು ಧ್ಯಾನಿಸತೊಡಗಿದನು. ಹಾಗೂ ನಡುನಡುವೆ ''ಅದೆಷ್ಟು ಸುಂದರ! ಅದೆಷ್ಟು ಸುಂದರ!!'' ಅನ್ನ ತೊಡಗಿದನು.

ಕನ್ನಡಿಸಿದವರು
—ಸಿಂಪಿ ಲಿಂಗಣ್ಣ

---

ಪ್ರಜ್ಞೆಯುಳ್ಳವರಾಗಿರಿ. ಹಗಲಿನಂತೆ ಇರುಳಿನ ಬಗೆಗೂ ಪ್ರಜ್ಞೆಯುಳ್ಳವರಾಗಿರಿ. ಮೊದಲಿಗೆ ನೀವು ಪ್ರಜ್ಞೆಯನ್ನು ಪಡೆಯಬೇಕು. ಆ ಬಳಿಕ ನಿಯಂತ್ರಣ; ಸ್ವಪ್ನಗಳ ಸ್ಮರಣೆ ನಿಮಗಿದ್ದರೆ ಈ ಅನುಭವವು ನಿಮಗಿರಬಹುದು: ಅದಾವುದೆಂದರೆ, ಸ್ವಪ್ನ ಬೀಳುತ್ತಿರುವಾಗಲೆ ನಿಮಗೆ, ಇದು ಸ್ವಪ್ನವಿದೆಯೆಂದು ಗೊತ್ತಾಗುವುದು; ಇದು ಭೌತಿಕ ಜಗತ್ತಿಗೆ ಸಂಬಂಧಿಸಲಾರದ ಒಂದು ಅನುಭವವಿದೆಯೆಂದು ಗೊತ್ತಾಗುವುದು. ಒಮ್ಮೆ ಯಾವಾಗ ನಿಮಗೆ ಈ ಮಾತು ಗೊತ್ತಾಯಿತೋ, ಆಗ ಜಡ ಜಗತ್ತಿನಲ್ಲಿ ಹೇಗೋ ಹಾಗೆಯೇ ನೀವು ಅಲ್ಲಿ ಪ್ರತಿಕ್ರಿಯೆ ಮಾಡಬಲ್ಲಿರಿ. ಸ್ವಪ್ನ ಬೀಳುತ್ತಿರುವಾಗಲೇ ನೀವು ನಿಮ್ಮ ಪ್ರಜ್ಞಾಯುಕ್ತ (ಸಜ್ಞ) ಸಂಕಲ್ಪ ಶಕ್ತಿಯನ್ನು ಪ್ರಯೋಗಿಸಿ ನಿಮ್ಮ ಸ್ವಪ್ನಾನುಭವಗಳ ದಿಶೆಯನ್ನೇ ಬದಲಿಸಬಲ್ಲಿರಿ.

— ಶ್ರೀ ಮಾತೆಯವರು

# ಸತ್ಯ

(The Advent, ಎಪ್ರಿಲ್, ೧೯೫೩ ರ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ ಅರವಿಂದರ ಹಳೆಯ ಬರಹವೊಂದರ ಅನುವಾದ)

ಸತ್ಯವೆಂದರೇನು? ಎಂದು **ಪೈಲೇಟ** (Pilate) ನು ಸತ್ಯದ ಮಹಾಪರಾಕ್ರಮೀ ದೂತನಿಂದ ಎದುರಿಸಲ್ಪಟ್ಟಾಗ ಕೇಳಿದನು: ನಿಜವಾಗಿ ಚೇಷ್ಟೆಗಾಗಿ ಅಲ್ಲ, ಮೇಲ್ಬುದ್ಧಿಯ ಅಲ್ಪಭಾವದಿಂದ ಅಲ್ಲ, ಆದರೆ ಯಾರು ದೊಡ್ಡ ದೊಡ್ಡ ಶಬ್ದಗಳನ್ನು, ಯಾವ ಶಬ್ದಗಳ ಅರ್ಥವು ಕಳೆದು ಹೋಗಿದೆಯೋ, (ಅಂಥವುಗಳನ್ನು ತಿಳಿಯದೇ) ಉಪಯೋಗಿಸುವರೋ ಮತ್ತು ಅನುಭವದ ಒರೆಗಲ್ಲಿಗೆ ಹಚ್ಚಿದಾಗ ಅಸತ್ಕಲ್ಪಿತವೆಂದು ಸಿದ್ಧವಾಗುವ ದೊಡ್ಡ ದೊಡ್ಡ ಆದರ್ಶಗಳಲ್ಲಿ ವಿಶ್ವಾಸವನ್ನಿಡುವರೋ, ಅಂಥವರ ಸಲುವಾಗಿ ನಿರ್ಮೋಹಿತ ಜೀವಿಯಲ್ಲಿ ಹುಟ್ಟುವ ಅಸಹನತೆಯ ಭಾವದಿಂದ ಕ್ರೈಸ್ತನಿಂದ ಮುಖ ತಿರುಗಿಸುತ್ತ ಕೇಳಿದ್ದು. ಸತ್ಯವು ಯಾವುದು? ಯಾವ ಬಿಸಿಲ್ಗುದುರೆಯ ಬೆನ್ನು ಇಷ್ಟು ದಿವಸ ಹತ್ತಿರುವರೊ, ಯಾವದನ್ನು ಸ್ಥಿರವಾಗಿ ಗ್ರಹಿಸುವದು ಇಷ್ಟು ಅಸಾಧ್ಯವಾಗಿದೆಯೋ, ಯಾವ ಸತ್ಯದ ಸಲುವಾಗಿ ಒಬ್ಬ ತರುಣ, ಸುಂದರ, ಕಲಾಸಂಪನ್ನ ವಾಗ್ಮಿಯಾದ ಮತ್ತು ಜನರಿಂದ ಬಹುಮೋದಿಸಿದ ಒಬ್ಬ ಮನುಷ್ಯನು, ಅದರ ಸಲುವಾಗಿ ತನ್ನ ದೇಹವನ್ನೇ ಧಾರೆಯಾಗಿ ಅರೆದು ಕೊಡುವದಕ್ಕೆ ಒಪ್ಪಿದನು? ಪರಿಸ್ಥಿತಿ ಮತ್ತು ಘಟನೆಗಳು ಆರೋಮನ್ ಗವ್ಹರ್ನರನ ಅರ್ಥಘ್ನೆ, ಅರ್ಥವಿಷಾದ ಪ್ರಶ್ನೆಯನ್ನು ಸಮರ್ಥಿಸುವದಿಲ್ಲವೇ? ದೂತನು ಕ್ರಾಸಿನಮೇಲೆ ಕೊಲ್ಲಲ್ಪಟ್ಟನು, ಆದರೆ ಅವನು ತಂದ ಸತ್ಯದ ಸಂದೇಶದ ಗತಿ ಏನಾಯಿತು? ಅದರ ಅಧಿಕೃತ ಅನುಯಾಯಿಗಳಿಗೂ ಕೂಡ ಅದು ತಿಳಿದಿಲ್ಲವೆಂದು, ಕ್ರೈಸ್ತನಿಗೆ ಸ್ವತಃ ಹೊಳೆದಿತ್ತು. ಒಂದು ಶತಮಾನದವರೆಗೆ ಅದು ಒಂದು ದಿವ್ಯ ಬಿಸಿಲ್ಗುದುರೆಯಾಗಿತ್ತು. ಮತ್ತದರ ಸಲುವಾಗಿ ಸಹಸ್ರಾರು ಸ್ತ್ರೀ ಪುರುಷರು ಸ್ವೇಚ್ಛೆಯಿಂದ ಬಂಧನ, ಯಾತನೆ, ಮರಣವನ್ನು ಸಹಿಸಿ ಕ್ರೈಸ್ತನ ರಾಜ್ಯವು ಪೃಥ್ವಿಯ ಮೇಲೆ ನೆಲಿಸಬೇಕೆಂದು ಮತ್ತು ಸುಖಸಮಾಧಾನದಿಂದ ಎಲ್ಲ ರಾಷ್ಟ್ರಗಳು ನಲಿಯಬೇಕೆಂದು ಹುತಾತ್ಮರಾದರು. ಆದರೆ ರಾಜ್ಯವು ಬಂದದ್ದು ಕ್ರೈಸ್ತನದಲ್ಲ, ಕೊನ್ಸ್ಟಂಟಿನದು, ಹಿಲ್ಡಬ್ರ್ಯಾಂಡನದು, ಅಲೆಕ್ಸಾಂಡರ ಬೋರ್ಜಿಯಾನದು. ಮುಂದೆ ಹದಿಮೂರು ಶತಮಾನಗಳ ವರೆಗೆ ಸಂದೇಶವು-ಯಾವದಿತ್ತು? ಅದು ಅಂಧಾನುಕರಣ, ಅಸತ್ಯ, ಪೀಡೆ, ಮತ್ತು ವಂಚನೆಯ ಆಧಾರ, ಸ್ವಾರ್ಥ ಅಧಿಕಾರದ ಪುರಸ್ಕರ್ತಾ, ಮತ್ತು ಯಾವ ಸಮಾಜ ವ್ಯವಸ್ಥೆಯನ್ನು ಕ್ರೈಸ್ತನು ಸರ್ವಥಾ ಖಂಡಿಸಿದನೋ ಅಂಥ ಸಮಾಜದ ಮೂಲ ತಳಹದಿಯಾಗಿ ಪರಿಣಮಿಸಿಲ್ಲವೇ? ಯೇಸುವು ಕ್ರಾಸಿನ ಮೇಲೆ ಸತ್ತನು, ಯಾರ ಲಾಭ ಸಮಾಧಾನಕ್ಕಾಗಿ? ಅವನನ್ನು ಕೊಲ್ಲುವದಕ್ಕೆ ಒಂದುಗೂಡಿದ, ನಾಸ್ತಿಕ ಮುಖ್ಯ ಮಠಾಧಿಪತಿಯಾದ ಸಾದುಸೀ, ಸ್ವಾರ್ಥಸುಖಪ್ರಿಯ ಉತ್ಸಾಹಿಯಾದ ಇಲ್ಲವೆ ವಂಚಕ ಮತ್ತು ಪರಪೀಡಕನಾದ ಫಾರಿಸೀ, ಮತ್ತು ಕ್ರೂರ, ಆತ್ಮಸಾಧಕ, ನಿರ್ದಯನಾದ ಸೈನಿಕ ರೋಮನ, ಇವರ ಸಲುವಾಗಿಯೋ ಏನೋ ಎಂದು ಕಾಣುವದು. ಇಷ್ಟು ಶೋಚನೀಯ ಗತಿಯ ನಂತರ, ಇಂದು ಅದರ ಕೊನೆಯ ಸ್ಥಿತಿಯಲ್ಲಿ, ಕ್ರೈಸ್ತನ ಸತ್ಯವು ಜಗತ್ತಿನ ಆಧುನಿಕ ಬೌದ್ಧಿಕ ವಿಕಾಸದಲ್ಲಿ, ಅದೊಂದು ಶೈಶವಾವಸ್ಥೆಯಲ್ಲಿದ್ದ ಮಾನವನ ಬುದ್ಧಿಯನ್ನು ಒಮ್ಮೊಮ್ಮೆ ಸಹಾಯಕಾರಕವಾಗಿ, ಒಮ್ಮೊಮ್ಮೆ ಅಪಾಯಕಾರಕವಾಗಿ ಮನರಂಜಿಸಿದ ಒಂದು ಭ್ರಮೆ ಅಥವಾ ಅಂಧಶ್ರದ್ಧೆಯೆಂದು ಕೊನೆಯಾಗಿ ತ್ಯಜಿಸಲ್ಪಟ್ಟಿದೆ. ಈ ಇತಿಹಾಸವು ಆತಿ ಎದ್ದು ಕಾಣುವ ವ್ಯಕ್ತಿಗತ ಶಬ್ದ

ಗಳಲ್ಲಿ ಬರೆದಿರುವದರಿಂದ, ಜಗತ್ತಿನಲ್ಲಿ ಸ್ವೀಕರಿಸಲ್ಪಟ್ಟ ಎಲ್ಲ ಸಂದೇಶಗಳ ಪ್ರತಿರೂಪವಾಗದಿದ್ದರೂ, ಸಾಧಾರಣವಾಗಿ ಎಲ್ಲ ಸತ್ಯವೂ ಅನುಭವಿಸಿದ ಗತಿಯನ್ನು ಸ್ವಲ್ಪಮಟ್ಟಿಗಾದರೂ ಚಿತ್ರಿಸುತ್ತದೆ. ಯಾವ ವಿಚಾರವು ಅತಿ ದೀರ್ಘಕಾಲದ ಮತ್ತು ನಿರ್ದಯ ಪರೀಕ್ಷೆಯ ವರೆಗಲ್ಲಿಗೆ ಸುಯಶಸ್ವಿಯಾಗಿ ಇಳಿದು ನಿಂತಿದೆ? ಯಾವ ಆದರ್ಶವು ಕಾಲದ ಒರೆಗಲ್ಲಿಗೆ ಯಶಸ್ವಿಯಾಗಿ ಉಳಿದಿದೆ? ಮಾನವ ಜನಾಂಗವು ಐವತ್ತು ವರ್ಷಗಳ ಮೇಲೆ ಮೊದಲು ಒಪ್ಪಿಕೊಂಡ ಬಹುಶಃ ಎಲ್ಲ ವಿಚಾರ ವಿಶ್ವಾಸಗಳನ್ನು ನಿರಾಕರಿಸುವದರಲ್ಲಿಯೇ ತೊಡಗಿಲ್ಲವೇ? ಮತ್ತು ಈಗ ಆ ನಿರಾಕರಣೆಯು ಹೈತುಕವಾದ ಅಥವಾ ಭೌತಿಕವಾದದ ಹೆಸರಿನಲ್ಲಿ ಒಂದು ಕಾರ್ಯ ಸಮರ್ಥ ಉಪಯುಕ್ತ ರೂಪವನ್ನು ಯಾವಾಗ ಪಡೆಯಿತೋ, ಮಾನವ ಜನಾಂಗವು ಪುನಃ ತನ್ನ ನಿರಾಕರಣೆಯನ್ನು ನಿರಾಕರಿಸಿ ಪುನಃ ತನ್ನ ಪೂರ್ವ ಸಿದ್ಧಾಂತಗಳನ್ನು ಈ ಸಲ ಸ್ವಲ್ಪ ಸಂಶಯ ದಿಂದ--ಮುಂಡಿಸಹತ್ತಿದೆ. ಆದುದರಿಂದ ಪೈಲೇಟನ ಅವಿಶ್ವಾಸವು ಮಾನವನ ಪುನರಾವೃತ್ತಿಯ ಅನುಭವದ ದೃಷ್ಟಿಯಲ್ಲಿ ನಿಜಾಂಶವಿದ್ದಂತೇ ಕಾಣುವದು. ನಿಜವಾಗಿಯೂ ಸತ್ಯವೆಂಬ ಒಂದು ವಸ್ತು ಇದೆಯೋ? ಅಂದರೆ ಯಾವ ಕಾರ್ಯೋಪಯೋಗೀ ಸ್ಥಿರವಾದ ಭೌತಿಕ ರೂಪಗಳ ಸತ್ಯವಿದೆಯೋ, ಯಾವ ಸತ್ಯದಿಂದ ನಾವು ನಮ್ಮ ಜೀವನವನ್ನು ಸಾಗಿಸಿಕೊಂಡು ಹೋಗುವೆವೋ, ಮರಣದ, ಜನ್ಮದ, ಹಸಿವೆಯ, ಕಾಮದ, ದುಃಖದ, ಸುಖದ, ವ್ಯಾಪಾರದ, ಧನಾರ್ಜನೆಯ, ಸಂತೋಷದ, ಬಾಧೆಯ, ಮಹಾತ್ವಾಕಾಂಕ್ಷೆಯ, ಯಶಾಪಯಶದ, ಸ್ಥೂಲ ಜಾಗತಿಕ ನೈಜದ ಆಚೆ, ಸತ್ಯವೆಂಬ ಒಂದು ವಸ್ತು ಇದೆಯೋ? ನಮ್ಮಲ್ಲಿಯ ಅತ್ಯುನ್ನತವಾದ ವೇದಾಂತದ ಮತದಲ್ಲಿ ಇಲ್ಲಿರುವ ಎಲ್ಲ ವಸ್ತುಗಳು ಮಾಯೆಯೆಂದು ಸಾರಿಲ್ಲವೇ? ಮತ್ತು ಮಾಯೆಯು ಒಂದು ಭ್ರಮೆಯಾದರೆ, ವಿಚಾರ ಪ್ರಜ್ಞೆಯ ವಂಚನೆಯಾದರೆ, (ಅನಿರ್ವಚನೀಯ ಅಸ್ತಿತ್ವ ವನ್ನು ಬಿಟ್ಟು); ಜಗತ್ತಿನಲ್ಲಿ ಯಾವ ಸತ್ಯವೂ ಇರಲಿಕ್ಕೆ ಸಾಧ್ಯವಿಲ್ಲ; ಯಾವ ಅನಿರ್ವಚನೀಯ ಸತ್ಯವು ನಮ್ಮ ಅವಗಾಹನೆಗೆ ಬರುವುದಿಲ್ಲ, ಮತ್ತು ಯಾವುದನ್ನು ಬೌದ್ಧರು, ತರ್ಕಕ್ಕೆ ವಿರೋಧವೆನಿಸದ ಸಮಂಜಸ ಕಾಣಿಸುವ ತತ್ವವನ್ನನುಸರಿಸಿ, ಅದೂ ಒಂದು ನಿತ್ಯ ಶೂನ್ಯದಲ್ಲಿ ಒಂದು ಸಾಮಾನ್ಯವಾದ ಸಾಕಲ್ಯ ಸಂಸ್ಕಾರ ವೆಂದು ಮುಂಡಿಸಿ, ಅನಿರ್ವಚನೀಯ ಸತ್‌ದ ಅಸ್ತಿತ್ವವನ್ನು ಅಲ್ಲಗಳೆಯುವರು. ಆದರೂ ಮನುಷ್ಯನ ಪ್ರಕೃತಿ ಸ್ವಭಾವದ ಯೋಜನೆಯೇ ಹೀಗಿದೆ: ಸತ್ಯದ ಪ್ರಾಪ್ತಿ ಆಗಲಿ ಬಿಡಲಿ ಅವನು ಅದರ ಬೆನ್ನು ಹತ್ತೇ ತೀರಬೇಕು; ಅವನಲ್ಲಿ ಪ್ರಬಲವಾದ ಗುಪ್ತವಾದ ಯಾವದೋ ವೃತ್ತಿಯು, ಯಾವುದು ಅವನ ಜೀವನಕ್ಕೆ ಆಧಾರ ಸಾರಭೂತವಾಗಿದೆಯೋ, ಅದು ಅವನಿಗೆ ಅಸತ್ಯದಲ್ಲಿ ಸಮಾಧಾನ ಪಡೆಯುವದಕ್ಕೆ ಪ್ರತಿ ರೋಧಿಸುವದು; ಅವನು ಅದನ್ನು ಸಂದರ್ಶಿಸಿದ ಕೂಡಲೇ ಅಥವಾ ಅದು ಅಸತ್ಯವೆಂದು ನಂಬಿದ ಕೂಡಲೇ, ಅದನ್ನು ತ್ಯಜಿಸುವನು, ಮತ್ತದು ಮುರಿದು ಬೀಳಹತ್ತುವದು. ಅದನ್ನು ತ್ಯಜಿಸುವದರಲ್ಲಿಯೇ ಅವನು ದೃಢಪಟ್ಟರೆ, ಅದು ಉಳಿಯಲಾರದು. ನಿನ್ನೆ ಅದು ಇತ್ತು, ಇಂದು ಅದು ಮುಗ್ಗರಿಸುವದನ್ನು ನೋಡು ವೆವು, ನಾಳೆ ಅದನ್ನು ನೋಡ ಹೋಗುವೆವು. ಮತ್ತು ಅದು ಇನ್ನಿಲ್ಲವೆಂದು ಕಂಡುಬರುವದು. ಅದು ಪ್ರಕೃತಿ ಯಲ್ಲಿ ಪುನಃ ಲಯವಾಗಿದೆ; ಯಾವುದರಿಂದ ಅದರ ಉತ್ಪತ್ತಿಯಾಗಿತ್ತೋ ಅದರಲ್ಲಿ ಅದು ಒಂದು ಗೂಡಿತು. ಯಾಕಂದರೆ ಶ್ರದ್ಧೆಯೇ ಪ್ರಜ್ಞೆಯಲ್ಲಿಯ ಎಲ್ಲ ಅಸ್ತಿತ್ವಕ್ಕೆ ಕಾರಣವು; ಮತ್ತು ಯಾವುದರಲ್ಲಿ ಶ್ರದ್ಧೆ ಇಡುವ ದಿಲ್ಲವೋ, ಅದರ ಅಸ್ತಿತ್ವವು ಅಂತ ಹೊಂದುವದು, ಇಲ್ಲಿಯೇ ಆಗಲಿ ಅಥವಾ ಇತರ ಎಲ್ಲಿಯೇ ಆಗಲಿ, ‘‘ನ ಚೈವಾಮುತ್ರ ನೋ ಇಹ” ಈ ಜಗತ್ತಿನಲ್ಲಿ ಆಗಲಿ ಇತರ ಲೋಕದಲ್ಲಿ ಆಗಲಿ ಅದು ಇಲ್ಲ. ಈ ಅತ್ಯಗತ್ಯ ಮತ್ತು ಮಹತ್ವದ ಅವಶ್ಯಕತೆಯ ಮೇಲಿಂದ ಯುಕ್ತಿಗೆ ಯಾವ ವಿರೋಧವಿಲ್ಲದೇ ಸತ್ಯವು ನಿಜವಾಗಿಯೂ ಇದೆ ಮತ್ತು ಎಲ್ಲವೂ ಭ್ರಮೆ ಅಲ್ಲವೆಂದು ಊಹಿಸಬಹುದು. ಅಂದಮೇಲೆ ಸತ್ಯವು ಯಾವಾಗಲೂ ನಮ್ಮಿಂದ ತಪ್ಪಿಸಿಕೊಂಡು, ನಮ್ಮನ್ನು ವಿಭ್ರಮ ಮತ್ತು ತಿರಸ್ಕಾರಕ್ಕೆ ಗುರಿಮಾಡಿದರೆ, ಅದರ ಕಾರಣವು ಸತ್ಯದ ಸ್ವರೂ ಪದ ವಿಷಯವಾಗಿ ನಾವು ಸ್ಪಷ್ಟವಾದ ವಿಚಾರವನ್ನೇ ಮಾಡಿಲ್ಲವೆಂದೂ ಮತ್ತು ಅದನ್ನು ಗ್ರಹಿಸುವದಕ್ಕೆ

ಯೋಗ್ಯವಾದ ಉಪಾಯಗಳನ್ನು ಕೈಕೊಂಡಿಲ್ಲವೆಂದೂ ಆಗಿಲ್ಲವೇ? ಸ್ವಲ್ಪ ಹೊತ್ತು, ಬುದ್ಧನ ಸಂಸ್ಕಾರಗಳ ಜಗತ್ತನ್ನು ಬದಿಗಿಡೋಣ, ಶಂಕರನ ಮಾಯಾವಾದವನ್ನೂ, ಪುನಃ ಕೈಗೆ ಸಿಗುವಂತೆ ಕಟ್ಟಿ ಮನದ ಒಂದು ಮೂಲೆಯಲ್ಲಿ ಆಚೆಗಿರಿಸೋಣ, ಮತ್ತು ಪುರಾತನ ವೇದಾಂತದ ಆರಂಭದಿಂದ, "ಓಂ ತತ್ ಸತ್" ಅದೇ (ಬ್ರಹ್ಮವೇ) ಇರುವ ವಸ್ತು, ಮತ್ತು ''ಸರ್ವಂ ಖಲ್ವಿದಂ ಬ್ರಹ್ಮ" ನಿಜವಾಗಿಯೂ, ಇದೆಲ್ಲವೂ, ಯಾವುದರ ಅರಿವು ಎಚ್ಚರಿಕೆ ನಮಗಿದೆಯೋ, ಬ್ರಹ್ಮವೇ, ಅಲ್ಲಿಂದ ನಮ್ಮ ವಿವೇಚನೆಯನ್ನು ಸುರುವು ಮಾಡೋಣ. ಈ ವಿವೇಚನೆಯಿಂದ ಮರಳಿ ಬರುವಾಗ ಮತ್ತು ಮಾಯೆಯ ಸಂಸ್ಕಾರಗಳ ವಿಷಯವಾಗಿ ನಮ್ಮ ತಿಳುವಳಿಕೆಯು ಹೆಚ್ಚು ಆಳವಾಗಲು ಸಾಧ್ಯವಿದೆ, ಮತ್ತು ಸತ್ಯದ ಸ್ವರೂಪ ಸ್ವಭಾವ ಗುಣಗಳ ಶೋಧ ಭೋಧವಾಗಿ, ಪೈಲೇಟನ ಪ್ರಶ್ನೆಗೆ ಉತ್ತರವೂ ದೊರಕಿದ್ದು ಕಂಡು ಬರಬಹುದು.

ನಾನು ಮಾತನಾಡುತ್ತಿರುವದು ಮೂಲಸತ್ಯದ ವಿಷಯವಾಗಿ, ವಸ್ತುಗಳ ಸತ್ಯದ ವಿಷಯವಾಗಿ ಅಲ್ಲದೆ ಕೇವಲ ಸಾಮಾನ್ಯ ಘಟನೆಯ ನೈಜದ ವಿಷಯವಾಗಿ ಅಲ್ಲ ಅಥವಾ ಸಾಮಾನ್ಯದ ಜ್ಞಾನವು ಮೂಲ ಸತ್ಯದ ಶೋಧಕ್ಕೆ ತಳಹದಿಯಾಗಿ ಆಗಲಿ, ಸಹಾಯವಾಗಿ ಆಗಲಿ ಪರಿಣಮಿಸುತ್ತಿದ್ದರೆ ಅದರ ವಿಷಯವಾಗಿ ಯಾವದೇ ಒಂದು ವಿಧವಾದ ಸಂಪರ್ಕವು ನನಗೆ ಅಸಮಾಧಾನವನ್ನು ಉಂಟು ಮಾಡುವದು ಎಂಬ ಘಟನೆಯ ನೈಜತೆಗೆ ಅದರಷ್ಟಕ್ಕೆ ಯಾವ ಮಹತ್ವವೂ ಇಲ್ಲ, ಆದರೆ ದುಃಖದ ಸಾಮಾನ್ಯ ಕಾರಣಗಳನ್ನು ಎಷ್ಟು ಬೆಳಕಿಗೆ ತಂದು ತೋರಿಸುವದೋ ಅದರಲ್ಲಿ ಮಹತ್ವ ವಿದೆ; ದು;ಖದ ಮೂಲ ಉತ್ಪತ್ತಿ ಅದರ ಉದ್ದೇಶ ಮತ್ತು ಸ್ವಭಾವ ಗುಣ, ಇದೇ ಮೂಲ ಸತ್ಯವನ್ನು ಯಾವದೇ ಸಂಪರ್ಕದ ಉತ್ತೇಜನೋತ್ತರ ಕ್ರಿಯೆಯಲ್ಲಿ ನಾನು ಹುಡುಕುವದು. ಇಷ್ಟಾಗಿ ಈ ದುಂಖದ ತತ್ವವು ಸಂಪರ್ಕದ ಮತ್ತು ಸಂವೇದನೆಯ ಮೂಲ ಸತ್ಯದ ಒಂದು ಸಾಮಾನ್ಯ ಅಂಗವು, ಉದಾಹರಣೆಯು ಅಥವಾ ಪರಿಣಾಮವು, ಆದುದರಿಂದ ಅದು (ದುಃಖದ ತತ್ವವು) ಇದರಷ್ಟು ಮೂಲಭೂತವಾದದ್ದಲ್ಲ. ಈ ಸಂವೇದನೆಯ ಮೂಲ ಸತ್ಯವೇ, ಅದನ್ನು ನಾವು ಅಸ್ತಿತ್ವದ ಲಕ್ಷಣ, ಉತ್ಪತ್ತಿ, ಉದ್ದೇಶದ ಸತ್ಯದೊಡನೆ ಹೋಲಿಸಿ ನೋಡಿದಾಗ ಒಂದು ಅಂಗತತ್ವವೆಂದೇ ಕಂಡು ಬರುವದು, ಯಾಕಂದರೆ ಸಂವೇದನೆ ಮತ್ತು ಸಂಪರ್ಕ ಅಸ್ತಿತ್ವದ ಅಂಗಭೂತ ವಿಶಿಷ್ಟ ಪರಿಣಾಮ ಮಾತ್ರ, ಇದರಿಂದ ಎಲ್ಲದರ ಮೂಲ ಸತ್ಯವು ಯಾವುದು ಎಂಬುದು ನಮಗೆ ತಿಳಿಯುವದು, ಮತ್ತು ಅದನ್ನು ನಾವು ನಿಜವಾಗಿಯೂ ಮತ್ತು ಸರಿಯಾಗಿಯೂ ಅರಿತುಕೊಂಡರೆ, ಉಳಿದ ಎಲ್ಲವೂ ಸಕೃತ್ ಪ್ರಕಟವಾಗಿ ತಮ್ಮ ತಮ್ಮ ಸ್ಥಾನದಲ್ಲಿ ಗೋಚರಿಸುವವೆಂದು, ಸ್ವಲ್ಪ ವಿಚಾರ ಮಾಡಿ ನೋಡಿದರೆ ತಾನೇ ಹೊಳೆಯುವದು. ''ತಸ್ಮಿನ್ ವಿಜ್ಞಾತೆ ಸರ್ವಂ ವಿಜ್ಞಾತಂ'' ಅದನ್ನು ತಿಳಿದುಕೊಳ್ಳುವದರಿಂದ ಎಲ್ಲವೂ ತಿಳಿಯುವದು. ನಮ್ಮ ಪೂರ್ವಜರಿಗೆ ಈ ಎಲ್ಲ ಜ್ಞಾನದ ಮೂಲ ಸತ್ಯದ ಐಕ್ಯತೆಯು ಗೋಚರಿಸಿತ್ತು, ಹೊಳೆದಿತ್ತು, ಮತ್ತು ಅವರ ''ಸತ್"ನ್ನು ಮೊದಲು ತಿಳಿದುಕೊಳ್ಳಲು ಯತ್ನಿಸಿದರು; 'ಸತ್' ತಿಳಿದ ಕೂಡಲೆ ಅದರ ಅಂಗಭೂತವಾದ ವಿವಿಧ ತತ್ವಗಳು, ನಿಯಮಗಳು, ಲಕ್ಷಣಗಳು, ಸಾಮಾನ್ಯ ಪರಿಣಾಮಗಳು ತಮ್ಮ ಗುಪ್ತವನ್ನು, ರಹಸ್ಯವನ್ನು, ವ್ಯಕ್ತಮಾಡುವವೆಂದು ಅವರಿಗೆ ಧೃಡವಿಶ್ವಾಸವಿತ್ತು. ಆಧುನಿಕರು ಬೇರೊಂದು ವಿಚಾರವನ್ನು ಅನುಸರಿಸುವರು, ಆದರದೂ ಒಂದು ಸತ್ಯವಿದೆ. ಅವರ ವಿಚಾರವು ಈ ರೀತಿ. ಅಸ್ತಿತ್ವವು ಒಂದಾಗಿರುವದರಿಂದ ಸಾಮನ್ಯದ ಜ್ಞಾನವು ಮೂಲಸತ್ಯದ ಐಕ್ಯತೆಗೆ ಒಯ್ದು ಮುಟ್ಟಿಸಬೇಕೆಂದು, ಆದುದರಿಂದ ಅವರು ಕೆಳಗೆ ಸುರುಮಾಡಿ ಮೇಲೆ ಮೇಲೆ ಹತ್ತುವ ಯತ್ನವನ್ನು ಮಾಡುವರು. ಇದು ಸಾವಕಾಶವಾದ ಆದರೆ ಸುರಕ್ಷಿತವಾದ ಪ್ರಗತಿ ಪಥವೆಂದು ಕಲ್ಪಿಸಬಹುದು. ''ಗುಡ್ಡದ ಪೊದರಿನಲ್ಲಿಯ ಚಿಕ್ಕ ಹೂವೇ" ಎಂದು ಒಂದು ಸುಂದರ ಪುಷ್ಪವನ್ನು ನೋಡಿ ಈ ಕವಿತೆಯ ಸಾಲುಗಳಲ್ಲಿ ಟೆನಿಸನನು ಉದ್ಗಾರ ತೆಗೆಯುವನು. ಅವನ ವಿಚಾರವು ಉತ್ತಮವೇ ಆಗಿದೆ, ಆದರೆ ಕವಿತೆ ಮಾತ್ರ ಅತಿ ಕ್ಲಿಷ್ಟ ಕನಿಷ್ಟವಾದದ್ದು, "ನೀನು ಯಾರೆಂಬದನ್ನು ತಿಳಿದು

ಕೊಳ್ಳುವದು ನನಗೆ ಸಾಧ್ಯವಾದರೆ, ದೇವರು ಯಾರು, ಮನುಷ್ಯನು ಯಾರು ಎಂಬುದನ್ನು ನಾನು ಅರಿತು ಕೊಳ್ಳುವೆನು." ನಿಸ್ಸಂದೇಹವಾಗಿ, ಇಲ್ಲಿ ಒಂದು ಪ್ರಶ್ನೆ ಉದ್ಭವಿಸುವದು, ದೇವರನ್ನು ತಿಳಿದುಕೊಳ್ಳದೆ ಹೂವನ್ನು, ಅಂದರೆ ಅದರ ಕೇವಲ ನಾಮರೂಪ ಮತ್ತು ನಾಮರೂಪದ ವಿಶೇಷ ಲಕ್ಷಣಗಳನ್ನಲ್ಲ ಆದರೆ ಅವರ ಸತ್ಯವನ್ನು ಅರಿತುಕೊಳ್ಳುವದು ನಮಗೆ ನಿಜವಾಗಿಯೂ ಶಕ್ಯವಿದೆಯೋ ? ವಿಜ್ಞಾನದ ಸಹಾಯದಿಂದ ನಾವು ರೂಪನ್ನು ತಿಳಿದುಕೊಳ್ಳಬಹುದು, ವಿಮರ್ಶಿಸಬಹುದು, ನಾಮವನ್ನು ತತ್ವಜ್ಞಾನದ ಸಹಾಯದಿಂದ ಅರಿಯಬಹುದು, ಆದರೆ ಸ್ವರೂಪ? ಸ್ವರೂಪದ ಜ್ಞಾನ, ಜ್ಞಾನದ ಸಂಪೂರ್ಣತೆಗೆ ಮೂರನೆಯ ಇನ್ನೊಂದು ಉಪಕರಣ ಉಪಾಯದ ಅವಶ್ಯಕತೆ ಇದೆಯೆಂದು ಕಂಡು ಬರುವದು. ಇಂದ್ರಿಯಗಳೂ ಮತ್ತು ಬುದ್ಧಿಯು, ಸೂಕ್ಷ್ಮದರ್ಶಕ ದೂರದರ್ಶಕ ಉಪಕರಣಗಳ ಸಹಾಯವನ್ನು ತೆಗದುಕೊಂಡರೂ, ಅದನ್ನು ನಮಗೆ ತೋರಿಸಲಾರವು.''ನಸಂದೃಶೆ ತಿಷ್ಟತಿ ರೂಪಮಸ್ಯ'', ಅದರ ರೂಪವು ದೃಷ್ಟಿಯ ನಿಲುಕಿನಲ್ಲಿ ಇಲ್ಲ. ಮನಸ್ಸು ಮತ್ತು ವಾಕ್, ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗಲಿಕ್ಕೆ ಅಪ್ಪಣೆ ಇಲ್ಲ, ''ನವಾಗ್ ಗಚ್ಛತಿ ನೋಮನೋ'' ಶಂಕರನ ಉದಾತ್ತತಾತ್ವಿಕ ತರ್ಕವೂ ಕೂಡ ಆ ಕೊನೆಯ ದಿವ್ಯ ದರ್ಶನದಿಂದ ದೂರೇ ಉಳಿಯುವದು. ''ನಾಸ್ಯಾ ತರ್ಕೇನ ಮತಿರ್ ಅಪನೇಯಾ'', ಇದರ ಸಾಕ್ಷಾತ್ಕಾರವನ್ನು ಪ್ರಜ್ಞೆಯಲ್ಲಿ ತರ್ಕ ದಿಂದ ಪಡೆಯಲಿಕ್ಕೆ ಆಗುವದಿಲ್ಲ ಈ ಎಲ್ಲ ವಿವಿಧ ಅಡಚಣಿ ಅಸಡ್ಡೆ ಆಭ್ಯಂತರಗಳಿಗೆ ಒಂದು ಪ್ರಬಲವಾದ ಕಾರಣವಿದೆ. ಅದೆಂದರೆ, ''ಸತ್'', ಅಥವಾ ಆಸ್ತಿತ್ವದ ಸತ್ಯ'' ಅಥವಾ ''ಬ್ರಹ್ಮನ್", ಯಾವುದು ಅವು ಗಳಲ್ಲಿ ತುಂಬಿ ಇದ್ದುಕೊಂಡು ಅವುಗಳ ನಾಮರೂಪವನ್ನು ಎತ್ತಿ ಹಿಡಿಯುತ್ತದೋ, ಆ ಸತ್ಯವು ಅತಿ ಸೂಕ್ಷ್ಮ ವಾಗಿದ್ದು ನಾಮರೂಪಗಳ ವಿಮರ್ಶೆ ಮತ್ತು ತಿಳುವಳಿಕೆಯ ಮೇರೆಯ ಆಚೆಗೆ ಇದೆ. ''ಅಣೋರಣೀಯಾತ್ ಅತರ್ಕ್ಯಂ ಅಣು ಪ್ರಮಾಣಾತ್'' ಅದು ಜಡ ಪ್ರಾಕೃತ ಅಣುವಿನ ಸೂಕ್ಷ್ಮತೆಗಿಂತಲೂ ಅತಿ ಸೂಕ್ಷ್ಮವಾಗಿರು ವದರಿಂದ, ನಾಮರೂಪಾತ್ಮಕ ತತ್ವಗಳ ಅವಲೋಕನದಿಂದ ಅವುಗಳನ್ನೇ ಪ್ರಮಾಣವಾಗಿಟ್ಟುಕೊಂಡು, ಇದರ ಅಸ್ತಿತ್ವವನ್ನು ಅನುಮಾನಿಸಲಿಕ್ಕಾಗಲಿ, ತರ್ಕಿಸಲಿಕ್ಕಾಗಲಿ, ಕಲ್ಪಿಸಲಿಕ್ಕಾಲಿ ಆಗದು. ಈ ಸತ್ಯವನ್ನು ಬಹು ದೊಡ್ಡ ದೊಡ್ಡ ತತ್ವಜ್ಞಾನಿಗಳು ವೇದಾಂತಿಗಳೇ ಆಗಲಿ ವೇದಾಂತೇತರರೇ ಆಗಲಿ ಸಹಜ ಮರೆಯು ವರು; ಆದರೆ ಶ್ರುತಿಯು ಅದನ್ನು ಒತ್ತಿ ಪ್ರತಿಪಾದಿಸುವದು.

ಆದರೂ ಮಾನವ ವರ್ಗವು ಸಾವಿರಾರು ವರುಷಗಳಿಂದ ಶ್ರುತಿಯು ನಿಷೇಧಿಸಿದ ಉಪಾಯ ಗಳಿಂದಲೇ ಆ ಸತ್ಯವನ್ನು ಹುಡುಕುವದಕ್ಕೆ ಹಠದಿಂದ ಮತ್ತು ಆವೇಶದಿಂದ ಪ್ರಯತ್ನ ಮಾಡುತ್ತಿದೆ. ಇಂಥ ಪ್ರಮಾದವು ಮನುಷ್ಯನ (ಪ್ರಜ್ಞೆಗೆ) ಬುದ್ಧಿಗೆ ಸಹಜ ಮತ್ತು ಅನಿವಾರವಾದದ್ದು. ಯಾಕಂದರೆ ಮಾನವ ನಲ್ಲಿಯ ದಿವ್ಯತೇಜವು ಪ್ರಕಾಶ ಮತ್ತು ಆನಂದದ ಸ್ಥಿತಿಯಿಂದ ಈ ಕತ್ತಲೆಯ ಸಂಧಿ ಪ್ರಕಾಶ ಅರ್ಧ ಪ್ರಕಾಶದಲ್ಲಿ ಜಡವಸ್ತುವಿನ ಕತ್ತಲೆಯಲ್ಲಿ, ಪ್ರಾಣ ಪ್ರಜ್ಞೆಯ ಸಂಧಿಪ್ರಕಾಶದಲ್ಲಿ, ಮನಸಿನ ಅರೆಮರೆ ಅರ್ಧ ಪ್ರಕಾಶದಲ್ಲಿ, ಇಳಿದು ಬಂದಿದೆ, ಮತ್ತು ಅವನ ಪ್ರಕೃತಿಯ ಪ್ರಬಲ ಒತ್ತಾಯವು ಯಾವ ಪ್ರಕಾಶದಿಂದ ಅವನು ಬಿದ್ದು ಬಂದಿರುವನೋ ಅವರ ಕಡೆಗೇ ಅವನಲ್ಲಿ ಅತಿ ತೀವ್ರವಾದ ಅಪೇಕ್ಷೆಯನ್ನು ಹುಟ್ಟಿಸುವದು ಮತ್ತು ಅದನ್ನು ಕಾಣದೇ ತನ್ನನ್ನು ಸಾವಧಾನತೆಯಿಂದ ಪೂರ್ಣ ಶುದ್ಧನನ್ನಾಗಿ ಮಾಡಿಕೊಳುವದಕ್ಕೆ ಸಾಕಷ್ಟು "ಧೀರ" (ಶಾಂತಿ ಮತ್ತು ವಿವೇಕ)ತನವಿ ಅಲ್ಲದೇ,ಉತ್ಸಾಹದ ಭರದಲ್ಲಿ ಅವನು ನಿಯಮಿತ ಅಲ್ಪೋ ಪಯೋಗಿ ಇತರ ಉಪಕರಣಗಳನ್ನು ಗ್ರಹಿಸಿ ಅವುಗಳನ್ನು ತನ್ನ ಈ ಪರಮ ಉದ್ದೇಶವನ್ನು ಪೂರ್ಣ ಪ್ರಕಾಶದ .ಪುನರುಪಲಬ್ಧಿ ಮತ್ತು ತನ್ಮೂಲಕ ಆ ಪೂರ್ಣ ಪ್ರಕಾಶದಲ್ಲಿಯೇ ಮಾತ್ರ ಯಾವದು ವಾಸ ಮಾಡುತ್ತದೋ ಅದನ್ನು ಅಂದರೆ ಪೂರ್ಣ ಮತ್ತು ಅಕ್ಷಯ ಆನಂದವನ್ನು ಪುನಃ ಘಳಿಸುವದು ಸಾಧಿಸು ವದಕ್ಕಾಗಿ ಅವುಗಳ ಶಕ್ತಿಯನ್ನು ಮೀರಿ ಜಗ್ಗಿ ಎಳೆದಾಡುವದು ಸಹಜವೇ. ಜ್ಞಾನದ ಅಂಗಗಳ ಈ ದುರುಪ

ಯೋಗದಿಂದ ಮೂರು ನಿಷಿದ್ಧ ಮಾನವ ಕ್ರಿಯೆಗಳು ಹುಟ್ಟಿವೆ, ಮತ್ತೀ ನಿಷೇಧದ ದೋಷಕ್ಕೆ ತತ್ವಜ್ಞಾನ, ಧರ್ಮ ಮತ್ತು ವಿಜ್ಞಾನ ಇವು ಎಲ್ಲವೂ ಪ್ರತ್ಯೇಕವಾಗಿ ಗುರಿಯಾಗಿವೆ, ಮತಾಭಿಮಾನಿಗಳ ವಾದವಿವಾದಾತ್ಮಕ ತಾರ್ಕಿಕ ತತ್ವಜ್ಞಾನ,ಮಠಗಳ ಸಂಪ್ರದಾಯಾಭಿಮಾನ, ಮತ್ತು ಪ್ರಯೋಗಶಾಲೆಗಳ ವೈಜ್ಞಾನಿಕತತ್ವಜ್ಞಾನ. ತತ್ವಜ್ಞಾನ, ಧರ್ಮ ಮತ್ತು ವಿಜ್ಞಾನ, ಪ್ರತಿ ಒಂದಕ್ಕೂ ಅದರ ನಿಯತ ಭೂಮಿಕೆ ಮತ್ತು ಅಧಿಕಾರ ಇದೆ; ಮತ್ತು ಇವುಗಳೊಂದೊಂದೂ ಮನುಷ್ಯನಿಗೆ ಅವನ ಮಹತ್ವದ ಮೂಲ ಆಕಾಂಕ್ಷೆಯಾದ, ಅವನು ''ಸತ್' "ಬ್ರಹ್ಮ" ದ, ಬಗ್ಗೆ ಎಲ್ಲವನ್ನು ತಿಳಕೊಳ್ಳಲಿಕ್ಕೆ ನಡೆಸಿವ ಪ್ರಯತ್ನದಲ್ಲಿ, ಸಹಾಯವನ್ನು ಮಾಡಬಲ್ಲವು. ತತ್ವಜ್ಞಾನದ ಕಾರ್ಯವು ''ಸತ್‌ದ" ನಿತ್ಯ ವೃತ್ತಿಗಳನ್ನು ಸಯುಕ್ತಿಕವಾಗಿ ಮಂಡಿಸುವದರಲ್ಲಿದೆ, ಧರ್ಮದ ಕಾರ್ಯವು "ಸತ್‌ದ'' ವ್ಯಕ್ತಿಗತ ಸಂಬಂಧವನ್ನು ಭಾವ ಮತ್ತು ವ್ಯವಹಾರ ಕುಶಲತೆಯಿಂದ ಸಾಧಿಸುವದರಲ್ಲಿದೆ, ವಿಜ್ಞಾನದ ಕಾರ್ಯವು "ಸತ್‌ದ" ವಿಶಿಷ್ಟ ರೂಪ ಮತ್ತು ಗತಿಗಳನ್ನು ಆವಲೋಕನಾತ್ಮಕ ಮತ್ತು ವಿಮರ್ಶಾತ್ಮಕ ದೃಷ್ಟಿಯಿಂದ ಸ್ಥಾಪಿಸುವದರಲ್ಲಿದೆ. ಇವು ಒಂದೊಂದಕ್ಕೂ ಮೂರರ ಪರಸ್ಪರ ಅವಶ್ಯಕತೆ ಇದೆ, ಮತ್ತು ಅದು ಹಾಗೇ ಇರಬೇಕು, ಮತ್ತು ಯಾವು ಅವುಗಳ ಯೋಗ್ಯ ಸ್ಥಾನ, ಮಿತಿ ಮತ್ತು ಭೂಮಿಕೆಯ ಮೇರೆಯ ಜ್ಞಾನವನ್ನು ತಿಳಿದು ಕೊಂಡಿರುವರೋ ಅಂಥವರು ತಮ್ಮ ಒಕ್ಕಟ್ಟಿನ ಪ್ರಯತ್ನದಿಂದ ಮಾನವನಿಗೆ ಈಗ ಸಾಧ್ಯವಾದ ಪೂರ್ಣತೆಯನ್ನು ಪಡೆಯುವದಕ್ಕೆ ಸಹಾಯಮಾಡಬಹುದು, ಆದರೆ ಒಂದು ತರಹದ ಬೌದ್ಧಿಕ ಭೂಮಿತೃಷ್ಣೆಯಿಂದ, ಅವರು ಒಬ್ಬರಿನ್ನೊಬ್ಬರ ಭೂಮಿಕೆಯಲ್ಲಿ ಸದಾ ದಾಳಿಗಾರರಾಗಿ, ಒಬ್ಬರಿನ್ನೊಬ್ಬರ ಸ್ಥಾನಪ್ರಸ್ಥಾನವನ್ನು ಅಲ್ಲಗಳೆಯುತ್ತ, ಯಾವಲಾಭವು ಯಾರಿಗೂ ಇಲ್ಲದೆ ಕಾಲ ಕಾಲಾಂತರದಿಂದಲೂ ಪರಸ್ಪರ ಜಗಳವನ್ನು ಬೆಳಿಸಿಕೊಂಡಿರುವರು. ಮತ್ತೂ ಒಬ್ಬರಿನೊಬ್ಬರರ ಭೂಮಿಕೆಯನ್ನು ಅನಧಿಕೃತವಾಗಿ ಆಕ್ರಮಿಸಿದ ಮೇಲೆ, ಅವರು ತಮಗೆ ಮೂವರಿಗೂ ಅಶಕ್ಯವಾದ ಜ್ಞಾನವನ್ನು—ಅಂದರೆ ಜಗತ್ತಿನ ನಿಜ ಸ್ವರೂಪದ, ''ಸತ್" ದ ಗುಪ್ತ ಸತ್ಯವನ್ನು. ''ಬ್ರಹ್ಮ'' ದ ''ಉತ್ತಮಮ್ ರಹಸ್ಯಂ"ದ ಜ್ಞಾನವನ್ನು ಕಸಿದು ಕೊಳ್ಳುವ ಹಠವನ್ನು ತಾಳುವರು. ಈ ಪ್ರಮಾದವು ಈ ಪ್ರಮೋಹವು ಈ ವಿರುದ್ಧ ಸ್ವಭಾವ ಮತ್ತು ಪ್ರಕೃತಿಯನ್ನು ಅನಧಿಕೃತವಾಗಿ ಬೆರೆಸುವ ಸಂಕರವು ಕಲಿಯ ಶಾಪವು, ಮತ್ತು ಆದರಿಂದಲೇ ಎಲ್ಲ ಅಲ್ಲದಿದ್ದರೂ ಬಹಳ ಮಟ್ಟಗೆ, ಒಂದು ಜನಾಂಗವಾಗಿ ನಾವು ಅಂಧಃಕಾರದ ದುಃಖದಿಂದ ಪಾರಾಗಿ ಪ್ರಕಾಶದಲ್ಲಿ ಆನಂದದಲ್ಲಿ ಪ್ರವೇಶಮಾಡುವದಕ್ಕೆ ಅನುಭವಿಸುವ ಕಷ್ಟ ಎಡರು ತೊಡರುಗಳು ಸಂಭವಿಸುವವು. ಕಲಿ ಕಲಿಲದ ಅದು ಒಂದು ಭಾಗವು, ಬಹು ದೊಡ್ಡ ಭಾಗವು. ಕಲಿಯ ಅವ್ಯವಸ್ಥೆಯ ಘೋರ ಸ್ಥಿತಿಯು.

ಹಿಂದುಸ್ತಾನವು ಯಾವಾಗಲೂ ಪ್ರಯತ್ನಿಸಿದೆ. ಬೌದ್ಧಧರ್ಮದ ವಿಮೋಹದ ಪ್ರಚಾರದ ನಂತರ ವಿಶೇಷ ಅಷ್ಟೊಂದು ಯಶವಿಲ್ಲದೇ—ಈ ಮೂರನ್ನೂ ಅವವುಗಳ ಸ್ಥಾನದಲ್ಲಿ ಇಡುವದು, ಸಾಮಾನ್ಯ ಜನತೆಯಲ್ಲಿಯ ಅಜ್ಞಾನದ ಅಭಿವೃದ್ಧಿಯಿಂದ, ಸಾಧ್ಯವಾಗದಿದ್ದರೂ, ಅವುಗಳ ನಡುವೆ ಪರಸ್ಪರ ಸಾಮ್ಯತೆಯನ್ನು ನಡೆಸಿಕೊಂಡು ಹೋಗುವದಕ್ಕಾಗಲಿ ಇಲ್ಲವೆ ಸ್ವಲ್ಪವಾದರೂ ಸಮತೆಯನ್ನು ಪುನಃ ಸ್ಥಾಪಿಸುವದಕ್ಕಾಗಲಿ ಯತ್ನಿಸಿದೆ. ಇಂಥ ಪ್ರಯತ್ನದ ಅವಿನಾಶ ಸ್ಮಾರಕ ಮತ್ತು ಸರ್ವಾಗ ಪೂರ್ಣ ಉದಾಹರಣೆ ಎಂದರೆ ಗೀತೆ ಆಗಿದೆ. ಪ್ರಮೋಹದ ಕಾರ್ಯವನ್ನು ಅದರ ಮುಚ್ಚುಮರೆ ಇಲ್ಲದ ಶಕ್ತಿಯಲ್ಲಿ ನಾವು ನೋಡಬೇಕೆಂದರೆ ಮತ್ತು ನಾವು ರೋಗದ ಶಕ್ತಿಯನ್ನು ಅದರ ನಿವಾರಣೆಯ ಶಕ್ತಿಗಳಿಂದ ಪ್ರತ್ಯೇಕಿಸದೆ, ಅದನ್ನು ನಿರೀಕ್ಷಿಸುವದಾಗಲಿ ನಿದಾನಮಾಡುವದಾಗಲಿ ಅಥವಾ ಆಮೇಲೆ ಅದರ ಚಿಕಿತ್ಸೆಯನ್ನು ಕಂಡು ಹಿಡಿಯುವದಾಗಲಿ, ಹೀಗೆ ಮಾಡದೆ ಸಾಧ್ಯವಿಲ್ಲ—ಹಾಗೆ ಮಾಡುವದಾದರೆ ನಾವು ಯುರೋಪ ಖಂಡದ ಬೌದ್ಧಿಕ ಇತಿಹಾಸದ ಕಡೆಗೆ ಗಮನ ಕೊಡಬೇಕು. ನಿಜವಾಗಿ ನೋಡಿದರೆ, ಈ ಇತಿಹಾಸದಲ್ಲಿ ಎರಡು ಮಹತ್ವದ ಕ್ರಾಂತಿಕಾರಕ ಕಾಲಗಳು ಕಂಡುಬರುತ್ತವೆ. ಕ್ರೈಸ್ತ ಧರ್ಮಕ್ಕೆ ಮೊದಲಿನ ಗ್ರೀಕ—ರೋಮನ

ತತ್ವಜ್ಞಾನ ವಿಕಾಸದ ಕಾಲ, ಮತ್ತು ಇನ್ನೂ ಮುಗಿಯದಿದ್ದ ಆಧುನಿಕ ವೈಜ್ಞಾನಿಕ ಕಾಲ. ಮೊದಲ ನೆಯದರಲ್ಲಿ ನಾವು ಧರ್ಮದ ಅತಿಕ್ರಮಣದ ಬಗ್ಗೆ ತತ್ವಜ್ಞಾನದ (ತನ್ನ ರಕ್ಷಣೆಯ ಸೆರಗಿನಲ್ಲಿ ವಿಜ್ಞಾನ ವನ್ನಿಟ್ಟುಕೊಂಡು) ವಿರೋಧ ಆಕ್ಷೇಪಣೆ ಪ್ರತಿಕ್ಷೇಪಣೆಗಳನ್ನು ನೋಡುತ್ತೇವೆ. ಮತ್ತು, ಅದರಿಂದ (ಧರ್ಮದ ಅತಿಕ್ರಮಣದಿಂದ) ಮುಕ್ತವಾದಮೇಲೆ, ತತ್ವಜ್ಞಾನವು ಧರ್ಮಸ್ಥಾನವು ತನ್ನ ಪವಿತ್ರ ಅಧಿಕಾರವೆಂದು ಅತಿಕ್ರಮಣ ಮಾಡುವದನ್ನು ನೋಡುತ್ತೇವೆ. ಆಧುನಿಕ ಯುಗದಲ್ಲಿ ವಿಜ್ಞಾನವು ಪ್ರೌಢ ವಾಗಿ ಪ್ರಕಟವಾಗಿ, ತತ್ವಜ್ಞಾನವನ್ನು ಧರ್ಮದ ವಿರೊಧದಲ್ಲಿ ತನ್ನ ಬೆನ್ನಹಿಂದೆ ಇಟ್ಟುಕೊಂಡು, ಮೊದಲು ತನ್ನನ್ನು ಮುಕ್ತಮಾಡಿಕೊಳ್ಳುವದು, ತದನಂತರ ಧರ್ಮವನ್ನು ಅಲ್ಲಗಳೆಯುವದಾಗಲಿ ಅಥವಾ ಅದರ ಸ್ಥಾನ ವನ್ನು ಅತಿಕ್ರಮಿಸುವದಾಗಲಿ, ಮತ್ತು ಈ ಪ್ರಕ್ರಿಯೆಯ ಅಂತಿಮ ಜಯವೆಂದು, ತನ್ನ (ಈ ಪೂರ್ವ) ಉದಾತ್ತ ಸಹಕಾರಿ ಮಿತ್ರನಾದ ತತ್ವಜ್ಞಾನದ ಕಡೆಗೆ ತಿರುಗಿ ಅವನನ್ನೂ ಕೆಳಗೆ ಹೊಡೆದು ಕೆಡವಿ ಅವನ ಜಾಗೆಯನ್ನೂ ಅತಿಕ್ರಮಿಸುವದನ್ನು ನೋಡುತ್ತೇವೆ. ಯಾಕೆಂದರೆ ವಿಜ್ಞಾನವು ಧರ್ಮವನ್ನು ಅಲ್ಲಗಳೆದು ಶಿರಸ್ಕರಿಸಿದಷ್ಟೇ ತಾರ್ಕಿಕ ತತ್ವಜ್ಞಾನವನ್ನು ತುಚ್ಛೀಕರಿಸಿದೆ. ವಿಜ್ಞಾನವು ದೇವರು ಒಂದು ಅತಿ ಅಸಂಸ್ಕೃತ ಕಲ್ಪನೆ, ಸ್ವಪ್ನ ಮತ್ತು ಭಯ ಮತ್ತು ಆಶೆಗಳ ಕಟ್ಟುಕಥೆಯೆಂದು ಸಾರಿ, ಅನಂತ (ಸತ್ಯ) ದೊಡನೆ ಸಂಯೋ ಗವನ್ನು ಮಾಡುವ ನಮ್ಮ ಅಧಿಕಾರವನ್ನು ನಿರಾಕರಿಸಿದಷ್ಟೇ, ತಾರ್ಕಿಕ ತತ್ವಜ್ಞಾನವು ಅಂತಃಕರಣದಲ್ಲಿಯ ಕಲ್ಪನಾ ವಿಚಾರಶಕ್ತಿಯ ಭ್ರಮೆಯೆಂದೂ, ತರ್ಕದ ಅಸತ್ಯ ಅತಿವರ್ಧನೆಯೆಂದೂ ಸಾರಿ, ಯಾವದೇ ವಸ್ತು ವಿನ ತಾರ್ಕಿಕ ತತ್ವಜ್ಞಾನದ ಅಸ್ತಿತ್ವವನ್ನು ಅಥವಾ ಇತರ ಯಾವ ವಸ್ತುವಿನ ಅಸ್ತಿತ್ವವನ್ನು ಪ್ರಯೋಗ ನಾಲಿಕೆ, (ಟೆಸ್ಟಟೂಬ), ಛೇದನ ಶಸ್ತ್ರ, ಸೂಕ್ಷ್ಮದರ್ಶಕ ಮತ್ತು ದೂರದರ್ಶಕ ಯಂತ್ರಗಳ ಪರೀಕ್ಷೆ ಸಹಾ ಯದಿಂದ ನಿರ್ಣಯಿಸಲಿಕ್ಕಾಗಲಿ ಅನುಮಾನಿಸಲಿಕ್ಕಾಗಲಿ ಆಗುವದಿಲ್ಲವೋ ಅಂಥ ವಸ್ತುವಿನ ಅಸ್ತಿತ್ವವನ್ನು ನಿರೀಕ್ಷಿಸಿ ಒಪ್ಪುವ ನಮ್ಮ ಅಧಿಕಾರವನ್ನು ಅಷ್ಟೇ ನಿರಾಕರಿಸಿದೆ. ಆದರೂ ತಾನು ಮಾತ್ರ ಅಸ್ತಿತ್ವದ ಮೂಲಸ್ಥಿತಿಯ ಬಗ್ಗೆ, ಮತ್ತು ಅದರ ಸಾಮಾನ್ಯಪ್ರಕ್ರಿಯೆಗಳ ಪರಸ್ಪರ ಸಂಬಂಧದ ಬಗ್ಗೆ,' ಭೌತಿಕವಸ್ತು, ಪ್ರಾಣ, ಮನಸ್ಸು ಮತ್ತು ಜೀವನದ (ಆತ್ಮದ) ಬಗ್ಗೆ ತನ್ನ ಅಂಧಕಲ್ಪನೆಯ ಕುದುರೆಯನ್ನು ಓಡಿಸು ವದಕ್ಕೆ ಹಿಂದು ಮುಂದೆ ನೋಡಿಲ್ಲ. ಆದರೆ ನಮ್ಮ ಸದ್ಯದ ಉದ್ದೇಶಕ್ಕಾಗಿ ಈ ಎರಡೂ ಅತಿ ಮಹ ತ್ವದ ಅತಿಕ್ರಮಣದಿಂದ ಆದ ಫಲವೇನು ಎಂಬುದನ್ನು ನೋಡುವದೇ ಅವಶ್ಯವಾದದ್ದು. ತತ್ವ ಜ್ಞಾನದ ಸ್ಥಾನವನ್ನು ಅತಿ ಕ್ರಮಿಸಿದ ಫಲವೆಂದರೆ, ಮಾನವ ಜನಾಂಗವು ಒಂದು ಅಪ್ರಖ್ಯಾತ ಯಹೂದಿ ಧರ್ಮದ ಮತದಲ್ಲಿ ಮಿತಿಯಿಲ್ಲದ ಪ್ರಾಮಾಣಿಕತೆಯಿಂದ, ಭಾವೋದ್ರೇಕದ ವಿಮುಕ್ತ ಭಾವದಿಂದ ನಂಬಿಗೆಯನ್ನಿಟ್ಟು, ಅದನ್ನಪ್ಪಿಕೊಂಡು, ಕೆಲಕಾಲ ನಮಗೆ ಆಶ್ಚರ್ಯವೆನಿಸುವ, ಅದರ ಎಲ್ಲ ಧಾರ್ಮಿಕ ಅಪತತ್ವಗಳನ್ನೂ, ಅತಿ ಘೋರವಾದವುಗಳನ್ನೂ ಕೂಡಾ, ಒಪ್ಪಿತು. ಯಾಕೆ? ಪುನಃ ಜಡ ಮಣ್ಣಿನಿಗಿಂತಲೂ ಉಚ್ಚವಾದ ಒಂದು ತತ್ವದಲ್ಲಿ ನಂಬುವದಕ್ಕೆ, ದೇವರೊಡನೆ ವೈಯಕ್ತಿಕ ಸಂಬಂಧವನ್ನು ಬೆಳೆಸುವದಕ್ಕೆ ಅಪ್ಪಣೆ ಅವ ಕಾಶಗಳನ್ನು ಪಡೆಯುವದಕ್ಕಾಗಿ ಹಿಂದಿನ ತತ್ವ ಜ್ಞಾನದ ಜಾಗೃತ ಸ್ಫೂರ್ತಿಯು ಹೈಪೇಶಿಯಾಳೊಡನೆ ಅಲೆಕ್ಝಾಂಡ್ರಿಯಾದ ರಕ್ತ ವರ್ಣಿತ ಓಣಿಗಳಲ್ಲಿ ಜರಿದು ಹರಿದು ಹಾಕಲ್ಪಟ್ಟಿತು. ಧರ್ಮವು ಅದರ (ತತ್ವ ಜ್ಞಾನದ) ಸ್ಥಾನವನ್ನು ಅತಿಕ್ರಮಿಸಿತು. ಮತ್ತು ಅತಿ ಸುಕರವಾಗಿ ಮತ್ತು ಅತಿ ಮೂರ್ಖತನದಿಂದ ದಿವ್ಯದ ಸ್ಥೂಲ–ಪರಿವರ್ತನೆಯ ಬಗ್ಗೆ ಮತ್ತು ಸ್ಥೂಲದಲ್ಲಿ-ದಿವ್ಯದ ಅಸ್ತಿತ್ವದ ಬಗ್ಗೆ (ಇವೆರಡೂ ಕ್ರೈಸ್ತನ ರಕ್ತ ಮತ್ತು ಶರೀರ: ''ಸುಧೆಯು ನನ್ನ ರಕ್ತ, ರೊಟ್ಟಿಯು ನನ್ನ ದೇಹ'' ಎಂಬ ಕ್ರೈಸ್ತನ ನುಡಿಯನ್ನು ಅವ ಲಂಬಿಸಿ ಕಲ್ಪಿಸಿದ ವಿಪರ್ಯಾಸ) ಮತ್ತೂ ಇನ್ನೇನೋ ನಿಷ್ಫಲ ಷಂಢ ಗೂಢ ಕಲ್ಪಿತ ರಹಸ್ಯಗಳ ಬಗ್ಗೆ ವ್ಯಾಖ್ಯಾನ ಪ್ರವಚನ ನಡೆಸಹತ್ತಿತು. ತತ್ವ ಜ್ಞಾನಕ್ಕೆ ಕೊಟ್ಟಮುಟ್ಟಿಗಿದ್ದ ಸ್ವಾತಂತ್ರ್ಯವೆಂದರೆ ಅದು ತನ್ನ ಕೆಲಸವನ್ನು ಮಾಡುವದಲ್ಲ, ಆದರೆ ವಿಜ್ಞಾನದ ಕಾರ್ಯ; ಆದುದರಿಂದ ಅಧ್ಯಾಯಿಗಳು ತರ್ಕದಿಂದಲೂ

ಪೂರ್ವಗೃಹೀತ ಶಬ್ದ ಚಾಲನೆಯ ಅಸ್ತ್ರದಿಂದಲೂ ಯಾವ ಪ್ರಶ್ನೆಗಳನ್ನು ಯೋಗ್ಯ ರೀತಿಯಲ್ಲಿ ನಿರೀಕ್ಷಣೆ ಮತ್ತು ವಿಭಜನದಿಂದ ಮಾತ್ರ ನಿರ್ಣಯಿಸಲಿಕ್ಕೆ ಬರುತ್ತದೋ ಅಂಥವುಗಳ ಬಗ್ಗೆ ಅತಿ ವಿಸ್ತೃತವಾದ ನಿರ್ಣಯಗಳನ್ನು ಕೊಡಹತ್ತಿತು. ಯಾಕಂದರೆ ಧರ್ಮವು, ಮಧ್ಯಕಾಲದ ಧರ್ಮವು, ಈ ಭೂಮಿಕೆಯ ಜ್ಞಾನವನ್ನು ಅಪೇಕ್ಷಿಸಲಿಲ್ಲ; ಅದಕ್ಕೆ ವಿಜ್ಞಾನದ ಸತ್ಯದ ಆವಶ್ಯಕತೆ ಇದ್ದಿಲ್ಲ, ಅನಿಸಲಿಲ್ಲ; ಹೇಗೆ ಜಾಕೋಬಿನ್ ರಿಪಬ್ಲಿಕ್‌ಗೆ ರಸಾಯನ ಶಾಸ್ತ್ರಜ್ಞರ ಅವಶ್ಯಕತೆ ಅನಿಸಲಿಲ್ಲವೋ; ಅಷ್ಟೇ ಅಲ್ಲ, ವಿಜ್ಞಾನದ ತಲೆ ಎದ್ದದ್ದು ಎಲ್ಲಿ ಅದಕ್ಕೆ ಕಂಡುಬಂದಿತೋ ಅಲ್ಲಲ್ಲಿ ಅದನ್ನು ಕಡಿದೇ ಹಾಕಿತು. ಎಲ್ಲ ಅನ್ಯಾಯವು-ಮತ್ತು ಅದರ ಅರ್ಥವು ಮೂಲತಃ ಸತ್ಯದ "ಸತ್ಯಂ," "ಋತಂ," ದ ನಿರಾಕರಣೆಯೋ—ಮತ್ತದು ತನ್ನ ಶಿಕ್ಷೆಯನ್ನು ತಾನೇ ತಂದುಕೊಳ್ಳುತ್ತದೆ, ಅಥವಾ ಧರ್ಮದ ಶಬ್ದಗಳಲ್ಲಿ ಹೇಳುವದಾದರೆ, ದೇವರ ಶಾಪ, ದೇವರ ಕೋಪ, ಬಂಧನ ವಿಮೋಚನೆಯನ್ನು ಪಡೆದ ವಿಜ್ಞಾನವು, ತನ್ನ ನವೋದಯದಲ್ಲಿ ಪಡೆದ ಘಟೋದ್ಗಜ ಶಕ್ತಿಯಿಂದ, ಇಂದು ತನ್ನ ಹಿಂದಿನ ಪೀಡಕರಾದ, ಧರ್ಮ ಮತ್ತು ತತ್ವಜ್ಞಾನ, ಇವರ ಮೇಲಿನ ಸೇಡನ್ನು, ಅವರ ಗುಡಿಗಳನ್ನು ಮುರಿದು, ಅವರ ದೇವರನ್ನು ಮತ್ತು ದೈವೀ ಸತ್ಯದ ಪ್ರವರ್ತಕರನ್ನು ಜರಿದು, ಕೊನೆಗೆ ಅವಕ್ಕೆ ಅಸ್ತಿತ್ವವೇ ಉಳಿಯದಂತೆ ಯತ್ನಿಸಿ, ತನ್ನ ಸೇಡನ್ನು ತೀರಿಸಿಕೊಳ್ಳುತ್ತಿದೆ. ಅದು ಗ್ರೀಕ-ರೋಮದ ವಿಕಾಸದ ಫಲ, ಮತ್ತು ವಿಜ್ಞಾನ ವಿಕಾಸದ ಫಲವು. ಆಧುನಿಕ ವಿಕಾಸದ, ಭೌತಿಕವಾದಿಯ ಪ್ರಜ್ವಲಿತ ಯಶಸ್ಸಿನ ಮತ್ತು ಅಂಥ ಬುದ್ಧಿಯ ಫಲವು ಏನಾಗಬಹುದು? ಅದರ ಕೊನೆಯ ಪೂರ್ಣ ಇತಿಯನ್ನು ನೋಡುವದು ಇಷ್ಟು ಬೇಗ ಸಾಧ್ಯವಲ್ಲದಿದ್ದರೂ, ರೂಪುಗೊಳ್ಳದ ರೇಷೆಗಳು ಅಲ್ಲಲ್ಲಿ ಏಳುತ್ತವೆ, ಮುಸುಕು ಮುಸುಕಾದ ಪರ್ವತಗಳು ಕಾಣುತ್ತಿವೆ. ಗುಪ್ತ ತತ್ವ ಜ್ಞಾನವು ರಹಸ್ಯವಾಗಿ ಬೆಳೆಯುತ್ತ, ಮಧ್ಯಯುಗದಲ್ಲಿ ವಿಜ್ಞಾನವು ಹೇಗೆ ಬಲವನ್ನು ಪಡೆಯಿತೋ ಹಾಗೆಯೇ ಶಕ್ತಿಯನ್ನು ಹೊಂದುತ್ತಲಿದೆ. ಪ್ರಬಲ ಅತಿಬಲ ಮತ್ತು ಗುಪ್ತರೂಪಗಳು ಪೂರ್ವದಿಂದ ಎದ್ದೇಳುತ್ತಲಿವೆ, ಮತ್ತು ತಮ ತಮಗಾಗಿ ಕೋಟೆ ಕೊತ್ತಲೆಗಳನ್ನು ಮತ-ಮತಾಂತರಗಳನ್ನು ಕಟ್ಟಿಕೊಳ್ಳುತ್ತಲಿವೆ, ಮಧ್ಯಮ ಬುದ್ಧಿಯವರಲ್ಲಿ ಪ್ರಸರಿಸುತ್ತ ಉತ್ತಮ ಬುದ್ಧಿಯವರನ್ನೂ ಕೂಡ ಬಲೆಹಾಕಿವೆ,— ಅಸ್ಪಷ್ಟವಾದ ರೂಪಗಳು, ಆಧ್ಯಾತ್ಮ ಜ್ಞಾನದ, ಮಾನಸಿಕ ಸಂಜ್ಞಾನದ, ಅಂತಃಕರಣ ಪರಿಶೋಧದ ನವಹಿಂದುತ್ವದ, ನವಬೌದ್ಧರ, ನವಮಹಮ್ಮದೀಯರ, ನವ ಕ್ರೈಸ್ತರ. (ಅಸ್ಪಷ್ಟ ರೂಪಗಳು) ಕಂಡುಬರುತ್ತಲಿವೆ. ಏಸಿಸಿನ ಅರ್ಚಕರು, ಸಿದ್ಧರು ಮತ್ತು ಪರಮಾರ್ಥ ಪ್ರಕಾಶಕರು, ಸೇಂಟ ಪಾಲ ಮತ್ತು ಪೋಪನ ಮಧ್ಯಸ್ಥಿಕೆಯಿಂದ ಕಳೆದುಕೊಂಡ ಯಶವನ್ನು, ಇಂದಿನ ಯುಗದಲ್ಲಿ ಪುನರ್ಜನ್ಮ ತಾಳಿ ತಮ್ಮ ಸಂತೃಪ್ತಿಯನ್ನು ಕೇಳುತ್ತಲಿವೆ. ಈಗಾಗಲೇ ಕೆಲವು ಭೌತಿಕತೆಯ ಕಟ್ಟಡದ ಹೊರಗೋಡೆಗಳು ಬೀಳಲಾಗಿವೆ, ಹೋರಾಟವು ಹೆಚ್ಚೆಚ್ಚು ಉತ್ಕಟ ಮತ್ತು ಸ್ಥಿರವಾಗುತ್ತಲಿದೆ, ರಕ್ಷಣೆಯು ಅತರ್ಕ್ಯವಾಗುತ್ತಲಿದೆ, ಕ್ರೋಧವು ಕಡಿಮೆಯಾಗದಿದ್ದರೂ ಕಡಿಮೆಯಾದ ಅಭಿಮಾನದಿಂದ, ತಿರಸ್ಕಾರ, ಸಿಡುಕು, ಅಸಹನತೆಯಿಂದ; ದಾಳಿಗಾರರು ತಮ್ಮ ಅನುಯಾಯಿಗಳನ್ನು ಹೆಚ್ಚಿಸುತ್ತಿರುವರು, ತಮ್ಮ ಭದ್ರ ಕೋಟೆಗಳ ಸಂಖ್ಯೆಯನ್ನು ಬೆಳೆಸುತ್ತಲಿರುವರು. ಇದಕ್ಕೂ ವಿಸ್ತೃತವಾದ ಮತ್ತು ಉನ್ನತವಾದ ಸತ್ಯವು ಮಧ್ಯಬರದಿದ್ದರೆ, ಹಳೆಯ ಮೋಹಾ ವ್ಯವಸ್ಥೆಯೇ ಹೊಸದನ್ನು ಇನ್ನೊಂದು ಹೊಸ ರೂಪದಲ್ಲಿ ಆಕ್ರಮಿಸಬಹುದೋ ಏನೋ? ಒಹುಶಃ ಯಾವುದೋ ಅಂತರಂಗ ಸಂಘವು ಅಥವಾ ಉಚ್ಚವಾಹಕರ ಆಧ್ಯಾತ್ಮಿಕ ಮಂಡಲವು ಕೆಲವೇ ಶತಮಾನಗಳಲ್ಲಿ ಈ ಲೋಕದ ಮತ್ತು ಪರಲೋಕದ ವಿಷಯವಾಗಿ ಏನು ವಿಚಾರ ಮಾಡಬೇಕು, ಯಾವ ವಿಶಿಷ್ಟ ಸಂಬಂಧ ವ್ಯವಹಾರಗಳನ್ನು ದೇವತೆಗಳೊಡನೆ ನಮಗೆ ನಡೆಸುವದಕ್ಕೆ ಅಪ್ಪಣೆ ಇದೆ, ಮತ್ತು ಯಾವ ವಿಭೂತಿ ಪ್ರಭಾವಗಳನ್ನು ಮತ್ತು ಯಾವ ದೀಕ್ಷಾ ಸಿದ್ಧರನ್ನು ನಾವು ಭಜಿಸಬಹುದು, ಪೂಜಿಸಬಹುದು, ಎಂಬುದನ್ನು ಸ್ಥಾಪಿಸಬಹುದು. ಯಾರು ಊಹಿಸಬಲ್ಲರು? ಸ್ಮಿಥ್ ಫೀಲ್ಡದ ಅಗ್ನಿಯು ಕ್ಷುದ್ರ ಆಸ್ತಿಕರನ್ನು ನರಕದಿಂದ ಉದ್ಧಾರ ಮಾಡುವದಕ್ಕಾಗಿ ಇನ್ನೂ ಪುನಃ ಪ್ರಜ್ವಲಿಸಬಹುದು.

ಇವು ಕೇವಲ ಅಸಂಬದ್ಧ ಕಲ್ಪನಾ ತರಂಗಗಳಲ್ಲ. ಮಾನವನ ಇತಿಹಾಸವು, ಮತ್ತು ಮಾನವನ ಸ್ವಭಾವದ ವಿಶಿಷ್ಟ ಮತ್ತು ತರ್ಕಬಾಹ್ಯವಾದ ಶಕ್ತಿಗಳು, ಅವುಗಳ ಸಂಭವದ ವಿಷಯವಾಗಿ ನಮಗೆ ಎಚ್ಚರಿಕೆಯನ್ನು ಕೊಡಬೇಕು, ಕನಿಷ್ಟ ಅವು ಮುದ್ರಣಾಲಯ ಮತ್ತು ವಿಜ್ಞಾನದ ಸ್ಫುಟೋಕ್ತಿಗಳಿದ್ದರೂ ಪೂರ್ಣ ಅಸಂಭವವಲ್ಲವೆಂದು ಸೂಚಿಸಬೇಕು. ಇಷ್ಟೆಲ್ಲ ಶಾಲೆ ಕಾಲೇಜುಗಳು ವಿಶ್ವವಿದ್ಯಾನಿಲಯಗಳು ಇರುವಾಗ, ಇಷ್ಟೊಂದು ವಿದ್ಯೆಯ ಪ್ರಸಾರವಾಗುತ್ತಿರುವಾಗ, ಪುನಃ ಸುಜ್ಞಾನದ ಪ್ರಕಾಶವು ಮುಸುಕು ಹಿಡಿಯಲಿಕ್ಕಿಲ್ಲ ಮತ್ತು ಅತಿ ತುಚ್ಛ ಜನರನ್ನು ಬಿಟ್ಟು ಬೇರೆಯವರ ಮನರಂಜನೆಯನ್ನು ದೆವ್ವ ದೇವತೆಗಳು ಮಾಡಲಿಕ್ಕಿಲ್ಲ. ಈ ವಿಷಯಗಳು ಸಾಧ್ಯವೆಂದು ನಾವು ಸ್ವೀಕರಿಸಬೇಕು ಮತ್ತು ಅವು ಯಾಕೆ ಸಾಧ್ಯವೆಂಬುವದನ್ನು ಪರೀಕ್ಷಿಸಬೇಕು. ಈ ಪ್ರತಿಕ್ರಿಯೆಯು ಅನಿವಾರ್ಯವಾಗಿದೆ. ಯಾಕಂದರೆ ತತ್ವಜ್ಞಾನವು, ಅತಿ ಉನ್ನತ ಮತ್ತು ಪ್ರಕಾಶಮಯವಾಗಿದ್ದರೂ ಸ್ವಪುರಸ್ಕಾರ ಮತ್ತು ಸಂಕುಚಿತವಾಗುತ್ತ ಹೋಗುತ್ತಲಿದೆ, ಮತ್ತು ವಿಜ್ಞಾನವು ಬಹು ಸ್ಥಿರ ಶಾಂತ ನಿಜಾವಲೋಕನ ಮತ್ತು ಸೂಕ್ಷ್ಮವಾಗಿದ್ದರೂ, ಸೀಮಾಬದ್ಧ ಮತ್ತು ಗರ್ವಾಂಧ ದೃಷ್ಟಿಯುಕ್ತವಾಗಹತ್ತಿದೆ. ಅವೆರಡೂ ತಮ್ಮ ತಮ್ಮ ಪ್ರೌಢಿಯ ರೀತಿಯಲ್ಲಿ ಅಥವಾ ಸ್ಫುಟವಾದ ಮತ್ತು ನಿರಸವಾದ ರೀತಿಯಲ್ಲಿ, ಧರ್ಮವು ತನ್ನ ಪ್ರೌಢಿಯುಳ್ಳದ ಆದರೆ ಉತ್ಕಟವಾದ, ಸ್ಫುಟವಲ್ಲದಿದ್ದರೂ ಉತ್ಸಾಹಯುಕ್ತವಾದ ರೀತಿಯಲ್ಲಿ ಮಾಡಿತೋ, ಹಾಗೇ ಸ್ವಮತಾಭಿಮಾನ ಮತ್ತು ಪರಾಸಹಿಷ್ಣುತೆಯನ್ನು ಅನುಸರಿಸುತ್ತಿರುವವು; ಮತ್ತು ಅವು ವಾಸ ಮಾಡುತ್ತಿರುವ ಉಚ್ಚಮಾನಸ ಭೂಮಿಕೆಯಲ್ಲಿ ಜನಸಾಮಾನ್ಯವು ಇನ್ನೂ ಸಹಜ ಆರಾಮ ಸ್ಥಿತಿಯನ್ನು ಕಾಣುವದಿಲ್ಲ. ಮತ್ತು ಪ್ರಯತ್ನವಿಲ್ಲದೇ ಅಲ್ಲಿ ಇರಲಿಕ್ಕೂ ಆಗುವದಿಲ್ಲ, ಶ್ರಮವಿಲ್ಲದೇ ಅಲ್ಲಿ ಉಸಿರಾಡಿಸಲಿಕ್ಕೂ ಆಗುವದಿಲ್ಲ. ಅವೆರಡೂ ಮನುಷ್ಯನು ತನ್ನ ಹೃದಯ ಮತ್ತು ಕಲ್ಪನೆಯನ್ನು ಬುದ್ಧಿಗಾಗಿ ತ್ಯಾಗ ಮಾಡಿ, ತನ್ನ ಪೂರ್ಣ ಮಾನವ್ಯತೆಯನ್ನು ಅಲ್ಲಗಳೆದು, ಭಾವರಹಿತವಾಗಿ ನಿರಸವಾಗಿ ಅವನು ಜೀವಿಸಬೇಕೆಂದು ಅಪೇಕ್ಷಿಸುತ್ತವೆ. ಅವನು ಸ್ವತಂತ್ರ ಶ್ವಾಸೋಚ್ಛ್ವಾಸವಿಲ್ಲದೇ ಜೀವಿಸಬೇಕೆಂದು ಇಚ್ಛಿಸುವಷ್ಟು ಮೂರ್ಖತನದ್ದೇ ಇದು. ನಾವು ವಾಸಮಾಡಬೇಕೆಂದು ಕೇಳುವ ಈ ಮನೋಲೋಕವು, ಸೂರ್ಯನ ಉಷ್ಣತೆಯು ಕಡಿಮೆಯಾದರೆ ಮನುಷ್ಯನ ಜೀವನವು ಹೇಗಾಗುವದೋ, ಹಾಗೆ ಪೃಥ್ವಿಯು ಶೀತವಾಗುತ್ತ ಹೋಗುತ್ತ ಮತ್ತು ಅಲ್ಲಿಯ ಹವೆಯು ನಮ್ಮ ಸುಖ ಸಮಾಧಾನಕ್ಕೆ ಸಾಲದಷ್ಟು ವಿರಳವಾಗಿದೆ. ಅವನು ಇಂತಹ ವಾತಾವರಣದಲ್ಲಿ ಇದ್ದೇತೀರಬೇಕು, ಆದರಿಂದ ಅವನ ಮಾನಸಿಕ ಆರೋಗ್ಯ ಮತ್ತು ಉತ್ಸಾಹ ಬೆಳೆಯುತ್ತವೆ ಎಂದು ಹೇಳಿ ಉಪಯೋಗವಿಲ್ಲ. ಅವನು ಅಲ್ಲಿ ಇರಬೇಕಾದದ್ದೇ ಏನೋ, ನಾನಂತೂ ಹಾಗೆ ತಿಳಿಯುವದಿಲ್ಲ, ಆದರೆ ಅವನಿಗೆ ಅದು ಸಾಧ್ಯವಿಲ್ಲ. ಅಥವಾ ವೈಯಕ್ತಿಕವಾಗಿ ಒಬ್ಬನಲ್ಲಿರಬಹುದು - ಒಬ್ಬಂಟಿಗನಿಗೆ ಎಲ್ಲವೂ ಸಾಧ್ಯವಿದೆ - ಆದರೆ ಮಾನವ ಜನಾಂಗಕ್ಕೆ ಅದು ಶಕ್ಯವಲ್ಲ. ಈ ಬೇಡಿಕೆಯನ್ನು ಪೂರೈಸಲಿಕ್ಕಾಗದು, ಯಾಕಂದರೆ ಅದು ಪ್ರಕೃತಿ ಸ್ವಭಾವವನ್ನೇ ಅಲ್ಲಗಳೆಯುತ್ತದೆ, ಮಹಾಮಾತೆಯ ನಿಷೇಧ ಸಾಧಕವಾಗಿದೆ, ಮತ್ತವಳ ಸನಾತನ ತತ್ವಗಳನ್ನು ಒಂದು ಕಡೆತಳ್ಳಿ ಶುಷ್ಕ ತಾರ್ಕಿಕ ಸಿದ್ಧಾಂತಗಳಿಂದ ತುಂಬಬೇಕೆನ್ನುತ್ತದೆ, ಅದು ವಸ್ತುಗಳ ಸತ್ಯವನ್ನು, ಸತ್ಯವನ್ನೂ ಋತವನ್ನೂ ನಿರಾಕರಿಸುತ್ತದೆ, ಮತ್ತು ಆದರಲ್ಲಿಯೇ ಹಠ ತೊಟ್ಟರೆ ಪ್ರಾಯಶ್ಚಿತ್ತ ರೂಪ ಪ್ರತಿಕ್ರಿಯೆಯನ್ನು ತಾನೇ ತಂದು ಕೊಳ್ಳುವದು. ತತ್ವ ಜ್ಞಾನವು ಮತ್ತು ವಿಜ್ಞಾನವು ಮನುಷ್ಯನಿಗೆ ಅಪಾಯವಾಗದಂತೆ ತಮಗೂ ಅಪಾಯವಾಗದಂತೆ ಸಹಾಯ ಮಾಡುವದಾದರೆ, ಮನುಷ್ಯನು ಬಹುವಿಧ ವೃತ್ತಿಗಳ ಸಂಕಲಜೀವಿ ಮತ್ತು ಅವನ ಎಲ್ಲ ಮುಖ್ಯ ವೃತ್ತಿಗಳೂ ಅಂಗಾಂಗಗಳೂ ತಮ್ಮ ಕ್ರಿಯಾ ವ್ಯಾಪಾರಕ್ಕೆ ಸ್ಥಾನವನ್ನೂ ಮತ್ತು ತೃಪ್ತಿಯನ್ನೂ, ಅಪೇಕ್ಷಿಸುತ್ತವೆ ಎಂಬುದನ್ನು ತಿಳಿದು ಕೊಳ್ಳಬೇಕು. ಅವನ ಸ್ವಭಾವ ಮತ್ತು ದೈವವೇ ಅವನು. ''ಆಪ್ತಕಾಮ''ನಾಗಬೇಕು, ಆಶಾ ಸಂತೃಪ್ತನಾಗಬೇಕು, ವೈಯಕ್ತಿಕವಾಗಿಯೂ ಜನಾಂಗದಲ್ಲಿಯೂ,-ಅರ್ಥಾತ್ ಯಾವಾಗಲೂ ''ಸತ್ಯಂ'' ''ಋತಂ" ದ ಅನುಮತಿಯಂತೆ, ಮತ್ತದೇ ''ಸುಖಂ'' ಮತ್ತು ''ಸುಂದರಂ'' ವಿನಹ

ಅನಿಯಂತ್ರಿತವಾಗಿ ಸ್ವೈರೇಚ್ಛೆಯಿಂದಲ್ಲ. ಬೌದ್ಧಧರ್ಮವು ಬಂದು ಸಮತೆಯನ್ನು ಕೆಡಿಸಿ ಅನೇಕ ಅಪಚಾರಗಳಿಗೆ ಎಡೆಕೊಡುವ ಮೊದಲು, ಪುರಾತನ ಹಿಂದುತ್ವದ ಮಹಿಮೆಯು ಈ ಮೂಲ ಸತ್ಯವನ್ನು ತತ್ವತಃ ಮಾನ್ಯಮಾಡಿ, ದೇವರನ್ನು ಅಲ್ಲಗಳೆಯದೆ, ಪೂರ್ಣವೇ ಆಗಲಿ ಅಪೂರ್ಣವೇ ಆಗಲಿ ಯಶಸ್ಸಿನಿಂದ, ಎಲ್ಲವನ್ನೂ ಅದರದರ ಸ್ಥಾನದಲ್ಲಿ ಸ್ಥಾಪಿಸಿ ಸಹಜ ಐಕ್ಯತೆಯನ್ನು ಸಾಧಿಸುವ ಪ್ರಯತ್ನವನು ಮಾಡಿದ್ದೇ ಆಗಿದೆ.

— ರಾ. ಕೃ. ವಾಳವೇಕರ

---

ಮನದ ಗರ್ಭಾಲಯದಲ್ಲಿ ಕೊನೆಯಿರದ ಶಾಂತಿ, ನೆಲೆಗೆಡದ ನೀರವತೆಯನ್ನು ನೆಲಸಲೆತ್ನಿಸುವದು ಸಾಧನ ಮಾರ್ಗದ ಮೊದಲ ಮಾತು. ಇದಿಲ್ಲದೆ ಅನುಭೂತಿ ಸ್ಥೈರ್ಯ ಕೈಸೇರವು.

ಮೊದಮೊದಲು ಶಾಂತಿ ಸ್ಥಿರತೆಗಳು ನೆಲೆಯಾಗಿ ನಿಲ್ಲಲಾರವು. ಅವು ಬಂದು ಹೋಗುವವು. ಪ್ರಕೃತಿಯಲ್ಲಿ ಕಾಲೂರಿ ನಿಲ್ಲಬೇಕಾದರೆ ಬಹಳ ಹೊತ್ತು ಹಿಡಿಯುವದು. ಅದಕಾಗಿ ಅಧೀರತೆಗೆಡೆಗೊಡದೆ ಮಾಡುವದನ್ನು ಮನಮುಟ್ಟಿ, ಗಟ್ಟಿಮುಟ್ಟಾಗಿ ಹಿಡಿ.

ಶಾಂತಿ ಹಾಗು ಸ್ಥಿರತೆಗಳ ಆಚೆಗೆ ನೀನೇನಾದರೂ ಆಶಿಸುತ್ತಿದ್ದರೆ, ಅದಕ್ಕಾಗಿ ನಿನ್ನ ಅಂತಃಪುರುಷನ ಪೂರ್ಣ ಉದ್ಘಾಟನೆಯಾಗಲಿ. ನಿನ್ನಲ್ಲಿ ಕಾರ್ಯ ಮಾಡುತ್ತಿರುವ ಭಾಗವತ ಶಕ್ತಿಯ ಅರಿವು ನಿನಗಾಗಲಿ. ಅದಕ್ಕಾಗಿ ನೀನು ಸತ್ಯದೊಡನೆ ಅತ್ಯಂತ ತೀವ್ರತೆಯೊಡನೆ ಇನಿತೂ ಅಧೀರನಾಗದೆ ಅಭೀಪ್ಸೆಯುಳ್ಳವನಾದರೆ ಸಫಲನಾಗುವಿ.

ವಿಶ್ವದಲ್ಲಿ ಎರಡು ಮಹಾ ಶಕ್ತಿಗಳಿವೆ. ನೀರವತೆ ಮತ್ತು ಮಾತು. ನೀರವತೆ ಎಲ್ಲವನ್ನು ಅಣಿಗೊಳಿಸಿದರೆ ಮಾತು ಹುಟ್ಟಿಸುವದು. ನೀರವತೆ ಕಾರ್ಯ ಮಾಡುವದು. ಮಾತು ಕಾರ್ಯಕ್ಕಾಗಿ ಪ್ರೇರಣೆಮಾಡುವದು.

ಯೋಗಿಯ ಜ್ಞಾನ ಸಾಮಾನ್ಯ ಕಾಮನಾ ಪರಿಚಾಲಿತ ಜ್ಞಾನವಲ್ಲ. ಅದು ವೈಜ್ಞಾನಿಕವಲ್ಲ. ಅದು ಬುದ್ಧಿಯ ಮೇರೆಯನ್ನು ಮೀರಿ ತಥ್ಯದ ಬೆನ್ನಾಸರಿನಿಂದ ಸಾಗಿದೆ. ಯೋಗಿ ಈಶ್ವರನ ಕಾರ್ಯ ನಿರ್ವಹಿಸುವ ರೀತಿಯನ್ನು ಅರಿಯುತ್ತಾನೆ.

—ಶ್ರೀ ಅರವಿಂದರು

# ಸಾಧಕನು ಸದಾಕಾಲ ನೆನಪಿಡಬೇಕಾದುದು

(ನವೆಂಬರ ೧೯೩೪ ರಲ್ಲಿ ಶ್ರೀ ಅರವಿಂದರು ಆಶ್ರಮದ ಸಾಧಕರೊಬ್ಬರಿಗೆ ಬರೆದ ಒಂದು ದೀರ್ಘ ಪತ್ರದ ಒಂದು ಭಾಗದ ಅನುವಾದ. ಪತ್ರದ ಪೂರ್ಣ ಪಾಠವನ್ನು (Letters of Sri Aurobindo (Fourth Series) Pages 490-501 ಇಲ್ಲಿ ನೋಡಬಹುದು.)

## ನಿರ್ಣಾಯಕ ಆಯ್ಕೆ

ಈ ಯೋಗವನ್ನು ಅದರ ವಿಷಯವಾಗಿ ತೀವ್ರ ಹಾಗು ಪೂರ್ಣ ಶ್ರದ್ಧೆಯುಳ್ಳವರು ಮತ್ತು ಪರಮಾತ್ಮನೊಂದಿಗೆ ತಾದಾತ್ಮ್ಯಹೊಂದಿ ಅವನಲ್ಲಿಯೇ ತಮ್ಮನ್ನು ಕಾಣುವದಕ್ಕೆ ಸಿದ್ಧರಾಗಿ ತಮ್ಮ ಅಲ್ಪ ಮಾನವ ಅಹಂಕಾರವನ್ನೂ ಅದರ ಪ್ರಭಾವವನ್ನೂ ಕಿತ್ತೆಸೆಯಲಿಕ್ಕೆ ಉತ್ಸುಕರಾಗಿರುವವರು ಮಾತ್ರ ಕೊನೆ ಮುಟ್ಟುವ ವರೆಗೆ ಆಚರಿಸಬಲ್ಲರು. ಆಲಸ್ಯತನದಿಂದಾಗಲಿ ತಕ್ಕ ಗಾಂಭೀರ್ಯವಿಲ್ಲದೆಯಾಗಲೀ ಇದನ್ನು ನಡೆಸಲು ಸಾಧ್ಯವಿಲ್ಲ. ಯಾಕಂದರೆ, ಈ ಕಾರ್ಯವು ಅತ್ಯಂತ ಘನವಾದುದೂ ಗಹನವಾದುದೂ ಆಗಿದೆ. ನಿಮ್ಮ ಪ್ರಕೃತಿಯ ಶತ್ರುಶಕ್ತಿಗಳು ತಮಗೆ ದೊರೆಯಬಹುದಾದ ಅತ್ಯಲ್ಪ ಆಸ್ಪದದ ಅಥವಾ ಅತಿಸೂಕ್ಷ್ಮವಾದ ಸಮ್ಮತಿಯ ದುರುಪಯೋಗ ಮಾಡುವುದಕ್ಕೆ ಯಾವಾಗಲೂ ಹೊಂಚು ಹಾಕಿ ಕುಳಿತಿರುತ್ತವೆ; ಮತ್ತು ಈ ಯೋಗದ ಸಾಧನೆಗೆ ಅತಿ ತೀವ್ರವಾದ ಅಭೀಪ್ಸೆಯೂ ಅವಿರತವಾದ ತಪಶ್ಚರ್ಯೆಯೂ ಅವಶ್ಯವಾಗಿವೆ.

ಯಾವ ಭಾವನೆ, ಪ್ರವೃತ್ತಿಗಳನ್ನು ಮನುಷ್ಯಸ್ವಭಾವವೆಂದು ತಿಳಿದು ಸಾಮಾನ್ಯವಾಗಿ ಸಮರ್ಥಿಸಲಾಗುತ್ತಿದೆಯೋ, ಅಂಥ ಮಾನವೀಯ ಅಧಃ ಪ್ರವೃತ್ತಿ, ನೆವ, ಹಾಗೂ ಬೇಡಿಕೆಗಳನ್ನು ಬುದ್ಧಿಪೂರ್ವಕವಾಗಿ ಮನ್ನಿಸುವುದೂ, ಮಾನವೀ-ಮನೋವಿಚಾರಗಳನ್ನು ವಿವೇಕ ಶೂನ್ಯ ಹಟದಿಂದ ವಾದಿಸುವುದೂ ಇದ್ದಲ್ಲಿ ಈ ಯೋಗವು ಸಾಧಿಸಲಾರದು.

ಈ ಅಜ್ಞಾನ ಜನಿತ ಕೀಳು ಸಂಗತಿಗಳನ್ನು ದೈವೀ ಸತ್ಯದೊಡನೆಯಾಗಲಿ, ಅಷ್ಟೇ ಏಕೆ, ಸಾಧನ ಮಾರ್ಗದಲ್ಲಿ ಗ್ರಾಹ್ಯವೆನಿಸುವ ಅಪೂರ್ಣ ಸತ್ಯದೊಡನೆಯಾಗಲಿ ಸರಿಸಮವೆಂದು ನೀವು ಗಣಿಸಲುದ್ಯುಕ್ತರಾದುದೇ ಆದರೆ ಈ ಯೋಗವು ಸಾಧ್ಯವಾಗದು.

ನೀವು ನಿಮ್ಮ ಈ ಹಳೆಯ ಜೀವ ಹಾಗು ಅದರ ಮನ--ಪ್ರಾಣ--ಶರೀರಗಳ ರುಚಿ--ರೂಢಿ--ರಚನೆಗಳಿಗೆ ಬಿಡದೆ ಅಂಟಿಕೊಂಡರೂ ಅದು ಸಾಧಿಸದು; ಈ ಯೋಗಕ್ಕೆ ಪ್ರತಿಯೊಬ್ಬನೂ ತನ್ನ ಹಿಂದಿನ ವ್ಯಕ್ತಿತ್ವಗಳನ್ನೆಲ್ಲ ಬಿಟ್ಟುಕೊಟ್ಟು, ಸರ್ವ ಕಾಲದಲ್ಲಿಯೂ ಉನ್ನತೋನ್ನತ ಪ್ರಜ್ಞೆಯ ಅಂತಸ್ತಿನ ಮೇಲೆ ಅಧಿಷ್ಠಿತನಾಗಿ, ನಿರೀಕ್ಷಿಸುತ್ತಲೂ ಕಾರ್ಯ ವೆಸಗುತ್ತಲೂ ಜೀವಿಸುತ್ತಲೂ ಇರಬೇಕು. ನಿಮ್ಮ ಮಾನವ--ಮನಸ್ಸು ಮತ್ತು ಪ್ರಾಣಮಯ ಅಹಂಕಾರಗಳಿಗೆ ಸ್ವಚ್ಛಂದ 'ಸ್ವಾತಂತ್ರ್ಯ'ವನ್ನು ಕೊಡಲು ಹಟತೊಟ್ಟರೆ ಇದು ನಿಮ್ಮಿಂದ ಆಗದು. ಸಾಮಾನ್ಯ ಜೀವನವನ್ನು ಯಾವನೊಬ್ಬನು ಸಾಗಿಸುವವರೆಗೆ, ಅವನು ಇಚ್ಛಿಸಿದರೆ, ಮಾನವಜೀವಿಯ ಅಂಗೋಪಾಂಗಗಳಿಗೆಲ್ಲ ಅವವುಗಳ ರೀತಿಯಲ್ಲಿ ಪ್ರಕಟವಾಗುವದಕ್ಕೂ ತಣಿಯುವಂತೆ ವಿಹರಿಸುವದಕ್ಕೂ ತಮ್ಮ ತಮ್ಮ ಹೊಣೆಯ ಮೇಲೆ ಆಸ್ಪದ ದೊರೆಯಬಹುದು. ಆದರೆ, ಯಾವಯೋಗ ಪದ್ಧತಿಯ ಸಮಗ್ರ ಹೃದಯವೇ ದಿವ್ಯ ಶಕ್ತಿಗೆ ಸಮರ್ಪಣವಾಗಿದೆಯೋ ಮತ್ತು ಈ ಮಾನವ ಸಂಗತಿ

ಗಳ ಬದಲು ಅವುಗಳ ಸ್ಥಳಗಳಲ್ಲಿ ಮಹೋನ್ನತ ಸತ್ಯದ ನಿಯಮ-ಸಾಮರ್ಥ್ಯಗಳನ್ನು ನೆಲೆಸುವದು ಯಾವ ಯೋಗದ ಉದ್ದೇಶವಾಗಿದೆಯೋ, ಅಂಥ ಯೋಗಪಥದಲ್ಲಿ ಪ್ರವೇಶಿಸಿ ಆ ಬಳಿಕವೂ ಈ ತರಹದ ಸ್ವಾತಂತ್ರ್ಯವನ್ನ ಪೇಕ್ಷಿಸುವದೆಂದರೆ, ಅಜ್ಞಾನ ಪ್ರವೃತ್ತವಾದ ವಿಶ್ವಶಕ್ತಿಗಳಿಗೆ ಅಧೀನವಾದಂತೆಯೇ ಸರಿ; ಹಾಗೆ ಮಾಡುವದೆಂದರೆ ಕುರುಡು ವಿರೋಧಾಭಾಸಕ್ಕೊಳಗಾಗಿ ಇಬ್ಬಗೆಯ ಅಪ್ರಾಮಾಣಿಕ ಜೀವನವನ್ನು ನಡೆಯಿಸುವ ಅಧಿಕಾರವನ್ನು ಕೇಳಿದಂತಾಗುವದು.

ಈ ಯೋಗದ ಮೂಲ ತತ್ವ ಹಾಗೂ ಉದ್ದೇಶಗಳನ್ನು ವಿರೋಧಿಸುವ, ಅಲ್ಲಗಳೆಯುವ ಹಾಗು ನೀರಲ್ಲಿ ನೋಡುವ, ಅಜ್ಞಾನಶಕ್ತಿಗಳ, ಕೇಂದ್ರ, ಸಾಧನ, ಅಥವಾ ವಕ್ತಾರರಾಗಿ, ಈ ಯೋಗ ಸಾಧಕರೆಂಬವರು ಪರಿಣಮಿಸಿದಲ್ಲಿ ಈ ಯೋಗವು ಎಳ್ಳಷ್ಟೂ ಸಾಧಿಸಲಾರದು. ಒಂದುಕಡೆಗೆ, ಅತಿಮಾನಸ ತತ್ವದ ಸಿದ್ಧಿಯಿದೆ; ಎಲ್ಲವನ್ನೂ ಮೀರಿಸಿ, ಇಳಿದು ಬರುವ ಅತಿಮಾನಸದ ದೈವೀಶಕ್ತಿಯಿದೆ; ಇದುವರೆಗೆ ಪೃಥ್ವಿಯಲ್ಲಿ ಸಾಧಿತವಾದ ಗಭೀರ ಸತ್ಯಗಳನ್ನು ಮಿಕ್ಕುವ ಮಹೋನ್ನತತರ ಋತದ ದೀಪ್ತಿ-ಶಕ್ತಿಗಳಿವೆ; ಅಂತೆಯೇ,ಅದು ಕ್ಷುದ್ರಮಾನವ ಮನಸ್ಸೂ ಅದರ ತರ್ಕಬುದ್ಧಿಯೂ ಶಾಶ್ವತ ಸತ್ಯಗಳೆಂದು ಬಗೆದುದುರ ಆಚೆಯದು; ಅಂತೆಯೇ ಅದು ತನ್ನ ಮರ್ಯಾದಿತವಾದ ಉಪಕರಣಗಳಿಂದ ಆ ಶಾಶ್ವತ ಸತ್ಯಗಳ ಸ್ವರೂಪ ರೀತಿ ವಿಕಾಸಕ್ರಮಗಳನ್ನು ಗ್ರಹಿಸಲಾರದು. ಸ್ಥೂಲವಾಗಿಯಾದರೂ ತಿಳಿದುಕೊಳ್ಳಲಾರದು; ತನ್ನ ಅಪ್ರಬುದ್ಧ ಪ್ರಮಾಣಗಳಿಂದ ನಿರ್ಣಯಿಸಲಾಗದು. ಆ ತತ್ವವು ಯಾವ ವಿರೋಧವನ್ನೂ ಲೆಕ್ಕಿಸದೆ ಭೌತಿಕ ಜೀವಕೋಟಿಯಲ್ಲಿ, ದೈಹಿಕ ಪ್ರಜ್ಞೆಯಲ್ಲಿ ಇಳಿದು ಬಂದು ಪ್ರಕಟವಾಗಲು ಹವಣಿಸುತ್ತಿದೆ.

ಇನ್ನೊಂದೆಡೆಗೆ, ತನ್ನ ಜೊಳ್ಳು ದುರಹಂಕಾರ, ಅಜ್ಞಾನ, ಅಸ್ಪಷ್ಟತೆ, ಮೂಢತನ ಅಥವಾ ಯೋಗ್ಯತಾಹೀನ ಅವಿಧೇಯತೆಗಳ ಪರಿವಾರವನ್ನು ಕಟ್ಟಿಕೊಂಡು ತನ್ನ ಆಳಿಕೆಯನ್ನೇ ಮುಂದೆ ಸಾಗಿಸ ಬಯಸುವ ಕೆಳದರ್ಜೆಯ ಪ್ರಾಣಶಕ್ತಿ ಇರುವದು; ಅದು ಅತಿಮಾನಸ ಅಥವಾ ಅತಿಮಾನವ ಪ್ರಜ್ಞೆಯ ಹಾಗೂ ಸೃಷ್ಟಿಯ ಅಸ್ತಿತ್ವವನ್ನೂ ನಿಜವಾದ ಶಕ್ಯತೆಯನ್ನೂ ನಂಬಲೊಪ್ಪದು;ಅಷ್ಟೇ ಅಲ್ಲ, ಅದಕ್ಕೂ ಮುಂದೆಹೋಗಿ, ಅತಿಮಾನಸ ತತ್ವವಿದ್ದುದೇ ಆದರೆ ಅದುತನ್ನ ಕೀಳುಮಟ್ಟಕ್ಕೇ ಸರಿಹೊಂದಬೇಕೆಂಬ ಮೂಢತನದ ಅಪೇಕ್ಷೆಯನ್ನೂ ಆ ಅಧಃಪ್ರಕೃತಿ ಭಾವವು ಮುಂಚಾಚುವದು; ಹಾಗೂ ಅತಿಮಾನಸದ ಅಸ್ತಿತ್ವವನ್ನು ಸಟೆಯೆಂದು ತೋರುವ ಸಕಲವನ್ನೂ ಅತ್ಯಾಸೆಯಿಂದ ಬಾಚಿಕೊಳ್ಳುವುದೂ ಈ ಅಧಃಪ್ರಕೃತಿಭಾವವು ಪರಮಾತ್ಮನ ಸಾನ್ನಿಧ್ಯವನ್ನುಳಿದು ಅತಿಮಾನಸದ ಅವತರಣವು ಅಶಕ್ಯವೆಂದು ಅರಿತಿರುವದಾದುದರಿಂದ ಪರಮಾತ್ಮನ ಸಾನ್ನಿಧ್ಯವನ್ನೇ ನಿರಾಕರಿಸುವದು. ತನ್ನ ವಿಚಾರ, ನಿರ್ಣಯ, ಅಭಿಲಾಷ, ಸಹಜಪ್ರವೃತ್ತಿಗಳನ್ನೇ ಉಚ್ಚಸ್ವರ ದಿಂದ ಘೋಷಿಸುತ್ತಲೂ, ಅವು ಪ್ರತಿಭಟನೆಗೀಡಾದರೆ ತನ್ನ ಸುತ್ತಲೂ ಸಂಶಯ, ನಿರಾಕರಣೆ ನಿಂದಾಪರ ಟೀಕೆ,ಬಂಡುಗಾರಿಕೆ ಮತ್ತು ಅವ್ಯವಸ್ಥೆಗಳನ್ನು ಪ್ರತೀಕಾರ ರೀತಿಯಲ್ಲಿ ಎತ್ತೆತ್ತಲೂ ಹರಡುವುದು.

ಇವೇ ಎರಡು ಈಗ ಎದುರಿಗಿರುವ ಸಂಗತಿಗಳಿದ್ದು ಅವುಗಳಲ್ಲಿ ಒಂದನ್ನು ಪ್ರತಿಯೊಬ್ಬರೂ ಆಯ್ದುಕೊಳ್ಳಬೇಕಾಗುವದು.

ಯಾಕಂದರೆ ಈ ವಿರೋಧವು, ದೈವೀಸತ್ಯದ ಅವತರಣಕ್ಕೆ ಈರೀತಿ ವಿಫಲ ವಿಘ್ನವನ್ನೊಡ್ಡುವದೂ ಅಡೆತಡೆಯನ್ನುಂಟುಮಾಡುವದೂ, ಕೊನೆವರೆಗೆ ನಡೆಯದು. ಪ್ರತಿಯೊಬ್ಬನೂ ಒಂದಿಲ್ಲೊಂದು ಪಕ್ಷವನ್ನು—ಸತ್ಯದ ಪಕ್ಷವನ್ನೋ ಅಥವಾ ಅದರ ವಿರುದ್ಧ ಪಕ್ಷವನ್ನೋ—ಸೇರಲೇ ಬೇಕಾಗುವದು. ಅತಿಮಾನಸ ಸಿದ್ಧಿಯು ಕೆಳತರಗತಿಯ ಅಜ್ಞಾನದೊಡನೆ ಏಕಸಮಯಾವಚ್ಛೇದವಾಗಿ ಇರಲಾರದು; ಅದು ಇಬ್ಬಗೆಯ ಮನೋಧರ್ಮದಲ್ಲಿ ಒಂದೇಸವನೆ ಪಡೆಯುವ ತೃಪ್ತಿಯೊಡನೆ ಎಂದೆಂದಿಗೂ ಮೇಳೈಸುವುದಿಲ್ಲ.

—ವಸಂತ ಕುಲಕರ್ಣಿ

# ಮಾನವ ಐಕ್ಯದ ಆದರ್ಶ

ಶ್ರೀ ಅರವಿಂದರ "The Ideal of Human Unity" (ಮಾನವ ಐಕ್ಯದ ಆದರ್ಶ) ಎಂಬ ಲೇಖಮಾಲೆಯು ಆರ್ಯ ಮಾಸಿಕದಲ್ಲಿ ಸೆಪ್ಟಂಬರ್ ೧೯೧೫-ಜೂಲೈ ೧೯೧೮ ರ ವರೆಗೆ ಕ್ರಮಶಃ ಪ್ರಕಟವಾಯಿತು. ೧೯೫೦ ರಲ್ಲಿ ಗ್ರಂಥ ರೂಪದಲ್ಲಿ ಮುದ್ರಿತವಾಯಿತು. ಇಂದಿನ ಜಾಗತಿಕ ಪರಿಸ್ಥಿತಿಗಳ ಅತಿ ಸೂಕ್ಷ್ಮಾವಲೋಕನವನ್ನು ಒಳಗೊಂಡ ಈ ಗ್ರಂಥದ ಮಹತ್ವದ ಮುನ್ನುಡಿಯನ್ನು ಮಾತ್ರ ಇಲ್ಲಿ ಅನುವಾದಿಸಲಾಗಿದೆ.

**ಮಾನವ ಐಕ್ಯದ ಆದರ್ಶ** — ಈ ಗ್ರಂಥವನ್ನು ಬರೆದು ಮುಗಿಸುತ್ತಿರುವಾಗಲೇ ಪ್ರಜೆಗಳೂ ರಾಜ್ಯಕರ್ತರೂ ಕೂಡಿ ಒಂದು ಜಾಗತಿಕ ರಾಜ್ಯದಾಡಳಿತ ಕ್ರಮದ ಪ್ರಸ್ಥಾಪನೆಯ ಆವಶ್ಯಕತೆಯನ್ನು ಕುರಿತು ಪ್ರಯತ್ನಿಸುತ್ತಿದ್ದುದು ಕಂಡುಬಂದಿತು. ಆದರೆ ಆಗ ಅದು ವಾದ ವಿವೇಚನೆಗಳ ವಿಚಾರಗಳಿಗಷ್ಟೇ ಒಳಗಾಗಿದಿತಲ್ಲದೆ, ಸ್ಪಷ್ಟವಾದ ವ್ಯಾವಹಾರಿಕ ರೂಪವನ್ನು ಇನ್ನೂ ತಾಳಿದ್ದಿಲ್ಲ. ಒಂದಲ್ಲ ಒಂದು ದಿನ ಅದು ಪ್ರಕಟವಾಗಲೇ ಬೇಕಿತ್ತು. ಕೊನೆಗೊಮ್ಮೆ ವಿರಾಟ್‌ಸ್ವರೂಪದಿಂದ ಅದರ ಪ್ರಾರಂಭವು ಆಯಿತು. ರಾಷ್ಟ್ರಸಂಘ (League of Nations) ಎಂಬ ಹೆಸರಿನಿಂದ ಅದರ ರೂಪವು ಮುಂದೆ ಬಂದಿತು. ಅದರ ಹುಟ್ಟು ಅಷ್ಟು ಸೊಗಸಾದದ್ದಾಗಲೀ,ಆದರ ರಚನೆ ಅಷ್ಟು ಪ್ರತಿಭಾ ಸಂಪನ್ನವಾದುದಾಗಲೀ, ಅಥವಾ ಬಹುಕಾಲದ ತಾಳಿಕೆಯಾಗಲೀ ಯಶಃಪೂರ್ಣವಾದ ಬಾಳಿಕೆಯಾಗಲೀ ಉಳ್ಳ ಜೀವನಕ್ರಮವುಳ್ಳದಾಗಿಯೂ ಅದು ಇರಲಿಲ್ಲ. ಅಂಥದೊಂದು ಸಂಘಟಿತವಾದ ಪ್ರಯತ್ನವು ಕಾರ್ಯರೂಪದಲ್ಲಿ ಇಳಿದು ಕೆಲಕಾಲವಾದರೂ ಕರ್ಮನಿರತವಾಗಿದ್ದಿತೆಂದರೆ ಆದೊಂದು ಮಹತ್ವಪೂರ್ಣವಾದ ಘಟನೆಯೆಂದೇ ತಿಳಿಯಬೇಕಾಗುವುದಲ್ಲದೆ, ಜಗತ್ತಿನ ಇತಿಹಾಸದೊಳಗೆ ಒಂದು ಹೊಸ ಯುಗದ ಪ್ರಾರಂಭವೆಂದು ಮನ್ನಿಸಬೇಕಾಗುವುದು. ಈ ಪ್ರಾರಂಭವೆಂದರೆ, ಒಂದುವೇಳೆ ಅದು ಅಯಶಸ್ವಿಯಾದರೂ ಮಾನವತೆಯ ಭವಿಷ್ಯತ್ತಿನ ಸಂರಕ್ಷಣೆಯಾಗುವವರೆಗೆ ಪರಿಣಾಮ ರಹಿತವಾಗಿ ತಡೆಯಲಾಗದ ಕಾರ್ಯ ಪ್ರವರ್ತನೆಯಾಗಿರುವುದು. ಆ ಸಂರಕ್ಷಣೆಯಾದರೋ, ಅವ್ಯಾಹತವಾಗಿ ಜಗತ್ತಿನಲ್ಲಿ ನಡೆದಿರುವ ಅವ್ಯವಸ್ಥೆ ಹಾಗು ವಿನಾಶಗಳ ಬಗೆಗೆ ಅಷ್ಟೇ ಸೀಮಿತವಾಗಿರದೆ, ಮಾನವ ಸಂಸ್ಕೃತಿಯನ್ನೇ ವಿಧ್ವಂಸ ಮಾಡುವ ವೃತ್ತಿಗಳನ್ನಾಗಲೀ ಅಥವಾ ಅದಕ್ಕೂ ಮುಂದೆ ಹೋಗಿ ಮಾನವ ಜಾತಿಯ ಆತ್ಮಹತ್ಯವೆಂದು ವರ್ಣಿಸಬಹುದಾದ ಘೋರ ಪರಿಣಾಮವನ್ನೂ ತಡೆಯುವಂತಹುದಿರಬೇಕು. ಹೀಗಿದ್ದುದರಿಂದ, ರಾಷ್ಟ್ರಸಂಘವು ಕಣ್ಮರೆಯಾದರೂ ಸಂಯುಕ್ತ ರಾಷ್ಟ್ರ ಸಮಿತಿಯು (United Nations Organization) ಏರ್ಪಟ್ಟಿತು. ಜಗತ್ತಿನಲ್ಲಿ ಅದು ಇಂದು ಅತಿ ಪ್ರಬಲವಾಗಿ ನಿಂತುಕೊಂಡು ಜಗತ್ತಿನ ಭವಿಷ್ಯತ್ತಿನ ಬಗೆಗೆ ಇರುವ ಅಮೋಘವಾದ ಪ್ರಯತ್ನದಲ್ಲಿ ಸುರಕ್ಷಿತವಾದ ಶಾಶ್ವತಿಯನ್ನೂ ಯಶಸ್ಸನ್ನೂ ಸಂಪಾದಿಸಲು ಹೆಣಗಾಡುತ್ತಿರುವುದು.

ಇದೊಂದು ಮಹತ್ವದ ಘಟನೆ. ಪ್ರಕೃತಿಯು ವಿಧಿನಿಯತವಾದ ಉದ್ದೇಶವನ್ನು ಸಾಧಿಸಲು ಜಗದಗಲವೂ ಕಾರ್ಯೋನ್ಮುಖವಾದ ಪ್ರವೃತ್ತಿಗಳ ಪ್ರತಿಫಲವು ಆದು. ಮಾನವೀ ಪ್ರಯತ್ನದಲ್ಲಿಯ ಅವಿರತವಾದ ಕೊರತೆಗಳು, ಅದರ ಎಡವುತ್ತಿರುವ ಮನೋವೃತ್ತಿ, ತಡೆಗಟ್ಟುವ ಪ್ರತಿಕೂಲ ಪರಿಸ್ಥಿತಿ, ಇವೆಲ್ಲವುಗಳಿಂದ ಈ ಮಹಾಸಾಹಸವು ಕೆಲಕಾಲದವರೆಗೆ ತಡೆಯಲ್ಪಡುವುದಾದರೂ, ಈ ಘಟನೆಯಲ್ಲಿಯೇ ಮುಂದಾಗ

ತಕ್ಕುದರ ನಿಶ್ಚಿತ ರೂಪವು ಹುದುಗಿರುವುದು. ಆದರ ಮಾರ್ಗದ ಮೇಲಿನ ಎಲ್ಲದುರ್ಘಟನೆಗಳೂ ಅದನ್ನು ದೂರಿಕರಿಸುವ ಯಾವ ಸಂಘಟನೆಗಳೂ ಅದರ ಪ್ರಗತಿಯನ್ನು ಪರಾವರ್ತನೆಗೊಳಿಸಲು ಸಮರ್ಥವಾಗಲಿಲ್ಲ ಮುಂಬರುವ ದುರ್ಘಟನೆ-ಸಂಘಟಣೆಗಳಾದರೂ ಮಾನವೀ ಜನಾಂಗದ ಅಸ್ತಿತ್ವಕ್ಕೆ ಹಾಗು ಅದರ ಪ್ರಗತಿಗೆ ಅತ್ಯಾವಶ್ಯಕವಾದ ಈ ಸಾಹಸವನ್ನು ಮುರಿಯಲಾರವು. ಭಯಂಕರವಾದ ಎರಡು ಜಾಗತಿಕ ಮಹಾಯುದ್ಧಗಳು ಜಗತ್ತಿನ ರಾಜಕೀಯ ಸೀಮಾರೇಷೆಗಳನ್ನೇ ಬದಲಿಸಿ ಬಿಟ್ಟಿರುವುವಲ್ಲದೆ ಹಲವು ಜಾಗತಿಕ ಕ್ರಾಂತಿಗಳಿಗೆ ಕಾರಣೀಭೂತವಾಗಿರುವವು. ಹಾಗು ಜಗತ್ತಿನ ಭವಿಷ್ಯವನ್ನೇ ಬದಲುಮಾಡಿಬಿಟ್ಟಿರುವವು. ಇನ್ನೂ ಭಯಂಕರವಾದ ಮೂರನೆಯದೊಂದು ಮಹಾಯುದ್ಧವು ವಿಚಿತ್ರತಮಯವಾದ ವೈಜ್ಞಾನಿಕ ವಿನಾಶಿಕೆಗಳನ್ನೊಳಗೊಂಡು ಜಗತ್ತನ್ನೇ ಸಂಹಾರ ಮಾಡುವೆನೆಂದು ಬೆದರಿಸುತ್ತಿರುವುದು. ಜಗತ್ತಿನ ಸಕಲ ಸಂಪತ್ತನ್ನೂ, ಸಂಸ್ಕೃತಿಯನ್ನೂ ವಿಧ್ವಂಸಮಾಡುವ ಹವಣಿಕೆಯಲ್ಲಿ ಅದು ಇರುವುದು. ಇದರಿಂದ ಶಾಂತತೆಯಕಾಲದಲ್ಲಿಯೂ ಪ್ರಚ್ಛನ್ನ ಯುದ್ಧ (cold war) ದ ಭೀತಿಜ್ವರವನ್ನು ನಿರ್ಮಿಸಿ, ರಾಷ್ಟ್ರ-ರಾಷ್ಟ್ರಗಳಲ್ಲಿಯೂ ಸಂದೇಹ-ದ್ವೇಷಗಳ ವಾತಾವರಣವನ್ನು ಅದು ಹುಟ್ಟಿಸಿದೆ. ಆದರೆ ಆ ಎರಡೂ ಮಹಾಯುದ್ಧಗಳು ಜಾಗತಿಕ ಐಕ್ಯವನ್ನು ಪುರಸ್ಕರಿಸುವ ಸಮಿತಿಯೊಂದನ್ನು ಸ್ಥಾಪಿಸುವ ಬಗೆಗೆ ಯಾವ ವ್ಯತ್ಯಯವನ್ನೂ ಮಾಡಿರುವುದಿಲ್ಲ; ಇಷ್ಟೇ ಅಲ್ಲ, ಅವುಗಳಿಂದ ಅಂಥ ಸಮಿತಿಯ ಸ್ಥಾಪನೆ ತೀವ್ರವಾಗಿ ಆಗಲು ಸಹಾಯವೂ ಆಗಿದೆ. ರಾಷ್ಟ್ರಸಂಘವು ಮೊದಲನೆಯ ಮಹಾಯುದ್ಧದ ಪರಿಣಾಮವಾಗಿ ರೂಪುಗೊಂಡಿತು; ಸಂಯುಕ್ತ ರಾಷ್ಟ್ರ ಸಮಿತಿಯು ಎರಡನೆಯ ಮಹಾಯುದ್ಧದಿಂದುಂಟಾದ ಸಂಘರ್ಷದ ಫಲವು. ಕೆಲವರು ತಿಳಿದುಕೊಂಡಿದ್ದಂತೆ ಮೂರನೆಯ ಮಹಾಯುದ್ಧವು ಅನಿವಾರ್ಯವೇ ಆಗಿದ್ದರೆ, ಅದೊಂದು ಈ ಜಾಗತಿಕ ಸುಗಮಕಾರ್ಯದೊಳಗಿನ ಕೊನೆಯ ಮಹತ್ವದ ಫಲವಾಗಬಹುದು. ಪ್ರತ್ಯಕ್ಷವಾಗಿ ಪರಸ್ಪರ ವಿರೋಧಿಯಾದುದೆಂದು ಕಂಡುಬಂದರೂ ಭಯಂಕರವಾದ ಅಂಥ ಸಾಧನವನ್ನು ತನ್ನ ಉದ್ದೇಶದ ಸಾಫಲ್ಯಕ್ಕಾಗಿ ಪ್ರಕೃತಿಯು ಉಪಯೋಗಿಸಿಕೊಳ್ಳುವುದು. ಉದಾಹರಣೆಗಾಗಿ ಅಧ್ಯಾತ್ಮ ಶಾಸ್ತ್ರದಲ್ಲಿಯೂ ಯೋಗದಲ್ಲಿಯೂ ಇದನ್ನೇ ನಾವು ಕಾಣಬಹುದು. ಆಧ್ಯಾತ್ಮಿಕ ಪರಿಪೂರ್ಣತೆಗೆ ಅಡ್ಡಬರುವ ಎಷ್ಟೋ ಮಾನಸಿಕ ಪ್ರವೃತ್ತಿಗಳನ್ನು ಮೊದಲು ನಾವು ಉತ್ತೇಜನಗೊಳಿಸಿದ ಮೇಲೆ ನಮ್ಮ ಸಾಧನೆ ಪ್ರಗತಿ ಹೊಂದುತ್ತ ಹೋಗುವಂತೆ ಅವುಗಳನ್ನು ನಾವು ಉನ್ಮೂಲನಗೊಳಿಸುವೆವಷ್ಟೆ ? ಯಾಕೆಂದರೆ, ಮೊದಲು ಅವು ಸುಪ್ತವಾಗಿದ್ದರೂ ಅವುಗಳನ್ನು ಕಿತ್ತೊಗೆಯದಿದ್ದರೆ ಕೊನೆಯಲ್ಲಿ ಅವು ಆಧ್ಯಾತ್ಮಿಕ ಉನ್ನತಿಗೆ ಮಾರಕವಾಗುವವು. ತನ್ನ ಪವಿತ್ರವಾದ ಉದ್ದೇಶವನ್ನು ಈಡೇರಿಸುವಾಗ ತನಗೆ ಪ್ರತಿಕೂಲವಾಗುವ ಯಾವತ್ತು ಜಾಗತಿಕ ಶಕ್ತಿಗಳನ್ನು ಪ್ರಕೃತಿಯು ಹಾಗೆಯೇ ಉತ್ತೇಜನಗೊಳಿಸಿ ಅವುಗಳನ್ನು ನಿರ್ಮೂಲ ಮಾಡುವ ಕಾರ್ಯವನ್ನು ಮಾಡುತ್ತಿರುವುದು. ನಾವು ಇದನ್ನು ಜಗತ್ತಿನ ಇತಿಹಾಸದಲ್ಲಿ ಯಾವಾಗಲೂ ಕಂಡುಕೊಳ್ಳುತ್ತಿರುವೆವು. ಇಂದಿಗೂ ಅದನ್ನು ಪ್ರಕೃತಿಯು ಕೈಕೊಂಡ ಮಹಾಕಾರ್ಯದಷ್ಟೇ ಮಹತ್ತಾಗಿ ಎದುರಿಸುತ್ತಿರುವುದನ್ನು. ಕಂಡುಕೊಳ್ಳಬಹುದು. ಆದರೆ ಆ ಪ್ರತಿಕೂಲತೆಗಳು ಸೃಷ್ಟಿಕರ್ತನ ಹಾಗು ಅವನ ಸಂಚಲನ ಶಕ್ತಿಯ ಕಾರ್ಯವನ್ನು ಪ್ರತಿಬಂಧಗೊಳಿಸುವುದಕ್ಕಿಂತ ಹೆಚ್ಚಾಗಿ ತಮ್ಮನ್ನೇ ಪ್ರತಿಕೂಲತೆಗೀಡು ಮಾಡುತ್ತಿರುವುವೆಂಬುದನ್ನೂ ಮನಗಾಣಬಹುದು.

ಆದುದರಿಂದ ಇಂದಿನ ತನಕ ಸಾಧಿಸಿದ್ದುದರ ವಿಷಯವಾಗಿಯೂ ಮುಂದೆ ಸಾಧಿಸಬೇಕಾದಿದ್ದುದರವಿಷಯವಾಗಿಯೂ ನಾವು ಆಶಾಭರಿತವಾದ ದೃಷ್ಟಿಯಿಂದ ನೋಡಬಹುದು. ಈ ಆಶೆ-ಆಶೋತ್ತರಗಳು ಈಗಾಗಲೇ ಸಾಧಿಸಿದ ಕಾರ್ಯವನ್ನು ವಿಧ್ವಂಸಗೊಳಿಸಲೆಳಸುವ ವಿನಾಶಕ ವೃತ್ತಿಗಳನ್ನೂ ದೃಶ್ಯವನ್ನು ಕಂಡು ಕುರುಡಾಗುವ ಕಾರಣವಿಲ್ಲ. ಸದ್ಯದ ನಿಜಸ್ಥಿತಿಯನ್ನು ನೋಡಿದರೆ, ಸಂಯುಕ್ತ ರಾಷ್ಟ್ರ ಸಮಿತಿಯ ಕುಂದುಕೊರತೆಗಳೂ ಲೋಪ ದೋಷಗಳೂ ಆದು ಮಾಡುತ್ತಿರುವ ಅಪರಾಧಗಳೂ, ಇವೆಲ್ಲವುಗಳ ಮೇಲಿಂದ ಅದರ ಕೊನೆಯ

ಯಶಸ್ಸಿನ ಬಗೆಗೆ ಎಷ್ಟೋ ಜನರು ಸಾಶಂಕಿತರಾಗಿರುವರಲ್ಲದೆ, ಅದರ ಕಾರ್ಯದ ವಿಷಯವಾಗಿಯೂ ತುಂಬ ನಿರಾಶಾಭರಿತರಾಗಿರುವರು. ಈ ನಿರಾಶೆಯಲ್ಲಿ ಸಹಭಾಗಿಯಾಗುವುದೆಂದರೆ ಜಾಣತನದ ಸಂಗತಿಯಲ್ಲ. ಯಾಕೆಂದರೆ ಅಂಥ ಮನೋವೃತ್ತಿಯು ಕಂಡುಕೊಳ್ಳಬಹುದಾದ ಪರಿಣಾಮವು ಸಕೃದ್ದರ್ಶನದಲ್ಲಿಪ್ರತ್ಯಕ್ಷವಾಗುವುದಿಲ್ಲ. ಅದರಿಂದುಂಟಾಗುವ ದುಷ್ಪರಿಣಾಮವನ್ನು ಮಾತ್ರ ನಾವು ಮರೆಯುವಂತಿಲ್ಲ. ಮುಂದಿನ ಜನಾಂಗವು ಇಂದಿನ ತಪ್ಪು-ತಡೆಗಳಿಗೂ, ಜಾಣತನವಿಲ್ಲದ ಧ್ಯೇಯ-ಧೋರಣೆಗಳಿಗೂ ಇಂದಿನ ರಾಷ್ಟ್ರೀಯ ಧುರೀಣರನ್ನೇ ಹೊಣೆಗಾರರೆಂದು ಭಾವಿಸುವುದೆಂಬುದನ್ನು ಮರೆಯಲಾಗದು. ಸಮಿತಿಯ ಘಟನೆಯಲ್ಲಿಯೂ ಸಂಘಟನೆಯಲ್ಲಿಯೂ ಕಂಡುಬರುವ ಲೋಪ ದೋಷಗಳನ್ನು ಕೂಡಲೇ ತೊಡೆದು ಹಾಕಬೇಕು; ಇಲ್ಲವೆ ಸಾವಕಾಶವಾಗಿಯೂ ಜಾಗರೂಕತೆಯಿಂದಲೂ ದೂರಮಾಡಬೇಕು. ಹಾಗೆ ಮಾಡಲು ಹಟಮಾರಿತನದ ವಿರೋಧವಿದ್ದರೆ, ಘಟನೆಯನ್ನು ಮುರಿಯದಂತೆ ಅದನ್ನು ಸರಿಪಡಿಸುವ ಯೋಜನೆ ಮಾಡಬೇಕು. ಪರಿಪೂರ್ಣತೆಯ ಪ್ರಗತಿಯನ್ನು ತ್ವರಿತವಾಗಿಯೂ ಸುಲಭವಾಗಿಯೂ ಸಾಧಿಸುವುದು ಅಸಾಧ್ಯವಾಗಿದ್ದರೂ ಅದನ್ನು ಕೈಕೊಂಡೇ ತೀರಬೇಕು. ಹಾಗು ಜಗತ್ತಿನೊಳಗಿನ ನಿರಾಶೆಯ ವಾತಾವರಣವನ್ನು ಹೇಗಾದರೂ ಇಲ್ಲದಂತೆ ಮಾಡಬೇಕು. ಮಾನವ ಪ್ರಕೃತಿಯಾಗಲೀ ಇಚ್ಛಾಶಕ್ತಿಯಾಗಲೀ ಅಥವಾ ಯಾವದಾದರೊಂದು ಆಕಸ್ಮಿಕವಾದ ಉತ್ಕ್ರಾಂತಿಯುಕ್ತವಾದ ಪ್ರಗತಿಯಾಗಲೀ ಮಾನವ ನಿಯತಿಯ ಇನ್ನೂ ಮಹತ್ತಾದ ಮಾರ್ಗವನ್ನು ತೆರೆದ ಹೊರತು, ಮಾನವತೆಗೆ ಇದಕ್ಕಿಂತ ಬೇರೆ ಯಾವ ದಾರಿಯೂ ಈಗ ಇರುವುದಿಲ್ಲ.

ರಾಷ್ಟ್ರ ಸಂಘವೆಂಬ ಹೆಸರಿನಿಂದ ಮುಂದೆ ಬಂದ ಜಾಗತಿಕ ಐಕ್ಯದ ಮೊತ್ತ ಮೊದಲನೆಯ ರೂಪವು ತನ್ನನ್ನೇ ದುರ್ಬಲಗೊಳಿಸಿದ ಸರ್ವಾನುಮತದಂಥ ದೋಷಪೂರಿತವಾಗಿದ್ದುದು ನಿಜ. ಆದರೆ ಮುಖ್ಯವಾದ ದೋಷವು ಅದರ ಹುಟ್ಟಿನಲ್ಲಿಯೇ ಇದ್ದಿತಲ್ಲದೆ ಆಗಿನ ಜಾಗತಿಕಸ್ಥಿತಿಯೂ ಅದಕ್ಕೆ ಪ್ರತಿಕೂಲವಾಗಿದ್ದಿತು. ರಾಷ್ಟ್ರಸಂಘವು ಪ್ರಬಲವಾದ ದೊಡ್ಡ ರಾಷ್ಟ್ರಗಳ ಸಂಘವಾಗಿತ್ತು. ಪ್ರತಿಯೊಂದು ರಾಷ್ಟ್ರವೂ ಎಷ್ಟೋ ಚಿಕ್ಕ ಪುಟ್ಟ ರಾಜ್ಯಗಳನ್ನು ತನ್ನ ಬೆಂಬಲದಲ್ಲಿಟ್ಟುಕೊಂಡು, ತಮ್ಮ ತಮ್ಮ ಹಿತವನ್ನೇ ರಾಷ್ಟ್ರಸಂಘದ ಮುಂದೆ ಸಾಧಿಸುತ್ತಿದ್ದುವಲ್ಲದೆ, ಅದೊಂದು ಜಗತ್ತಿನ ಹಿತವನ್ನು ಸಾಧಿಸುವ ಸಂಘವಾಗಿರಲಿಲ್ಲ. ರಾಜಕೀಯ ಕ್ಷೇತ್ರದಲ್ಲಂತೂ ಅವುಗಳ ಕಾರಸ್ಥಾನ, ಗೊಂದಲಗಳಾಗಲೀ, ಅಥವಾ ಅವು ಮಾಡಿದ ಒಪ್ಪಂದ ಕರಾರುಗಳಾಗಲೀ ಈಡೇರಲಿಲ್ಲ. ಸಂಯುಕ್ತ ರಾಷ್ಟ್ರಸಮಿತಿಯ ಘಟನೆಯಲ್ಲಿಯಾದರೋ ಈ ದೋಷಗಳಿಂದ ದೂರಾಗುವ ಪ್ರಯತ್ನವನ್ನು ತಾತ್ವಿಕವಾಗಿ ಮಾಡಲಾಗಿರುವುದಾದರೂ ಆ ಪ್ರಯತ್ನವು ಅಷ್ಟೊಂದು ಸಮರ್ಪಕವಾಗಿಯೂ ಯಶಃಪೂರ್ಣವಾಗಿಯೂ ಮಾರ್ಪಡಲಿಲ್ಲ. ಭದ್ರತಾ ಮಂಡಳದಲ್ಲಿ (Security council) ಒಳಪಟ್ಟ ಪಂಚಮಹಾರಾಷ್ಟ್ರಗಳ ಮೂಲಕ ಹಳೆಯಸಂಘದ ದ್ಯೋತಕವು ಉಳಿದಂತಾಗಿರುವುದಲ್ಲದೆ, ನಿಷೇಧಾಧಿಕಾರ (veto) ಯೋಜನೆಯ ಮೂಲಕ ಎಲ್ಲವನ್ನೂ ಮುಷ್ಟಿಯಲ್ಲಿ ದೃಢವಾಗಿಟ್ಟುಕೊಂಡಿರುವಂತೆ ಆಗಿರುವುದು. ದ್ವಿತೀಯ ಮಹಾಯುದ್ಧದಿಂದ ನಿರ್ಮಿತವಾದ ಪರಿಸ್ಥಿತಿಗೆ ಅನುಗುಣವಾಗಿ ವ್ಯಾವಹಾರಿಕವಾಗಿ ಹಾಗೆಮಾಡಬೇಕಾಗಿಬಂದುದು ಯೋಗ್ಯವೆನಿಸಿದರೂ, ಹೊಸದಾಗಿ ನಿರ್ಮಿಸಿದ ಜಾಗತಿಕ ಸಂಸ್ಥೆಯ ಉದ್ದೇಶ ಸಫಲತೆಯ ಧ್ಯೇಯದಲ್ಲಿ ಅದೊಂದು ತೊಡಕಾಗಿರುವುದಲ್ಲದೆ, ಜಾಗತಿಕ ಪ್ರಗತಿಯ ಮಾರ್ಗದಲ್ಲಿಯೂ ಅದು ಸಹಾಯಕವಾಗಿರುವುದಿಲ್ಲ. ಈ ದೋಷವನ್ನು ಕಿತ್ತೊಗೆಯಬೇಕೆಂಬ ತೀವ್ರಗಾಮಿಯಾದ ಹಾಗೂ ಆಮೂಲಾಗ್ರವಾದ ಪ್ರಯತ್ನವು ಒಮ್ಮೆಲೇ ಇಡಿಯ ಕಟ್ಟಡವನ್ನೇ ಕುಸಿಯುವಂತೆ ಮಾಡಬಹುದು. ಸುಧಾರಣೆ ಮಾಡದೆ ಇದ್ದಂತೆಯೇ ಮುಂದುವರಿಸವುದೂ ಇದ್ದ ಬೇನೆ ಇರಗೊಟ್ಟಂತೆಯೇ ಯಾವ ಮಹತ್ವಾಕಾಂಕ್ಷೆಯಿಂದ ಈ ಮಹಾ ಸಂಸ್ಥೆಯ ಸ್ಥಾಪನೆಯಾಗಿತ್ತೋ ಅದು ಬಯಲಾಗಿ ಜಗತ್ತಿನ ಪರಿಸ್ಥಿತಿಯ ಕಷ್ಟಾತ್‌ಕಷ್ಟತರವಾಗಿ ಉಪಾಯರಹಿತವಾಗಿಯೂ ಪರಿಣಮಿಸಬಹುದು. ಹೊಸ ವಿಪತ್ತಿಗೊಳಗಾಗಿ ಈ ಸಂಸ್ಥೆಯು ಕುಸಿದು ಹೋದ

ದ್ದಾದರೆ, ಹೊಸ ಘಟನೆಯಿಂದೊಡಗೂಡಿದ ಸಂಸ್ಥೆಯು ಇದಕ್ಕೆ ಪ್ರತಿಯಾಗಿ ಬರಬಹುದು. ಅಸ್ಪಷ್ಟವಾದ ಕೆಲವು ಅರಿಷ್ಟಗಳು ಕೂಡಿ ಬಂದವಾದರಂತೂ, ನಿಜವಾಗಿಯೇ ಅಂಥ ಸಂಸ್ಥೆಯು ಅಸ್ತಿತ್ವದಲ್ಲಿ ಬರಬಹುದು. ಈ ಸಲ ಅದು ಅಂಥ ಯಾವ ಅರಿಷ್ಟಗಳನ್ನೂ ಒಳಗೊಳ್ಳಲಾರೆನೆಂಬ ನಿರ್ಧಾರದಿಂದ ಹೆಚ್ಚು ಭದ್ರವಾಗಿ ತನ್ನ ಅಸ್ತಿತ್ವವನ್ನು ಕಾಣಿಸುವುದು. ಆದರೆ ಎರಡು ಮಹಾವಿಪತ್ತುಗಳನ್ನು ದಾಟಿ ಎಷ್ಟೋ ಅಡೆತಡೆಗಳನ್ನೆದುರಿಸಿಕೊಂಡು ನಡೆಯಿಸಿಕೊಂಡು ಬಂದ ಅಂತರರಾಷ್ಟ್ರೀಯ ಸಂಸ್ಥೆಯು ಮೂರನೆಯದೊಂದು ಅನಿಷ್ಟವನ್ನು ಎದುರಿಸಿದ ಮೇಲೆಯೇ ಹಾಗಾಗಬಹುದು. ಅಂಥ ಕಠಿಣ ಪರಿಸ್ಥಿತಿ ಬಂದದ್ದಾದರೆ, ಪ್ರಕೃತಿಯು ತಾನಾಗಿಯೇ ಮುಂದೆ ಮಾಡಿದ ತೊಡಕುಗಳನ್ನು ಕೊನೆಯದಾಗಿ ತೊಡೆದುಹಾಕಿ ತನ್ನ ಮೂಲೋದ್ದೇಶವನ್ನು ಸಫಲಗೊಳಿಸಿಕೊಳ್ಳುವುದು. ಆದರೆ ಅದಕ್ಕಾಗಿ ಕ್ಷೇತ್ರಫಲ, ಸೈನಿಕಶಕ್ತಿ ಇವಾವುಗಳಿಗೂ ಇಂಬುಗೊಡದ ಹಾಗು ಸಮತ್ವವೇ ಮುಖ್ಯ ತತ್ವವಾಗಿಉಳ್ಳ ಜಾಗತಿಕ ರಾಜ್ಯ (world state) ದ ಸ್ಥಾಪನೆಯು ಆವಶ್ಯಕವಾಗುವುದು. ಹೊಸದೊಂದು ಅಂತರರಾಷ್ಟ್ರೀಯ ಕಾನೂನಿನಿಂದ ಎಲ್ಲ ರಾಷ್ಟ್ರಗಳು ತಮ್ಮ ತಮ್ಮೊಳಗೆ ಸಮರಸತೆಯುಂಟಾಗುವಂತೆ ನೋಡಿಕೊಳ್ಳಬೇಕು. ನಿಜವಾದ ನ್ಯಾಯ, ಮೂಲಭೂತವಾದ ಸಮಾನತೆ, ಹಕ್ಕುಬಾಧ್ಯತೆಗಳ ಹಾಗು ಅಭಿರುಚಿಗಳ ಸಂಕಲನ—ಇವು ಈ ಜಾಗತಿಕ ರಾಜ್ಯದ ಅಧಿಷ್ಠಾನವಾಗಿದ್ದು ಅದರ ಕಟ್ಟಡದ ಮೂಲಸ್ತಂಭಗಳಾಗಿರಬೇಕು.

ನಿಜವಾದ ಅಪಾಯವು ಸದ್ಯಕ್ಕೆ ಸಂಯುಕ್ತ ರಾಷ್ಟ್ರಗಳ ಸಂಘಟನೆಯೊಳಗಿನ ಯಾವದೇ ಪ್ರಕಾರದ ದೋಷದಲ್ಲಿ ಅಡಕವಾಗಿರದೆ, ಜಗತ್ತಿನ ರಾಷ್ಟ್ರಗಳು ಇಬ್ಬಗೆಯ ವಿಚಾರ ಪ್ರಣಾಲಿಯಲ್ಲಿ ತೊಡಗಿಕೊಂಡಿರುವುದರಲ್ಲಿಯೇ ಅಡಕವಾಗಿರುವುದು. ಯಾಕೆಂದರೆ, ಬೋಲ್ಶೆವಿಕ ರಶಿಯಾದೊಳಗೆ ಪ್ರಾದುರ್ಭವಿಸಿದ ಕಮ್ಯುನಿಝಂ ಪದ್ಧತಿಯು ಯಾವುದೊಂದು ಉತ್ಕ್ರಾಂತಿಯ ಫಲವಾಗಿರದೆ, ಅದೊಂದು ರಕ್ತಪಾತಪ್ರವಾಹಪೂರಿತವಾದ ಕ್ರಾಂತಿಯಿಂದ ಒಡಮೂಡಿ, ವರ್ಗಕಲಹಗಳ ತಳಹದಿಯ ಮೇಲೆ ನಿಂತುಕೊಂಡು ಅಂದರೆ, ದುಡಿಮೆಯ ವರ್ಗವನ್ನುಳಿದು ಉಳಿದವರನ್ನೆಲ್ಲ ನಾಮಶೇಷಮಾಡಿ ಕಾರ್ಮಿಕರ ಅಧಿಕಾರಶಾಹಿಯೆಂಬ ಹೆಸರಿನಿಂದ ಪ್ರಬಲವಾದ ಚಿಕ್ಕ ಪಕ್ಷದ ಆಳಿಕೆಗೆ ಒಳಗಾಗಿ, ಪೋಲೀಸ ರಾಜ್ಯವೆನ್ನುವಂತೆ ಹೊರಗಿನ ರಾಷ್ಟ್ರಗಳೊಂದಿಗೆ ಹೋರಾಟ ಹೂಡಿ, ಈ ಹೊಸ ಪದ್ಧತಿಯು ಹಳೆಯ ಪದ್ಧತಿಗಳನ್ನೆಲ್ಲ ನಿರ್ಮೂಲ ಮಾಡದ ವಿನಹ ಶಾಂತಿ ದೊರೆಯಲಾರದೆಂಬ ವಿಚಾರಸರಣಿಯಿಂದ ಜಗತ್ತಿನಲ್ಲಿ ಒಂದು ಭೀತಿಯನ್ನು ನಿರ್ಮಿಸಿ, ಅನವರತವಾದ ಹೋರಾಟದಲ್ಲಿ ತೊಡಗುವ ಉದ್ಯೋಗ ಹೂಡಿ, ಜಗತ್ತಿನೊಳಗಿನ ಎಲ್ಲ ರಾಷ್ಟ್ರಗಳಲ್ಲದಿದ್ದರೂ, ಬಹಳಷ್ಟು ರಾಷ್ಟ್ರಗಳು ಈ ಪದ್ಧತಿಯನ್ನು ಸ್ವೀಕರಿಸುವ ವರೆಗೆ ಈ ಹೋರಾಟವು ಹಾಗೇ ಸಾಗಬೇಕಾಗಿರುವುದು. ಆದರೆ ಅದರ ಪ್ರಾರಂಭದ ತೀವ್ರತೆಯು ಕಾಲಕ್ರಮದಲ್ಲಿ ಕಡಿಮೆಯಾಗಿ ಹಳೆಯ ವಿಚಾರ ಪ್ರಣಾಲಿಗಳೊಂದಿಗೆ ತಾನೂ ನೆರೆಹೊರೆಯಲ್ಲಿ ಅಪಾಯಕರವಲ್ಲದಂತೆ ನೆಲಿಸಬಹುದೆಂಬ ಪ್ರಜ್ಞೆ ತಲೆದೋರುವುದು ಉಚಿತವಾಗಿರುವುದು. ಹಾಗಾಗುವುದೂ ಅವಶ್ಯವಿದೆ. ಆದರೆ ಅಂಥ ತೀವ್ರತೆ ಇನ್ನೂ ಉಳಿದಿರುವುದಕ್ಕೆ ಕಾರಣವೆಂದರೆ, ತಮ್ಮ ಹೊಸ ವಿಚಾರ ಪ್ರಣಾಲಿಯಿಂದ ಜಗತ್ತಿನ ಸ್ವಾಧೀನತೆಯನ್ನು ಪಡೆಯಬೇಕೆಂಬ ಹವ್ಯಾಸ ಅದಕ್ಕೆ ಇನ್ನೂ ಇದೆ. ಅಂತೆಯೇ ಪರಸ್ಪರ ವಿರೋಧಿಗಳು ಸೈನಿಕಶಕ್ತಿಯನ್ನು ಬೆಳೆಸಿಕೊಂಡು ಹೋರಾಟವನ್ನೇ ಮುಂದುಮಾಡಿಕೊಂಡಿರುವರಲ್ಲದೆ, ನೆರೆಹೊರೆಯಲ್ಲಿ ನೆಲಿಸಿ ತಮ್ಮ ತಮ್ಮ ಪ್ರಜೆಗಳ ಕ್ಷೇಮ ಪರಿಪಾಲನೆಯಲ್ಲಿ ತೊಡಗಿರಲಾರದಾಗಿವೆ. ಇಂಥ ಒಂದು ಪರಿಸ್ಥಿತಿಯನ್ನು ನಿವಾರಿಸಿದರೆ, ಈ ಎರಡು ತತ್ವಪ್ರಣಾಲಿಗಳನ್ನೊಳಗೊಂಡ ರಾಷ್ಟ್ರಗಳು ಕ್ಷೇಮದಿಂದ ತಮ್ಮ ತಮ್ಮ ದಾರಿಯಲ್ಲಿ ನಡೆಯಬಹುದು. ಅಂದರೆ ಸಾಮ್ಯವಾದವನ್ನೊಳಗೊಂಡ ರಾಷ್ಟ್ರಗಳು ಒಂದುಕಡೆ, ಭಾಂಡವಲಶಾಹಿಯ ಮೇಲೆ ನಡೆಯುವ ರಾಷ್ಟ್ರಗಳು ಇನ್ನೊಂದು ಕಡೆಯಾಗಿ ಸ್ನೇಹದಿಂದಲೂ ಸೌಹಾರ್ದತೆಯಿಂದಲೂ ಕೂಡಿದ ಸಂಬಂಧವನ್ನಿಟ್ಟುಕೊಂಡು ಜಾಗತಿಕ ಪ್ರಗತಿಯನ್ನೇ ಗುರಿಯಾಗಿಟ್ಟುಕೊಂಡು ಸಾಗುವುದು ಶಕ್ಯವಿದೆ. ಜಾಗತಿಕ ರಾಷ್ಟ್ರವು (world state) ನಿರ್ಮಾಣ

ಮಾಡಾಗ ತಮ್ಮ ತಮ್ಮ ಪ್ರತಿನಿಧಿಗಳನ್ನು ಅಲ್ಲಿಗೆ ಕಳಿಸಿ, ಅಂಥ ಮೈತ್ರಿಯ ಸಂಬಂಧವನ್ನು ಮುಂದುವರಿಸುವ ಶಕ್ಯತೆಯಿದೆ. ಸಂಯುಕ್ತರಾಷ್ಟ್ರ ಸಮಿತಿಯು ಸಾಧಿಸಬೇಕಾದ ಕೊನೆಯ ಕಾರ್ಯವೂ ಅದರ ಧ್ಯೇಯವೂ ಇದೇ ಆಗಿರುವುದು. ಸದ್ಯದ ಈ ಸಂಘಟನೆ ಕೊನೆಯ ಹೆಜ್ಜೆಯಲ್ಲ. ಅಪೂರ್ಣವಾದ ಅದರ ಪ್ರಾರಂಭವು ಮಾತ್ರ ಅದು; ಜಾಗತಿಕ ರಾಷ್ಟ್ರ ನಿರ್ಮಿತಿಯ ಪ್ರಾರಂಭವೂ ಅದೇ ಆಗಿರುವುದುಅಲ್ಲಿಯೇ ಜಗತ್ತಿನೊಳಗಿನ ಎಲ್ಲ ರಾಷ್ಟ್ರಗಳು ಒತ್ತಟ್ಟಿಗೆ ಸೇರಿ ಅಂತರರಾಷ್ಟ್ರೀಯ ವಿಚಾರ ಪ್ರವಾಹವನ್ನು ಪ್ರವಹಿಸುವ ಕೊನೆಯ ಸಂಘಟನೆಯಾಗಿರಬೇಕಾಗಿರುವುದು.

ಸದ್ಯದ ಪರಿಸ್ಥಿತಿಯಲ್ಲಿ ಇದೊಂದು ಆಶಾವಾದವೆಂದು ಅನಿಸಬಹುದು.ಆದರೆ ನಿರಾಶಾವಾದಿಗಳು ಮೂರನೆಯದೊಂದು ಮಹಾಯುದ್ಧದಿಂದ ಒದಗಬಹುದೆಂದು ಎಣಿಸುವ ಮಾನವ ಸಂಸ್ಕೃತಿಯ ಮಹಾ ವಿನಾಶಕ್ಕಿಂತ ಅದೆಷ್ಟೋ ಸೌಮ್ಯವಾಗಿರುವುದು. ತನ್ನದೇ ಆದ ತಪ್ಪುಗಳಿಂದಾಗಲೀ, ನಿಸರ್ಗದ ಭಯಂಕರವಾದ ಉತ್ಪಾತಗಳಿಂದಾಗಲೀ ಒದಗುವ ವಿನಾಶಗಳಿಂದ ಪಾರಾಗುವ ರೂಢಿಯು ಮಾನವ ಜಾತಿಗೆ ಇದೆ.ಹಾಗಲ್ಲದಿದ್ದರೆ ಅದರ ದೀರ್ಘವಾದ ಇತಿಹಾಸವೂ ಸಂತತವಾದ ಉಳಿಗಾಲವೂ ಸೃಷ್ಟಿಯ ಸ್ವಭಾವದ ಶುದ್ಧ ಜಡವಾದದಿಂದೊಡಗೂಡಿದ ಸ್ವಸಂಜನಿತವಾದ ಆಕಸ್ಮಿಕ ಘಟನೆಯೆಂದೆನ್ನಬೇಕಾಗುವುದು. ಮಾನವನು ಸದ್ಯ ತಾನೇ ಮುಂದಾಳುವಾಗಿದ್ದ ಉತ್ಕ್ರಾಂತಿಯನ್ನು (ಕೆಲಮಟ್ಟಿಗೆ ಅವನು ಅದರ ಪ್ರಗತಿಯ ಪುರೋಗಾಮಿಯೂ ಹೌದು) ಉಳಿಸಿಕೊಂಡು ಮುಂದೆ ಸಾಗಿಸಬೇಕಾದರೆ, ಸದ್ಯದ ಅಂತರ ರಾಷ್ಟ್ರೀಯ ಜೀವನದ ವಿಘಟನೆಗಳಿಂದ ಅವನು ಮುನ್ನುಗ್ಗಬೇಕಾಗುವುದಲ್ಲದೆ, ಸಂಘಟಿತವಾದ ಸಂಯುಕ್ತ ಕಾರ್ಯದ ಪ್ರಾರಂಭದಲ್ಲಿ ತೊಡಗಬೇಕಾಗುವುದು. ಯಾವದೊಂದು ಪ್ರಕಾರದ **ಜಾಗತಿಕ ರಾಜ್ಯ**ದ ಯೋಜನೆಯನ್ನು–ಸಂಯುಕ್ತ, ಕೇಂದ್ರಿಕೃತ, ಅರ್ಧ ಸಂಯುಕ್ತ, ಅಥವಾ ಸಮ್ಮಿಶ್ರ ವಿರಲಿ—ಕೈಕೊಳ್ಳಬೇಕಾಗುವುದು. ಯಾವದೇ ಸಂಕುಚಿತವಾದ ಅಥವಾ ಬಿಗುವಿಲ್ಲದ ಯೋಜನೆ ಯಾವ ಪ್ರಯೋಜನಕ್ಕೂ ಬರಲಾರದು. ಅಂದರೆಯೆ, ಇಲ್ಲಿ ಪ್ರತಿಪಾದಿಸಿದ ವಿಚಾರ ಪ್ರಣಾಲಿಯು ನ್ಯಾಯ ಸಮ್ಮತವೆಂದು ಒಪ್ಪಿಗೆಯಾಗುವುದು. ಮುತ್ತು ಜರುಗುತ್ತಲಿರುವ ಪ್ರಸಂಗಗಳ ಮೇಲಿಂದ ಮುಂದೇನಾಗಬಹುದೆಂಬದನ್ನೂ, ಮಾನವ ಜನಾಂಗಗಳ ಭಾವೀ ಇತಿಹಾಸದ ಪ್ರಮುಖವಾದ ರೂಪವನ್ನೂ ಧೈರ್ಯದಿಂದ ಸಾರಬಹುದು.

ಉತ್ಕ್ರಾಂತಿಪ್ರದವಾದ ಪ್ರಕೃತಿಯು ಮಾನವತೆಯ ಮುಂದೊಡ್ಡಿದ ಸದ್ಯದ ಪ್ರಶ್ನೆಯೆಂದರೆ: ಪದ್ಧತಿಯೆಂದೇ ಹೇಳಬಹುದಾದರೆ, ಉತ್ಕ್ರಾಂತಿ-ಪ್ರತಿಕ್ರಾಂತಿಗಳಿಂದ ಕೂಡಿದ ಸದ್ಯದ ಅಂತರರಾಷ್ಟ್ರೀಯ ಪದ್ಧತಿಯ ಬದಲಾಗಿ ಜಗತ್ತಿನೊಳಗಿನ ಎಲ್ಲ ಜನಾಂಗಗಳ ಸಾಮಾನ್ಯ ಹಿತವರ್ಧನೆಯನ್ನು ಮಾಡಲು ಅರ್ಹವಾದ ಹಾಗು ಐಕ್ಯವನ್ನು ಸಾಧಿಸಬಲ್ಲ ಒಂದು ನಿಜವಾದ ಪದ್ಧತಿಯನ್ನು ಪ್ರಸ್ಥಾಪಿಸುವುದು ಸಾಧ್ಯವಾಗಬಾರದೇಕೆ? ಎಂಬುದು. ಹೊರಗಿನ ಆಕ್ರಮಣಗಳಿಂದ ಅಲ್ಲಲ್ಲಿ ಬಿರಿಯುತ್ತಿರುವ ಸಂಸ್ಕೃತಿಗಳ ಸಂರಕ್ಷಣೆಗಾಗಿ ನಡಿಸಿದ ಹೋರಾಟವು ವಿಶ್ವದಲ್ಲಿ ಕಂಗೊಳಿಸಿದ ಮಾನವತೆಯ ಮೊದಲ ಪ್ರತಿಭೆ. ಒಂದು ಪ್ರಕಾರದ ಸಂರಕ್ಷಣೆ ಹಾಗು ಭದ್ರತೆ ಇರಬೇಕೆಂದು ಹಲವು ಜನಾಂಗಗಳು ಕೆಲವು ಒಪ್ಪಂದಗಳಿಗೊಳಪಟ್ಟು ನಡೆಯತೊಡಗಿದುವು. ಅವುಗಳಿಗೆಯೆ ಅಂತರರಾಷ್ಟ್ರೀಯ ಕಾನೂನುಗಳ ಮೊದಲ ಮೆಟ್ಟಲುಗಳೆಂದೆನ್ನಬಹುದು. ರಾಜ್ಯ-ರಾಜ್ಯಗಳೊಳಗೆ ದ್ವೇಷಾಸೂಯೆಗಳೂ ಜಗಳ ಅಷ್ಟೇಅಲ್ಲ ಯುದ್ಧಗಳೂ ರಕ್ತಪಾತ, ಬಂಡಾಯ, ಕೆಲವು ಸಲ ಭೂಗೋಲದ ಬಹುಭಾಗವನ್ನೇ ಒಂದೆಡೆಗೆ ವಿಧ್ವಂಸ ಮಾಡುತ್ತಿದ್ದರೂ, ಮತ್ತೊಂದೆಡೆಗೆ ಆ ಕಾನೂನುಗಳ ಅಮಲು ನಡೆಯುತ್ತಿತ್ತು. ಮಾನವ ಜನಾಂಗದ ಅಂತರಾಳದಲ್ಲಿ ನೆಲಿಸಿ ಅದನ್ನಾಳುವ ದೈವತವು ಮಾನವನ ಮನಸ್ಸು-ಹೃದಯಗಳಲ್ಲಿ ಹಳೆಯ ಅಸಮಾಧಾನಕಾರಕವಾದ ಪದ್ಧತಿಯನ್ನು ಅಳಿಯಿಸಿ, ಕೊನೆಯಲ್ಲಿ ಶಾಶ್ವತ

ಶಾಂತಿ ಹಾಗು ಶುಭ ಜೀವನವನ್ನು ಪ್ರಸ್ಥಾಪಿಸಲು ತರ್ಕಶುದ್ಧವಾಗಿ ಸಂಭವನೀಯವಾದ ಜಾಗತಿಕ ಜೀವನದ ಪರಿಸ್ಥಿತಿಯನ್ನು ಪ್ರಾರಂಭಿಸುವ ಹೊಸ ವಿಚಾರ, ಹೊಸ ಆಶೆಯನ್ನು ಹುಟ್ಟಿಸಿರುವುದು. ಕೆಲವೇ ಜನರಿಂದ ಬಯಸಲಾಗಿದ್ದು, ಬಹುದಿನಗಳವರೆಗೂ ಬಲು ಉದಾತ್ತವಾದ ರಮ್ಯಕಲ್ಪನೆಯಾಗಿ ತೋರುತ್ತಿದ್ದ ಈ ಮಾನವ ಐಕ್ಯದ ಗುರಿಯು ಮೊತ್ತ ಮೊದಲನೆಯ ಸಲವೇ ಒಂದು ನಿಜಸ್ಥಿತಿಯಾಗಿ ಪರಿಣಮಿಸಿದ್ದಾಗಿದೆ. ಇನ್ನು ಮುಂದೆ ಶಾಂತಿ ಮತ್ತು ಸಮನ್ವಯಗಳಿಗಾಗಿ ಗಟ್ಟಿಯಾದ ಒಂದು ಅಡಿಗಲ್ಲನ್ನು ಅದು ನಿರ್ಮಿಸಬಹುದು. ಮಾನವನ ಅತ್ಯುಚ್ಚವಾದ ಸ್ವಪ್ನಸಾಮ್ರಾಜ್ಯಕ್ಕೂ, ಜನಾಂಗದ ಪರಿಪೂರ್ಣತೆ, ಪೂರ್ಣತೆ ಪಡೆದ ಸಮಾಜ, ಹಾಗು ಮಾನವನ ಆತ್ಮ ಹಾಗು ಮಾನವೀ ಸ್ವಭಾವಗಳ ಉಚ್ಚತರ ಉತ್‌ಪಥಗಾಮಿಯಾದ ಉತ್‌ಕ್ರಾಂತಿಗಾಗಿ ಯೂ ತಡೆಯಿಲ್ಲದ ಅವಕಾಶವನ್ನೂ ಅದು ನಿರ್ಮಿಸಬಹುದು. ಇಂದಿನ ಮಾನವರಿಗೂ, ಹೆಚ್ಚೆಂದರೆ, ಮುಂದಿನ ಮಾನವರಿಗೂ ಇದರ ಉತ್ತರವನ್ನು ಸಲ್ಲಿಸಬೇಕಾಗುವುದು. ಯಾಕೆಂದರೆ, ಬಹುಕಾಲದವರೆಗೆ ಮುಂದೂಡು ವುದಾಗಲೀ ಅಥವಾ ಬಹು ಕಾಲದ ವರೆಗೆ ಸಾಗಿದ ಅಪಜಯದಿಂದಾಗಲೀ, ಅಧಿಕತರವಾದ ವಿಪತ್ತು ಗಳಿಗೆ ದಾರಿ ಮಾಡಿಕೊಟ್ಟಂತಾಗುವುದಲ್ಲದೆ, ದೀರ್ಘವಾದ ಹಾಗು ವಿಧ್ವಂಸಕ ಪರಿಣಾಮಗಳು ಒದಗಿ ಬಂದು ಈ ಸಮಸ್ಯೆಯನ್ನೇ ಅವು ಅತೀವ ಬಿಗಿಯಾಗಿಯೂ ಅಸಾಧ್ಯವಾಗಿಯೂ ಮಾಡಿಬಿಡುವುವು. ಅದೊಂದು ಸದ್ಯದ ಜಾಗತಿಕ ಸಂಸ್ಕೃತಿಯು ನಷ್ಟವೇ ಅಲ್ಲ, ಯಾವತ್ತೂ ಸಂಸ್ಕೃತಿಯನ್ನೇ ಅಸಾಧ್ಯವಾದ ರಿತಿಯಲ್ಲಿ ಕೊನೆಗೊಳ್ಳಿಸ ಬಹುದು. ಆ ಮಹಾ ವಿಧ್ವಂಸದ ನಡುಮಧ್ಯದಲ್ಲಿ ಬಿಗಿಯಾದ ಹಾಗು ಅನಿಶ್ಚಿತ ರೂಪದಿಂದ ಕೂಡಿದ ಹೊಸತೊಂದು ಕ್ರಮವನ್ನು ಪ್ರಾರಂಭಿಸಬೇಕಾಗುವುದು. ಹಾಗು ಉತ್ತಮವಾದ ಮಾನವತೆಯನ್ನಾಗಲಿ ಅಥವಾ ಮಹತ್ತಾದ ಅಧಿಮಾನವ ಜನಾಂಗವನ್ನಾಗಲೀ ಸಂವರ್ಧಿಸುವ ಯಾವುದೊಂದು ದಾರಿಯನ್ನು ಕಂಡು ಹಿಡಿದಾಗಲೇ ಹೆಚ್ಚು ಯಶಸ್ವಿಯಾದ ಸೃಷ್ಟಿಯ ಸಂಭವವನ್ನು ಸಾರಬಹುದು.

ಇಲ್ಲಿ ಉದ್ಭವಿಸುವ ಮುಖ್ಯವಾದ ಪ್ರಶ್ನೆಯೆಂದರೆ, ಮಾನವತೆಗೆ ತನ್ನ ಸಾಮೂಹಿಕ ಜೀವನಕ್ಕಾಗಿ ನಿರ್ಮಿಸಿಕೊಳ್ಳಲು ಇಲ್ಲಿಯ ತನಕ ಸಾಧ್ಯವಾಗಿರುವ ಅತಿದೊಡ್ಡದಾದ ಭಾಗವೆಂದರೆ ರಾಷ್ಟ್ರವಷ್ಟೆ? ಅದೇ ಕೊನೆಯೆ? ಅಥವಾ ಭೂಗೋಲದೊಳಗಿನ ಹಲವು ರಾಷ್ಟ್ರಗಳನ್ನು ಒಳಗೊಳ್ಳಬಹುದಾದ ಹಾಗು ಕೊನೆಯಲ್ಲಿ ಎಲ್ಲವನ್ನು ಸೇರಿಸಿಕೊಳ್ಳಬಹುದಾದ ಬೃಹತ್ತರರಾಷ್ಟ್ರಗಳನ್ನು ನಿರ್ಮಿಸಬಹುದೇ? ಎಂಬುದು. ಹಾಗೆ ಬೃಹತ್ತರ ನಿರ್ಮಿತಿಯ ಮನಃಪ್ರವೃತ್ತಿಯೂ, ಅಧಿಕಾಧಿಕ ಅಧಿರಾಷ್ಟ್ರನಿರ್ಮಾಣಗಳ ಆಕಾಂಕ್ಷೆಯೂ ಇದ್ದಿರಲಿಲ್ಲ ವೆಂತಲ್ಲ. ಮಾನವಜನಾಂಗದ ಜೀವನದೊಳಗಿನ ಶಾಶ್ವತವಾದ ಮನೋವೃತ್ತಿಯೇ ಹಾಗಿರುವುದು. ಆದರೆ ಅದು ಧರಿಸಿರುವ ರೂಪ ಮಾತ್ರ ಭಿನ್ನವಾಗಿ ಪರಿಣಮಿಸಿತು. ಅದೆಂದರೆ. ಬಲಿಷ್ಟವಾದ ರಾಷ್ಟ್ರವು ಇತರ ರಾಷ್ಟ್ರ ಗಳ ಅಧಿಪತ್ಯವನ್ನು ವಹಿಸುವುದು; ಅದರ ಭೂಭಾಗಗಳನ್ನು ಸ್ವಾಧೀನ ಪಡಿಸಿಕೊಳ್ಳುವುದು; ಅಲ್ಲಿಯ ಪ್ರಜೆ ಗಳನ್ನು ದಬ್ಬಾಳಿಕೆಗೆ ಒಳಪಡಿಸುವುದು; ಅವರ ಮಾಲು-ಮತ್ತೆಯನ್ನು ಅಪಹರಿಸುವುದು. ಅಲ್ಲದೆ ಅಳರಸರ ಸಂಸ್ಕೃತಿಯನ್ನು ತಮ್ಮ ಸತ್ತಾಧೀನರಾದ ಪ್ರಜೆಗಳು ಸ್ವೀಕಾರಮಾಡುವ ಪ್ರಯತ್ನಗಳೂ ಹೇರಳವಾಗಿ ದೊರೆ ಯುವವು. ರೋಮ ಸಾಮ್ರಾಜ್ಯವು ಈ ಬಗೆಯ ಪ್ರಯತ್ನದ ಉತ್ತಮವಾದ ಉದಾಹರಣೆಯಾಗಿರುವುದು. ಮಾನವ ಐಕ್ಯದ ಮೊದಲ ಚಿತ್ರವೆಂದಾಗಲೀ ಅಥವಾ ಅಂಥ ಚಿತ್ರದ ಅಪೂರ್ಣವಾದ ಸೂಚನೆಯೆಂದಾಗಲೀ ನಾವು ತಿಳಿದುಕೊಳ್ಳಬಹುದಾದರೆ ವಿಸ್ತಾರವಾದ ರಾಜನೈತಿಕ ಹಾಗು ಕಾರಭಾರದ ತಂತ್ರದೊಳಗಿನ ಐಕ್ಯ ವನ್ನೊಳಗೊಂಡ ಗ್ರೀಸ-ರೋಮಗಳ ಐಕ್ಯದಿಂದ ಜೀವನ-ಸಂಸ್ಕೃತಿಗಳು ಒಂದಾದ ಬಗೆಯು ಒಂದು ಭೌಗೋ ಲಿಕ ಚತುಃಸೀಮೆಯೊಳಗೆ ಅದು ಸುಸಾಧ್ಯವೆಂಬುದರ ತೀರ ಸಮೀಪದ ಪ್ರತೀತಿಯಾಗಿರುವುದು. ಇದೇ ಪ್ರಕಾರದ ಇತರ ಪ್ರಯತ್ನಗಳು ದೊಡ್ಡಪ್ರಮಾಣದಿಂದಲ್ಲದಿದ್ದರೂ ಎಷ್ಟೋ ಬಗೆಯಿಂದ ಮಾನವೇತಿಹಾಸ ಕ್ರಮದಲ್ಲಿ ಆಗಿರುವುದು ಕಂಡುಬರುತ್ತಿದ್ದರೂ, ಅವು ಕೆಲವೊಂದು ಶತಮಾನಗಳನ್ನಲ್ಲದೆ ಬಹುಕಾಲ ತಾಳಿರು

ವುದಿಲ್ಲ. ಅಲ್ಲಿ ಪ್ರಯೋಗಿಸಲಾದ ಪದ್ಧತಿಯು ತೀರ ತಪ್ಪು. ಅಲ್ಲದೆ ಮಾನವಜನಾಂಗದ ಚೈತನ್ಯಕ್ಕೂ ಅನಾಚೂನವಾದ ಉತ್ಕ್ರಾಂತಿಗೂ ಅವಶ್ಯಕವಾದ ಜೀವನದ ಪ್ರವೃತ್ತಿಗಳಿಗೂ ಅಲ್ಲಿ ಅವಕಾಶವಿರಲಿಲ್ಲ. ಅದರಿಂದ ಪ್ರಗತಿಯು ಕುಂಠಿತವಾಯಿತಲ್ಲದೆ ಮೇಲಿಂದ ಮೇಲೆ ಕೆಡಲಾರಂಭಿಸಿತು. ಸಾಮ್ರಾಜ್ಯ ಸಮೂಹವು ರಾಷ್ಟ್ರವು ಒಳಗೊಳ್ಳಬಹುದಾದ ಅಜೇಯವಾದ ಚೈತನ್ಯ ಮತ್ತು ತಾಳಿಕೆಯ ಸಾಮರ್ಥ್ಯವನ್ನು ಪಡೆಯಲು ಅಸಾಧ್ಯವಾಯಿತು. ಜರ್ಮನಿ ಹಾಗು ಚೀನಗಳಷ್ಟೇ ಅಂಥ ದೊಡ್ಡ ರಾಷ್ಟ್ರಗಳೆನಿಸಿಕೊಳ್ಳುವಷ್ಟು ದೊಡ್ಡವಾದುವು. ಅವೂ ಕೂಡ ಅಧಿರಾಷ್ಟ್ರದ ರೂಪಗಳಲ್ಲ. ಹಾಗು ಸಾಮ್ರಾಜ್ಯಸಮೂಹಗಳೆಂದು ಅವುಗಳನ್ನು ಗಣಿಸುವಂತೆಯೂ ಇಲ್ಲ. ಹೀಗೆ ದೊಡ್ಡ ದೊಡ್ಡದಾದ ರಾಜ್ಯಗಳನ್ನು ಕಟ್ಟಿ ಐಕ್ಯದಿಂದ ಬಾಳಬೇಕೆಂಬ ಪ್ರವೃತ್ತಿಯು ಮೊದಲಿನಿಂದಲೇ ಕಂಡುಬರುತ್ತಿದ್ದರೂ, ಅದೆಲ್ಲ ಪರಿಣಾಮರಹಿತವಾದ ವಿಫಲಪ್ರಯತ್ನವಲ್ಲದೆ ಅದರಿಂದ ಯಾವ ಪ್ರಗತಿಯೂ ಸಾಧಿಸಲಿಲ್ಲ. ಸಕಲ ಜಗತ್ತಿನ ಆಡಳಿತೆಯ ಹೊಸಪ್ರಯತ್ನವು ಕಾರ್ಯರೂಪದಲ್ಲಿ ಬರಬೇಕಾದರೆ ಅದಕ್ಕೊಂದು ಹೊಸ ಸಾಧನೆಯು ಬೇಕು. ಅಥವಾ ಯಾವದೊಂದು ಹೊಸ ರೀತಿಯಿಂದ ಜಗತ್ತಿನೊಳಗಿನ ಯಾವತ್ತೂ ರಾಷ್ಟ್ರಗಳ ಸಂಘವೊಂದನ್ನು ಸ್ಥಾಪಿಸಲು ಹೊಸಪ್ರಯತ್ನವು ಬೇಕು. ಒಂದೇಗುರಿಯುಳ್ಳ ರಾಜ್ಯಗಳ ಯಶಸ್ವಿಯಾದ ಒಂದುಗೂಡುವಿಕೆಯಿಂದಲೂ, ಕಮ್ಯೂನಿಸ್ಟ ರತಿಯಾದಂತೆ ಪ್ರಬಲವಾದ ಒಬ್ಬರ ಆಧಿಪತ್ಯಕ್ಕೆ ಒಳಗಾಗುವುದರಿಂದಲೂ ಇಂಥದೊಂದು ವಿಚಾರಪ್ರಣಾಲಿಯು ಯಶಸ್ಸು ಕೆಲವೇ ದಿನ ಬಾಳಬಹುದು. ಆದರೆ ಅದು ಬಹುಕಾಲ ಬಾಳಬಹುದಾದ ಜಾಗತಿಕ ರಾಜ್ಯದ ಖಾತ್ರಿಯನ್ನು ಕೊಡಲಾರದು; ಇಷ್ಟೇ ಅಲ್ಲ, ಅದು ಅಪೇಕ್ಷಣೀಯವೂ ಅಲ್ಲ. ಬೇರೆ ವಿಧದ ವಿಚಾರಗಳು ರೂಪುಗೊಳ್ಳುವ ಬಗೆಗೆ ಬೇರೆ ಬೇರೆ ಪ್ರವೃತ್ತಿಗಳು ಅಲ್ಲಿ ಕಂಡು ಬಂದು ಎಂದಾದರೂ ಅದು ನೆಲಸಮವಾಗಬಹುದು; ಇಲ್ಲವಾದರೆ ಯಾವುದೋ ಒಂದು ಕ್ರಾಂತಿಯಾಗಿ ಅದನ್ನು ಕಣ್ಮರೆಯಾಗುವಂತೆ ಮಾಡಬಹುದು. ಕೊನೆಯದಾಗಿ ಹೇಳುವುದೆಂದರೆ, ಅಂಥ ಎಂಥದೇ ಸ್ಥಿತಿಯನ್ನು ಹೋಗಲಾಡಿಸಬೇಕಾಗುವುದು. ಅಂದರೆಯೆ, ಏಕಕೇಂದ್ರಿತವಾದುದೆನ್ನಿರಿ, ಇಲ್ಲವೆ ಇನ್ನೂ ಸಂವರ್ಧನಾತ್ಮಕವೆನ್ನಿರಿ (ಯಾಕೆಂದರೆ ಏಕಕೇಂದ್ರಿತವಾದಾಗ ಅದರ ಮುಂದಿನ ಪ್ರಗತಿಯು ಕಟ್ಟಾಗಬಹುದು) ಅಥವಾ ಸ್ವತಂತ್ರ ರಾಜ್ಯಗಳದೇ ಸಂಘವೆನ್ನಿರಿ, ಅದು ಸಾವಧಾನದಿಂದ ಬಹುಕಾಲ ಬಾಳಬಹುದಾದ ಜಾಗತಿಕ ಆಡಳಿತದ ಬಾಗಿಲನ್ನು ತೆರೆಯುವುದು

ಮಾನವ ಐಕ್ಯತೆಯ ಸಂಬಂಧವಾಗಿ ನಾವು ತಳೆದ ಅಭಿಪ್ರಾಯಗಳ ಹಾಗು ನಿಷ್ಕರ್ಷೆಗಳ ವಿಷಯವಾಗಿ ಹೊಸದಾಗಿ ಹೇಳುವ ಅವಶ್ಯಕತೆಯೇನೂ ಇರುವುದಿಲ್ಲ. ಆದಾಗ್ಯೂ ಕೆಲವು ವಿಷಯಗಳನ್ನು ಇಲ್ಲಿ ಪುನರ್ವಿಮರ್ಶಿಸಬಹುದು, ಉದಾಹರಣೆಗಾಗಿ: ಒಂದೇ ಒಂದು ಜನಾಂಗವಾಗಲೀ ಅಥವಾ ಸಾಮ್ರಾಜ್ಯವಾಗಲೀ ಜಗತ್ತಿನಲ್ಲಿ ಅಧಿಪತ್ಯವನ್ನು ಸ್ಥಾಪಿಸಲಾರದು ಎಂದುಮೊದಲು ಬಗೆಯಲಾಗಿತ್ತು. ಆದರೆ ಅದೇನೂ ಅಸಾಧ್ಯವಾದುದಲ್ಲ. ಯಾಕೆಂದರೆ, ಅಂಥದೊಂದು ಶಕ್ಯತೆಯು ನಮಗೆ ಕಂಗೊಳಿಸಿ ಇದೀಗ ಮಾಯವಾಗಿರುವುದು. ಪ್ರಬಲವಾದೊಂದು ರಾಷ್ಟ್ರವು ಉಳಿದ ರಾಷ್ಟ್ರಗಳೊಡನೆ ಗೆಳೆತನವನ್ನು ಬೆಳಸಿ ಪ್ರಚಲಿತವಾದ ತನ್ನ ಶಕ್ತಿಯಿಂದ ಜಗತ್ತನ್ನೇ ಆಳಲು ಹವಣಿಸಬಹುದು. ವಿಜ್ಞಾನದ ಪ್ರಭಾವದಿಂದ ಈ ಹವಣಿಕೆ, ಸ್ವಲ್ಪವೇ ಅವಧಿಯ ವರೆಗೆ ಆಗಲೊಲ್ಲದೇಕೆ, ಪ್ರಭಾವಶಾಲಿಯಾಗಬಹುದು. ಜಗತ್ತನ್ನೇ ಧ್ವಂಸಮಾಡಲೆಳಸುವ ಇಂಥ ವೈಜ್ಞಾನಿಕ ಶೋಧಗಳ ಉಪಯೋಗವನ್ನು ಸೈನಿಕ ಕ್ಷೇತ್ರದಿಂದ ಪರಾವೃತ್ತಗೊಳಿಸುವ ಪ್ರಯತ್ನವನ್ನೂ ಸುಜ್ಞರು ಕೈಕೊಳ್ಳಬಹುದು. ಆದರೆ ಮಾನವ ಪ್ರಜ್ಞೆಯಲ್ಲಿಯೇ ಅಂಥದೊಂದು ತಿಳುವಳಿಕೆಯು ಬಾರದ ವಿನಹ ಇಂಥ ಪ್ರಯತ್ನವೆಲ್ಲವೂ ವಿಫಲವಾಗುವುದಲ್ಲದೆ, ಪ್ರಸಂಗದಲ್ಲಿ ರಹಸ್ಯಸ್ಫೋಟವಾಗಿ ವಿಶ್ವಮೋಘವು ಮುಂದುವರಿಯಬಹುದು. ಕಳೆದ ಮಹಾಯುದ್ಧದ ಉದಾಹರಣೆಯನ್ನು ತೆಗೆದುಕೊಂಡರೆ, ಹಾಗೇನೂ ಆಗುವುದು ಸಾಧ್ಯವಿಲ್ಲವೆಂದು ವಾದಿಸಬಹುದು. ಯಾಕಂದರೆ, ಅದರಲ್ಲಿ ವಿಧ್ವಂಸಕವಾದ ಎದುರಾಳಿಯು ಹತಪ್ರಜ್ಞನಾಗಿ ತನ್ನ

ವೈಜ್ಞಾನಿಕ ಚಾತುರ್ಯವನ್ನು ಸಾಧಿಸುವ ಅವಕಾಶವಿಲ್ಲದೆ ಹೇಳ ಹೆಸರಿಲ್ಲದೆ ಬಿದ್ದು ಹೋದನು. ಕೂದಲಿನ ಎಳೆಯಷ್ಟು ಯಶಸ್ಸೇನೋ ಅವರಿಗೂ ದೊರೆಯಿತು, ಅದೇನೋ ಸುದೈವವು. ಜಗತ್ತಿಗೆ ಯಾವಾಗಲೂ ಲಭಿಸಬಹುದೆಂದು ದೃಢವಿಶ್ವಾಸವಿಡಲು ಬರುವಂತಿಲ್ಲ. ಜಗತ್ತಿನ ಕಲ್ಯಾಣವನ್ನು ಅಪೇಕ್ಷಿಸುವ ಮುಖಂಡರು ಇದನ್ನು ಜ್ಞಾಪಕದಲ್ಲಿಟ್ಟುಕೊಂಡು, ಅದರ ನಿವಾರಣೋಪಾಯಗಳನ್ನು ಕೈಕೊಳ್ಳುವುದು ಆವಶ್ಯಕವಾಗಿರುವುದು.

ಈ ಸಂಬಂಧವಾಗಿ ಸೂಚಿಸಲಾದ ಒಂದು ಶಕ್ಯತೆಯೆಂದರೆ: ಸಂಯುಕ್ತ ಯುರೋಪು ಹಾಗೂ ಅಮೇರಿಕೆಯ ನೇತೃತ್ವದಲ್ಲಿ ಸಂಘಟಿತವಾಗಬಹುದಾದ ಒಂದು ಸಂಯುಕ್ತ ರಾಜ್ಯಸಂಸ್ಥೆ. ಸ್ವತಂತ್ರವಾಗಲೆಳಸುವ ಏಶಿಯದ ರಾಷ್ಟ್ರಗಳು ಅದಕ್ಕೆ ಸಹಕರಿಸಬಹುದೆಂಬ ಪ್ರಬಲವಾದ ಅಪೇಕ್ಷೆ. ಹೀಗಾಗುವುದು ಶಕ್ಯವಾದರೆ ಜಾಗತಿಕ ಐಕ್ಯದ ಸಂಘಟನೆಗೆ ಅದೊಂದು ಪ್ರಮುಖವಾದ ಮೈಲುಗಲ್ಲೆನಿಸಬಹುದು. ಈ ಸೂಚನೆ ಕಾರ್ಯರೂಪಕ್ಕೆ ಇಳಿಯತೊಡಗಿದೆ. ಉತ್ತರ-ದಕ್ಷಿಣ ಅಮೇರಿಕೆಗಳಲ್ಲಿ ಅದರ ಪ್ರಾದುರ್ಭಾವವು ಅರಳತೊಡಗಿವೆ. ಯುರೋಪದ ಸಂಯುಕ್ತ ರಾಷ್ಟ್ರಗಳ ಸಂಘಟಿತ ಪ್ರಯತ್ನವೂ ನಡೆದಿದೆ. ಆದರೆ ಪಶ್ಚಿಮ ಯುರೋಪ ಹಾಗು ರಶಿಯಗಳೊಳಗಿನ ಒಂದಕ್ಕೊಂದು ವಿರುದ್ಧವಾದ ರಾಜಕೀಯ ತತ್ವಪ್ರಣಾಲಿಗಳ ಮೂಲಕ ಈ ಘಟನೆ ಅಷ್ಟೊಂದು ಸುಲಭವಾಗಿ ಸಾಧ್ಯವಾಗುವಂತೆ ತೋರುವುದಿಲ್ಲ. ಇತ್ತೀಚಿಗೆ ನಡೆದ ಘಟನೆಗಳಿಂದ ಎರಡು ಸಂಗತಿಗಳು ಸಾಧ್ಯವಾಗುವಂತೆ ಕಂಡು ಬರುವಂತಿವೆ. ಮೊದಲನೆಯದೆಂದರೆ, ರಶಿಯಾ ಹಾಗು ಕೆಂಪು ಚೀನಗಳು ತಮ್ಮ ರಾಜಕೀಯ ಹಾಗು ಸೈನಿಕ ಸಾಧನೆಯ ಮೂಲಕ ಯುರೋಪ ಏಶಿಯಗಳ ವಿಪುಲ ಜನಾಂಗಗಳನ್ನು ತಮ್ಮಲ್ಲಿಗೆ ಸೆಳೆಯುತ್ತಿರುವವು. ಇದಕ್ಕೆ ಬದಲಾಗಿ ಕಂಡುಬರುವುದು ಇತರ ಜನಾಂಗಗಳ ಸಂಘಟನೆ; ಕೆಲವಂಶದಿಂದ ಭಾಂಡವಲವಾದಿ ಕೆಲವಂಶದಿಂದ ಸೌಮ್ಯ ಸಾಮ್ಯವಾದಿಗಳಾಗಿರುವರು. ವಿಚಾರ ಸ್ವಾತಂತ್ರ್ಯ ಹಾಗು ವ್ಯಕ್ತಿ ಸ್ವಾತಂತ್ರ್ಯವೂ ಇರಬೇಕೆಂಬ ಒಂದು ಬಗೆಯ ಸ್ವತಂತ್ರತೆಯ ಕಲ್ಪನೆಗೆ ಅಂಟಿಕೊಂಡಿರುವವರು ಅಮೇರಿಕೆಯೊಳಗಿನ ಲ್ಯಾಟಿನ ಜನಾಂಗವು ಹೀಗೆ ಅಮೇರಿಕೆಯ ಸಂಘಟನೆಯಲ್ಲಿ ತೊಡಗಿರುವುದು. ಒಂದು ವೇಳೆ ಅವರ ಈ ಪ್ರಯತ್ನವು ಅಲ್ಲಲ್ಲಿ ಅಧಿಪತ್ಯವನ್ನು ಕೈಕೊಂಡು ಇತರ ಯುರೋಪದ ರಾಷ್ಟ್ರಗಳೊಡನೆ ಸಂಘರ್ಷವನ್ನು ತಂದೊಡ್ಡಬಹುದು. ಆದರೆ ಅದೊಂದು ಪ್ರಬಲವಾದ ಸಂಘರ್ಷವೆನಿಸಲಾರದು. ಅಲ್ಲಲ್ಲಿ ಸಣ್ಣಪುಟ್ಟ ಕದನಗಳು ತಲೆದೋರಬಹುದು. ಅವುಗಳನ್ನು ಸಂಯುಕ್ತ ರಾಷ್ಟ್ರ ಸಂಘವು ಸುಲಭವಾಗಿ ಬಗೆಹರಿಸಬಹುದು. ಹಾಗು ಸಂಘಟನೆಯ ದಾರಿಯನ್ನು ಸುಗಮವಾಗಿ ಮಾಡಬಹುದು. ಆದರೆ ಕಮ್ಯುನಿಸ್ಟ ಚೀನದ ಮೂಲಕವಾಗಿ ಏಶಿಯದಲ್ಲಿ ಬಗೆಹಸರಿಲಾಗದ ತೊಡಕು ನಿರ್ಮಾಣವಾಗಿರುವುದು. ಇಡಿಯ ಉತ್ತರ ಏಶಿಯವನ್ನೇ ಅದು ನುಂಗಬಹುದು. ರಶಿಯದೊಡನೆ ಕೂಡಿಕೊಂಡು ನೈಋತ್ಯ - ಏಶಿಯಾ ಹಾಗು ತಿಬೇಟಗಳಿಗೆ ಅದು ಧಕ್ಕೆ ಕೊಡಬಹುದು. ಹಾಗು ಭಾರತದ ಭದ್ರತೆಗೂ ಅದರ ರಾಜಕೀಯ ಸಾಮಾಜಿಕ ಪರಂಪರೆಗೂ ವಿಘಾತಕವಾಗಿ ಪರಿಣಮಿಸಬಹುದು. ಒಟ್ಟಿನ ಮೇಲೆ ಏಶಿಯದಲ್ಲಿ ಎರಡು ಪ್ರಬಲ ಭಾಗಗಳಾಗಿ ಅವು ತಮ್ಮ ತಮ್ಮೊಳಗೇ ಭೀಕರವಾದ ಸಂಘರ್ಷಗಳುಳ್ಳವಾಗಿ ಪ್ರಬಲವಾದ ಜಾಗತಿಕ ತೊಡಕಿಗೆ ಕಾರಣೀಭೂತವಾಗುವುವು. ಅವುಗಳ ಪರಸ್ಪರ ವಿರುದ್ಧ ತತ್ವಪ್ರಣಾಲಿಗಳ ಮೂಲಕ ಜಾಗತಿಕ ಐಕ್ಯದ ಸಂಘಟನೆಯು ಬಹುದೂರ ತಳ್ಳಿದಂತಾಗಬಹುದು. ಮೂರು ಇಲ್ಲವೆ ನಾಲ್ಕು ಭೂಖಂಡಗಳ ಸಂಘಟನೆಗಳು ಒಂದಾಗಿ ಕೊನೆಯಲ್ಲಿ ಒಂದು ಜಾಗತಿಕ ಸಂಘಟನೆ ಪ್ರಬಲವಾಗಬೇಕೆಂಬ ವಿಚಾರಪ್ರಣಾಲಿಯು ಇದರಿಂದಾಗಿ ನಿರ್ನಾಮವಾಗುವುದಲ್ಲದೆ, ಬಲವತ್ತರವಾದ ಘರ್ಷಣದ ಪೂರ್ವದಲ್ಲಿ ಅನಿವಾರ್ಯವಾಗಿ ಪರಿಣಮಿಸುವುದು.

ಸಾಮ್ಯವಾದವು ಎಲ್ಲ ರಾಷ್ಟ್ರಗಳಲ್ಲಿಯೂ ಪಸರಿಸಬಹುದೆಂದು ಒಂದುಕಾಲದಲ್ಲಿ ಅನಿಸುತ್ತಿತ್ತು. ಹಾಗಾದರೆ ಅದರ ಸ್ವಾಭಾವಿಕ ಲಕ್ಷಣವಾದ ಅವಿಭಕ್ತ ಶಕ್ತಿಯು ರಾಷ್ಟ್ರ ರಾಷ್ಟ್ರಗಳೊಳಗಿನ ವಿಭಕ್ತೀಕರಣ

ವನ್ನು ತಡೆದುನಿಲ್ಲಿಸಿ, ಆರ್ಥಿಕಕ್ಷೇತ್ರದೊಳಗಿನ ಮೇಲಾಟವನ್ನು ತಡೆಯುವುದರಿಂದ ಯಾವದೇ ಪ್ರಕಾರದ ಹೋರಾಟವು ತಲೆದೋರದಂತೆ ಮಾಡಿ, ಜಾಗತಿಕ ಐಕ್ಯವನ್ನು ಸುಸಂಭಾವ್ಯವಾಗುವಂತೆ ಮಾಡುವುದೆಂದು ಗಣಿಸಲಾಗಿತ್ತು. ಆದರೆ ವಿವಿಧ ರಾಷ್ಟ್ರಗಳಲ್ಲಿ ತಲೆದೋರುತ್ತಿದ್ದ ವಿಪುಲವಾದ ಶಕ್ತಿಗಳನ್ನು ಸಾಮ್ಯವಾದವು ಒಮ್ಮೆಲೆ ಎದುರಿಸುವಷ್ಟು ಸಾಮರ್ಥ್ಯವನ್ನು ಪ್ರದರ್ಶಿಸಲಿಲ್ಲ. ಇಷ್ಟೇ ಅಲ್ಲ, ಸಾಮ್ಯವಾದವನ್ನು ಸ್ವೀಕರಿಸಿದ ರಾಷ್ಟ್ರಗಳಲ್ಲಿಯೂ ಅಲ್ಲಿಯ ಸನಾತನವೃತ್ತಿಗಳು ಪೂರ್ಣವಾಗಿ ಅಳಿದು ಹೋಗದಿದ್ದುದರಿಂದ ಆ ಅವಿಭಕ್ತ ಶಕ್ತಿಯು ಯಶಸ್ವಿಯಾಗಲಿಲ್ಲ. ಹಾಗೆಯೇ ಎಲ್ಲ ರಾಷ್ಟ್ರಗಳಲ್ಲಿಯೂ ಏಕಕಾಲಕ್ಕೆ ಒಂದೇಸವನೆ ಸಾಮ್ಯವಾದವು ಹಬ್ಬುವಂತೆಯೂ ತೋರಲಿಲ್ಲ. ಕಮ್ಯೂನಿಝಂ ಮತ್ತು ಸ್ವಾತಂತ್ರ್ಯವನ್ನು ಸಮರ್ಥಿಸುವ ಸೌಮ್ಯತರದ ಸಾಮ್ಯವಾದಗಳೊಳಗೂ ಘರ್ಷಣವುಂಟಾಗಿ ಜಾಗತಿಕ ಐಕ್ಯವು ಮುಂದೆ ಬೀಳುವ ಶಕ್ಯತೆಯು ಮಾತ್ರ ಕಂಡು ಬರಹತ್ತಿತು. ಕಮ್ಯೂನಿಝಂದ ತತ್ವವು ವ್ಯಕ್ತಿಸ್ವಾತಂತ್ರ್ಯಕ್ಕೆ ವಿಘಾತಕವಾಗಿರುವುದೆಂದಾಗಲೀ ಅಥವಾ ಅಸ್ತಿತ್ವಕ್ಕೆ ಅಪಾಯಕರವಾದುದೆಂದಾಗಲೀ ಎಣಿಸಬಾರದು. ಆದರೆ ಇಲ್ಲಿಯ ವರೆಗೆ ವ್ಯಕ್ತಿಯ ಅನವರತವಾದ ಬೆಳವಣಿಗೆಗೊಂಡ ಕಮ್ಯೂನಿಝಂ ಪದ್ಧತಿಯು ನಿಜವಾದ ಕಮ್ಯೂನಿಝಂ ಅಲ್ಲವೇ ಅಲ್ಲ; ಅದೊಂದು ಅಪೂರ್ವವಾದ ನಿಷ್ಠುರತೆಯಿಂದ ಕೂಡಿದ ರಾಷ್ಟ್ರೀಯ ಸಾಮ್ಯವಾದವು. ಆದರೆ ಸಾಮ್ಯವಾದವು ಮಾರ್ಕ್ಸನ ವಲಯದಿಂದ ಬಿಡಿಸಿಕೊಂಡು ನಿಷ್ಠುರತೆಯಿಂದ ರಹಿತವಾದ ರೂಪಗಳನ್ನು ತಾಳಬಹುದು; ಹಾಗು ಅದು ಇಡಿಯ ಜಗತ್ತಿನಲ್ಲೆಲ್ಲ ಹಬ್ಬುವದೂ ಸಾಧ್ಯವಾಗಲಾರದು. ಯಾಕೆಂದರೆ ಅತಿಪ್ರಾಚ್ಯದಲ್ಲಿ ಕಾಣಿಸಿಕೊಂಡಂತೆ ಭಾಂಡವಲವಾದ ಹಾಗು ಸಾಮ್ಯವಾದ: ಇವೆರಡೂ ಜೊತೆಯಲ್ಲಿರುವುದು ಸಂಭವನೀಯವೆಂದು ತೋರುವುದು. ಅಮೇರಿಕೆಯಲ್ಲಿ ವ್ಯಕ್ತಿಸ್ವಾತಂತ್ರ್ಯ ಹಾಗು ಭಾಂಡವಲಶಾಹಿಗಳು ಪ್ರಬಲವಾಗಿ ಕಂಡುಬರುವವಲ್ಲದೆ, ಕಮ್ಯೂನಿಝಂ ವಿಷಯವಾಗಿ ತೀವ್ರವಾದ ವಿರೋಧವು ಕಂಡುಬರುವುದು. ಏಶಿಯದಲ್ಲಿ ತಲೆಯತ್ತುತ್ತಿದ್ದ ಕಮ್ಯೂನಿಝಂ ಸದ್ಯದ ಪರಿಸ್ಥಿತಿಯಲ್ಲಿ ಹಾಗೆಯೇ ಮುಂದುವರಿದ ಇಡಿಯ ಖಂಡವನ್ನೇ ಪಾದಾಕ್ರಾಂತವನ್ನಾಗಿ ಮಾಡಬಹುದೆಂಬುದು ಸಂಭವನೀಯವೆಂದು ಹೇಳವುದು ಎಂದಿಗೂ ಸಮಂಜಸವಲ್ಲ. ಹಾಗಾಗಬೇಕಾದರೆ ಪರಸ್ಪರ ವಿರೋಧಿಯಾದ ಎರಡು ಶಕ್ತಿಗಳಲ್ಲಿ ಒಂದು ಅಳಿಯಲೇ ಬೇಕು. ಅಂದರೆಯೆ ಇನ್ನೊಂದು ಬದುಕಬಹುದು. ಇಲ್ಲವಾದರೆ ಎರಡೂ ನ್ಯಾಯವಾಗಿ ಉಳಿಯುವಂತೆ ಮಾಡುವ ಮೂರನೆಯದೊಂದು ಪಂಚಾಯತಿಯ ಸಂಸ್ಥೆ ತಲೆದೋರಬೇಕು. ಆ ಸಂಸ್ಥೆಯ ಮೂಲಕವಾಗಿ ಯಾವ ಪ್ರಕಾರದ ಕದನಗಳಿಗೂ ಅವಕಾಶ ದೊರಕದಂತೆ ಅವುಗಳೊಳಗಿನ ತಂಟೆ ತಕರಾರುಗಳು ಬಗೆಹರಿಯುವ ಏರ್ಪಾಡು ಆಗಿರಬೇಕು. ಇಂಥ ಸಂಸ್ಥೆಯೆಂದರೆ, ರಾಷ್ಟ್ರಸಂಘ (League of Nations) ಹಾಗು ಸಂಯುಕ್ತರಾಷ್ಟ್ರಸಮಿತಿ (U. N. O.) ಇವುಗಳ ಉತ್ತರದಾಯಿಯೇ ಆಗಿರಬೇಕು. ಹಾಗು ಅವುಗಳು ತೋರಿಸಿದ ದಾರಿಯಲ್ಲಿಯೇ ಅದು ಸಾಗುತ್ತಿರಬೇಕು. ತಮ್ಮ ತತ್ವಪ್ರಣಾಲಿ ಹಾಗು ಧೋರಣೆಗಳಲ್ಲ ಎಷ್ಟೋ ಅಭಿನ್ನತೆಯಿದ್ದರೂ ಏಶಿಯಾ ಅಮೇರಿಕೆಗಳು ಹೇಗೆ ಸಂಯುಕ್ತ ರಾಷ್ಟ್ರ ಸಮಿತಿಯಲ್ಲಿದ್ದು ಅದನ್ನು ನಿರ್ಮೂಲ ಮಾಡುವ ಗೊಡವೆಗೆ ಹೋಗದೆ ತಮ್ಮ ವ್ಯವಹಾರವನ್ನು ಸಾಗಿಸುವವೋ, ಹಾಗೆಯೇ ಈ ಮೂರನೆಯ ಸಮಿತಿಯು ಅಂಥದೊಂದು ಅವಶ್ಯಕತೆಯ ದೃಷ್ಟಿಯಿಂದ ಹಾಗು ಅಪ್ರತಿಮವಾದ ಪ್ರಯೋಜಕತೆಯ ಮೂಲಕ ತನ್ನ ಅನವರತವಾದ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪಾತ್ರವಾಗಿರುವುದು ಇವೇ ಶಕ್ತಿಗಳು ಇದೇ ದಾರಿಯಲ್ಲಿ ಸಾಗುವುವಲ್ಲದೆ ಜಾಗತಿಕ ಐಕ್ಯತೆಯು ಆಗಲೂ ಶಕ್ಯತೆಯ ಅಳವಿನಲ್ಲಿ ಬರುವುದು. ಕೊನೆಯಲ್ಲಿ ಜನಾಂಗದ ಸಾರ್ವತ್ರಿಕ ಅಡಚಣಿಗಳೂ ಹಾಗು ಅದರ ಆತ್ಮರಕ್ಷಣೆಯ ಆವಶ್ಯಕತೆಯೂ ಸಮಸ್ಯೆಯೂ ಬಗೆಹರಿಸಿದಂತಾಗಿ, ಅದರ ಅಪರಿಹಾರ್ಯತೆಯನ್ನು ಪ್ರಸ್ಥಾಪಿಸಿದಂತಾಗುವುದು

ಆದುದರಿಂದ ಸಂಯುಕ್ತರಾಷ್ಟ್ರ ಸಂಘದ ನಿರ್ಮಾಣವಾದಂದಿನಿಂದ ಸಂಭವಿಸಿದ ಸಂಗತಿಗಳ ಮೇಲಿಂದ ಜಾಗತಿಕ ಐಕ್ಯದ ಕೊನೆಯ ಯಶಸ್ವಿತೆಯ ಸಂಬಂಧವಾಗಿ ನಾವು ಉದಾಸೀನರಾಗಬೇಕಾದ

ಯಾವ ಘಟನೆಯೂ ಇರುವುದಿಲ್ಲ. ತೊಡಕು-ತೊಂದರೆಗಳು ಇರತಕ್ಕುವೇ. ಘರ್ಷಣವೂ ತಲೆದೋರಬಹುದು. ಅದೇಕೆ? ಗುದ್ದಾಟದಂಥ ಸಂಘರ್ಷವೂ ಎದುರಾಗಿ ಅದರ ಉದ್ದೇಶವನ್ನೇ ತಲೆಕೆಳಗಾಗಿ ಮಾಡಬಹುದು. ಆದರೆ ಜನಾಂಗದ ಭವಿತವ್ಯತೆಯೇ ವಿಫಲವಾಗಿರುವುದೆಂಬ ಮನವರಿಕೆಯುಳ್ಳವರ ವಿನಹ ಯಾರೂ ಅದರಿಂದ ಪೂರ್ಣವಾದ ವಿಫಲತೆಯನ್ನು ಒಪ್ಪಿಕೊಳ್ಳಲಾಗದು. ಪ್ರಕೃತಿಯು ಮಹತ್ತಾದ ಸಂಘಟನೆಯತ್ತ ಸಾಗುತ್ತಿರುವುದೆಂದೂ, ಕೊನೆಯಲ್ಲಿ ಎಲ್ಲದಕ್ಕಿಂತಲೂ ಮಹತ್ತಮವಾದ ಹಾಗು ಜಗತ್ತಿನ ಜನಾಂಗಗಳ ಅಂತಿಮ ಐಕ್ಯದ ಆದರ್ಶವನ್ನು ಸಾಧಿಸುವದರಲ್ಲಿ ತೊಡಗಿರುವುದೆಂದೂ ನಾವು ಹೇಳುತ್ತಿರುವ ಸಿದ್ಧಾಂತಕ್ಕೆ ಯಾವ ಬಾಧೆಯೂ ತಟ್ಟಲಾರದು. ಮಾನವ ಜನಾಂಗವು ಇದನ್ನೇ ಬಯಸುತ್ತಿರುವುದು. ಇದಕ್ಕೆದುರಾಗುವ ತೊಡಕು-ತೊಂದರೆಗಳು, ಘರ್ಷಣ ಸಂಘರ್ಷಗಳು, ಅದರ ಸಂಭವವನ್ನು ಮುಂದೂಡಬಹುದೇ ಹೊರತು ಅಸಂಭವವನ್ನಾಗಿ ಮಾಡಲಾರವು. ಇಲ್ಲವೆಂದರೆ, ಮಾನವ ಜನಾಂಗದ ನಾಶವೇ ತದ್ವಿರುದ್ಧವಾದ ಪರಿಣಾಮವಾಗಬಹುದು. ವಿಜ್ಞಾನದ ವಿವಿಧ ಶೋಧನೆಗಳು ಎಷ್ಟೇ ವಿನಾಶಕಾರಿಯೆಂದು ಕಂಡುಬಂದರೂ ಅಂತಿಮ ಶಾಂತಿಯನ್ನೂ ಮಾನವ ಕಲ್ಯಾಣವನ್ನೂ ಪುರಸ್ಕರಿಸುತ್ತಿರುವವು. ಮತ್ತಾವುದೂ ನಮ್ಮ ನೆರವಿಗೆ ಅನುವಾಗದಿದ್ದರೂ ಉತ್ಕ್ರಾಂತಿಶಕ್ತಿಯೂ, ಮತ್ತಾವ ಅಂತಃಶಕ್ತಿಯಲ್ಲದಿದ್ದರೂ ಪ್ರಕೃತಿಯೆಂದು ನಾವು ಸಂಬೋಧಿಸುತ್ತಿರುವ ವಿಶ್ವಶಕ್ತಿಯೂ, ಮಾನವ ಜನಾಂಗವನ್ನು ಒಂದು ಹೆಜ್ಜೆ ಮುಂದೆ ನುಗ್ಗಿಸುತ್ತಿರುವದು ಖಂಡಿತ. ಅದೊಂದು ಮಾನವ ಜನಾಂಗದ ಆತ್ಮರಕ್ಷಣೆಯ ಮುಂದಿನ ಹೆಜ್ಜೆ. ಯಾಕೆಂದರೆ, ಅದರ ಆವಶ್ಯಕತೆಯನ್ನು ನಾವು ಕಂಡುಕೊಂಡಿರುವೆವಷ್ಟೇ ಅಲ್ಲ, ಅದು ಸಾಧಿಸಬೇಕಾದುದರ ಕಲ್ಪನೆಯೂ ಇದೀಗಲೇ ಜನ್ಮವೆತ್ತಿದೆ; ಆದರೆ ದೇಹವು ರೂಪುಗೊಳ್ಳಬೇಕಾಗಿರುವುದೆಂಬುದೇ ಅದರ ಇಂದಿನ ಕೂಗು. ಈ ನವಸೃಷ್ಟಿಯ ಮಾರ್ಗದಲ್ಲಿರುವ ಸ್ಥಿತಿಗತಿಗಳನ್ನೂ ಸಂಭವನೀಯತೆಗಳನ್ನೂ, ರೂಪಾವಲಿಗಳನ್ನೂ ಈ ಸಂಬಂಧದಲ್ಲಿ ನಾವು ವಿವೇಚಿಸಿರುವೆವು. ಪೂರ್ವಗ್ರಹರಹಿತವಾದ ವೈಯಕ್ತಿಕ ಸಂಬಂಧವಿರದ ಹಾಗು ಪಕ್ಷಪಾತವಿರಹಿತವಾದ ವಿವೇಚನೆಗಳನ್ನು ಈ ಕಾರ್ಯದಲ್ಲಿ ನಿರತವಾದ ಶಕ್ತಿಗಳ ಹಾಗು ಅವುಗಳು ಸಾಧಿಸಬಹುದಾದ ಪರಿಣಾಮಗಳ ಬಗೆಗೆ ಮಂಡಿಸುವುದು ಈ ಪ್ರಬಂಧದ ಉದ್ದೇಶವಾಗಿದ್ದಿತು. ಉಳಿದುದೆಲ್ಲವೂ ಮಾನವತೆಯ ಬೌದ್ಧಿಕ ಹಾಗು ನೈತಿಕ ಶಕ್ತಿಯ ಮೇಲೆಯೇ ಮುಂದಿನ ಕಾರ್ಯದ ಸಾಧನೆಯು ಅವಲಂಬಿಸಿರುವುದು.

ಒಟ್ಟಿನ ಮೇಲೆ ಹೇಳಬೇಕಾದರೆ, ಜಗತ್ತಿನೊಳಗಿನ ಅತಿ ದಾರುಣವಾದ ಹಾಗು ಧೈರ್ಯವನ್ನೇ ಕುಂದಿಸುವ ಪರಿಸ್ಥಿತಿಗಳೆಲ್ಲವನ್ನೂ ಲಕ್ಷ್ಯಕ್ಕೆ ತೆಗೆದುಕೊಂಡರೂ ಜಾಗತಿಕ ಐಕ್ಯದ ವಿಷಯವಾಗಿ ನಾವು ತಳೆದ ಅಭಿಪ್ರಾಯದ ವಿಷಯವಾಗಿ ಯಾವ ಅಭ್ಯಂತರವೂ ಕಂಡುಬರಲಾರದು. ಪ್ರಕೃತಿಯ ಮುನ್ನೋಟವೂ, ಪರಿಸ್ಥಿತಿಯ ಒತ್ತಾಯವೂ, ಮಾನವ ಜನಾಂಗದ ಇಂದಿನ ಹಾಗು ಮುಂದಿನ ಆವಶ್ಯಕತೆಯೂ ಅದನ್ನು ಅಪರಿಹಾರ್ಯವೆಂದೇ ಸಾರುವವು. ಅದರ ಅಂತಿಮ ಪರಿಣಾಮವೆಂದರೆ ಜಾಗತಿಕ ರಾಷ್ಟ್ರ (World State) ದ ಪ್ರಸ್ಥಾಪನೆ. ಹಾಗು ಅದರ ಅತೀವ ಇಷ್ಟವಾದ ರೂಪವೆಂದರೆ ಸ್ವಂತತ್ರ ರಾಜ್ಯಗಳ ಸಂಯುಕ್ತ ಸಂಘಟನೆ. ಅವರೊಳಗೆ ಯಾವದೇ ಬಗೆಯ ಪಾರತಂತ್ರ್ಯ ಬಲಾತ್ಕಾರಪೂರ್ವಕವಾದ ಉಚ್ಚನೀಚತೆ, ಹಾಗು ಪರಾಧೀನತೆ ಇವುಗಳಿಗೆ ಸ್ಥಾನವಿರಲಾರದು. ಆ ಸಂಘಟನೆಯೊಳಗೆ ಕೆಲವರಿಗೆ ಸ್ವಾಭಾವಿಕವಾದ ಪ್ರತಿಷ್ಠೆ ಲಭಿಸಬಹುದಾದರೂ, ಯಾರಿಗೂ ಸಮಾನ ದರ್ಜೆಯನ್ನು ಅಲ್ಲಗಳೆಯಲಾಗದು. ಇಂಥ ಸಂಯುಕ್ತ ಸಂಘಟನೆಯೇ ಬಲು ಇಷ್ಟವಾದುದಾಗಿರುವುದು. ಉಳಿದ ಯಾವತ್ತು ವಿಷಯಗಳು ಮುಂದಿನ ಕಾಲದಲ್ಲಿಯ ಸ್ಥಿತಿಗತಿಗಳನ್ನವಲಂಬಿಸಿ ಅವುಗಳ ವಿಚಾರ-ವಿಮರ್ಶೆಗಳ ಮೇಲೆ ಅವಲಂಬಿಸಿರುವುವು. ಈ ಪ್ರಕಾರದ ಜಾಗತಿಕ ಐಕ್ಯವು ಬಹುಕಾಲ ಬಾಳಿ ಅದಕ್ಕೊಂದು ಶಾಶ್ವತ ರೂಪವು ಬರುವುದು. ಈ ಜಗತ್ತೇ ಪರಿವರ್ತನಶೀಲವಾಗಿರುವುದರಿಂದ ನಡುನಡುವೆ ಅದಕ್ಕೆ ತಡೆ-ತೊಂದರೆಗಳು ತಾತ್ಪೂರ್ತಿಕವಾಗಿ ತಲೆದೋರಬಹುದು. ಒಮ್ಮೆ

ಸುಸಂಘಟಿತವಾದ ಘಟನೆಯಿಂದ ಕ್ರಾಂತಿಗೀಡಾಗಿ ಒಮ್ಮೊಮ್ಮೆ ಹೊಸ ವಿಚಾರಗಳೂ ತಲೆದೋರಬಹುದು. ಮಾನವತೆಯು ಪ್ರಗತಿಹೊಂದಿದಂತೆ ಆ ಜಾಗತಿಕ ಸಂಘಟನೆಯಲ್ಲಿಯೂ ಪರಿವರ್ತನೆಗಳು ಆವಶ್ಯಕವೆನಿಸಬಹುದು. ಆದರೆ ಸದ್ಯದ ಅನಿಶ್ಚಿತವಾದ ಹಾಗು ವಿನಾಶಕರವಾದ ಪರಿಸ್ಥಿತಿಯಲ್ಲಿರುವ ಮಾನವ ಜನಾಂಗಕ್ಕೆ ನಿರ್ಭೀತಿಪ್ರದವಾದ ಪ್ರಗತಿಯ ಆಶಾಂಕುರವನ್ನು ಮೂಡಿಸುವುದು ಪರಮಾವಶ್ಯಕವಾಗಿರುವುದು. ಮಾನವ ಐಕ್ಯದ ಆದರ್ಶವು ಸಾಧಿಸಲಾಗದ ಆದರ್ಶವಾಗಿ ಉಳಿಯದೆ ಸುಸಾಧ್ಯವಾದ ಸಂಗತಿಯಾಗಬೇಕಲ್ಲದೆ, ಅದರ ಸಂರಕ್ಷಣೆಯು ಸಂಯುಕ್ತ ಮಾನವ ಜನಾಂಗದ ಕೈಯೊಳಗಿನ ಕನ್ನಡಿಯಂತಾಗಬೇಕು. ಅದರ ಮುಂದಿನ ಭವಿಷ್ಯವಂತೂ ದೇವತೆಗಳ ವಶದಲ್ಲಿಯೇ ಇದೆ; ಹಾಗು ಮಾನವ ಜನಾಂಗದ ಅವಿರತವಾದ ಅಸ್ತಿತ್ವವು ಆ ದೇವತೆಗಳ ದೃಷ್ಟಿಯಲ್ಲಿ ಪ್ರಯೋಜನಕಾರಿಯೆನಿಸಿದರೆ ಅದನ್ನು ಅವರ ಸಂರಕ್ಷಣೆಯ ಆಧಿಪತ್ಯಕ್ಕೆಯೇ ಸಂತತವಾಗಿ ಒಪ್ಪಿಸಿಬಿಡಬಹುದು.


— ಸದಾನಂದ ನಾಯಕ

---

ವಾಸನೆಯೇ ಎಲ್ಲಬಗೆಯ ದುಃಖಕ್ಕೂ ನಿರಾಶೆಗೂ ಕಷ್ಟಕ್ಕೂ ಮೂಲಕಾರಣವಾಗಿದೆ. ವಾಸನೆಯ ಹಂಬಲದಲ್ಲಿ ಒಂದು ಬಗೆಯ ಉದ್ರೇಕಕಾರಕ ಸುಖಸಂತೃಪ್ತಿ ತೋರಿ ಬರುವದೇನೋ ನಿಜ. ಆದರೆ ಅದರಲ್ಲಿ ಮಾನವನು ಸದಾ ಹಿಂಡಿಹಿಪ್ಪೆಯಾಗಿ ಬಿಡುತ್ತಾನೆ. ಯಾಕಂದರೆ ಈ ತೃಪ್ತಿಯು ಹಂಬಲದ ಬೆಂಬತ್ತಿ ಹೊರಟಾಗ ದಣಿವು, ಹಸಿವೆ, ತಳಮಳ, ಕೂಡಲೆ ದಣಿಸುಕೊಳ್ಳುವ ದೌರ್ಬಲ್ಯ, ಅಲ್ಪತ್ವಭಾವ, ಅತೃಪ್ತಿ, ಪಡೆದ ಫಲಗಳ ಬಗ್ಗೆ ಅಸಮಾಧಾನ, ಅವ್ಯಾಹತವಾದ ವಿಘಾತುಕ ಉದ್ರೇಕ, ತಾಪ, ಉದ್ವಿಗ್ನತೆ, ಅಶಾಂತಿ ಇವೆಲ್ಲ ಉಂಟಾಗುತ್ತವೆ.

ಜಗತ್ತನ್ನು ಸ್ವಾಧೀನ ಪಡಿಸಿಕೊಂಡ ಅದನ್ನು ಉಪಭೋಗಿಸಬೇಕೆಂಬ ಆತ್ಮನ ಮುಖ್ಯ ಪ್ರವೃತ್ತಿಯು ದೈವಿ ಆನಂದಕ್ಕೋಸ್ಕರವೇ ಇದೆ. ಆದರೆ ಕೇವಲ ಆಶಾತೃಪ್ತಿಯಲ್ಲಿ ರತವಾಗಿರುವದೆಂದರೆ ದೈವಿ ಆನಂದವನ್ನು ಮಾನಸಿಕ ಹಾಗೂ ದೈಹಿಕ ರೀತಿಯಲ್ಲಿ ಅಧಃಪಾತಕ್ಕೆ ಎಳೆದಂತೆಯೇ ಸರಿ.

— ಶ್ರೀ ಅರವಿಂದರು



**Students' Prayer**

Make of us the hero warriors we aspire to become. May we fight successfully the great battle of the future that is to be born against the past that seeks to endure; so that the new things may manifest and we be ready to receive them.

THE MOTHER

# ಪ್ರಾರ್ಥನೆ-ಸಂದೇಶಗಳು

## ೧೯೫೪

(ಸಮರ್ಪಣದ ಮೂರನೆಯ ಸಂಚಿಕೆಯಲ್ಲಿ ವರುಷಾರಂಭದ (೧೯೪೬-೧೯೫೨) ಸಂದೇಶಗಳನ್ನು ಕುರಿತ ವಿವೇಚನೆಯನ್ನು ಕೊಡಲಾಗಿದೆ. ೧೯೨೨ ರಿಂದ ೧೯೪೪ ರ ವರೆಗಿನ ಸಂದೇಶಗಳ ಸಂಗ್ರಹವು ಆಶ್ರಮದಿಂದ ಚಿಕ್ಕ ಹೊತ್ತಿಗೆಯಾಗಿ ಪ್ರಕಟವಾಗಿದೆ. ವರುಷಾರಂಭದ ಪ್ರಾರ್ಥನೆಗಳಲ್ಲದೆ ಆಶ್ರಮದಲ್ಲಿ ವಿವಿಧ ದಿನಾಚರಣೆಯ ಪ್ರಸಂಗಗಳಲ್ಲಿ ಪ್ರಾರ್ಥನೆ-ಸಂದೇಶಗಳನ್ನು ಪ್ರಕಟಿಸುವುದುಂಟು. ೧೯೫೩ ನೇಯ ವರುಷದಲ್ಲಿ ಇದುವರೆಗೆ ಪ್ರಕಟವಾದವುಗಳನ್ನು ಸಂಗ್ರಹಿಸಿ, ಕನ್ನಡಿಸಿ ಈ ಬರೆಹದಲ್ಲಿ ಕೊಡಲಾಗಿದೆ.)

೧-೧-೫೪

**ಪ್ರಭುವೆ ನೀನು ನಮಗೆ ಹೇಳಿದುದು ಹೀಗೆ: ಧೈರ್ಯಗೆಡಬೇಡ; ಗಟ್ಟಿಯಾಗಿಹಿಡಿ. ಏನೆಲ್ಲವೂ ಅಳಿಯುತಿದೆಯೆಂದು ತೋರುವಾಗಲೇ ಎಲ್ಲವೂ ಉಳಿದು ಬರುತಿಹುದು.**

೨೧-೨-೧೯೫೪

**ಮಾತೆಯತ್ತ ಹೊರಳಿದವರೆಲ್ಲ ನನ್ನ ಯೊಗವನಾಚರಿಸುತಿಹರು ವ್ಯಕ್ತಿಯ ಸ್ವಂತ ಪ್ರಯತ್ನವೊಂದರಿಂದಲೆಪೂರ್ಣಯೋಗಸಾಧ್ಯವಲ್ಲ. ವ್ಯಕ್ತಿಪ್ರಯತ್ನದಿ ಎಲ್ಲವನು ಸಾಧಿಸುವೆನೆನ್ನುವುದು ಸರಿಯಲ್ಲ. ಯಾವ ಮಾನವಪ್ರಾಣಿಯೂ ಅದನು ಹಾಗೆ ಸಾಧಿಸಲಾರ. ಹೀಗಿದ್ದರೆ, ಮಾಡಬೇಕಾದುದೇನು? ಇಂತಿದೆಯದು ತನ್ನನ್ನು ಮಹಾ ಮಾತೆಯ ಹಸ್ತಕೆ ಒಪ್ಪಿಸಿಕೊಳ್ಳಬೇಕು. ಸೇವೆ, ಭಕ್ತಿ, ಅಭೀಪ್ಸೆಗಳಿಂದ ತನ್ನನೇ ಅರಳಿಸಿಕೊಳ್ಳಬೇಕು. ಆಗ ಮಹಾಮಾತೆ ತನ್ನ ಬೆಳಕಿನಿಂದ, ಶಕ್ತಿಯಿಂದ ವ್ಯಕ್ತಿಯ ಸಾಧನೆ ಕೈಗೂಡುವಂತೆ ನೋಡಿಕೊಳ್ಳುವಳು. ದೊಡ್ಡ ಪೂರ್ಣಯೋಗಿಯಾಗುವೆನೆಂಬ ಮಹಾತ್ವಾಕಾಂಕ್ಷೆಯೂ ತರವಲ್ಲ. ಅತಿಮಾನಸಿಕ ವ್ಯಕ್ತಿಯಾಗಲೆಂದು ಹೊರಟು ತಾನಾವ ಹಂತದಲ್ಲಿದ್ದೇನೆ, ಎಂದು ಕೇಳಹೊರಡುವುದೂ ತಪ್ಪು.**

**ಮಹಾಮಾತೆಗಾಗಿ ಭಕ್ತಿಯನುಸಲ್ಲಿಸಿ ತನ್ನನೇ ಸಮರ್ಪಿಸಿಕೊಂಡು ಆಕೆ ಮಾಡಿದಂತಾಗುವೆನೆಂದು ತಿಳಿದುಕೊಳ್ಳುವುದು ಉಚಿತಮನೋಭಾವ. ಉಳಿದೆಲ್ಲವನು ನಿರ್ಣಯಿಸುವ ಪರಿವರ್ತನೆಗೈವ ಹೊಣೆ ಮಾತೆಗೇ ಸೇರಿದುದು.**

೨೯-೩-೫೪

**ಮಹಾಮಾತೆಗಾಗಿ ಹಾಗು ಅವರೊಂದಿಗಿನ ಏಕತೆಗಾಗಿ ನಿನ್ನನು ತೆರೆದುಕೋ. ಅವರ ಸ್ಪರ್ಶವು ನಿನ್ನನು ಪರಿಪೂರ್ಣತೆಗಾಗಿ ರೂಪಿಸುವಂತೆ ನಿನ್ನನು ಮೆದುವುಗೊಳಿಸು.**

೪-೪-೫೪

**ಬೆಳಗಿನ ಸಮಯ ಬರುವ ವರೆಗೆ ಅಚಲವಾಗಿರುವುದು ಗಟ್ಟಿಯಾಗಿರುವುದು ಇದುವೇ ನೀನೆಸಗಬೇಕಾದ ಕಾರ್ಯ.**

೧೪–೪–೫೩

ನಿನ್ನ ಹಾಗು ದೈವೀ ಸಂಬಂಧದಲ್ಲಿ ನಿನ್ನ ವೈಯಕ್ತಿಕ ಆಶೆಗಳನು ದೇವನು ಪೂರೈಸಲಿ, ಎಂಬ ಭಾವವಿರಕೂಡದು ಆದರೆ ಅವುಗಳಿಂದ ನಿನ್ನನು ಮೇಲಕ್ಕೆತ್ತಿ ಅಧ್ಯಾತ್ಮದ ಶ್ರೇಷ್ಠ ಸಂಭಾವ್ಯಗಳಿಗೆ ನಿನ್ನನು ತಲಪಿಸುವ ರೀತಿಯಲ್ಲಿ ದೈವೀ ಸಂಬಂಧವಿರಬೇಕು. ಹಾಗಾಗುವುದಾದರೆ ನೀನು ಅಂತರಂಗದಲ್ಲಿ ತಾಯಿಯೊಂದಿಗೆ ಒಡಗೂಡುವೆ ಇದರ ಫಲವಾಗಿ ಬಾಹ್ಯ ಜೀವನದಲ್ಲಿ ಆ ಐಕ್ಯ ತಲೆದೋರುವುದು. ನಿನ್ನ ಪ್ರಾಣಮಯ ಆಶೆಗಳ ಸಂತುಷ್ಟಿಯಿಂದ ಇದು ಸಾಧ್ಯವಾಗುವುದಿಲ್ಲ. ಆಶೆಗಳು ಪೂರೈಸುವುದರಿಂದ ಆಶೆಗಳ ಪ್ರಚೋದನೆಯೇ ಬಲಿಯುವುದು. ಅದರಿಂದಾಗಿ ನೀನು ಸಾಮಾನ್ಯ ಪ್ರಕೃತಿಯ ಪ್ರಕ್ಷುಬ್ಧಗೊಂದಲದಲ್ಲಿ, ಅಜ್ಞಾನದಲ್ಲಿ ಸಿಕ್ಕಿ ಬೀಳುವಿ ಅಂತರಂಗದ ಶ್ರದ್ಧೆಯಿಂದ, ಸಮರ್ಪಣೆಯಿಂದ ಮಹಾತಾಯಿಯ ಶಾಂತಿ, ಶಕ್ತಿಗಳು ಒಳಗಿನಿಂದ ಕಾರ್ಯೋನ್ಮುಖವಾಗುವವು. ಆ ಮೂಲಕ ನಿನ್ನ ಪ್ರಾಣಮಯ ಸ್ವಭಾವವನ್ನು ಬದಲಿಸುವುದರಿಂದ ನಿನಗೆ ಅಂತರಂಗದ ಬಾಹ್ಯದ ಐಕ್ಯ ಸಾಧ್ಯವಾಗುವುದು. ಇದನು ಮರೆತಾಗ ನೀನು ತಪ್ಪುವಿ, ದುಃಖಿಯಾಗುವಿ ಇದನು ನೆನಹಿನಲ್ಲಿಟ್ಟುಕೊಂಡಾಗ ತೊಡಕುಗಳ ಬಂಧನವು ಕ್ರಮಶಃ ಕಡಿಮೆಯಾಗಹತ್ತಿ ನೀನು ಪ್ರಗತಿ ಹೊಂದುವಿ.

೨೪–೪-೫೩

ದೈವೀ ಮಾತೆಯೆ, ನಿನ್ನಿಚ್ಛೆಗೆ ಪೂರ್ತಿಯಾದ ಸಮರ್ಪಣವನು; ನಿನ್ನ ಕಾರ್ಯಕ್ಕೆಂದು ಹೆಚ್ಚು ಹೊಂದಿಕೆಯಾಗಿ ನಾವು ಮುಡಿಪಾಗುವುದನು ದಯಪಾಲಿಸು. ತಾಯೀ ಹೆಚ್ಚು ಸ್ಥಿರವೂ, ಆಳವೂ, ಪೂರ್ಣವೂ ಆದ ರೀತಿಯಲ್ಲಿ ನಿನ್ನೊಂದಿಗೆ ಗಾಢವಾಗಿ ನಾವು ಒಡಗೂಡುವಂತೆ ದಯಪಾಲಿಸು. ನಮ್ಮನು ನಿನಗೆ ತಕ್ಕವರಾದ ಸೇವಕರಾಗುವಂತೆ ನಮ್ಮನು ರೂಪುಗೊಳಿಸು. ನಮ್ಮ ಅಹಂಕಾರವನು ಅಳಿಸು; ಕ್ಷುಲ್ಲಕವಾದ ಹೆಮ್ಮೆ, ಆಶೆಬುರುಕತನ, ಅಂಧಕಾರ ಇವುಗಳನು ಹೊಡೆದೋಡಿಸು. ದೈವೀ ಪ್ರೇಮದ ಜ್ವಾಲೆ ನಮ್ಮನು ಆವರಿಸಲಿ, ಈ ಜಗತ್ತಿನಲ್ಲಿ ನಾವು ನಿನ್ನ ಪ್ರಕಾಶವಾಹಕರಾಗಲಿ.

೧೫-೮-೫೩

ಎಲ್ಲರೂ ನೆನಪಿಡಬೇಕಾದ ಮಾತೊಂದಿದೆ. ಅದೆಂದರೆ ಯೋಗ, ಸಾಧನ, ಮಹಾತಾಯಿಯ ಚೈತನ್ಯದ ದೈವೀ ಜೀವನದಲ್ಲಿ ಬೆಳೆಯುವುದು ಇವುಗಳ ದೃಷ್ಟಿಯಿಂದಲೇ ಎಲ್ಲವನ್ನೂ ಮಾಡುವುದು. ತನ್ನ ಮನಸ್ಸು, ಅದರ ವಿಚಾರ ಲಹರಿ ಇವುಗಳಿಗನುಗುಣವಾಗಿಯೇ ಎಲ್ಲವೂ ನಡೆಯಬೇಕೆನ್ನುವ ಹಟವಾಗಲಿ, ತನ್ನ ಪ್ರಾಣಮಯ ಭಾವನೆ, ಪ್ರತಿಕ್ರಿಯೆಗಳ ಅಂಕೆಗೊಳಗಾಗುವುದಾಗಲಿ ನಮ್ಮ ಜೀವನದ ನಿಯಮವಾಗಬಾರದು. ಮಾನವನು ಇವುಗಳಿಂದ ಹಿಡಿದು ನಿಲ್ಲಬೇಕು; ನಿರ್ಲಿಪ್ತನಾಗಬೇಕು. ಇವುಗಳ ಸ್ಥಳದಲ್ಲಿ ಅಂತರಂಗದಾಳದಿಂದ ಹೊರ ಹೊಮ್ಮುವ ಅಂತರಾತ್ಮ, ಮೇಲಿನಿಂದ ಇಳಿದುಬರುವ ಸತ್ಯಜ್ಞಾನ ಇವುಗಳಿಗೆ ಎಡೆ ಕೊಡಬೇಕು. ಮನಸ್ಸು, ಹೃದಯಗಳು ಶರಣಾಗತವಾಗದ ಹೊರತು ಇದು ನಡೆಯುವುದಿಲ್ಲ. ತಾನು ಸತ್ಯ, ಉಚಿತ ನ್ಯಾಯವೆಂದು ತಿಳಿದಿರುವ ಅಜ್ಞಾನದ ಬಗೆಗಿರುವ ಆಸಕ್ತಿಯನ್ನು ತೊರೆಯದೆ ಇರುವಾಗಲೂ ಇದು ಸಾಧ್ಯವಾಗುವುದಿಲ್ಲ. ನಮ್ಮ ತೊಂದರೆಗಳೆಲ್ಲ ಇದರಿಂದಲೇ ಉದ್ಭವಿಸುತ್ತಿವೆ. ಆದನು ಜಯಿಸಿ

ದಾಗಲೇ ಜೀವನದ, ಕ್ರಿಯೆಯ ಸಮರಸದ ಅಸ್ತಿವಾರ ಹಾಗು ಮಹಾ ತಾಯಿಯೊಂದಿಗೆ ವೃದ್ಧಿಂಗತವಾಗುತ್ತಿರುವ ಐಕ್ಯ ಇವುಗಳ ಇಂದಿನ ತೊಡಕು, ತೊಂದರೆಗಳ ಸ್ಥಾನದಲ್ಲಿ ಪ್ರತಿಷ್ಠಾಪನೆ ಪಡೆಯುವವು.

೧೬—೧೦—೧೪

(i) ಒಳಗಿನದೆಲ್ಲ ಪಕ್ವವಾಗಿದೆ; ಇಲ್ಲವೆ ಪಕ್ವವಾಗ ಹತ್ತಿದೆ. ಆದರೆ ಹೊರಗೆಬಂಧಿತವಾದ ರೀತಿಯಲ್ಲಿ ಹೋರಾಟ ನಡೆದಿದೆ. ಈ ಹೋರಾಟದಲ್ಲಿ (ಯುರೋಪಿನ ಕಂದಕದ ಯುದ್ಧದ ತರಹ) ಎರಡೂ ಪಕ್ಷಗಳು ಒಡೆದು ಕಾಣುವಂತಹ ಮುನ್ನಡೆಯನ್ನು ಸಾಧಿಸಿದಂತಿಲ್ಲ. ಜಡದ ಪ್ರತಿರೋಧವನ್ನು ಅಲಕ್ಷಿಸುತ್ತ ಆತ್ಮಶಕ್ತಿ ಮುನ್ನುಗ್ಗುತ್ತಿದೆ; ಪ್ರತಿ ಅಂಗುಲಕ್ಕಾಗಿ ಕಾದಾಡುತ್ತಿದೆ. ಪ್ರತ್ಯಾಘಾತಗಳನ್ನು ಪರಿಣಾಮಕಾರಿಗೊಳಿಸುತ್ತಿದೆ; ಆಂತರಿಕ ಶಕ್ತಿ, ಆನಂದಗಳಿರದಿದ್ದರೆ ಈ ಕಾರ್ಯ ಶ್ರಮದಾಯಕವೂ ಜಿಗುಪ್ಸೆ ತರುವಂತಹದೂ ಆಗಿತೋರುವುದು. ಆದರೆ ಜ್ಞಾನದ ಕಣ್ಣು ಇದರಾಚೆಗೆ ದೃಷ್ಟಿಚೆಲ್ಲಿ ಇದನ್ನು ಒಂದು ವಿಲಂಬಿತ ಘಟನೆಯಂತೆ ಕಾಣುತ್ತಿದೆ.

(ii) ಯಾವುದೂ ವಸ್ತುಗಳ ಸ್ಥಿತಿಶೀಲತೆಯನ್ನು ಆಘಾತಕ್ಕೀಡುಮಾಡುವಂತೆ ಕಾಣುವದಿಲ್ಲ. ಹೊರಗೆ ಕಾರ್ಯ ಪ್ರವೃತ್ತವೆಂದು ತೋರುವದೆಲ್ಲ ಕತ್ತಲೆಯ, ಗದ್ದಲದ ಪ್ರಕ್ಷುಬ್ಧ ಸ್ಥಿತಿಯಂತಿದ್ದು ಅದರಿಂದ ಏನೊಂದೂ ರೂಪುಗೊಳ್ಳುತ್ತಿಲ್ಲ, ಪ್ರಕಾಶವೂ ನಾದುದೇನೂ ಹೊರಹೊಮ್ಮುತ್ತಿಲ್ಲ. ಜಗತ್ತಿನ ಏಕನೋವ ಪರಿಸ್ಥಿತಿಯಿದು. ಮೇಲ್ಭಾಗಕ್ಕೆ ಗಟ್ಟಿಯಾಗಿ ಅಂಟಿಕೊಂಡಂತಿರುವ ಮೇಲುಪದರಿನಲ್ಲಿ ವಿಶ್ರಾಂತಿ ಪಡೆಯುವಂತಿದ್ದ ಹಳೆಯ ಜಗತ್ತಿನ ತೋರಿಕೆಯ ರೂಪದ ಗಲಭೆಯ ಚಿತ್ರವಿದು.

೧೮-೧೦-೧೪

ದೇವನ ಯೋಧನೇ, ವೀರನಾಯಕನೆ, ದುಃಖ, ನಾಚಿಕೆ, ನೋವು ನಿನಗೆಲ್ಲಿ. ನಿನ್ನ ಜೀವನವೆಲ್ಲ ಕಣ್ಣು ಕುಕ್ಕಿಸುವ ಹಿರಿಮೆ. ನಿನ್ನ ಕೃತಿಗಳೆಲ್ಲ ಮುಡಿಪು. ಗೆಲವು ನಿನ್ನ ದಿವ್ಯ ಪರಿವರ್ತನ ಸೋಲು ನಿನ್ನ ಗೆಲವು.

ನೀನು ಮುಕ್ತನಾಗಿರುವಾಗ ಕೈಗಳಿಂದ, ಕೂಗಿನಿಂದ, ಮೆದುಳುಗಳಿಂದ—ಎಲ್ಲಬಗೆಯ ಆಯುಧಗಳಿಂದ ಕಾದಾಡು. ವೈರಿಯ ಕತ್ತಲೆಯ ಕೋಣೆಯಲ್ಲಿ ಬಂಧಿತನಾಗಿದ್ದರೆ, ಅವನಿಂದಾವ ಜಿಹ್ವಾಬಂಧನ ನಿನ್ನನ್ನು ಮೌನಗೊಳಿಸಿದ್ದರೆ ಎಲ್ಲವನ್ನೂ ಆಕ್ರಮಿಸುವ ನಿನ್ನ ಮೌನಶೀಲ ಆತ್ಮದಿಂದ, ವ್ಯಾಪ್ತಿಶೀಲ ಇಚ್ಛಾಶಕ್ತಿಯಿಂದ ಹೋರಾಡು. ನಿನ್ನ ದೇಹದ ಅಂತವಾದಾಗ ವಿಶ್ವವ್ಯಾಪಕ ದೇವನಿಂದ ನಿನ್ನಲ್ಲಿಗೆ ಇಳಿದು ಬಂದ ಶಕ್ತಿಯಿಂದ ಹೋರಾಡು.

ಸಾಗರದ ಆಳದಲ್ಲಿ ಪ್ರಕ್ಷುಬ್ಧತೆಯಿಲ್ಲ ಹೊರಗೆ ಹರ್ಷಪೂರಿತ ಅಬ್ಬರ, ದಡದತ್ತ ಸಾಗಿದ ಓಟ ಇವುಗಳಿವೆ. ಅದರಂತೆಯೇ ಅಸ್ತವ್ಯಸ್ತಗೊಳಿಸುವ ಕರ್ಮಮಧ್ಯದಿ ಮುಕ್ತ ಆತ್ಮನಿದ್ದಾನೆ. ಆತ್ಮ ಕ್ರಿಯಾಶೀಲವಲ್ಲ. ಆತ್ಮದಿಂದ ಎಲ್ಲವನೂ ಮೆಟ್ಟಿ ನಿಲ್ಲುವ ಕ್ರಿಯೆ ಉಸಿರಿನಂತೆ ತಾನೇ ತಾನಾಗಿ ಹೊರ ಹೊಮ್ಮುತ್ತಿದೆ.

(ಪ್ರಥಮ ಮಹಾಯುದ್ಧದಕಾಲಕ್ಕೆ ಮಾತೆಯವರಿಗೆ ಶ್ರೀಅರವಿಂದರು ಬರೆದ ಈ ನುಡಿಗಳು ಇಂದು ನಿಜವಾಗಿವೆ.)

೨೩-೧೦-೫೩

ಅವಳು ತನ್ನ ಪಾದ ಸ್ಪರ್ಶದಿಂದ ಜೀವನದಗಾಯವನು ಮಾಯಿಸಲೆಂದು,
ಮಾನವನ ಪ್ರಕಾಶಗುಂದಿದ ಆತ್ಮದ ಮೇಲಿನ ಭವ್ಯಹೊದಿಕೆಯನು ಒಡೆಯಲೆಂದು
ವಸ್ತುಗಳು ಹುದುಗಿದ ಹೃದಯದಲ್ಲಿ ಅವಳ ಜ್ಯೋತಿಯನು ಪಡೆಯಲೆಂದು,
ಪ್ರಕೃತಿಯಲ್ಲವೂ ಮೂಕವಾಣಿಯಿಂದ ಅವಳನೇ ಕರೆಯುತಿದೆ. ಇಹದ ಏನೆಲ್ಲವೂ
ಒಂದುದಿನ ಅವಳ ಸವಿಯ ನಿಲಯವಾಗುವುದು.
ಎಲ್ಲ ವಿಭಿನ್ನತೆಗಳು ಅವಳ ಸಮನ್ವಯವನೆ ಸಜ್ಜುಗೊಳಿಸುವವು.
ನಮ್ಮ ಅರಿವುಗಳೆಲ್ಲ ಅವಳೆತ್ತರಕೆ ಏರುವವು ನಮ್ಮ ವಿಕಾರಗಳು ಅವಳತ್ತ ಅಂಬೆಗಾಲಿಡು
ವವು. ಅವಳ ಅದ್ಭುತ ಭಾವಾತಿರೇಕದಲಿ ನಾವು ನೆಲಿಸುವೆವು. ಅವಳ ದೃಢಸ್ಪರ್ಶ ನಮ್ಮ
ನೋವುಗಳನೆ ಹರ್ಷಾತಿರೇಕವಾಗಿ ಮಾರ್ಪಡಿಸುವದು.
ನಮ್ಮಾತ್ಮ ಅವಳೊಂದಿಗೆ ಏಕಾತ್ಮವಾಗುವದು ನಮ್ಮ ಜೀವನವು ಅವಳ ಪ್ರತಿಸ್ಪಂದನ
ದಲಿ ಸಾರ್ಥಕತೆ ಪಡೆಯುವುದು.
ಅದೋ, ಮೇಲೆ ಅವಳ ಅಮಿವಾದ, ಸ್ತಬ್ಧವಾದ, ದಿವ್ಯಾನಂದ ಕೇಳಗೆ ದೈವೀ
ಅಪ್ಪುಗೆಯ ಅದ್ಭುತ ಪಸರಿಸಿವೆ.

ಸಾವಿತ್ರಿಯಿಂದ

(ಇಂತಿವು ಈ ವರುಷ ಪ್ರಕಟವಾದ ಪ್ರಾರ್ಥನೆ ಸಂದೇಶಗಳು ಇವುಗಳ ಪ್ರಕಟವಾಗುವ ನಿರ್ದಿಷ್ಟ ಹಾಗು ವಿಶೇಷ ದಿನಗಳಲ್ಲಿ ಕೆಲವು ಇಂತಿವೆ:)

ಹೊಸವರುಷದ ದಿನ (೧-ಜನೆವರಿ); ಮಾತೆಯವರ ಹುಟ್ಟು ದಿನ (೨೧-ಫೇಬ್ರುಆರಿ); ಮಾತೆಯವರು ಮೊದಲಸಲ ಶ್ರೀಅರವಿಂದರನ್ನು ಸಂದರ್ಶಿಸಿದ ದಿನ (೨೯-ಫೇಬ್ರುವರಿ); ಮಾತೆಯವರು ಪಾಂಡಿಚೇರಿಯಲ್ಲಿ ನೆಲಸಿದ ದಿನ (೨೪-ಎಪ್ರಿಲ್); ಶ್ರೀಅರವಿಂದರ ಹುಟ್ಟು ದಿನ (೧೫-ಆಗಸ್ಟ); ಶ್ರೀಅರವಿಂದರ ಸಿದ್ಧಿಯ ದಿನ (೨೪-ನವಂಬರ); ಶ್ರೀಅರವಿಂದರ ಪರಿನಿರ್ಯಾಣದ ದಿನ (೫-ಡಿಸೆಂಬರ) ಇದಲ್ಲದೆ ದಸರೆ ಇತ್ಯಾದಿ ಹಬ್ಬದ ಪೂಜೆಯ ದಿನಗಳು.

ಶ್ರೀಅರವಿಂದರು ಭೌತಿಕ ಶರೀರವನ್ನು ಬಿಟ್ಟ ನಂತರವೂ ಅವರ ಹೆಸರಿನಲ್ಲಿ ಅವರೇ ಹಿಂದೆ ಹೊರಹೊಮ್ಮಿಸಿದ ಉಕ್ತಿಗಳನ್ನು ಸಂದರ್ಭೋಚಿತವಾಗಿ ಪ್ರಕಟಿಸಲಾಗುತ್ತಿದೆ. ದಿವ್ಯಾನುಭವದ ಶ್ರೀಅರವಿಂದರ ವಾಣಿ ಇಂದಿಗೂ ಹೊಸದೇ ಆಗಿ ತೋರುವುದು. ಅದರ ಮೂಲ ಬರೆಹದ ಅಕ್ಕರಗಳ ಪ್ರತಿಯನ್ನೂ ಒಮ್ಮೊಮ್ಮೆ ಒದಗಿಸಲಾಗುತ್ತಿದೆ. ಅವರ ಮಾರ್ಗದರ್ಶನವು ತಮಗೆ ತಪ್ಪಿ ಹೋಗಿದೆಯೆಂದು ಆಶ್ರಮದಲ್ಲಿ ಯಾರೂ ಭಾವಿಸುವುದಿಲ್ಲ ಆಂತರಿಕ ಪ್ರೇರಣೆ, ಮಾರ್ಗದರ್ಶನಗಳಂತೂ ಸರಿ, ಅಲ್ಲದೆ ಹಿಂದೆ ಉಸುರಿದ ವಾಣಿಯೂ ಇಂದು ಸಂದರ್ಭೋಚಿತವಾಗುವುದು.

ಈ ಪ್ರಾರ್ಥನೆ-ಸಂದೇಶಗಳು ನವೀನ ಬೆಳಕನ್ನು, ಆವಶ್ಯಕ ಸಾಂತ್ವನವನ್ನು, ನವಚೇತನವನ್ನು ತರುತ್ತಿವೆ. ಬಗೆಬಗೆಯ ಸಂದರ್ಭಗಳಲ್ಲಿ, ಬೇರೆ ಬೇರೆ ಮನೋಭಾವ ತಲೆದೋರಿದಾಗ ಆಗಾಗ ಹೊರಹೊಮ್ಮುವ ಈ ಅಮೃತ ಸೇಚನವು ದೈವೀ ಜೀವನದತ್ತ ನಮ್ಮನ್ನು ಎಳೆಯುವವು. ನಮ್ಮ ಜೀವನದಲ್ಲಿ ಮಾರ್ಗದರ್ಶಕ ದೀವಿಗೆಗಳಿವು.)

–ಸ. ಸ ಮಾಳವಾಡ

# ಶ್ರೀ ಮಾತೆಯವರ ಸ್ವನಿವೇದನೆ

(ಕೆಳಗಿನ ಲೇಖವು **Advent, Feb. 1952** ದಲ್ಲಿ ಒಂದು ಸಂಪಾದಕೀಯವಾಗಿ ಪ್ರಕಟವಾಗಿದೆ. ಶ್ರೀ ಮಾತೆಯವರು 1951ರಲ್ಲಿ ನಡೆಸಿದ ಪ್ರಸಂಗೋಕ್ತಿಯನ್ನು ಆಧರಿಸಿದೆ)

ಎರಡು ಸಂಗತಿಗಳುಂಟು, ಅವುಗಳ ಬಗೆಗೆ ಗೊಂದಲ ಮಾಡಿಕೊಳ್ಳಬಾರದು. ಅವಾವೆಂದರೆ, ಓರ್ವ ವ್ಯಕ್ತಿಯ ಇರುವಿಕೆ ಹಾಗೂ ಆಚರಣೆ; ಆ ವ್ಯಕ್ತಿಯು ಸತ್ತ್ವತಃ ಇರುವದೇನು ಹಾಗೂ ಬಾಹ್ಯ ಜಗತ್ತಿನಲ್ಲಿ ಮಾಡುವದೇನು; ಅವು ತೀರ ಬೇರೆ ಬೇರೆಯೇ ಆಗಿವೆ. ನಾನು ಏನಿರುವೆನೆಂಬುದನ್ನು ನಾನು ಬಲ್ಲೆ; ಮತ್ತು ಯಾರು ಏನೇ ತಿಳಿಯಲಿ, ಅಥವಾ ಏನೇ ಅನ್ನಲಿ, ಅಥವಾ ಜಗತ್ತಿನಲ್ಲಿ ಅದೇನೇ ಘಟಿಸಲಿ, ಸತ್ಯನೆಂಬುದು ಅಬಾಧಿತವಾಗಿ, ಸ್ಥಿತ್ಯಂತರ ಹೊಂದದೆ, ಇದ್ದುದು ಇದ್ದಂತೆಯೇ ಇರುತ್ತದೆ. ಸತ್ಯವು ತನಗೆ ತಾನು ವ್ಯತ್ಯಯ ತಂದು ಕೊಳ್ಳದಂತೆಯೇ ಇರುತ್ತದೆ. ಲೋಕದ ನಿರಾಕರಣವಾಗಲಿ, ದೃಢೀಕರಣವಾಗಲಿ, ಅದರ ನೈಜ ಸ್ಥಿತಿಯನ್ನು ಹಿಗ್ಗಿಸುವದೂ ಇಲ್ಲ ತಗ್ಗಿಸುವದೂ ಇಲ್ಲ. ಆದರೆ ನಾನೇನು ಇರುವೆನೋ ಅದು ಇದ್ದುದಾಗಿ, ಕಾರ್ಯತಃ ಏನು ಮಾಡುತ್ತೇನೆಯೋ ಅದು ಬೇರೆ ಪ್ರಶ್ನೆ; ಯಾವ ಅವಸ್ಥೆಯಲ್ಲಿ, ಯಾವ ಪರಿಸ್ಥಿತಿಯಲ್ಲಿ ಸಂಗತಿಗಳು ಉಂಟು ಎಂಬುದರ ಮೇಲೂ, ಯಾವುದರಲ್ಲಿ ಯಾವುದರ ಮುಖಾಂತರ ನಾನು ಕಾರ್ಯ ಮಾಡಬೇಕಾಗಿದೆ ಎಂಬುದರ ಮೇಲೂ ನನ್ನ ಕ್ರಿಯಾ ವಿಧಾನವು ಅವಲಂಬಿಸಿದೆ ನಾನು ತರ ಬಯಸುವ ಸತ್ಯ ಸ್ವರೂಪವನ್ನು ನಾನು ಬಲ್ಲೆನು. ಆದರೆ ಅದು ಈ ಜಗತ್ತಿನಲ್ಲಿ ಎಷ್ಟರ ಮಟ್ಟಿಗೆ ಪ್ರಕಟ ಗೊಳ್ಳುವದು ಎಂಬುದು ಈ ಜಗತ್ತನ್ನೇ ಅವಲಂಬಿಸಿದೆ. ನಾನು ತಂದದ್ದನ್ನು ಸ್ವೀಕರಿಸುವ ಗ್ರಹಣ ಶಕ್ತಿ ಮತ್ತು ಸಂಕಲ್ಪ ಶಕ್ತಿ ಈ ಜಗತ್ತಿಗೆ ಇರಲಿಕ್ಕೆಬೇಕು. ಅದಿಲ್ಲದೆ ಹೋದರೆ ನಾನು ಅತ್ಯುಚ್ಚವಾದ ಸಾರ್ವಭೌಮ ಸತ್ಯವನ್ನು ತಂದರು ಸಹ, ಅದನ್ನು ಗುರುತಿಸದ, ಅಥವಾ ಗ್ರಹಿಸದ ಚೇತನೆಗೆ ಅದು ಸರ್ವಶಃ ಇಲ್ಲದಂತೆಯೇ ಸರಿ. ಈ ಬಗೆಯ ಶಿಥಿಲ ಚೇತನವನ್ನೇ ಇಟ್ಟುಕೊಂಡ ಸತ್ತ್ವಕ್ಕೆ ಅದರಿಂದ ಲವಲೇಶವೂ ಲಾಭವಾಗದು.

ನೀವೆನ್ನುವಿರಿ, ನಾನು ತರುವ ಸತ್ಯವು ಸರ್ವಶ್ರೇಷ್ಠವೂ ಸರ್ವಸಮರ್ಥವೂ ಆದ್ದದ್ದಾಗಿದ್ದರೆ.ಅದನ್ನು ಗ್ರಹಿಸಲು ಜಗತ್ತಿಗೇಕೆ ಒತ್ತಾಯ ಪಡಿಸುವದಿಲ್ಲ, ಜಗತ್ತಿನ ಪ್ರತಿ ರೋಧವನ್ನೇಕೆ ಅದು ಭಂಗಪಡಿಸಲಾರದು, ಜಗತ್ತು ನಿರಾಕರಿಸುತ್ತಿರುವ ಕಲ್ಯಾಣವನ್ನು ಸ್ವೀಕರಿಸುವ ಹಾಗೆ ಮಾನವನನ್ನೇಕೆ ಬಲವಂತ ಪಡಿಸುವದಿಲ್ಲ ಎಂದು. ಆದರೆ ಜಗದುತ್ಪತ್ತಿಯೇ ಆ ರೀತಿಯಲ್ಲಾಗಲಿಲ್ಲ, ಅಥವಾ ಅದು ಸಾಗಿರುವದಾಗಲಿ, ಅದರ ಬೆಳವಣಿಗೆಯಾಗಲಿ ಆ ಬಗೆಯಾಗಿ ನಡೆಯುತ್ತಿಲ್ಲ. ಸ್ವಾತಂತ್ರ್ಯವೇ ಸೃಷ್ಟಿಯಮೂಲ; ಚೇತನದಲ್ಲಿ ಅನಿರ್ಬಂಧಿತವಾಗಿ ಆಯ್ದುದೇ ಈ ಸ್ಥೂಲ ಸೃಷ್ಟಿಯಾಗಿ ಹರವಿಕೊಂಡಿದೆ. ಈ ಸ್ವಾತಂತ್ರ್ಯವೇ ಅದರ ಮೂಲ ಭೂತ ಸಹಜ ಸ್ವಭಾವವಾಗಿದೆ. ಜಗತ್ತು ಪರಮ ಸತ್ಯವನ್ನು ತನ್ನ ಸರ್ವ ಶ್ರೇಷ್ಠ ಕಲ್ಯಾಣವನ್ನು ನಿರಾಕರಿಸುತ್ತಿದ್ದರೆ ಅದು ತನ್ನ ಸ್ವೇಚ್ಛೆಯ ಸ್ವಾನಂದದಲ್ಲಿಯೇ ಹಾಗೆ ಮಾಡುತ್ತಿರುತ್ತದೆ; ಮತ್ತು ಒಂದು ವೇಳೆ ಅದು ಪುನಃ ಆ ಸತ್ಯವನ್ನೂ ಆ ಕಲ್ಯಾಣವನ್ನೂ ಗುರುತಿಸಿದ್ದೇ ಆದರೆ, ಅದೇ ಸ್ವೇಚ್ಛೆಯ ಸ್ವಾನಂದದಲ್ಲಿಯೇ ಅದು ಹಾಗೆ ಮಾಡಲಿಕ್ಕೆಬೇಕು. ತಪ್ಪುತ್ತ ಸಾಗಿದ ಲೋಕಕ್ಕೆ ಸತ್ಪಥದ ಮೇಲೆ ಬರಲು ಆಜ್ಞಾಪಿಸಿದರೆ ಮತ್ತು ಅದು

ಹಾಗೆ ತತ್‌ಕ್ಷಣ ಬಂದು ಬಿಟ್ಟಿದ್ದಾದರೆ ಇಂದ್ರಜಾಲದಿಂದ ಸಂಗತಿಗಳು ಕ್ಷಣಾರ್ಧದಲ್ಲಿ ನಡೆದು ಬಿಟ್ಟಿದ್ದಾದರೆ, ಜಗತ್ತು ಎಂಬುದೊಂದು ಪದಾರ್ಥವನ್ನು ಸೃಷ್ಟಿಗೊಳಿಸುವದರ ಔಚಿತ್ಯವೇ ಇಲ್ಲದಂತಾಗುವದು. ಸೃಷ್ಟಿಯೆಂದರೆ ವೃದ್ಧಿಕ್ರಮದ ಒಂದು ಲೀಲೆ. ದಿಕ್ಕಾಲಗಳಲ್ಲಿ ಕ್ರಮೇಣವಾಗಿ, ಮೆಟ್ಟಿಲು ಮೆಟ್ಟಿಲುಗಳ ಹಂತದಲ್ಲಿ ಸಾಗಿದ ಒಂದು ಯಾತ್ರೆ ಈ ಸೃಷ್ಟಿ. ಈ ಯಾತ್ರೆಯು, ತನ್ನ ಮೂಲ ಉಗಮ ಸ್ಥಾನದಿಂದ ದೂರದೂರ ಹೋಗಿ ಮತ್ತೆ ಮರಳಿ ತನ್ನ ಉಗಮಾಭಿಮುಖವಾಗಿ ಸಾಗಿದಂತಹ ಯಾತ್ರೆ. ಈ ತತ್ತ್ವಕ್ಕೆ ಅಥವಾ ಈ ವ್ಯವಸ್ಥಿತಿಗೆ ಅನುಗುಣವಾಗಿ ನಿಂತುಕೊಂಡಿದೆ ಈ ಸೃಷ್ಟಿಯು. ಈ ವ್ಯವಸ್ಥಾನದಲ್ಲಿ ಬಲಾತ್ಕಾರವೆಂಬುದಿಲ್ಲ; ಜಗತ್ಕಾರಣಗಳಾದ ಯಾವುದೇ ಭೌತ ತತ್ವಗಳ ಮೇಲೆ ಬಲಾತ್ಕಾರವಿಲ್ಲ; ಅದರ, ಅಂದರೆ ಸೃಷ್ಟಿಯ ಕ್ರಿಯಾ ವಿಧಾನವು ಸಹಜವಾಗಿದೆ, ಸ್ವಾಭಾವಿಕವಾಗಿದೆ; ಇದರ ಬಗ್ಗೆಯೂ ಇದು ಹೀಗೆಯೇ ಸಾಗಲಿಕ್ಕೆ ಬೇಕು. ಎಂಬ ಬಲಾತ್ಕಾರವೂ ಇಲ್ಲ. ಹೊರಗಿನಿಂದ ಬಂದ ಆದೇಶಗಳನ್ನು ಪಾಲಿಸುವ ಬಗ್ಗೆ ನಿರ್ಬಂಧವಿಲ್ಲ. ಈ ವಿಷಯಗಳಲ್ಲಿ ಬಲಪ್ರಯೋಗವು ನಡೆದದ್ದೇ ಆದರೆ ಅದು ಸೃಷ್ಟಿಯ ಛಂದೋಗತಿಯನ್ನೇ ಹದಗೆಡಿಸಿ ಬಿಡುತ್ತದೆ.

ಆದರೂ ಬಲುಮೆಯೆಂಬುದು ಉಂಟು. ಆ ಬಲುಮೆ ಸ್ವಂತದ ಪ್ರಕೃತಿಗತವಾದಂತಹದು; ಒಂದು ಬಗೆಯ ಗುಪ್ತ ಒತ್ತಡದ ಮೂಲಕ, ಎಲ್ಲ ಸಂಕಷ್ಟ ಆತಂಕಗಳನ್ನು ದಾಟುತ್ತ, ಅದು ಪುನಃ ತಾನು ಹುಟ್ಟಿ ಬಂದ ಮೂಲ ಮೆಟ್ಟಿಗೆ ತನ್ನನ್ನು ಒಯ್ಯಲು ಹವಣಿಸುತ್ತಿರುತ್ತದೆ. ಭಗವಂತನ ಅನುಗ್ರಹವು ಎಲ್ಲವನ್ನೂ ಮಾಡಬಲ್ಲದು ಮತ್ತು ಮಾಡಬೇಕು ಎಂದಾಗ, ಭಗವದನುಗ್ರಹವು ಈ ಮರಳುವಿಕೆಯ ಮತ್ತು ಈ ಗುರುತಿಸುವಿಕೆಯ ವಿಧಾನವನ್ನು ಕೇವಲ ದೃಢಗೊಳಿಸುವದು ಎಂದಲ್ಲದೆ, ಅದರರ್ಥ ಇದಕ್ಕಿಂತ ಹೆಚ್ಚೂ ಅಲ್ಲ, ಕಡಿಮೆಯೂ ಅಲ್ಲ. ಆದರೆ ಪಯಣಿಗನಾದ ಆತ್ಮನಲ್ಲಿ ಪ್ರಜ್ಞಾ ಪೂರ್ಣ ಸಹಕಾರವು ಜಾಗ್ರತವಾಗಲಿಕ್ಕೆಬೇಕು. ಪ್ರಾರಂಭದಿಂದಲೇ ಆತ್ಮನ ಒಪ್ಪಿಗೆಬೇಕು, ಎಡಬಿಡದ ಅವಿಚ್ಛಿನ್ನವಾಗಿ ಪುನರುಜ್ಜೀವನ ಹೊಂದುತ್ತಿರುವ ಅನುರಕ್ತಿಬೇಕು. ಅಂತರಂಗದಲ್ಲಿಯೂ ಸೂಕ್ಷ್ಮತರ, ಉಚ್ಚತರ ಸ್ತರಗಳಲ್ಲಿಯೂ ಈಗಾಗಲೇ ಕಾರ್ಯರತವಾಗಿರುವ, –ಅದೇಕೆ ಎಂದಿನಿಂದಲೂ ಕಾರ್ಯರತವಾಗಿರುವ—, ಶಕ್ತಿಯನ್ನು ಇದೇ ಈ ಅನುರಕ್ತಿ, ಈ ಸಂಲಗ್ನತೆಯೇ ಪ್ರಕಟಗೊಳಿಸುತ್ತದೆ; ಇಲ್ಲವೆ ಕನಿಷ್ಠ ಪಕ್ಷಕ್ಕೆ ಆ ಶಕ್ತಿಯನ್ನು ಅದು ಹೊರಗಿನ ಸ್ಥೂಲ ಸ್ತರದ ಮೇಲೆ ಪ್ರತಿಷ್ಠೆ ಗೊಳಿಸಲು ಸಹಾಯ ಮಾಡುತ್ತದೆ. ಇದೇ ಆ ಲೀಲೆಯ ಪರಿಪಾಠವಾಗಿರುತ್ತದೆ. ಈ ಸ್ಥಿತಿ ವಿಶೇಷದ ಪರಿಪಂಥವನ್ನೇ ಅನುಸರಿಸಿ ಈ ಲೀಲೆ ಸಾಗಿದೆ. ಎಚ್ಚರಿಕೆ ತಿಳುವಳಿಕೆಗಳಿಂದ ತಾವಾಗಿ ಒಪ್ಪಿ ಸಹಕರಿಸುವಂತಹ ಶರೀರಗಳ ಮುಖಾಂತರ, ಭಗವದನುಗ್ರಹವು ಅವತರಿಸುತ್ತದೆ. ಹಾಗೂ ಕಾರ್ಯ ಪ್ರವೃತ್ತವಾಗುತ್ತದೆ. ಇವರು ಸ್ವತಃ ಆ ಕಾರ್ಯರತ ಶಕ್ತಿಯ ಅಂಗೋಪಾಂಗವಾಗಿ ಬಿಡುತ್ತಾರೆ.

ನಾನು ತರುವ ಸತ್ಯವು ಪೃಥ್ವಿಯಲ್ಲಿ ಪ್ರಕಟಗೊಂಡು ಮೈದಾಳಿ ನಿಲ್ಲುವದು. ಯಾಕೆಂದರೆ, ಅದು ಈ ಪೃಥಿಯ ಹಾಗೂ ವಿಶ್ವದ ಅನಿವಾರ್ಯವಾದ ಬ್ರಹ್ಮ ಸಂಕಲ್ಪವಾಗಿದೆ ಕಾಲಮಾನದ ಪ್ರಶ್ನೆಯು ಅಷ್ಟೊಂದು ಸಮಂಜಸವಾದುದಲ್ಲ. ಪ್ರಕಟಗೊಳ್ಳುವದೆಂದು ನಾನು ಹೇಳುತ್ತಿರುವ ಸತ್ಯವು ಒಂದು ದೃಷ್ಟಿಯಿಂದ ಈಗಾಗಲೇ ಸಂಪೂರ್ಣವಾಗಿಯೇ ಪ್ರಕಟಗೊಂಡು ಬಿಟ್ಟಿದೆ, ಆಯತ್ತವಾಗಿ ಬಿಟ್ಟಿದೆ, ಪ್ರತಿಷ್ಠಾನ ಹೊಂದಿಬಿಟ್ಟಿದೆ. ಅಲ್ಲಿ ಕಾಲಮಾನದ ಪ್ರಶ್ನೆಯೇ ಇರುವದಿಲ್ಲ. ಅದರ ಪ್ರತಿಷ್ಠಾನವುಂಟು, ಕಾಲಾತೀತವಾಗಿರುವ ಅಥವಾ ಸನಾತನವಾಗಿರುವ ಚೈತನ್ಯ ಸ್ವರೂಪದಲ್ಲಿ. ಆ ಕಾಲಾತೀತ ಸ್ಥಿತಿ, ಮತ್ತು ನಾವು ಇಲ್ಲಿ ಈ ಭೂತಲದಲ್ಲಿ ತಿಳಿದುಕೊಂಡಿದ್ದ ಕಾಲ ಮರ್ಯಾದೆಯ ಸ್ಥಿತಿ, ಇವುಗಳ ನಡುವೆ ಒಂದು ಪ್ರಕ್ರಿಯೆ, ಒಂದು ಪರಿವರ್ತನ ಲೀಲೆ ನಡೆದಿದೆ. ಅವುಗಳ ನಡುವಿದ್ದ ಅಂತರದ ಪ್ರಮಾಣವು ಅತ್ಯಂತ ಸಾಪೇಕ್ಷವಾದದ್ದಾಗಿದೆ, ಅಂದರೆ ಬೇರೆ ಸಂಗತಿಗಳ ಮೇಲೆ ಅದು ಅವಲಂಬಿಸಿದಂತಹದಾಗಿದೆ; ಅಳೆಯ ಹೊರಟ ಚೇತನದ ಸಾಪೇಕ್ಷತೆಯು ಅದು; ಪ್ರತಿ

ಯೊಂದು ಚೇತನವು ತಾನು ತಂದ ಅಳತೆಗೋಲಿಗೆ ತಕ್ಕಂತೆ ಆ ಅಂತರವು ದೀರ್ಘವೋ ಹ್ರಸ್ವವೋ ಆಗಿರುತ್ತದೆ. ಆದರೆ ಅದೇನು ಸಮಸ್ಯೆಯ ಮುಖ್ಯಾಂಶವಲ್ಲ; ಸಾರ ಭೂತ ಅಂಶವೆಂದರೆ, ಸತ್ಯವು ಕಾರ್ಯ ಪ್ರವೃತ್ತವಾಗಿರುತ್ತದೆ, ಅದು ಮೂರ್ತ ಸ್ವರೂಪದ ಹಾದಿಯಲ್ಲಿದೆ. ಇಷ್ಟೇ, ಅದನ್ನು ಕಾಣುವ ಕಣ್ಣು ಬೇಕು. ಮತ್ತು ಅದನ್ನು ಸ್ವಾಗತಿಸುವ ಆತ್ಮ ಸತ್ತ್ವ ಬೇಕು.

— ನಾರಾಯಣ ಸಂಗಮ

---

ಈ ವಿಶ್ವವು ಅಸ್ತವ್ಯಸ್ತತೆಯಿಂದ ತುಂಬಿ ತುಳುಕುತ್ತದೆ. ಇಲ್ಲಿ ಬೆಳಕು ಕತ್ತಲೆಗಳುಂಟು. ಸತ್ಯ ಮಿಥ್ಯೆಗಳುಂಟು, ಜನನ ಮರಣಗಳುಂಟು, ರಾಗದ್ವೇಷಗಳುಂಟು. ಈ ದ್ವಂದ್ವಗಳು ಒಂದರಲ್ಲೊಂದು ಹಾಸು ಹೊಕ್ಕಾಗಿ ಹೆಣೆದುಹೋಗಿವೆ. ಇವುಗಳ ಈ ಬಿಗಿಯುಪ್ಪಿಗೆಯ ಬೆಸುಗೆಯನ್ನು ಬಿಡಿಸುವದೆಂದರೆ ಅದೊಂದು ಭೀಕರ ನಿಷ್ಕರುಣ ಸಂಗ್ರಾಮವೇ. ಈ ದ್ವಂದ್ವವು ಚಿತ್ತವ್ಯಾಪಿಯಾಗಿ ಆವರಿಸಿರುವದರಿಂದ ಸಂಗ್ರಾಮವು ಇನ್ನೂ ತೀಕ್ಷ್ಣವಾಗುವದು. ಈ ಹೋರಾಟವು ವಿಜ್ಞಾನಮಯ ಕೋಶದಲ್ಲಿ ಜ್ಞಾನಪಿಪಾಸೆಯಾಗಿ, ಅಧಿಕಾರಲಾಲಸೆಯಾಗಿ, ವಿಜಯಾಕಾಂಕ್ಷೆಯಾಗಿ ಪರಿಣಮಿಸುವದು. ಈ ಹೋರಾಟವು ಗುಪ್ತವೂ ವೇದನಾಯುಕ್ತವೂ ಆಗಿರುವದಲ್ಲದೆ ಇದು ಫಲಹೀನ ಸಂಗ್ರಾಮವಾದ ಕಾರಣ ಅತ್ಯಂತ ಕ್ರೂರವಾಗಿಯೂ ತೋರುವದು. ಆದರೆ ಭಾವಾತೀತ, ಸಂವೇದನಾತೀತ, ಕಲ್ಪನಾತೀತವಾಗಿರುವ ಮನೋಮಯ ಲೋಕದ ಆಚೆಗಿನ ದಿವ್ಯ ಚಿನ್ಮಯ ಲೋಕದಲ್ಲಿ ಈ ಸಕಲ ಕೋಲಾಹಲದ ತೊಡಕು ಖಂಡಿತ ಬಿಟ್ಟು ಹೋಗುವದು.

—ಶ್ರೀ ಮಾತೆಯವರು

# ಅಂತರಾಷ್ಟ್ರೀಯ ವಿದ್ಯಾಕೇಂದ್ರ

— ೧ —

(ಇದೀಗ ರೂಪುಗೊಳ್ಳುತ್ತಿರುವ ಶ್ರೀ ಅರವಿಂದ ವಿಶ್ವವಿದ್ಯಾಲಯವನ್ನು ಕುರಿತು ಶ್ರೀ ಮಾತೆಯವರು ಕಾಲಕಾಲಕ್ಕೆ The Bulletin of Physical Education ತ್ರೈಮಾಸಿಕದಲ್ಲಿ ಬರೆದ ಮೂರು ಲೇಖಗಳ ಅನುವಾದವನ್ನು ಕೆಳಗೆ ಕೊಡಲಾಗಿದೆ.)

ಜಗತ್ತಿನಲ್ಲಿ ಮಾನವರು ವಾಸಿಸುವ ಪರಿಸ್ಥಿತಿಯು ಅವರವರ ಪ್ರಜ್ಞೆಯ ವಿದ್ಯಮಾನಕ್ಕೆ ತಕ್ಕಂತೆ ಇರುತ್ತದೆ. ಆ ಪ್ರಜ್ಞೆಯಲ್ಲಿ ಪಲ್ಲಟವಾಗದೆ ಪರಿಸ್ಥಿತಿಯನ್ನು ಬದಲಿಸುವ ಯತ್ನವು ಒಂದು ಭ್ರಾಂತಿಯಂತೆ ವ್ಯರ್ಥ. ಪರಿಸ್ಥಿತಿಯಲ್ಲಿ ಪರಿವರ್ತನೆಯನ್ನು ಸಾಧಿಸುವುದಕ್ಕಾಗಿ, ಮಾನವ ಜೀವನದ ವಿವಿಧ ಅಂಗಗಳಾದ ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಪತ್ತಿಕ, ಶೈಕ್ಷಣಿಕ ಅಥವಾ ನೈರ್ಮಲ್ಯ ಸಂಬಂಧವಾದ ವಿಷಯಗಳಲ್ಲಿ ಏನು ಮಾಡಬಹುದು, ಹಾಗೂ ಏನು ಮಾಡುವುದು ಅಗತ್ಯವಿದೆ ಎಂಬುದರ ಅರಿವು ಯಾರಿಗೆ ಆಗಿದೆಯೋ, ಅಂಥವರೆಲ್ಲರೂ ಸಾಮಾನ್ಯವಾಗಿ ತಮ್ಮ ಪ್ರಜ್ಞೆಯನ್ನು ವಿಶೇಷ ತರದಲ್ಲಿ ವರ್ಧಿಸಿಕೊಂಡು ಪ್ರಜ್ಞೆಯ ಉನ್ನತತರ ಅಂತಸ್ತುಗಳೊಡನೆ ಸಂಬಂಧ ಹೊಂದಿಸಿಕೊಂಡ ಜನರೇ ಆಗಿರುತ್ತಾರೆ. ಆದರೆ ಅವರ ಕಲ್ಪನೆಗಳೆಲ್ಲ ಒಟ್ಟಿನಲ್ಲಿ ತತ್ತ್ವಾತ್ಮಕವಾಗಿಯೇ ಉಳಿದು ಹೋದುವಲ್ಲದೆ, ಅವುಗಳನ್ನು ವ್ಯಾವಹಾರಿಕ ಆಚರಣೆಯಲ್ಲಿ ತರುವುದಕ್ಕೆಂದು ಕ್ವಚಿತ್ತಾಗಿ ಪ್ರಯತ್ನವು ನಡೆದಾಗ ಅದು ಯಾವಾಗಲೂ ಬೇಗನೆ ಆಗಲಿ, ತಡವಾಗಿ ಆಗಲಿ, ಅತಿ ಅಯಶಸ್ವಿಯಾಗಿ ಮುಗಿತಾಯಗೊಂಡಿರುತ್ತದೆ. ಇದಕ್ಕೆ ಕಾರಣವೇನೆಂದರೆ ಮಾನವನ ಪ್ರಜ್ಞೆಯಲ್ಲಿ ಬದಲಾವಣೆಯಾಗದೆ ಯಾವ ಮಾನವೀ ಸಂಘಟನೆಯಲ್ಲಿಯೂ ಆಮೂಲಾಗ್ರವಾದ ಸ್ಥಿತ್ಯಂತರವಾಗುವುದು ಶಕ್ಯವಿಲ್ಲ. ನವ ಮನ್ವಂತರದ ಪ್ರಾರಂಭವನ್ನು ಸಾರುವ ಪ್ರವಾದಿಗಳನೇಕರು ಆಗಿ ಹೋಗಿದ್ದಾರೆ. ಅಧ್ಯಾತ್ಮಿಕ ಮತ್ತು ಸಾಮಾಜಿಕ ಧರ್ಮಗಳೂ ಆದೆಷ್ಟೋ ಹುಟ್ಟಿವೆ. ಬಹು ಸಲ ಅವುಗಳ ಆರಂಭವೂ ಒಳ್ಳೇ ಆಶಾಜನಕವಾಗಿತ್ತು. ಆದರೆ ಮಾನವತೆಯು ಹೃದಯದಲ್ಲಿ ನಿಜವಾಗಿ ಪರಿವರ್ತಿತವಾಗಿರಲಿಲ್ಲವಾದುದರಿಂದ ಕ್ರಮಶಃ ಮಾನವ ಸ್ವಭಾವಜನ್ಯ ಪುರಾತನ ದೋಷಗಳೆಲ್ಲ ಪುನಃ ಮೂಡಿ ಬಂದು ಅಷ್ಟೊಂದು ಆಶೆ ಉತ್ಸಾಹಗಳಿಂದ ಹೊರಡುವ ಮುನ್ನ ತಾನಿದ್ದ ಸ್ಥಳದಲ್ಲಿಯೇ ಇನ್ನೂ ವರೆಗೂ ತಾನಿರುವದನ್ನು ಮಾನವನು ಕಂಡುಕೊಂಡಿದ್ದಾನೆ. ಮಾನವೀ ಪರಿಸ್ಥಿತಿಯನ್ನು ಸುಧಾರಿಸ ಬಯಸುವ ಯತ್ನಗಳಲ್ಲಿ ಯಾವಾಗಲೂ ಪರಸ್ಪರ ವಿರೋಧಿಯಾಗಿ ತೋರುವ ಎರಡು ಒಲವುಗಳಿರುತ್ತವೆ. ಆದರೆ ಅವೆರಡೂ ವಿರೋಧಿಯಾಗದೆ ಪೂರಕವಾಗಬೇಕಾದ ಹಾಗೂ ಸಹಕಾರ್ಯದಿಂದ ಪ್ರಗತಿಪರವಾಗಬೇಕಾದ ಪ್ರವೃತ್ತಿಗಳಾಗಿವೆ. ಸಾಮೂಹಿಕ ಸಂಘಟನೆಯ ದಾರಿಯಿಂದ ಪರಿಣಾಮಕಾರಿಯಾದ ಮಾನವೀ ಐಕ್ಯವನ್ನು ಸಾಧಿಸಲು ಸಾಗಲುದ್ಯುಕ್ತವಾದುದೇ ಮೊದಲನೆಯ ಪ್ರವೃತ್ತಿ. ಎಲ್ಲ ಪ್ರಗತಿಯೂ ಮೊದಲಲ್ಲಿ ವ್ಯಕ್ತಿಯಿಂದ ಸಾಧಿತವಾಗುತ್ತದೆಂದು ಸಾರಿ ಹೇಳಿ ಅವನ ಅನಿರ್ಬಂಧವಿಕಾಸಕ್ಕೆ ಯೋಗ್ಯವಾದ ಪರಿಸ್ಥಿತಿಯನ್ನೊದಗಿಸುವುದೇ ಅಗತ್ಯವೆಂದು ತಿಳಿಯುವುದೇ ಎರಡನೆಯ ಪ್ರವೃತ್ತಿ. ಎರಡೂ ಹಾದಿಗಳೂ ಸಮವಾಗಿ ಸತ್ಯವೂ ಅವಶ್ಯಕವೂ ಆಗಿವೆ; ನಮ್ಮ ಯತ್ನವು ಇವೆರಡೂ ದಿಕ್ಕಿನಲ್ಲಿಯೂ ನಡೆಯಬೇಕು. ಸಾಮೂಹಿಕ ಪ್ರಗತಿ, ವೈಯಕ್ತಿಕ ಪ್ರಗತಿಗಳೆರಡೂ

ಪರಸ್ಪರಾವಲಂಬಿಗಳಾಗಿವೆ. ವ್ಯಕ್ತಿಯ ವಿಕಾಸವು ಕೈಗೂಡುವ ಮೊದಲೇ ಸಮಷ್ಟಿಯ ಜೀವನದಲ್ಲಿ ತುಸು ಪೂರ್ವಭಾವಿಯಾದ ಪ್ರಗತಿಯಾಗಿರುವುದು ಅಗತ್ಯವಿದೆ. ಆದ್ದರಿಂದ ಇವೆರಡೂ ರೀತಿಯ ಪ್ರಗತಿಗಳು ಏಕಕಾಲಕ್ಕೆ ಸಾಧ್ಯವಾಗುವಂತೆ ಮಾಡುವ ಮಾರ್ಗ ಶೋಧನೆ ನಡೆಯಬೇಕಾಗಿದೆ.

ಅತ್ಯಾವಶ್ಯಕವಾದ ಈ ಕೊರತೆಯನ್ನು ಪೂರೈಸುವದಕ್ಕೆಂದೇ ಶ್ರೀ ಅರವಿಂದರು ತಮ್ಮ ಅಂತರಾಷ್ಟ್ರೀಯ ವಿಶ್ವವಿದ್ಯಾಕೇಂದ್ರದ ಯೋಜನೆಯನ್ನು ಕಲ್ಪಿಸಿದರು. ಹೀಗಾದಲ್ಲಿ ಮಾನವ ಜನಾಂಗದ ಉತ್ತಮೋತ್ತಮರು ನಿರ್ಮಾಣವಾಗಿ ಮಾನವೀ ಐಕ್ಯವನ್ನು ಅಧಿಕಾಧಿಕವಾಗಿ ಸಾಧಿಸುವಂತೆ ಅವರು ಕಾರ್ಯಪ್ರವೃತ್ತವಾಗಲು ಶಕ್ತರಾಗುವರು. ಅದೇ ಕಾಲಕ್ಕೆ ಪೃಥ್ವಿಯನ್ನು ಪರಿವರ್ತಿಸಲು ಅವತರಿಸಲಿರುವ ನವ ಶಕ್ತಿಯನ್ನು ಧಾರಣ ಮಾಡಲು ಅವರು ಸಮರ್ಥರಾಗುವರು. ಈ ವಿಶ್ವವಿದ್ಯಾಕೇಂದ್ರವನ್ನು ಸಂಘಟಿಸುವುದಕ್ಕೆ ತಳಹದಿಯಾಗಿಯೂ ಅಲ್ಲಿಯ ಅಭ್ಯಾಸದ ಯೋಜನೆಗೆ ಮಾರ್ಗದರ್ಶಕವಾಗಿಯೂ ಕೆಲವು ಸ್ಥೂಲ ವಿಚಾರಗಳನ್ನು ಹೇಳುವುದು ಉಪಯುಕ್ತವಾಗಬಹುದು. ಇವುಗಳಲ್ಲಿ ಬಹುಶಃ ಎಲ್ಲವೂ ಈ ಮೊದಲೇ ಶ್ರೀ ಅರವಿಂದರ ವಿವಿಧ ಲೇಖನಗಳಲ್ಲಿಯೂ ಈ ಪತ್ರಿಕೆ (Bulletin of Physical Education) ಯಲ್ಲಿ ಇದಕ್ಕಿಂತ ಪೂರ್ವದಲ್ಲಿ ಪ್ರಕಟವಾದ ಶಿಕ್ಷಣ ವಿಷಯಕ ಲೇಖನ ಮಾಲೆಯಲ್ಲಿಯೂ ವಿವೇಚಿಸಲ್ಪಟ್ಟಿವೆ.

ಅವುಗಳಲ್ಲಿ ಅತಿ ಮಹತ್ವದ ವಿಚಾರವಾವುದೆಂದರೆ ಮಾನವ ಕುಲದ ಐಕ್ಯವು ಏಕರೂಪತೆಯಿಂದಾಗಲಿ ಪ್ರಭುತ್ವವನ್ನು ಹೇರಿ ಅಧೀನಪಡಿಸಿಕೊಳ್ಳುವದರಿಂದಾಗಲಿ ಸಾಧಿಸಲ್ಪಡಲಾರದು. ತಾಳಿ ಬಾಳಬಹುದಾದದ್ದೂ, ವ್ಯಾಪಕವೂ, ಪ್ರಗತಿಪರವೂ ಆದ ಐಕ್ಯವು ಕೇವಲ ಎಲ್ಲ ರಾಷ್ಟ್ರಗಳ ಸಮನ್ವಯಿತ ಸಂಘಟನೆಯಿಂದ ಸಾಧ್ಯವಾಗಬಲ್ಲದು. ಅಂಥ ಸಂಘಟನೆಯಲ್ಲಿ ಪ್ರತಿ ರಾಷ್ಟ್ರವೂ ತನ್ನ ಪ್ರತಿಭಾ ವೈಶಿಷ್ಟ್ಯವನ್ನು ಉಳಿಸಿಕೊಂಡು ಸಮಷ್ಟಿಯಲ್ಲಿ ತನ್ನ ಕಾರ್ಯಭಾಗವನ್ನು ಪಾಲಿಸುವುದಕ್ಕೆ ಯೋಗ್ಯ ಸ್ಥಾನದಲ್ಲಿದ್ದು ಬಾಳುವಂತಿರಬೇಕು. ಇಂಥ ಸಮನ್ವಯವೂ ಸಹ, ಅದು ಜಾಗ್ರತವಾಗಿ ಉಳಿಯಬೇಕೆಂದಿದ್ದರೆ, ಆ ಸಮನ್ವಯದಲ್ಲಿ ಎಲ್ಲ ಬಗೆಯ ಒಲವುಗಳೂ—ಪರಸ್ಪರ ಅತ್ಯಂತ ವಿರೋಧಿಗಳೆಂದು ಕಾಣುವ ವಿಚಾರಗಳು ಕೂಡ—ಸುವ್ಯವಸ್ಥಿತವಾಗಿ, ಒಂದು ಅತ್ಯಂತ ಉನ್ನತವೂ ವಿಶಾಲವೂ ಆದ ಕೇಂದ್ರ ಕಲ್ಪನೆಯ ಸುತ್ತಲೂ ವಿರಾಜಮಾನವಾಗಬೇಕು. ನಾಳಿನ ನವೀನ ಮಾನವತೆಯನ್ನು ನಿರ್ಮಿಸುವ ಶಕ್ತಿಧಾರಣೆಗೆ ತಕ್ಕವನಾಗಲು ಮಾನವನಿಗೆ ಅವಶ್ಯವಿರುವ ಎಲ್ಲ ಜೀವನ ಸೌಕರ್ಯಗಳನ್ನು ಒದಗಿಸುವುದೇ ಆ ಕಲ್ಪನೆಯಾಗಿದೆ.

ಸ್ಪರ್ಧೆಗೆ ಪ್ರೋತ್ಸಾಹನೆ, ಅಗ್ರಸ್ಥಾನಕ್ಕಾಗಿ ಹಾತೊರೆಯುವಿಕೆ, ಮತ್ತು ಆಧಿಪತ್ಯವನ್ನು ಸ್ಥಾಪಿಸಲು ಸೆಣಸುವಿಕೆ, ಇವೆಲ್ಲವೂ ಅಳಿದು ಹೋಗಿ ಅವುಗಳ ಸ್ಥಳದಲ್ಲಿ ಸಾಮರಸ್ಯವುಳ್ಳ ಸಂಘಟನೆಗೈಯುವ ನಿರ್ಧಾರ, ದೂರದರ್ಶಿಯೂ ಪರಿಣಾಮಕಾರಕವೂ ಆದ ಸಹಕಾರಿತ್ವಗಳು ರೂಪುಗೊಳ್ಳಬೇಕು.

ಇದು ಸಾಧ್ಯವಾಗುವುದಕ್ಕೆ ಚಿಕ್ಕಂದಿನಿಂದ ಬಾಲಕರು ಕೇವಲ ಆ ವಿಚಾರ ಮಾತ್ರವನ್ನಲ್ಲ, ಅದರ ಆಚರಣೆಯನ್ನೂ ಅರಿತು ರೂಢಿಸಿಕೊಳ್ಳಬೇಕು. ಆದುದರಿಂದ ಅಂತರಾಷ್ಟ್ರೀಯ ವಿಶ್ವವಿದ್ಯಾಕೇಂದ್ರವು ಎಲ್ಲ ದೇಶಗಳಿಂದ ಇಲ್ಲಿಗೆ ಬರುವ ವಿದ್ಯಾರ್ಥಿಗಳಿಗೆ ಪ್ರವೇಶಕೊಡುವ ಕಾರಣದಿಂದಾಗಲಿ, ಅವರವರ ಮಾತೃಭಾಷೆಯ ಮೂಲಕ ಶಿಕ್ಷಣವನ್ನು ಕೊಡಲಾಗುವದೆಂಬ ಕಾರಣದಿಂದಾಗಲಿ, ಅಂತರಾಷ್ಟ್ರೀಯವೆನಿಸದೆ, ಪೃಥ್ವಿಯ ಮೇಲಿನ ವಿವಿಧ ಪ್ರದೇಶಗಳ ಸಂಸ್ಕೃತಿಗಳು ಇಲ್ಲಿ ಎಲ್ಲರಿಗೂ ಉಪಲಬ್ಧವಾಗುವಂತೆ ನಿರೂಪಿತವಾಗುವುದದರಿಂದ ಅದು ಅಂತರಾಷ್ಟ್ರೀಯ ವಿಶ್ವವಿದ್ಯಾ ಕೇಂದ್ರವಾಗುವುದು.

ಇನ್ನು ಆಯಾ ಸಂಸ್ಕೃತಿಗಳು ಸಹ ಬುದ್ಧಿ ಪ್ರಧಾನ ರೀತಿಯಲ್ಲಿ, ಕಲ್ಪನೆ, ತತ್ವಗಳು, ಮೂಲ ಸೂತ್ರಗಳು ಮತ್ತು ಭಾಷೆಗಳ ಮೂಲಕವಷ್ಟೇ ಅಲ್ಲದೆ ಅಲ್ಲಲ್ಲಿಯ ಸಜೀವವಾದ ರೂಢಿ ಮತ್ತು ಸಾಂಪ್ರದಾಯಗಳ, ಚಿತ್ರ, ಸಂಗೀತ, ಶಿಲ್ಪ, ವಾಸ್ತು, ಅಲಂಕಾರ ಮೊದಲಾದ ಕಲೆಗಳ ಸಕಲ ರೂಪಗಳ ಹಾಗೂ ಸ್ಥೂಲದಲ್ಲಿ ಸ್ವಭಾವಿಕ–ಸೃಷ್ಟಿಸೌಂದರ್ಯ, ಉಡುಪು, ಆಟನೋಟ, ಉದ್ಯಮ, ಮತ್ತು ಆಹಾರಗಳ ಮೂಲಕವಾಗಿಯೂ ಲಭ್ಯವಾಗುವವು. ಅದಕ್ಕಾಗಿ ಒಂದು ಪ್ರಕಾರದ ಜಾಗತಿಕ ಪ್ರದರ್ಶನವನ್ನೇ ಸಂಘಟಿಸಬೇಕಾಗುವದು. ಅದರಲ್ಲಿ ಸಮಸ್ತ ದೇಶಗಳೂ ಪ್ರತ್ಯಕ್ಷವಾಗಿಯೂ ಸಜೀವವಾಗಿಯೂ ಪ್ರತಿನಿಧಿತವಾಗುವುವು. ಈ ವಿಷಯದಲ್ಲಿ ವಿಶೇಷ ಸಂಸ್ಕೃತಿಯುಳ್ಳ ಪ್ರತಿ ಜನಾಂಗವೂ ಆ ದೇಶದ ರೂಢಿಗಳನ್ನು ಅತ್ಯಧಿಕವಾಗಿ ಪ್ರತಿಬಿಂಬಿಸುವ ಮಾದರಿಯ ಮೇಲೆ ಕಟ್ಟಲ್ಪಟ್ಟ ಸಂಸ್ಕೃತಿ ಮಂದಿರದಲ್ಲಿ ತನ್ನ ಸಂಸ್ಕೃತಿಯನ್ನು ಪ್ರದರ್ಶಿಸುವದು. ಅದರಲ್ಲಿ ಆ ರಾಷ್ಟ್ರದ ಸ್ವಾಭಾವಿಕ ಹಾಗೂ ಸಿದ್ಧ ಹುಟ್ಟುವಳಿಗಳನ್ನು ಮತ್ತು ಅದರ ಬುದ್ಧಿಕೌಶಲ್ಯ, ಕಲಾತ್ಮತೆ, ಹಾಗೂ ಆಧ್ಯಾತ್ಮಿಕ ಒಲವುಗಳನ್ನು ಪ್ರತಿನಿಧಿಸುವ ಕೃತಿಗಳನ್ನು ಇರಿಸಲಾಗುವುದು. ಒಂದೊಂದು ರಾಷ್ಟ್ರವೂ ಈ ಬಗೆಯಾಗಿ ಸಂಸ್ಕೃತಿ ಸಮನ್ವಯ ಕಾರ್ಯದಲ್ಲಿ ಪ್ರತ್ಯಕ್ಷ ಮತ್ತು ಕಾರ್ಯೋದ್ಯುಕ್ತವಾದ ಶ್ರದ್ಧೆವಹಿಸಿ ತನ್ನ ಪ್ರಾತಿನಿಧಿಕವಾದ ಮಂದಿರದ ವ್ಯವಸ್ಥೆಯನ್ನು ನಿರ್ವಹಿಸಿ ಸಹಕಾರಿಯಾಗುವುದು ಅವಶ್ಯಕತೆಗೆ ತಕ್ಕಂತೆ ಚಿಕ್ಕದಾಗಲೀ ದೊಡ್ಡದಾಗಲೀ ವಸತಿಗೃಹವೂ ಒಂದೇ ಜನಾಂಗದ ವಿದ್ಯಾರ್ಥಿಗಳ ವಾಸಕ್ಕಾಗಿ ಏರ್ಪಡಿಸಲ್ಪಡಬಹುದು. ಅಂದರೆ ಆ ವಿದ್ಯಾರ್ಥಿಗಳಿಗೆ ಏಕಕಾಲದಲ್ಲಿ, ತಮ್ಮ ಜನ್ಮಭೂಮಿಯ ಸಂಸ್ಕೃತಿ ವಿಶೇಷದ ಆಸ್ವಾದವು ದೊರೆಯುವದಲ್ಲದೆ ಈ ವಿದ್ಯಾ ಕೇಂದ್ರದಲ್ಲಿ ಪೃಥ್ವಿಯ ಮೇಲಿನ ಇತರ ಸಂಸ್ಕೃತಿಗಳ ಪರಿಚಯಾತ್ಮಕ ಶಿಕ್ಷಣದ ಲಾಭವೂ ದೊರೆಯುವುದು. ಈ ರೀತಿಯಲ್ಲಿ ಅಂತರಾಷ್ಟ್ರೀಯ ಶಿಕ್ಷಣವು ಶಾಲೆಯ ಬೆಂಚುಗಳ ಮೇಲೆ ಕೇವಲ ತಾತ್ವಿಕವಾಗಿ ಪಡೆಯುವದಾಗಿ ಉಳಿಯದೆ, ಬಾಳಿನ ಎಲ್ಲ ಸ್ಥಿತಿಗತಿಗಳನ್ನೊಳಗೊಂಡು, ವ್ಯವಹಾರತಃ ನಿಜವಾದ ಶಿಕ್ಷಣವಾಗಿ ಪರಿಣಮಿಸುವದು.

ಸಂಯೋಜನೆಯ ಸ್ಥೂಲ ಚಿತ್ರವನ್ನು ಮಾತ್ರ ಇಲ್ಲಿ ರೇಖಿಸಲಾಗಿದೆ. ಅದರ ಪ್ರಯೋಗದ ವಿವರಗಳನ್ನು ಅವು ಪ್ರತ್ಯಕ್ಷವಾಗಿ ರೂಪುಗೊಂಡಂತೆ ಕ್ರಮಶ: ಇದೇ ಪತ್ರಿಕೆಯಲ್ಲಿ ಪ್ರಕಟಿಸಲಾಗುವದು.

ಆದುದರಿಂದ ಮೊದಲನೆಯ ಗುರಿಯು, ವ್ಯಕ್ತಿಗಳಿಗೆ ತಮ್ಮ ರಾಷ್ಟ್ರದ ಮೂಲ ಪ್ರತಿಭೆಯ ಅರಿವು ಉಂಟಾಗುವಂತೆ ಸಹಾಯ ಮಾಡುವುದೂ,ಅದೇ ಕಾಲಕ್ಕೆ ಅವರಿಗೆ ಉಳಿದ ರಾಷ್ಟ್ರಗಳ ಜೀವನ ರೀತಿಯ ಸಂಪರ್ಕವನ್ನು ಒದಗಿಸಿಕೊಟ್ಟು ಅವರು ಅವುಗಳನ್ನು ತಿಳಿದುಕೊಂಡು ಪೃಥ್ವಿಯ ಮೇಲಿರುವ ಸಕಲದೇಶಗಳ ಜೀವಾಳದ ವಿಷಯವಾಗಿ ಏಕಪ್ರಕಾರವಾದ ಆದರ ಬುದ್ಧಿಯನ್ನು ತಳೆಯುವಂತೆ ಮಾಡುವುದೂ ಆಗಿದೆ. ಏಕೆಂದರೆ ನಿಜವಾಗಿ ಬಾಳಿ ಬದುಕಬೇಕೆಂದಿರುವ ಯಾವದೇ ಜಾಗತಿಕ ಸಂಯೋಜನೆಗೆ ವ್ಯಕ್ತಿ-ವ್ಯಕ್ತಿಗಳ ಮತ್ತು ರಾಷ್ಟ್ರ-ರಾಷ್ಟ್ರಗಳ ಮಧ್ಯದಲ್ಲಿ ಪರಸ್ಪರ ತಿಳುವಳಿಕೆ ಹಾಗೂ ಆದರ ಭಾವಗಳು ತಳಹದಿಯಾಗಬೇಕು. ಮಾನವನು ತಾನಿಂದು ಸಿಲುಕಿರುವ ಅಸ್ತವ್ಯಸ್ತತೆಯ ಪರಿತಾಪಕರ ಪಂಕದ ಆಳದಿಂದ ಉದ್ಧೃತನಾಗುವುದಕ್ಕೆ ಸಾಮೂಹಿಕ ಪದ್ಧತಿಯ ಸಂಘಟನೆಯೂ, ಸಹೃದ ಸಹಕಾರವೂ ಏಕೈಕವಾದ ಮಾರ್ಗವಾಗಿದೆ. ಈ ಅಂತರಾಷ್ಟ್ರೀಯ ವಿಶ್ವವಿದ್ಯಾ ಕೇಂದ್ರದಲ್ಲಿ ಈ ಗುರಿ, 'ಈ ಭಾವನೆಯನ್ವಯ ಮಾನವ ಜನಾಂಗದ ಸಕಲ ಸಮಸ್ಯೆಗಳೂ ಅಭ್ಯಸಿಸಲ್ಪಡುವವು; ಹಾಗೂ ಆ ಸಮಸ್ಯೆಗಳ ಪರಿಹಾರವನ್ನೂ ಶ್ರೀ ಅರವಿಂದರು ತಮ್ಮ ಲೇಖನಗಳಲ್ಲಿ ತೋರಿಸಿದ ಅತಿಮಾನಸ ಪ್ರಜ್ಞಾಜ್ಯೋತಿ ಮೂಲಕವಾಗಿ ಸೂಚಿಸಲಾಗುವುದು.

— ೨ —

‘ಶ್ರೀ ಅರವಿಂದ ಅಂತರಾಷ್ಟ್ರೀಯ ವಿದ್ಯಾ ಕೇಂದ್ರ’ದಲ್ಲಿ ಕೊಡಲಾಗುವ ಶಿಕ್ಷಣವನ್ನು ಯಾವ ತತ್ತ್ವಗಳ ಮೇಲೆ ಆಧರಿಸಲಾಗುವುದೋ ಆ ತತ್ವಗಳನ್ನು ಚರ್ಚಿಸುತ್ತ ಜಾಗತಿಕ ಸ್ವರಮೇಳದಲ್ಲಿ ತನ್ನ ಯೋಗ್ಯ ಸ್ಥಾನವನ್ನಲಂಕರಿಸಿ ಪ್ರತಿ ಜನಾಂಗವೂ ತನ್ನ ಕರ್ತ್ತವ್ಯವನ್ನು ಸರಿಯಾಗಿ ನೆರವೇರಿಸುವುದು ಅವಶ್ಯವೆಂದು ಸೂಚಿಸಲಾಗಿತ್ತು.

ಆದರೆ ಪ್ರತಿಯೊಂದು ರಾಷ್ಟ್ರವೂ ತನ್ನ ಸ್ಥಾನವನ್ನು, ತನ್ನ ಮಹತ್ವಾಕಾಂಕ್ಷೆ ಮತ್ತು ಲೋಭಗಳ ಮೂಲಕ ನಿರಂಕುಶವಾಗಿ ತಾನೇ ಆರಿಸಬಹುದೆಂದು ಮಾತ್ರ ಇದರಿಂದ ವಿದಿತವಾಗುವದಿಲ್ಲ. ಏಕೆಂದರೆ ಯಾವದೇ ದೇಶದ ಆಂತರಿಕ ಧ್ಯೇಯವು ಬಾಹ್ಯ ಪ್ರಜ್ಞೆಯ ಅಹಂಕಾರ ಹಾಗೂ ಅಜ್ಞಾನಪ್ರೇರಿತ ರುಚಿಯನ್ನನುಸರಿಸಿ ಮಾನಸಿಕವಾಗಿ ನಿರ್ಣಯಿಸತಕ್ಕ ಮಾತಲ್ಲ; ಹಾಗೆ ಮಾಡಿದುದೇ ಆದರೆ ಕೇವಲ ರಾಷ್ಟ್ರರಾಷ್ಟ್ರಗಳ ನಡುವಿನ ಕಲಹಕ್ಕೆ ಹೊಸ ಕ್ಷೇತ್ರವನ್ನು ಒದಗಿಸಿಕೊಟ್ಟಂತಾಗಿ, ಆ ವಿರಸವು ಕದಾಚಿತ್ ಇನ್ನಷ್ಟು ತೀವ್ರವಾಗಿ ಪರಿಣಮಿಸಿ ಬೆಳೆದು ಬಂದೀತು.

ವ್ಯಕ್ತಿಯಲ್ಲಿ ಅವನ ನಿಜವಾದ ಜೀವಾಳವು, ಅವನ ಧ್ಯೇಯವನ್ನು ಪ್ರಕಾಶವಾಗಿಯೋ ರಹಸ್ಯವಾಗಿಯೋ ರೂಪಿಸುತ್ತ, ಅವನೊಳಗಿನ ಹೃತ್‌ಪುರುಷನೇ ಆಗಿರುವಂತೆ ಪ್ರತಿಯೊಂದು ರಾಷ್ಟ್ರಕ್ಕೂ ಅದರ ನಿಜವಾದ ಆತ್ಮರೂಪಿಯಾಗಿ ಒಬ್ಬ ಹೃತ್ಪುರುಷನಿದ್ದು ಆತನೇ ಆದರ ಆಗುಹೋಗುಗಳನ್ನು ತೆರೆಯ ಮರೆಯಿಂದ ಎರಕ ಹೊಯ್ಯುತ್ತಿರುವನು. ಆತನೇ ದೇಶದ ಆತ್ಮ, ದೇಶದ ಪ್ರತಿಭೆ, ಜನತೆಯ ಕೆಚ್ಚು, ಜನಾಂಗದ ಅಭೀಪ್ಸೆಯ ಕೇಂದ್ರ, ನಾಡಿನ ಬದುಕಿನಲ್ಲಿ ಸುಂದರವೂ ಉದಾರವೂ, ಘನವೂ ಉದಾತ್ತವೂ ಆದ ಎಲ್ಲದರ ಮೂಲ ಸೆಲೆ. ನಿಜವಾದ ದೇಶಭಕ್ತರಿಗೆ ಆ ಆತ್ಮದ ಸಾನ್ನಿಧ್ಯವು ಒಂದು ಅನುಭವ ವೇದ್ಯವಾದ ಸತ್ಯಸಂಗತಿ. ಹಿಂದುಸ್ತಾನದಲ್ಲಿ ಈ ಹೃತ್‌ಪುರುಷನನ್ನು [ದೇಶದ ಅಂತರಾತ್ಮನನ್ನು] ದೇವಾಂಶವೆಂದೆಣಿಸಲಾಗುತ್ತಿದ್ದು, ನಾಡನ್ನು ಸತ್ಯವಾಗಿ ಪ್ರೀತಿಸುವವರೆಲ್ಲರೂ ಆ ದೇವತಾಂಶವನ್ನು ‘ಭಾರತ ಮಾತೆ’ಯೆಂದು ಸಂಬೋಧಿಸುತ್ತಾರೆ; ಮತ್ತು ಅನುದಿನವೂ ಆ ಮಾತೆಯನ್ನು ರಾಷ್ಟ್ರದ ಕಲ್ಯಾಣ ಚಿಂತನೆಗಾಗಿ ಪ್ರಾರ್ಥಿಸುತ್ತಾರೆ ಆಕೆಯೇ ದೇಶದ ನಿಜವಾದ ಧ್ಯೇಯದ ಪ್ರತೀಕ, ನಾಡಿನ ಆಧ್ಯಾತ್ಮಿಕ ಉದ್ದೇಶ ಹಾಗೂ ಆದರ್ಶಗಳು ಮೈವೆತ್ತ ಮೂರ್ತಿಯಾಗಿದ್ದಾಳೆ.

ಹಿಂದುಸ್ತಾನದ ವಿಚಾರವಂತರೂ, ಆಧ್ಯಾತ್ಮಿಕ ಒಲವುಳ್ಳ ಗಣ್ಯರೂ ಆ “ಭಾರತಮಾತೆ”ಯೆಂದರೆ ಜಗದಂಬೆಯ ಒಂದು ರೂಪವೆಂದೇ ತಿಳಿಯುವರೆಂಬುದು ಮುಂದೆ ಕೊಡುವ “ದುರ್ಗಾ ಸ್ತೋತ್ರ”ದಿಂದ ಸ್ಪುಟವಾಗುವುದು.

# ದುರ್ಗಾ ಸ್ತೋತ್ರ

ದುರ್ಗಾ ಮಾತೆಯೇ! ನೀನು ಸಿಂಹವಾಹಿನಿ, ಸರ್ವಶಕ್ತಿದಾಹಿಯಿನಿ, ಮಾತೆ, ಶಿವಪ್ರಿಯೆ! ನಿನ್ನ ಶಕ್ತ್ಯಂಶಜಾತರಾದ ಭಾರತದ ಯುವಕರಾದ ನಾವು ನಿನ್ನ ದೇಗುಲದಲ್ಲಿ ಕುಳಿತು ಪ್ರಾರ್ಥಿಸುತ್ತಿರುವೆವು. ಕೇಳು ಮಾತೆಯೇ, ಭೂಮಿಗೆ ಇಳಿದು ಬಂದು ಈ ಭಾರತದಲ್ಲಿ ಪ್ರಕಾಶಗೊಳ್ಳು.

ದುರ್ಗಾಮಾತೆಯೇ! ಯುಗಯುಗದಲ್ಲಿ ಮಾನವಶರೀರದಲ್ಲಿ ಅವತರಿಸಿ ಬಂದು ಜನ್ಮ ಜನ್ಮದಲ್ಲಿ ನಿನ್ನ ನಿನ್ನ ಕಾರ್ಯವನ್ನೇ ಮಾಡಿ ಆನಂದಧಾಮಕ್ಕೆ ಮರಳುವೆವು ಈ ಬಾರಿಯೂ ನಿನ್ನ ಕಾರ್ಯಕ್ಕಾಗಿಯೇ ವ್ರತಿಗಳು ನಾವು. ಕೇಳು ಮಾತೆಯೇ, ಭೂಮಿಗೆ ಇಳಿದು ಬಂದು ನಮಗೆ ನೆರವನ್ನು ನೀಡು.

ದುರ್ಗಾ ಮಾತೆಯೆ ನೀನು ಸಿಂಹವಾಹಿನಿ, ತ್ರಿಶೂಲಧಾರಿಣಿ, ತೊಟ್ಟ ಕವಚದಿಂದ ಸುಂದರಶರೀರೆ, ಜಯದಾಯಿನಿ. ಭಾರತವು ನಿನ್ನ ಪ್ರತೀಕ್ಷೆಯಲ್ಲಿದೆ. ನಿನ್ನ ಆ ಮಂಗಲಮಯಿ ಮೂರ್ತಿಯನ್ನು ನೋಡಲು ಉತ್ಸುಕವಾಗಿದೆ. ಕೇಳು ಮಾತೆಯೇ, ಭೂಮಿಗೆ ಇಳಿದು ಬಂದು ಈ ಭಾರತದಲ್ಲಿ ಪ್ರಕಾಶಗೊಳ್ಳು.

ದುರ್ಗಾ ಮಾತೆಯೆ! ನೀನು ಬಲದಾಯಿನಿ, ಪ್ರೇಮದಾಯನಿ, ಜ್ಞಾನದಾಯಿನಿ, ಶಕ್ತಿಸ್ವರೂಪಿಣಿ, ಭೀಮೆ, ಸೌಮ್ಯ-ರೌದ್ರ ರೂಪಿಣಿ! ಜೀವನ ಸಂಗ್ರಾಮದಲ್ಲಿ, ಭಾರತ ಸಂಗ್ರಾಮದಲ್ಲಿ, ನಿನ್ನಿಂದ ಪ್ರೇರಿತರಾದ ಯೋಧರು ನಾವು; ಮಾತೆಯೇ, ಪ್ರಾಣ-ಮನಗಳಿಗೆ ಅಸುರರ ಶಕ್ತಿ-ಉದ್ಯಮಗಳನ್ನು ನೀಡು. ಮಾತೆಯೇ, ಹೃದಯ-ಬುದ್ಧಿಗಳಿಗೆ ದೇವತೆಗಳ ಶೀಲ ಜ್ಞಾನಗಳನ್ನು ನೀಡು.

ದುರ್ಗಾಮಾತೆಯೆ! ಜಗತ್‌ಶ್ರೇಷ್ಠ ಭಾರತ ಜನಾಂಗವು ನಿಬಿಡ ತಿಮಿರದಿಂದ ಆಚ್ಛನ್ನವಾಗಿತ್ತು. ಮಾತೆಯಾದ ನೀನು ಗಗನತಲದಲ್ಲಿ ಮೆಲ್ಲಮೆಲ್ಲನೆ ಉದಯಗೊಳ್ಳುತ್ತಿರುವೆ. ನಿನ್ನ ಸ್ವರ್ಗೀಯ ಶರೀರದೊಳಗಿಂದ ತಿಮಿರವಿನಾಶಿಯಾದ ಪ್ರಭೆಯು ಉಷಃಪ್ರಕಾಶರೂಪದಲ್ಲಿ ಹೊರಹೊಮ್ಮುತ್ತಿದೆ. ನಿನ್ನ ಆ ಪ್ರಕಾಶವನ್ನು ವಿಸ್ತಾರಗೊಳಿಸು. ಮಾತೆಯೇ ತಿಮಿರವನ್ನು ವಿನಾಶಗೊಳಿಸು

ದುರ್ಗಾಮಾತೆಯೆ! ಶ್ಯಾಮಲೆಯಾದ ನೀನು ಸರ್ವಸೌಂದರ್ಯಾಲಂಕೃತಳು. ಜ್ಞಾನ-ಪ್ರೇಮ-ಶಕ್ತಿಗಳ ಆಧಾರವಾದ ಭಾರತದಲ್ಲಿ ನಿನ್ನ ಸತ್ವವೇ ಉಂಟು. ಇಷ್ಟು ದಿನ ಭಾರತವು ಆತ್ಮರಕ್ಷಣೆಗಾಗಿ ಶಕ್ತಿಯನ್ನು ಸಂಗ್ರಹಿಸುತ್ತಿತ್ತು. ಈ ಯುಗದಲ್ಲಿ ಇಂದು ಭಾರತದ ಭಾರವನ್ನು ಹೊತ್ತು ಯುವಕಗಣವು ಅಣಿಯಾಗಿ ನಿಂತಿದೆ. ಮಾತೆಯೇ, ನೀನು ಬಂದು ಪ್ರಕಾಶಗೊಳ್ಳು.

ದುರ್ಗಾಮಾತೆಯೆ! ನಾವು ನಿನ್ನ ಸಂತಾನ. ನಿನ್ನ ಪ್ರಸಾದದಿಂದ, ನಿನ್ನ ಪ್ರಭಾವದಿಂದ ಮಹತ್ಕಾರ್ಯದ ಮಹದ್ಭಾರಕ್ಕಾಗಿ ಉಪಯುಕ್ತರನ್ನಾಗಿ ಮಾಡು. ಕ್ಷುದ್ರತೆಯನ್ನು ನಾಶಗೊಳಿಸು, ಸ್ವಾರ್ಥವನ್ನು ನಾಶಗೊಳಿಸು, ಭಯವನ್ನು ನಾಶಗೊಳಿಸು.

ದುರ್ಗಾಮಾತೆಯೆ! ನೀನು ಕಾಲೀರೂಪಿಣಿ, ನೃಮುಂಡಮಾಲಿನಿ, ದಿಗಂಬರಿ, ಕೃಪಾಣಪಾಣಿ, ದೇವಿ ಅಸುರವಿನಾಶಿನಿ! ನಿನ್ನ ಕ್ರೂರ ಗರ್ಜನೆಯಿಂದ ಅಂತಸ್ಥ ರಿಪುಗಳನ್ನು ನಾಶಗೊಳಿಸು.

ನಮ್ಮ ಒಳದಲ್ಲಿ ಒಬ್ಬ ರಿಪುವೂ ಉಳಿಯದಿರಲಿ. ನಮ್ಮ ಹೃದಯವು ವಿಮಲವಾಗಲಿ. ಇದು ವೇ ನಮ್ಮ ಪ್ರಾರ್ಥನೆ ಮಾತೆಯೇ, ನೀನು ನಮ್ಮಲ್ಲಿ ಪ್ರಕಾಶಗೊಳ್ಳು.

ದುರ್ಗಾಮಾತೆಯೆ ! ಭಾರತವು ಇಂದು ಸ್ವಾರ್ಥ—ಭಯ— ಕ್ಷುದ್ರತೆಗಳಿಂದಾಗಿ ಸಾಯುತ್ತಿದೆ. ನಮ್ಮನ್ನು ಮಹಂತರನ್ನಾಗಿ ಮಾಡು, ಮಹತ್— ಪ್ರಯಾಸಿಗಳನ್ನಾಗಿ ಮಾಡು. ಉದಾರ ಚೇತರನ್ನಾಗಿ ಮಾಡು. ಇನ್ನು ಮುಂದೆ ಅಲ್ಪಾಶೆ ಅಳಿಯಲಿ, ನಿಶ್ಚೇಷ್ಟತೆ ನಶಿಸಲಿ, ಆಲಸ್ಯವು ದೂರವಾಗಲಿ; ನಾವಾರೂ ಭಯಭೀತರಾಗದಿರಲಿ.

ದುರ್ಗಾಮಾತೆಯೆ ! ಯೋಗ್ಯಶಕ್ತಿಯನ್ನು ವಿಸ್ತಾರಗೊಳಿಸು. ನಾವು ನಿನ್ನ ಪ್ರಿಯ ಆರ್ಯ ಸಂತಾನ. ಲುಪ್ತವಾಗಿ ಹೋದ ವಿದ್ಯೆ,, ಶೀಲ, ಮೇಧಾಶಕ್ತಿ, ಭಕ್ತಿ—ಶ್ರದ್ಧೆ, ತಪಸ್ಯೆ, ಬ್ರಹ್ಮಚರ್ಯ, ಸತ್ಯಜ್ಞಾನ— ಇವುಗಳನ್ನು ನಮ್ಮಲ್ಲಿ ಮತ್ತೆ ಪ್ರಕಾಶಗೊಳಿಸಿ ಜಗತ್ತಿಗಾಗಿ ಅವುಗಳನ್ನು ನೀಡುವಂತೆ ಮಾಡು ದುರ್ಗತಿನಾಶಿನಿಯಾದ ಜಗದಂಬೆಯೇ ಮಾನವಕುಲದ ಸಹಾಯಕ್ಕಾಗಿ ನೀನು ಪ್ರಕಾಶಗೊಳ್ಳು.

ದುರ್ಗಾಮಾತೆಯೆ ! ಅಂತಸ್ಥ ರಿಪುಗಳನ್ನು ಸಂಹರಿಸಿ ಬಾಹ್ಯ ಬಾಧೆ— ವಿಘ್ನಗಳನ್ನು ನಿರ್ಮೂಲಗೊಳಿಸು. ಬಲಶಾಲಿಯೂ ಪರಾಕ್ರಮಿಯೂ ಉನ್ನತಚೇತವೂ ಆದ ಭಾರತ ಜನಾಂಗವು ಏಕತ್ವ— ಪ್ರೇಮಗಳಿಂದಲೂ ಸತ್ಯ— ಶಕ್ತಿಗಳಿಂದಲೂ ಶಿಲ್ಪ- ಸಾಹಿತ್ಯಗಳಿಂದಲೂ ವಿಕ್ರಮ ಜ್ಞಾನಗಳಿಂದಲೂ ಶ್ರೇಷ್ಠತೆಯನ್ನು ಪಡೆದು, ತನ್ನ ಪವಿತ್ರ ಕಾನನಗಳಲ್ಲಿ, ಫಲದ್ರೂಪ ಕ್ಷೇತ್ರಗಳಲ್ಲಿ ಗಗನ—ಸಹಚರ ಪರ್ವತಗಳಲ್ಲಿ, ಪೂತಸಲಿಲ ನದೀ ತೀರಗಳಲ್ಲಿ ಶಾಶ್ವತವಾಗಿ ಬಾಳಿ ಬದುಕಲಿ ಮಾತೃಚರಣಗಳಲ್ಲಿ ಇದುವೇ ಪ್ರಾರ್ಥನೆ ಮಾತೆಯೇ, ನೀನು ಪ್ರಕಾಶಗೊಳ್ಳು.

ದುರ್ಗಾಮಾತೆಯೆ ! ನಮ್ಮ ಶರೀರಗಳಲ್ಲಿ ಯೋಗಬಲದಿಂದ ಪ್ರವೇಶಿಸು ನಾವು ನಿನ್ನ ಯಂತ್ರಗಳಾಗುವೆವು ನಿನ್ನ ಅಶುಭವಿನಾಶಿ ಖಡ್ಗವಾಗುವೆವು. ಅಜ್ಞಾನವಿನಾಶಿ ಪ್ರದೀಪವಾಗುವೆವು ನಿನ್ನ ಮಕ್ಕಳ ಈ ಆಶೆಯನ್ನು ಪೂರ್ಣಗೊಳಿಸು ಒಳಗಿದ್ದು ನಿಯಂತಾರಳಾಗಿ ಯಂತ್ರವನ್ನು ನಡೆಯಿಸು ಅಶುಭದ ಹಂತಾರಳಾಗಿ ಖಡ್ಗವನ್ನು ತಿರುಹು, ಜ್ಞಾನದೀಪ್ತಿ ಪ್ರಕಾಶಿನಿಯಾಗಿ ದೀವಟಿಗೆಯನ್ನು ಹಿಡಿದೆತ್ತು ಮಾತೆಯೇ, ಪ್ರಕಾಶಗೊಳ್ಳು,

ದುರ್ಗಾಮಾತೆಯೆ ! ಒಮ್ಮೆ ನಿನ್ನನ್ನು ಪಡೆದೆವೆಂದರೆ ಇನ್ನೆಂದು ನಿನ್ನ ವಿಸರ್ಜನೆ ಮಾಡಲಿಕ್ಕಿಲ್ಲ. ಶ್ರದ್ಧೆ- ಭಕ್ತಿ- ಪ್ರೇಮಗಳ ಪಾಶದಿಂದ ನಿನ್ನನ್ನು ಕಟ್ಟುವೆವು. ಮಾತೆಯೇ ಬಂದು ಬಿಡು, ನಮ್ಮ ಪ್ರಾಣ- ಮನ- ಶರೀರಗಳಲ್ಲಿ ಪ್ರಕಾಶಗೊಳ್ಳು.

ವೀರಮಾರ್ಗ ಪ್ರದರ್ಶಿನಿಯಾದ ಮಾತೆಯೇ, ಬಂದುಬಿಡು. ಇನ್ನೆಂದೂ ನಿನ್ನ ವಿಸರ್ಜನೆ ಮಾಡುವುದಿಲ್ಲ ನಮ್ಮ ಅಖಿಲ ಜೀವನವೂ ಅನವಚ್ಛಿನ್ನ ದುರ್ಗಾಪೂಜೆ. ನಮ್ಮ ಸರ್ವ ಕಾರ್ಯವೂ ಅವಿರತ ಪವಿತ್ರ ಪ್ರೇಮಮಯ ಶಕ್ತಿಮಯ ಮಾತೃಸೇವಾ ವ್ರತವಾಗಲಿ. ಮಾತೆಯೇ, ಇದುವೆ ನಮ್ಮ ಪ್ರಾರ್ಥನೆ. ಭೂಮಿಗೆ ಇಳಿದು ಬಂದು ಈ ಭಾರತದಲ್ಲಿ ಪ್ರಕಾಶಗೊಳ್ಳು,

ಬೇರೆ ದೇಶಗಳಲ್ಲಿಯೂ ಆಯಾ ರಾಷ್ಟ್ರದ ಅಂತರ್ಯಾಮಿಯಾದ ಹೃತ್‌ಪುರುಷನ ಬಗೆಗೆ ಇದೇ ರೀತಿಯ ಭಕ್ತಿಯು, ಅದರ ಮಹೋನ್ನತ ಆದರ್ಶದ ಅಭಿವ್ಯಕ್ತಿಯಲ್ಲಿ ಸಾಧನವಾಗುವ ಇದೇ ರೀತಿಯ ಅಭೀಪ್ಸೆಯು, ರಾಷ್ಟ್ರದ ಆತ್ಮದೊಡನೆ ತಾದಾತ್ಮ್ಯಹೊಂದಿ ಅದರ ನಿಜವಾದ ಸ್ವಭಾವ, ಭಗವತ್‌ಸಂಕಲ್ಪಿತ ಉದ್ದೇಶಗಳನ್ನರಿಯುವಂತೆ ಪ್ರೇರಿಸುವ ಪ್ರಗತಿ–ಪರಿಪೂರ್ಣತೆಗಳ ವಿಷಯವಾಗಿ ತೀವ್ರ ಉತ್ಸುಕತೆಯೂ ಪ್ರಕಟವಾಗಿ ಆಕಸ್ಮಿಕ ಘಟನಾ ಪರಂಪರೆಯ ಇತಿಹಾಸದ ಎಲ್ಲೆಯನ್ನು ಉಲ್ಲಂಘಿಸಿ ಪ್ರತಿಯೊಂದು ರಾಷ್ಟ್ರವೂ ಚೈತನ್ಯಯುಕ್ತವೂ, ಅಮೃತ ಜೀವನ ಉಳ್ಳದ್ದೂ ಆದುದನ್ನು ಕಾಣಬಯಸುತ್ತೇವೆ.

— ೩ —

## (ಹೊಸದಾಗಿ ಬರುವವರಿಗೆ ಸಲಹೆ)

ಅಂತರಾಷ್ಟ್ರೀಯ ವಿಶ್ವವಿದ್ಯಾಕೇಂದ್ರವು ಸಾವಕಾಶವಾಗಿ ಸಂಘಟಿಸಲ್ಪಡುತ್ತಲಿದೆ. ನಿಯೋಜಿತ ಹೊಸ ಕಟ್ಟಡಗಳ ನಕಾಶೆಗಳು ಸಿದ್ಧವಾಗಿವೆ. ಆದರೆ ಅವು ರಚಿಸಲ್ಪಡುವವರೆಗೆ, ವಾಚನಾಲಯ, ಗ್ರಂಥಾಲಯ, ಕೆಲವು ವರ್ಗಗಳೇ ಮೊದಲಾದ ಹಲವು ಶಾಖೆಗಳನ್ನು, ಇನ್ನು ಮುಂದೆ ಕೆಡವಬೇಕಾದ ಹಳೆಯ ಕಟ್ಟಡಗಳಲ್ಲಿಯೇ ತೆರೆಯಲಾಗಿದೆ. ಈ ದೇಶದ ಹವಾಮಾನ, ರೀತಿ–ನೀತಿಗಳಿಗೆ ಅಪರಿಚಿತರಾಗಿರುವ ವಿದೇಶಿಯರನ್ನೊಳಗೊಂಡು, ಅನೇಕರು ಪ್ರಾಧ್ಯಾಪಕರೂ, ವಿದ್ಯಾರ್ಥಿಗಳೂ ಈಗಾಗಲೇ ಬರತೊಡಗಿದ್ದಾರೆ. ಅವರು ಆ ಶ್ರಮಕ್ಕೆ ಇದೇ ಮೊಟ್ಟಮೊದಲು ಬರುತ್ತಿದ್ದು ಅದರ ಜೀವನ, ರೀತಿ ಅಥವಾ ಪ್ರಘಾತಗಳನ್ನು ಅರಿತಿರುವದಿಲ್ಲ. ಹೀಗೆ ಬರುವವರಲ್ಲಿ ಕೆಲವರು ಸೇವೆಗೈಯಲೆಂದೋ, ಕಲಿಯಲೆಂದೋ, ಮಾನಸಿಕ ಅಭೀಪ್ಸೆಯಿಂದ ಯುಕ್ತರಾಗಿದ್ದರೆ, ಇನ್ನು ಕೆಲವರು, ಯೋಗವನ್ನು ಆಚರಿಸುವ (ದೇವನನ್ನು ಪಡೆಯುವ ಮತ್ತು ಪರಮಾತ್ಮನೊಂದಿಗೆ ಐಕ್ಯ ಸಾಧಿಸುವ) ಆಶೆಯುಳ್ಳವರಿರುತ್ತಾರೆ. ಬೇರೆ ಹಲದರು ಇಹದಲ್ಲಿಯೇ ಭಗವತ್‌ಕಾರ್ಯದಲ್ಲಿ ನಿರತರಾಗುವ ಇಚ್ಛೆಯುಳ್ಳವರಾಗಿ ಬರುತ್ತಾರೆ. ಎಲ್ಲರೂ, ಆತ್ಮ ಸಾಕ್ಷಾತ್ಕಾರದೆಡೆಗೆ ಮುನ್ನಡೆಸಲೆಳೆಸುವ ಹೃತ್ಪುರುಷನ ಬಲವತ್ತರವಾದಪ್ರೇರಣೆಯಿಂದ ಬರುವದು. ಅವರು ತಮ್ಮ ಹೃತ್ಪುರುಷನನ್ನು ಮುಂದಿಟ್ಟುಕೊಂಡು, ಅವನ ಆಜ್ಞಾನುವರ್ತಿಯಾದ ಪ್ರಜ್ಞೆಯುಳ್ಳವರಾಗಿ ಬರುತ್ತಾರೆ. ವ್ಯಕ್ತಿಗಳೊಡನೆ ಮತ್ತು ವಸ್ತುಗಳೊಡನೆ ಅವರು ಹೃತ್‌ಪುರುಷನ ಮುಖಾಂತರವೇ ವ್ಯವಹರಿಸುತ್ತಾರೆ. ಪ್ರತಿಯೊಂದು ಅವರಿಗೆ ಚೆನ್ನವಾಗಿಯೂ ಅಂದವಾಗಿಯೂ ತೋರುತ್ತದೆ. ಅವರ ಆರೋಗ್ಯ ಸುಧಾರಿಸುತ್ತದೆ. ಅವರ ಪ್ರಜ್ಞೆ ನಿರ್ಮಲವಾಗುತ್ತದೆ. ಅವರು ಸೌಖ್ಯ ಶಾಂತಿ ಸುರಕ್ಷಿತತೆಗಳ ಅನುಭವ ಪಡೆಯುತ್ತಾರೆ. ಅವರಿಗೆ ತಮ್ಮ ಪ್ರಜ್ಞೆಯ ಪರಾಕಾಷ್ಠೆಯನ್ನು ಪಡೆದಂತೆನಿಸುತ್ತದೆ. ಈ ಶಾಂತಿ ಪೂರ್ಣತೆ ಮತ್ತು ಆನಂದವನ್ನು ಹೃತ್ಪುರುಷನ ಮುಖಾಂತರ ಅನುಭವಿಸತ್ತಿರಲು, ಅವು ಅವರಿಗೆ ಎಲ್ಲೆಡೆಯಲ್ಲಿಯೂ. ಎಲ್ಲ ವಸ್ತುಗಳಲ್ಲಿಯೂ ಮತ್ತು ಎಲ್ಲರಲ್ಲಿಯೂ ಕಾಣುತ್ತವೆ. ಆದುದರಿಂದ ಇಲ್ಲಿ ವ್ಯಾಪ್ತವಿದ್ದು ಸಕಲವನ್ನು ನಡೆಸುತ್ತಿರುವ ನಿಜವಾದ ಪ್ರಜ್ಞೆಯ ಪ್ರಭಾವಕ್ಕೆ ತಮ್ಮನ್ನು ತೆರೆದಿಟ್ಟುಕೊಳ್ಳುವದು ಅವರಿಗೆ ಸಹಜವಾಗುತ್ತದೆ. ಈ ಬಗೆಯ ಉನ್ಮೀಲಿತ ಭಾವವು ಇರುವವರೆಗೆ ಆ ಶಾಂತಿ ಆ ಪೂರ್ಣತೆ ಮತ್ತು ಆ ಆನಂದಗಳು ಇರುತ್ತವೆ. ಅವುಗಳ ಒಡನಾಡಿಗಳಾದ ಪ್ರಗತಿ, ಆರೋಗ್ಯ, ಸ್ವಾಸ್ಥ್ಯಗಳು ಶಾರೀರಿಕ ಸ್ತರದಲ್ಲಿಯೂ ಸ್ತಬ್ಧತೆ, ಪ್ರಸನ್ನತೆಗಳು ಪ್ರಾಣದಲ್ಲಿಯೂ, ಸುಸ್ಪಷ್ಟ ತಿಳುವಳಿಕೆ ವಿಶಾಲತೆಗಳು ಮಾನಸದಲ್ಲಿಯೂ ಮತ್ತು ಸಾಮಾನ್ಯವಾಗಿ ಭದ್ರತೆ ಸಮಾನತೆಗಳೂ ಅವರಲ್ಲಿ ನೆಲೆಯಾಗಿರುವವು. ಆದರೆ ಮಾನವ ಮಾತ್ರನಿಗೆ ತನ್ನ ಹೃತ್ಪುರುಷನೊಂದಿಗೆ ಸದಾಕಾಲ ಸಂಪರ್ಕವನ್ನಿಟ್ಟುಕೊಳ್ಳುವುದು ಕಠಿಣ ಕೆಲಸವಾಗಿರುವುದು ಆತನು ಇಲ್ಲಿ ಕೆಲಕಾಲವಿರತೊಡಗಿ ಸ್ಥಾಯಿಕನಾದ ಬಳಿಕ ಹೊಸ ಅನುಭವದ ನಾವೀನ್ಯತೆಯು ಅಳಿಯುವುದು. ಹಳೆಯ ವ್ಯಕ್ತಿತ್ವವು ಪುನಃ ಮೇಲೆದ್ದು ಬರುವುದು ಅದರ ಸಂಗಡ ಅವರ ಪರಿವಾರವರ್ಗದ ಹಳೇ ರೂಢಿಗಳು ಬೇಕು ಬೇಡುಗಳು, ಚಿಕ್ಕ ಪುಟ್ಟ ಹುಚ್ಚುಗಳು, ನ್ಯೂನತೆಗಳು ಮತ್ತು ತಪ್ಪು ತಿಳುವಳಿಕೆಗಳು ಇವೆಲ್ಲ ಮರುಕಳಿಸುವವು. ಶಾಂತಿಯು ಅಶಾಂತತೆಗೆ ಎಡೆ ಕೊಡುವುದು, ಆನಂದವು ಅದೃಶ್ಯವಾಗುವುದು ಅರಿವು ಕುರುಡಾಗುವುದು. ಅಲ್ಲದೆ ತಾನು ಬೇರೆ ಎಲ್ಲ ಸ್ಥಳಗಳಲ್ಲಿದ್ದಂತೆಯೇ ಪುನಃ ಇಲ್ಲಿಯೂ ಆದುದರಿಂದ ಈ ಸ್ಥಾನವೂ ಉಳಿದೆಲ್ಲ ಸ್ಥಳಗಳಂತೆಯೇ ಇದೆಯೆಂಬ ಭಾವನೆ ಕ್ರಮೇಣ ಬರತೊಡಗುವುದು. ಸಾಧಿಸಲ್ಪಟ್ಟ ಸಂಗತಿಗಳತ್ತ ಗಮನವನ್ನೀಯದೆ ಇನ್ನೂ ಆಗಬೇಕಾಗಿರುವ ವಿಷಯವಾಗಿಯೇ ಅವನು ಹೆಚ್ಚು ಹೆಚ್ಚು ಅಥವಾ ಕೇವಲವಾಗಿ ಲಕ್ಷ್ಯ ಕೊಡ ತೊಡಗುವನು. ಅವನು ದುಶ್ಚಿತ್ತನೂ ಅಸಂತುಷ್ಟನೂ, ಆಗಿ ತನ್ನ ತಪ್ಪನ್ನು ಕಾಣದೆ ಪರದೂಷಣೆಯನ್ನು ಆರಂಭಿಸುವನು. ಸುಖ ಸಾಧನಗಳ ಅಭಾವ, ತಾಳಲಾಗದ ಹವಾಮಾನ, ಅಪಚನವಾಗುವ ಅಯೋಗ್ಯ ಆಹಾರ, ಇತ್ಯಾದಿ ಹಲವಾ

ರರ ಬಗ್ಗೆ ಕುರು ಕುರಿಸುವನು. " ಯೋಗ ಸಾಧನಕ್ಕೆ ದೇಹವು ಅನಿವಾರ್ಯವಾದ ಆಧಾರವಾಗಿದೆ, ಅದನ್ನು ಅಲಕ್ಷಿಸಬಾರದು. ಪ್ರತಿಯಾಗಿ ಅದರ ಬಗ್ಗೆ ವಿಶೇಷ ಜಾಗೂರಕತೆ ವಹಿಸಬೇಕು. " ಎಂಬ ಶ್ರೀ ಅರವಿಂದರ ಉಪದೇಶವನ್ನವಲಂಬಿಸಿ ಶಾರೀರಿಕ ಪ್ರಜ್ಞೆಯು ಅದರ ಮೇಲೆಯೇ ಏಕಾಗ್ರವಾಗಿ ಅದನ್ನು ಸಂತುಷ್ಟ ಪಡಿಸುವ ವ್ಯಾವಹಾರಿಕತಃ ಅಸಂಭಾವ್ಯವಾದ— ಗುರಿಯನ್ನಿಟ್ಟುಕೊಂಡು, ಅದಕ್ಕಾಗಿ ಮಾರ್ಗ ಶೋಧಿಸ ತೊಡಗುತ್ತದೆ. ಏಕೆಂದರೆ, ಕೆಲವೊಂದು ಉದಾಹರಣೆಗಳನ್ನು ಬಿಟ್ಟರೆ, ಅದಕ್ಕೆ ಕೊಟ್ಟಷ್ಟೂ ಅದು ಹೆಚ್ಚು ಹೆಚ್ಚು ಬೇಡುತ್ತದೆ. ಅಲ್ಲದೆ ಶಾರೀರಿಕ ಚೇತನವು ಅಜ್ಞವೂ ದೃಷ್ಟಿಹೀನವೂ ಇರುವುದು. ಅದರಲ್ಲಿ ಅಸತ್ಯ ಅಭಿಪ್ರಾಯಗಳೂ, ಪೂರ್ವ ಭಾವಿತ ವಿಚಾರಗಳೂ, ಅವಿಚಾರಿತ ನಿರ್ಣಯಗಳೂ, ಒಲವುಗಳೂ ತುಂಬಿವೆ. ತಾನೇ ತಾನಾಗಿ ಅದು ದೇಹವನ್ನು ನಡೆಸಲಾರದು. ಇದಕ್ಕೆ ಅವಶ್ಯವಿರುವ ಜ್ಞಾನವೂ ಯೋಗ್ಯವಾದುದನ್ನು ಸರಿಯಾದ ರೀತಿಯಲ್ಲಿ ಗೈಯುವ ಸ್ಪಷ್ಟ ಆಂತರಿಕ ನೋಟವೂ ಚೈತ್ಯ ಪ್ರಜ್ಞೆಗೆ ಮಾತ್ರವೇ ಇರುತ್ತದೆ.

ಹಾಗಾದರೆ ಇಂಥ ಅವಸ್ಥೆಗೆ ಪರಿಹಾರವೇನು? ನಾವು ಇಲ್ಲಿ ಒಂದು ವಿಷವರ್ತುಲದಲ್ಲಿ ಸುತ್ತುತ್ತಲಿರುವೆವು; ಈ ತೊಡಕಿನ ಮೂಲವೆಲ್ಲ ಹೃತ್ ಪುರುಷನೊಡನೆ ಸಂಬಂಧ ಪಳಿದುದರಲ್ಲಿ ಇದೆ, ಮತ್ತು ಹೃತ್ ಜೀವಿಯೇ ಆ ಸಮಸ್ಯೆಗಳಿಗೆ ಪರಿಹಾರವನ್ನು ಶೋಧಿಸಬಲ್ಲದುದಾಗಿದೆ. ಆದ್ದರಿಂದ ಇದಕ್ಕೆ ಒಂದೇ ಒಂದು ಉಪಾಯವಿದೆ. ಎಚ್ಚರದಿಂದಿರಿ, ಹೃತ್ ಜೀವಿಗೆ ಗಟ್ಟಿಯಾಗಿ ಅಂಟಿಕೊಳ್ಳಿರಿ, ಅದಕ್ಕೆ ಹಿನ್ನೆಲೆಯಲ್ಲಿ ನುಸುಳಗೊಡಬೇಡಿರಿ. ನಿಮ್ಮ ಪ್ರಜ್ಞೆಯು ಯಾವ ಅಂಶಕ್ಕೂ ನಿಮ್ಮ ಮತ್ತು ಆದರ ನಡುವೆ ಬರಗೊಡ ಬೇಡಿರಿ ಉಳಿದೆಲ್ಲ ಸೂಚನೆಗಳಿಗೆ ಕಿವಿಮುಚ್ಚಿ. ಬಧಿರರಾಗಿರಿ. ನಿಮ್ಮ ನಂಬಿಕೆಯನ್ನು ಕೇವಲಹೃತ್ ಜೀವಿಯಲ್ಲಿಯೇ ಇಡಿರಿ.

ಸಾಮಾನ್ಯವಾಗಿ ಹೃತ್ ಜೀವಿಯ ಅರಿವು ವ್ಯಕ್ತಿಗೆ ಉಂಟಾದೊಡನೆ ಅವನು ಪ್ರಾಣ, ದೇಹಗಳ, ಆಕರ್ಷಣೆ ಕಾರ್ಯಗಳಿಂದ ಮುಕ್ತನಾಗುವುದರ ಕಡೆಗೆ ಒಲವುಳ್ಳವನಾಗುತ್ತಾನೆ. ಜಗತ್ತಿನಿಂದ ದೂರ ಸರಿಯಬೇಕು. ಮತ್ತು ಭಗವತ ಚಿಂತನೆಯ ಆನಂದಲ್ಲಿ ಮುಗ್ನನಾಗಬೇಕು. ಭಗವಂತನ ಸದ್ಯೈವ ಸಂಪರ್ಕದ ಶಾಂತಿಯ ಅನುಭೂತಿಯಲ್ಲಿ ಇರಬೇಕು. ಎಂದು ಅವನು ಬಯಸುತ್ತಾನೆ. ಆದರೆ ಶ್ರೀ ಅರವಿಂದರ ಪೂರ್ಣ ಯೋಗದ ಅನುಯಾಯಿಗಳ ನಿಲುಮೆ ಇದಕ್ಕೆ ವಿಪರೀತವಾಗಿದೆ. ತಮ್ಮ ಹೃತ್ ಜೀವಿಯನ್ನು ಶೋಧಿಸಿ ಅದರೊಂದಿಗೆ ಐಕ್ಯವನ್ನು ಸಾಧಿಸಿದ ನಂತರ, ಹೃತ್ ಜೀವಿಯು ತನ್ನ ದೃಷ್ಟಿಯನ್ನು ಶಾರೀರಿಕ ಜೀವಿಯ ಕಡೆಗೆ ಹೊರಳಿಸಬೇಕೆಂದೂ, ಮತ್ತು ಹೃತ್ ಪುರುಷನಿಗೆ ಸಹಜವಾದ ಭಗವತ್ ಸಂಪರ್ಕದಿಂದ ಮೂಡಿ ಬಂದ ಪ್ರಜ್ಞೆಯು ದೈಹಿಕ ಜೀವಿಯ ಮೇಲೆ ಪರಿಣಾಮ ಮಾಡಿ ದೈವೀಪ್ರಜ್ಞೆಯನ್ನು ಸಾಮರಸ್ಯವನ್ನು ಗ್ರಹಿಸಿ ವ್ಯಕ್ತಪಡಿಸಲು ಸಮರ್ಥವಾಗುವಂತೆ ದೇಹವನ್ನು ಅದು ಪರಿವರ್ತನಗೊಳಿಸಬೇಕೆಂದೂ ಅವರು ಬಯಸುತ್ತಾರೆ

ಇದುವೇ ನಮ್ಮ ಇಲ್ಲಿಯ ಪ್ರಯತ್ನಗಳ ಗುರಿಯಾಗಿದೆ. ಅಂತರಾಷ್ಟ್ರೀಯ ವಿದ್ಯಾ ಕೇಂದ್ರದಲ್ಲಿಯ ವ್ಯಾಸಂಗಗಳ ಪರಿಣತಿಯೂ ಇದೇ ಆಗುವದು.

ಆದ್ದರಿಂದ ಈ ವಿಶ್ವ ವಿದ್ಯಾ ಕೇಂದ್ರವನ್ನು ಬಂದು ಸೇರುವವರೆಲ್ಲರಿಗೂ ನಾನು ಇನ್ನೊಮ್ಮೆ ಸಾರಿ ಹೇಳುವೆ; ನಮ್ಮ ಕಾರ್ಯ ಕ್ರಮದ ಯೋಜನೆಯನ್ನೂ ನೀವು ಇಲ್ಲಿಗೆ ಯಾವ ಮಹತ್ತರ ಕಾರಣಕ್ಕಾಗಿ ಬಂದಿರುವಿರೋ ಅದನ್ನೂ ಎಂದು ಮರೆಯ ಬೇಡಿರಿ. ಆದರೆ ಆ ಬಳಿಕವೂ ನಿಮ್ಮೆಲ್ಲ ಪ್ರಯತ್ನಗಳನ್ನು ಮೀರಿಯೂ ನಿಮ್ಮ ಪಾಲಿಗೆ ಕ್ಷಿತಿಜವು ಅಂಧಕಾರ ಮಯವಾದರೆ, ಮತ್ತು ಆಶೆ ಆನಂದಗಳು ಅಡಗಿ ನಿಮ್ಮ ಉತ್ಸಾಹವು ಕುಂದತೊಡಗಿದರೆ ಆಗ ನೀವು ನಿಮ್ಮ ಹೃತ್ ಜೀವಿಯಿಂದ ದೂರಾಗಿರುವುದಕ್ಕೂ ಮತ್ತು ಅದರ ಆದರ್ಶದ ಸಂಪರ್ಕವನ್ನು ಕಳೆದು ಕೊಂಡಿರುವುದಕ್ಕೂ ಖಚಿತ ಸೂಚನೆ ಅದಾಗಿದೆ ಎಂಬುದನ್ನು ಸ್ಮರಿಸರಿ. ಅಂದರೆ ಸುತ್ತು ಮುತ್ತಲಿನ ಜನರ ಮತ್ತು ಪದಾರ್ಥಗಳ ಮೇಲೆ ದೋಷಾರೋಪಣೆ ಮಾಡುವ, ತನ್ಮೂಲಕ ನಿರರ್ಥಕವಾಗಿ ನಿಮ್ಮ ತೊಡಕು ತೊಂದರೆಗಳನ್ನು ನೀವೇ ಹೆಚ್ಚಿಸಿಕೊಳ್ಳುವ ತಪ್ಪು ನಿಮ್ಮಿಂದಾಗಲಿಕ್ಕಿಲ್ಲ.

—ವಸಂತ ಕುಲಕರ್ಣಿ

# "ಮಾತೃವಾಣಿ"

(ಶ್ರೀ ಮಾತೆಯವರ ದಿವ್ಯ ನುಡಿಗಳ ಎರಡನೆಯ ಸಂಗ್ರಹವನ್ನು ಪದ್ಯರೂಪದಲ್ಲಿ ಕೊಡಲು ಪ್ರಯತ್ನಿಸಿದೆ
ಮೂಲ ಗದ್ಯದ ಸೂತ್ರಬದ್ಧ ಶೈಲಿಯನ್ನು ಈ ರೀತಿಯಲ್ಲಿ ಎಷ್ಟೆ ಪ್ರಮಾಣದಲ್ಲಾದರೂ
ಬಿಂಬಿಸಲು ಸಾಹಸಿಸಲಾಗಿದೆ)

ದೇವನನ್ನೆ ಪ್ರೇಮಿಸುವಗೆ
ನಿತ್ಯ ಸುಖಿಯುದೆಂಬರು ।
ದೇವನವನ ಜೊತೆಯೊಳಿಹನು
ಕ್ಷಣವು ಬಿಡದೆ ಆಸರು ॥

ಈಶಪ್ರೇಮವನೊಂದನೆ ಹೆಚ್ಚಿಗೆ
ಅವಲಂಬಿಸು ನೀನು ।
ಈಶಪ್ರೇಮವ ಪಡೆದರೆ ಮಾನವ
ಪ್ರೀತಿಯ ಪಾಡೇನು ॥

ಮಾನವ ಪ್ರೀತಿಯೊಳವಿತಿದೆ ನಂಜಿನ
ಕಹಿಯನು ಭವತುತ್ತು ।
ತಾನದು ಈಶಪ್ರೇಮವು ಕೆಡಿಸದು
ಆಶೆಯ ಮುಡಿ ಮುತ್ತು ॥

ಎಷ್ಟಿದೆ ನಿನ್ನಲಿ ಅಭೀಪ್ಸೆಯೆಂಬುದು
ಅಷ್ಟದು ನಂಬಿಕೆ ಪ್ರಮಾಣವೆನಿಪುದು ।
ಅದಕೋ ಗೊಡುತಿದೆ ದಿವ್ಯ ಪ್ರೇಮ
ಅದಕೆನಿನುತ್ತಿದೆ ಸಹಜದ ಧರ್ಮ ॥

ಪೂರ್ಣ ವರಳುವದೆಲ್ಲಿ ದಿವ್ಯಪ್ರೇಮವದು ತಾನೆಂದಿಗೆ?
ಪೂರ್ಣ ಹಿಗ್ಗಿನ ಚಿತ್ತದಾಳದ ಶಾಂತಿಯಲಿ ಆ ಜಿಂದಿಗೆ ॥
ಶುದ್ಧವಾಗಿಹ ಸತತವಾಗಿಹ ಏಕತೆಯ ಸವಿಮುಡಿಲಲಿ
ಬದ್ಧವಾಗದೆ ಬೆಳೆದು ಬರುವದು ದಿವ್ಯಪ್ರೇಮವು ಭರದಲಿ ॥

ಸತ್ಯ ಪ್ರೇಮುದಾತ್ಮಾರ್ಪಣಗಳು ಕರೆದೊಯ್ವವು ಚಾಂಗು
ನಿತ್ಯದ ವೇಗವ ಮಿಕ್ಕುತ ದಿವ್ಯತೆಯೆಡೆಗೋಡುವ ಪಾಂಗು ॥
ಕಷ್ಟದ ಸಾಧನೆಯೆನಿಸುವ ಆ ತಪಕಿಂತಲು ಬಲು ಬೇಗ ।
ಇಷ್ಟದ ಗುರಿ ಕೈಗೂಡಿಸಲೊಂದೇ ನಮಗಿದೆ ಹಿರಿಮಾರ್ಗ ॥

ಹೃದಯಕೇಂದ್ರದಾ ಪ್ರಜ್ಞೆಯೊಳಿದ್ದರೆ
ಬಿಡದೆ ನಮ್ಮ ಸಂಕಲ್ಪ ಶಕ್ತಿಯದು
ಗಡನೆ ದೇವ ಸಂಕಲ್ಪದೊಡನೆ ಒಡ
ಗೂಡಿ ನಿಲ್ಲುವದು ಮುಂದೆ ಮತ್ತೆ ಈ —

ನಮ್ಮ ಪ್ರಕೃತಿ ರೂಪಾಂತರಗೊಳ್ಳಲು
ಸುಮ್ಮನೆ ದಿವ್ಯ ಪ್ರೇಮವ ಪಡೆವರೆ
ನಮ್ಮಲದನು ಸುಸ್ಥಿರಗೊಳಿಸುವರೆ
ಒಮ್ಮೆಲೆ ತಕ್ಕವರಾಗುವೆವೆನ್ನು ॥

ಒಳಗಿನ ಒಳಗಿನ ಗುಡಿಯೊಳಗೆ
ಇಳಿ ಇಳಿ ಆಳದ ಗುಡಿಯೊಳಗೆ
ಅಲ್ಲಿಯೆ ಕಾಣುವೆ ನನ್ನನ್ನು
ನಿಲ್ಲದೆ ಹಿಡಿ ಈ ಯುಕ್ತಿಯನು ||

ಮೊದಲ ಹೆಜ್ಜೆ ಸಂಪೂರ್ಣ ಶಾಂತಿಸಿರಿ
ಅದಕೆ ಜೋಡು ಆ ಚಿತ್ತಸಮತೆ ಸರಿ ||

ಉತ್ತಮವಾದುದ ಮಾಡುವ ಪಾತ್ರತೆ
ಎಲ್ಲಿದೆ ಗುರಿ ಗೊತ್ತು ?
ಚಿತ್ತಕೆ ಶಾಂತಿ ನಿಸ್ತಬ್ಧತೆಯಿರುವೆಡೆ
ಸಿದ್ಧಿಸುತಿದೆ ಸೊತ್ತು ||

ಆಳವಾದ ಸ್ಥಿರತೆ ಶಾಂತಿ ಕಾದು ಕುಳಿತಿವೆ
ಏಳು ! ಪಡೆದುಕೊಳ್ಳು ! ನಿನ್ನ ತೆರೆದಿಡೆನುತಿವೆ ||

ಸುತ್ತುವರಿದು ನಿಂತಿರುವ ಬಾಹ್ಯ ಸ್ಥಿತಿ
ಒತ್ತಿಕೆಡಹಿ ನಿಲ್ಲುವುದೆ ಅದರ ಗತಿ ||
ಹೊರಳಲೆತ್ನಿಸೈ- ಒಳಗು ಶಾಂತಿಪಡೆ
ಮೆರೆವುದಾರಿಗೆಂದೆಂದು ನಿಲುಕದೆ ||

ತೆರೆದಿಡು ನಿನ್ನೊಳ ಹೊರಗೂ ಕಾರ್ಯವ
ಮಾಡುವ ಚೈತನ್ಯಕೆ ಮೊದಲು ।
ಸ್ಥಿರ ಚಿತ್ತವ ತಳೆ ಶಾಂತಿಯಲಿರು ನೀ
ಸಾಧಿಸುವಷ್ಟಾದರು ಮಿಗಿಲು ||

ಸತತ ಶಾಂತ ನಿರ್ವಿಕಾರ ಸ್ಥಿರಮನದವನಾದರೆ
ಪೂರ್ಣ ಸತ್ಯವಂತಿಕೆಯಾ ತಿಳಿಯ ದಾರಿ ಸಂದರೆ ||
ದಿವ್ಯ ಶಕ್ತಿ ತಾನೆ ಕಾರ್ಯ ಮಾಡದಿಲ್ಲದಿರುವದೇ?
ನಿನ್ನದಾದ ಚೇತನದಲಿ ಬೇಗ ಇಳಿಯದಿರುವದೇ ?

ದೈವೀ ಪ್ರಜ್ಞೆಯು ನಮ್ಮನ್ನು
ಯಾವಾಗಲು ತಾ ಮಿಡಿಯುತಿದೆ ||
ರೂಪಾಂತರಿಸಲು ದುಡಿಯುತಿದೆ
ಆ ಪಾಡನು ಅದು ನಿನ್ನೊಳಗೆ ||
ಕೈಗೂಡಿಸಬಿಡು ತಿಳಿದಂತೆ
ಆಗದರೆಡೆ ತೆರೆದಿಡು ನಿನ್ನನ್ನು ||

ದಿವ್ಯ ಪ್ರಕಾಶಕೆ ಅಂತಃಕರಣವ ನೆರೆ
ನನಗದು ಕೊಡಮಾಡು ।
ಯಾವ ಕಟ್ಟು-ಕಟ್ಟಳೆಯೂ ಬೇಡ
ಗೂಡಿಕೈ ತಾನೆ ಬಹುದು ||

ಕೇಳುತ್ತಿಹೆ ಬದಲಾವಣೆಯೊಂದನೆ
ನನಗದು ಕೊಡಮಾಡು ।
ಚೇತನ ಜ್ಞಾನಗಳಿಲ್ಲದ ಕ್ಷುಲ್ಲಕ
ಹಂಕಾರವೆ ನೋಡು ||

ಈ ಬಲಿದಾನಕೆ ದೊರೆಯುವ ಲಾಭಕೆ
ಸಾಟಿಯಾವುದುಂಟು ?
ಅನುಪಮವಾಗಿಹ ಅದ್ಭುತ ಫಲಗಳು
ಇದರಲಿ ನೂರೆಂಟು

ನಿನ್ನ ಮನಸು ತೀರ ಚಲನವಲನ ನಡೆಸುತಿರುವದು
ನನ್ನ ಇಚ್ಛೆ ಸಹಜ ನಿನಗೆ ದಾರಿ ತೋರುತಿರುವದು ||
ನಿನ್ನ ಮನಸು ಅಡ್ಡ ಬಂದು ದಾರಿಬಿಡಿಸುತಿರುವದು
ಇನ್ನು ದಿವ್ಯರಕ್ಷೆ ಕೂಡ ನಿನ್ನ ತೊರೆದು ಬಿಡುವದು ||

ನೆಲೆಗೊಳಿಸಡು ನಿನ್ನೀ ದೇಹದಿ
ಹಿರಿ ಶಾಂತಿಯ ಸ್ಥೈರ್ಯವನು ।
ಒಲಿದೀವುದು ಅಸ್ವಾಸ್ಥ್ಯವ ತಡೆ-
ಮಾಡುವ ಬಲು ಬಲವನ್ನು ||

ಮುಂದುವರಿದಭೀಪ್ಸೆಯು
ತಂದು ಕೊಡುವ ಪ್ರಾಪ್ತಿಯು ||

ಶ್ರದ್ಧೆಯ ತೀವ್ರತೆ ಮೊದಲಿರಬೇಕು
ಗದ್ದುಗೆ ನಿಶ್ಚಲ ನಿಲುಮೆಯು ಬೇಕು
ಇವನವಲಂಬಿಸಿ ನಡೆದಿಹುದೆಲ್ಲಾ
ಇವ ಮರೆತರೆ ತಾನುಳಿಯುವದಿಲ್ಲ.

ಅಭೀಪ್ಸೆ ಅಚಲವಾದರೆ
ಪ್ರಯತ್ನ ತಾಳ್ಮೆನಡೆದರೆ
ಕೊನೆಗೆ ಗೆಲವು ಕಟ್ಟೆದೆ
ನಿನಗೆ ಮೀಸಲಿಟ್ಟಿದೆ ||

ನಡೆಸುವ ಪ್ರಾರ್ಥನೆಯೆಲ್ಲವು
ತಡೆ ಮಾಡುವ ತಾಳ್ಮೆ ಮತ್ತೆ ಸ್ಥಿರತೆಗಳಿಂದ ||
ಕುಡಿವರಿದೆಲ್ಲಿಯು ವ್ಯಾಪಿಸಿ
ಪಡಿ ಫಲಗಳ ನೀಡುತಿಹವು ನಿಶ್ಚಯದಿಂದ ||

ತಾಳ್ಮೆಯೊಡನೆ ಸಾವಧಾನಿಯಾಗು
ಎಲ್ಲವು ಸರಿಗೊಳ್ಳುವದದು ಹೋಗು ||

ಏತರಲ್ಲಿ ಬೇಕು ಹೇಳು ಪೂರ್ಣ ನಂಬಿಗೆ ?
ದೇವನು ಸುರಿಸುವ ಆ ಕೃಪೆಯಲ್ಲಿ
ಹೃದಯದಿ ನೆಲೆಸಿದ ಸಂಕಲ್ಪದಲಿ
ಜೀವಿತದಾ ಬಹು ಘಾತಗಳಲಿ

ನಂಬಿಗೆಯಿಟ್ಟುರೆ ನಡೆವವಗೆ
ಇಂಬಾಗುವದೈ ತಾ ಕಡೆಗೆ ||

ತನ್ನ ಕಾಲಕೆ ಬರುವುದೆಲ್ಲವು ತಾಳು ನೀ ಚಂಚಲಿಸದೆ
ಇನ್ನುಳಿದ ತಾನೆಲ್ಲ ಸರಿ ಹೊಂದುವದು ನಿಶ್ಚಯ ತಪ್ಪದೆ||

ಅಂಜಬೇಡ ! ಅಂಜಬೇಡ !ಏತಕಾಗಿ ಹೆದರಿಕೆ ?
ಅಂಜುಗುಳಿಯೆ! ನಿನ್ನ ಶ್ರದ್ಧೆ ಪೊರೆಯುತಿಹುದು ಏತಕೆ?

ಕೇಳದಿರುವುದೆ ಒಳ್ಳಿತೆನ್ನುವೆ-
ನಾತ್ಮ ವಿಷಯದ ಭಾಷಣ ।
ಹೆರರಿಗದು ಸಂಬಂಧವಿಲ್ಲವು
ತನ್ನ ಮಾರ್ಗವೆ ಭೂಷಣ ||

ನೀ ಮಾಡುತ್ತಿಹ ಕಾರ್ಯದ ನಿಲುಮೆಯ
ಮೇಲೆಲ್ಲವು ಅವಲಂಬಿಸಿದೆ ।
ಸರಿ ನಿಲುಮೆಯ ಕಾರ್ಯವ ನೀ ಗೈದರೆ
ನಿಶ್ಚಯ ನನ್ನೆಡೆ ತರುತಲಿದೆ ||

ದುಡಿಮೆಗೇಕೆ ಚಿಂತೆ ಇಷ್ಟು ?
ದುಡಿಮೆಯಚಲವಾದರಷ್ಟು
ದುಡಿಮೆ ಶಾಂತವಾದರಷ್ಟು
ಅದು ಅವ್ಯರ್ಥವೆನಿಪುದು ॥

ನಿನ್ನೀ ಕಾರ್ಯಕೆ ಸಂಬಂಧಿಸಿದಾ ವಿಷ-
ಯದಿ ದೂರಿರುವುದೆ ಪಾಡು ।
ನಿನ್ನಯ ಜೀವನಕದು ಸಾಮಾನ್ಯದ
ನಿಯಮವೆ ಆಗಲಿ ನೋಡು ॥

ಕಾರ್ಯಕೆ ತೊಂದರೆ ಬರುತಿಹುದೇಕೆ ?
ಸುತ್ತಿನ ಸ್ಥಿತಿಗತಿ ಕಾರಣವಹುದೆ ?
ಹಿರಿಕಿರಿ ಘಟನೆಗಳಿಂದಲೆ ಬಾಧೆ ?
ತೊಂದರೆಗಿವು ಕಾರಣಗಳೆ ಅಲ್ಲ
ಒಳಗಿನ ಪ್ರಾಮಾಣಿಕ ನೆಲೆ ಮೂಲ ॥

ಅದು ತಪ್ಪಲು ತೊಂದರೆ ತಾ ಬಂದು
ಹೆದರಿಸಿ ತಡೆಗೈವವು ಮುಂಬಂದು ॥

ಕಾರ್ಯದಿ ಅಪಶ್ರುತಿ ಬಂದಿಹ ಕಾರಣ
ಹಂಕಾರವು ಆಕಾಂಕ್ಷೆಯು ಪೂರಣ
ಮೊದಲಿಗೆ ತಳೆದಿಹ ಕಾರ್ಯದ ಭಾವನ
ಗುರುತಿಸಿ ಸರಿಗೊಳಿಸುವ ಆ ಧೋರಣ
ಹೆರರಲಿ ಬೇಡೈ ನಿನ್ನನು ಮೊದಲಿಗೆ
ಸರಿಗೊಳಿಸುತ್ತಮ ಮಾರ್ಗವದು ನಿನಗೆ ॥

ನಿನ್ನ ಶ್ರದ್ಧೆಯನು ಸ್ಥಿರವಾಗಿರಿಸು
ನಿನ್ನ ಹೃದಯ ತೆರೆದನ್ನೆಡೆಗಿರಿಸು
ಸಣ್ಣ ದೊಡ್ಡ ಗಂಡಾಂತರ ಕೂಡ
ನಿನ್ನ ಶ್ರದ್ಧೆ ಪರಿಪೂರ್ಣಗೊಳಿಸಲು
ಸಿದ್ಧವಾಗಿ ಬಿಡದಲಣಿಗೊಳ್ಳುವವು
ಬದ್ಧವಾಗಿ ಕೈಗೂಡಿಸಲಿಹವು ॥

ಹೇಳುವೆನೊಂದುಪದೇಶವನು
ಕೇಳಿಕೊ ಮರೆಯದೆ ಮೊದಲದನು ॥
ಅನುವಾಗದಿರಲು ತಳಮಳಕೆ
ತಾ ನೋಡಿ ಹೋಗುವದು ಕೆಲಕೆ ॥
ತಳಮಳವು ಪ್ರಗತಿಗೆಳ್ಳನಿತು
ಬೇಕಿಲ್ಲವೆಣಿಸು ನೀ ಕುಳಿತು
ಉಲ್ಲಾಸ ಪೂರ್ಣ ಸ್ಥಿರಚಿತ್ತ
ಸಮತೆಯನು ತಳೆದರದು ಮೊತ್ತ
ಅದ್ಭುತದ ಪ್ರಗತಿಯದರಿಂದೇ
ಸಾಧಿಸುವದು ತಿಳಿ ನಿಶ್ಚಯದೇ ॥

ಪ್ರಗತಿಗೆ ಸಾಧನವೆಂದುಪಯೋಗಿಸು
ಮೊದಲಿಗೆ ಮಾಡಿದ ತಪ್ಪನ್ನು
ಜಾಗ್ರತಿಗೊಂಡಾ ತಪ್ಪನು ತಿದ್ದುವ
ಪರಿಯರಿತಿರುವಾ ಮೇಲೇನು ॥
ಹಿಂದಿನ ತಪ್ಪುಗಳೆಲ್ಲವು ತಪ್ಪುಗ
ಳೆಂದೆನಿಸವು ಕಾರಣವಳಿದು
ಮುಂದವೆ ತಪ್ಪುಗಳಾಗಲು ಬಾರದು
ಖಂಡಿತವೆಂದುಕೊ ನೀ ತಿಳಿದು ॥

ಇರಬೇಕಾಗಿಹ ಸ್ಥಿತಿಯಿಲ್ಲದಿರೆ
ಚಿಂತಿಸಿ ಫಲವೇನು ?
ಸ್ಥಿರ ವಿಶ್ವಾಸವೆ ಶಕ್ತಿಯ ಮೂಲವು
ಮಾರ್ಪಡುವದು ತಾನು ||

ಸಾಧಿಸಬೇಕಾಗಿರುವುದು ಏನದು
ಈ ಭೂಮಿಯ ಮೇಲೆ ?
ಅದನೆಣಿಸಲು ಈ ಬಾಹ್ಯದ ಕ್ಷುಲ್ಲಕ
ಸಂಗತಿಗೇನೆಲ್ಲೇ ?

ಕ್ಷುಲ್ಲಕ ದೇಹದ ಪೀಡೆಗಳನ್ನು
ತೀವ್ರ ಪ್ರಗತಿಯ ದಾರಿಯಲವನು
ಬಳಸುತ್ತಿರು. ಪೀಡೆಗಳಾಮೂಲ
ಅವಚೇತನದಲ್ಲಿದೆ ಅನುಕೂಲ ||

ಚೇತನಗೂಡಿದ ಸಂಕಲ್ಪದಲಿ
ಅವಚೇತನದಾ ಆಳಕಿಳಿ
ಅಲ್ಲಿಯ ಚೇತನ ಜಡಗಳಲೆಲ್ಲ
ದೈವೀ ರಾಜ್ಯವ ಸ್ಥಾಪಿಸು ಸಲ್ಲ ||

ಸಾಧಕನುಣ್ಣಲಿ ದೇಹದ ಕ್ಷುಧೆಗೆ
ಸೇವಿಸಕೂಡದು ಆಶೆಯ ತೃಪ್ತಿಗೆ ||

ಅನ್ನದಾಸೆಯಿಂದ ಮತ್ತೆ ಮೋಹದಿಂದ
ಜಿವ್ಹೆಗಿರುವ ತೀವ್ರದಾ ಚಪಲತೆಯಿಂದ ||
ಮುಕ್ತವಾದ ಒಳಗು ನಿಲುಮೆಯೊಂದೆ ಬೇಕು
ಅರೆಹೊಟ್ಟೆಯ ಊಟವಿನ್ನು ಮೊದಲು ಸಾಕು ||
ಕೂಳಿಲ್ಲದ ಒಡಲು ಬೇಡ ಅತ್ತ ನೂಕು
ದೇಹಬಲಕೆ ಬೆಳೆಗೆ ಸ್ವಾಸ್ಥ್ಯಕನ್ನ ಬೇಕು ||
ಆಶೆಯಿಂದ ಬೇಡ ಮೋಹದಿಂದ ಅಣ್ಣ
ಉಣ್ಣಬೇಡ ಲೇಸು ಅಲ್ಲ ಯೋಗಕನ್ನ ||

ದೇಹದ ಸದ್ಯ ಸ್ಥಿತಿಯಲಿ ನಿದ್ರೆಯು
ಬೇಕದು ಅನಿವಾರ್ಯ ।
ನಿದ್ರೆಯು ಹೆಚ್ಚಿಗೆ ಚೇತನಗೊಳ್ಳಲು
ಯಂತ್ರಣದಾ ಕಾರ್ಯ ||

ಅವಚೇತನದಾ ಮೇಲೆಯೆ ನಡೆಯಲಿ
ಬೆಳೆಯುತ ದಿನ ದಿನಕೆ ।
ಚೇತನಗೊಂಡಾ ನಿದ್ರೆಯು ಯೋಗದ
ದಾರಿಯಭ್ಯುದಯಕೆ ||

ನಿದ್ರೆ ಚೇತನಗೊಳ್ಳಲಾರದು
ಕಡಿಮೆಯನ್ನವನುಂಡರೆ
ದೇಹ ತಣಿಯದು ಮತ್ತೆ ಚೇತನ
ಹೆಚ್ಚಲಾರದು ಕಂಡರೆ ||

ಬೆರೆಯ ಬಲ್ಲನು ಆಳವಾಗಿಹ
ಭಾಗದೊಂದಿಗೆ ತನ್ನಲಿ
ಗಾಢವಾಗಿಹ ಒಳ್ಳೆ ನಿದ್ರೆಯ
ಮುಸುಕಿನಾ ಸಮರಸದಲಿ ||

ಆಗಬೇಕು! ಆಗಬೇಕು! ಆಗಲಿಕ್ಕೆ ಆಗಬೇಕು !!
ಆಗಲಿಹುದು– ಆಗಬಹುದು. ಹಿಂದಿನಿಂದ ತಿಳಿಯಬೇಕು.
ಹತ್ತುದಿಶೆಗು ಹರಡಿ ನಿಲ್ಲಬೇಕು ಶಾಂತಿ ತೂಗಿ
ಮೊತ್ತದಾ ಅಚಂಚಲತೆಯು ಇಳಿಯಲಾಳವಾಗಿ
ಮತ್ತೆ ಸ್ತಬ್ಧಗೊಳ್ಳಬೇಕು ಗಪ್ಪುಗಾರು ಆಗಿ
ಅತ್ತಲಿತ್ತ ಅಲುಗದಂಥ ಸ್ಥಿರತೆ ನಿಲಲಿ ಸಾಗಿ
ನಿತ್ಯ ನಿರಂತರವು ಬೆಳೆವ ಶ್ರದ್ಧೆ ಮೊಳೆತು ಬೇಗಿ
ಅತ್ತ ಪರಮನೆಡೆಗೆ ಓಡಬೇಕು ಕರೆದು ಕೂಗಿ
ಆಗಬೇಕು ! ಆಗಬೇಕು !! ಆಗಲಿಕ್ಕೆ ಆಗಬೇಕು !!!
ಆಗಲಿಹುದು- ಆಗಬಹುದು ಹಿಂದಿನಿಂದ ತಿಳಿಯಬೇಕು !

" ವಿಜಯಬೇಕು ! ನಮಗೆ ಮಹಾ ವಿಜಯಬೇಕು " ಎನುವರೆ
ವಿಜಯಗಳಲಿ ತೀರ ಮಹಾ ವಿಜಯ ಯಾವುದರಿತಿರೆ ? ||
ಅನ್ಯರನ್ನು ಆಳುವುದಕೆ ವಿಜಯವೆನ್ನಲಾರದೆ
ತನ್ನ ತಾನು ಆಳುವುದೇ ಮಹಾ ವಿಜಯವೆನಿಸದೆ ? ||
ಹಿರಿಯ ವಿಜಯವಿದುವೆ ಬದುಕಿನೆಲ್ಲ ಸುಖದ ದಾರಿಗೆ
ಸ್ಥಿರತೆಯಿತ್ತು ನೆಲೆಸಗೊಡುವ ನೆಲೆಯು ಸುಖದ ಬೇರಿಗೆ ||

ನಿಶ್ಚಿತವಾದಧ್ಯಾತ್ಮಿಕ ಪ್ರಗತಿಯು ನಮ್ಮೆಲ್ಲಾಗಿರುವಂದು
ನಿಶ್ಚಯವಾಗಿಯು ದೇವನ ಶತ್ರುಗಳೆಲ್ಲೊ ಅಡಗಿಕೊಂಡು ||
ಹೊಂಚಿ ಕುಳಿತು ಹಂಚಿಕೆ ಹಾಕುತ್ತಿಹರಾಗ ಕುನಸನಿಟ್ಟು
ಸಂಚುಗೂಡಿ ನಮ್ಮಂತರಾತ್ಮನನು ಗಾಸಿಗೊಳಿಸಲೆಷ್ಟು ||
ಕಷ್ಟ ಪಟ್ಟು ಕೈಸೋತು ನಿಂತರೂ ಚೇಷ್ಟೆ ಮಾತ್ರ ಬಿಡದೆ
ನಷ್ಟಗೊಳಿಸಲೆಳಸುವವು ದೇಹವನು ತಂತ್ರವೆಲ್ಲ ಬರಿದೆ ||
ಸರ್ವಯತ್ನ ನಿರ್ವೀರ್ಯಗೊಳ್ಳುವವು ಗಟ್ಟಿಯಾದ ಮಾತು
ಸರ್ವ ಶ್ರೇಷ್ಠ ಪರಮಾತ್ಮ ಕೃಪೆಯು ನಮ್ಮೊಡನೆ ಕೂಡಿ ನಿಂತು
ಕಾಣದಂತೆ ಕೈನೀಡಿ ಕಾಯುತಿರೆ ಯಾವ ಹಗೆಯ ದಾಳಿ ?
ಪ್ರಾಣವನ್ನು ಪಣಕಿಟ್ಟು ಕಾದಿದರು ಕೊನೆಗೆ ಸೋಲು ಪಾಳಿ !!

ಬೆಳಕು ಎಳ್ಳನಿತಿಲ್ಲದಿಹ ಈ ಜಡದ ಪ್ರಕೃತಿಯ ಸೋಲಿಸಿ
ಗಳಿಸಿಕೊಂಡಿಹ ಗೆಲವುಗಳ ಗುಟ್ಟೇನು ತಿಳಿ ಬಹು ಯೋಚಿಸಿ
ಮುಂದೆ ಬರಲಿಹ ಹಿರಿಯ ಗೆಲುವದು ದಿಟವು ದಿಟ ನೀವೆನ್ನಿರಿ
ಇಂದೆ ಸೂಚನೆ ಮಾಡಿ ತಿಳಿಸುವ ಚಿಹ್ನವೆಂದೇ ನಂಬಿರಿ ||

## ಸಮರ್ಪಣೆ

ಹೊಟ್ಟೆಯುರಿಯದೊಂದು ಮತ್ತೆ ಅದಕೆ ಬೆನ್ನಿಗಾಸರ
ಸೊಟ್ಟ ಸುಳ್ಳುನಿಂದೆ ಹೀಗೆ ಎರಡು ಇಹವು ದೂಸರ ||
ಬಲವಿಹೀನತನದ ಮತ್ತೆ ಕೀಳುತನದ ಫಲಗಳು
ಬೆಳೆಸುತಿಹವು ವ್ಯಕ್ತಿಯಲ್ಲಿ ಇಂಥ ಹೀನ ಗುಣಗಳು ||
ಅವಕೆ ಕೋಪಗೊಳದೆ ಕರುಣೆ ಪಡೆವುದೊಂದು ಕಾಣಿಕೆ
ಅವಕೆ ಅನಾಸಕ್ತರಾಗಿ ನಿಂತರೊಂದು ಹೂಣಿಕೆ ||
ಚಲಿಸದಂಥ ನಿಶ್ಚಿತತೆಯ ಹಿಗ್ಗಿನೆಳೆಯ ಕಟ್ಟುತ
ನೆಲಿಸಬೇಕು ನಿತ್ಯ ನಾವು ಅದರ ತಳವ ಮುಟ್ಟುತ ||

ಸೂಕ್ಷ್ಮಕಿಂತ ಸೂಕ್ಷ್ಮವಾದ ಲೋಕವೊಂದು ಅಲ್ಲಿದೆ
ಅಲ್ಲಿ ಕಾಣಬಹುದು ಶ್ರೇಷ್ಠ ಚಿತ್ರಕಲೆಯನಲ್ಲದೆ ||
ಎಲ್ಲ ನಾಟ್ಯ, ಸೊಗಸುಮಾತು, ಚಲನಚಿತ್ರದಂಶವ
ಎಲ್ಲ ಮೂಲ ವಿಷಯಗಳನು ನೀಡುವಂಥ ಅಂಶವ ||
ಲೆಕ್ಕವಿಲ್ಲದಷ್ಟು ಗ್ರಂಥಕಾರರಲ್ಲಿಯುಂವಲೇ
ತಕ್ಕುದಾದ ಪ್ರತಿಭೆ ಪಡೆದು ತರುವರವರಿಗದೆ ನೆಲೆ ||

ಮುಸುಕಿದಹಂಕಾರವೆಂಬ ಕಾರು ಮೋಡ ಪಡೆಯನು
ಹೊಸಗುತೋಡಿಸಲೀ ದಿವ್ಯ ಇಚ್ಛೆಯೆಂಬ ಸೂರ್ಯನು ||

ಸುಳ್ಳು ಸತ್ಯಗಳನು ವ್ಯಕ್ತಪಡಿಸಲೆರಡು ಹಾದಿ
ಬಲ್ಲೆವವನು ಬಾಯಿ ಮತ್ತೆ ಲೆಕ್ಕಣಿಕೆಯ ಮೋಡಿ ||
ತೀರ ಚಿಕ್ಕ ಸುಳ್ಳನೊಂದು ನುಡಿದು, ಬರೆದು ತೋರಲು
ಯಾರು ನಂಬಬಹುದು ಸತ್ಯಸಿದ್ಧದೂತರಾಗಲು ||
ಅಲ್ಪವಾದರೇನು ಆ ಅವಾಸ್ತವವನು ಬೆರೆಸದೆ
ಸ್ವಲ್ಪವತಿಶಯೋಕ್ತಿಯಿಂದ ವಿಕೃತಿಗೊಳಿಸಲಾರದೆ ||
ನುಡಿವುದನ್ನು ಕಲಿಯಬೇಕು ಸತ್ಯಸಿದ್ಧಸೇವಕ
ಬಿಡದೆ ಬರೆಯುತಿರಲು ಬೇಕು ಸತ್ಯದಂಶಪಾವಕ

# ಆಶ್ರಮದೊಳಗಿನ ಬಾಲಕರಿಗಾಗಿ

ಸೃಷ್ಟಿಯಲ್ಲಿ ಮೇಲ್ಮುಖವಾಗಿ ಸಾಗಿದ ಒಂದು ಉತ್ಕ್ರಾಂತಿ ಕ್ರಮವಿದೆ, ಅದು ಶಿಲೆಯಿಂದ ವನಸ್ಪತಿಗೆ, ವನಸ್ಪತಿಯಿಂದ ಪಶುವಿಗೆ ಹಾಗು ಪಶುವಿನಿಂದ ಮಾನವನಿಗೆ ಈ ಕ್ರಮದಿಂದ ಏರುತ್ತ ಸಾಗುತ್ತದೆ. ಮೇಲ್ಮುಖವಾಗಿ ಸಾಗಿದ ಈ ಉತ್ಕ್ರಾಂತಿಕ್ರಮದಲ್ಲಿ ಈ ಕ್ಷಣಕ್ಕೆ ಕೊನೆಯ ಹಂತವಾಗಿ ನಿಂತಿರುವ ಮಾನವನು ತಾನೇ ಆ ವಿಕಾಸೋನ್ನತಿಯ ಅಂತಿಮ ಅವಸ್ಥೆಯೆಂದೂ, ತನಗಿಂತಲೂ ಶ್ರೇಷ್ಠವಾದುದು ಈ ಜಗತ್ತಿನಲ್ಲಿ ಯಾವುದೂ ಇರಲಾರದೆಂದೂ ಬಗೆಯುತ್ತಿರುವನು. ಆದರೆ ಅವನ ಈ ತಿಳುವಳಿಕೆ ತಪ್ಪಾಗಿದೆ. ಅವನ ಶಾರೀರಿಕ ಸ್ವಭಾವದ ಮಟ್ಟಿಗೆ ಆವನು ಇನ್ನೂ ಪಶುವೇ— ವಿಚಾರಮಾಡುವ ಹಾಗು ಮಾತನಾಡುವ ಒಂದು ಪಶು; ಪ್ರಮುಖವಾದ ತನ್ನ ರೂಢಿಗಳಲ್ಲಿಯೂ ಅವನು ಇನ್ನೂ ಪಶುವೇ. ಸೃಷ್ಟಿಯು ಇಂಥ ಪರಿಪೂರ್ಣತೆಯನ್ನು ಹೊಂದದ ಫಲದಿಂದ ತೃಪ್ತಿಹೊಂದುವುದು ಅಸಾಧ್ಯವೆಂಬುದರಲ್ಲಿ ಸಂದೇಹವಿಲ್ಲ. ಅದ ಪಶುವಿಗಿಂತ ಮಾನವನು ಉತ್ಕೃಷ್ಟನಾಗಿರುವಂತೆ, ಮಾನವನಿಗೂ ಉತ್ಕೃಷ್ಟವಾದ ಜೀವಿಯೊಂದನ್ನು ಸೃಷ್ಟಿಸುವ ಹವಣಿಕೆಯಲ್ಲಿರುವುದು. ಆ ಜೀವಿಯು ಬಾಹ್ಯ ಆಕಾರದಲ್ಲಿ ಮಾನವನಂತೆ ಇರಬಹುದಾದರೂ ಅದರ ಪ್ರಜ್ಞೆಯು ಬುದ್ಧಿಯ ಹಾಗು ಅಜ್ಞಾನದ ಒಗೆಗೆ ಇರುವ ಅದರ ದಾಸ್ಯದ ಪಾತಳಿಗಿಂತ ಅತಿಶಯ ಉಚ್ಚಶ್ರೇಣಿಯದಾಗುವುದು.

ಶ್ರೀಅರವಿಂದರು ಭೂಮಿಯ ಮೇಲೆ ಬಂದುದು ಈ ಸತ್ಯವನ್ನು ಮಾನವನಿಗೆ ಬೋಧಿಸುವುದಕ್ಕಾಗಿ. ಮಾನವನು ವಿಕಾಸಕ್ರಮದಲ್ಲಿ ಕೇವಲ ಪರಿವರ್ತನಶೀಲವಾದ ಒಂದು ಮಾನಸಿಕ ಪ್ರಜ್ಞೆಯ ಅವಸ್ಥೆಯಲ್ಲಿರುವನೆಂದೂ, ಹೊಸ ಪ್ರಜ್ಞೆಯನ್ನು ಪಡೆಯುವ ಶಕ್ಯತೆಯನ್ನು ಒಡಗೂಡಿದವನಾಗಿರುವನೆಂದೂ ಅವರು ಸಾರಿರುವರು. ಅದು ಸತ್ಯ-ಚೈತನ್ಯ. ಸಂಪೂರ್ಣ ಸಾಮರಸ್ಯಮಯವೂ, ಶಿವಮಯವೂ, ಸುಂದರವೂ, ಸುಖಮಯವೂ ಹಾಗು ಚೈತನ್ಯಪೂರ್ಣವೂ ಆದ ಜೀವನವನ್ನು ಸಾಗಿಸಲು ಅದು ಸಮರ್ಥವನ್ನಾಗಿ ಮಾಡುವುದು. ಅತಿಮಾನಸಚೈತನ್ಯವೆಂದು ಸಂಬೋಧಿಸುತ್ತಿದ್ದ ಈ ಪ್ರಜ್ಞೆಯನ್ನು ತಮ್ಮಲ್ಲಿ ಪ್ರಸ್ಥಾಪಿಸಲಿಕ್ಕೂ, ತಮ್ಮ ಸುತ್ತುಮುತ್ತು ನೆರೆದವರು ಆ ಪ್ರಜ್ಞೆಯನ್ನು ಪಡೆಯಲು ನೆರವಾಗಲಿಕ್ಕೂ ಶ್ರೀಅರವಿಂದರು ತಮ್ಮ ಜೀವಮಾನವನ್ನೆಲ್ಲ ಅರ್ಪಿಸಿದರು.

ಅತಿ ಚಿಕ್ಕ ವಯಸ್ಸಿನಲ್ಲಿ ನೀವು ಈ ಆಶ್ರಮಕ್ಕೆ ಬಂದಿರುವುದು ನಿಮ್ಮೆಲ್ಲರ ಮಹಾಭಾಗ್ಯ. ನಿಮ್ಮದು ಇನ್ನೂ ಮೃದು ಮನಸ್ಸು. ಅದನ್ನು ಈ ಹೊಸ ಆದರ್ಶಕ್ಕೆ ಅನುಗುಣವಾಗುವಂತೆ ಮಣಿಯಗೊಟ್ಟು ನೀವು ಹೊಸ ಜನಾಂಗದ ಪ್ರತಿನಿಧಿಗಳಾಗಬಲ್ಲಿರಿ. ಇಲ್ಲಿ ಈ ಆಶ್ರಮದಲ್ಲಿ ನಿಮ್ಮೊಳಗೆ ಈ ಅತಿಮಾನಸಚೈತನ್ಯವು ಮೊಳೆತು ತನ್ನ ನಿಯಮಾನುಸಾರವಾಗಿ ಬೆಳೆಯಲನುಗುಣವಾದ ಪರಿಸರ, ಪ್ರಭಾವ, ಶಿಕ್ಷಣ ಹಾಗು ಪ್ರತ್ಯಕ್ಷ ನಿದರ್ಶನ ಇವೆಲ್ಲವುಗಳ ನೆರವಿನಿಂದ ಬೆಳೆಯಬಹುದಾದ ಅನುಕೂಲತೆಗಳು ನಿಮಗೆ ಲಭಿಸಿವೆ.

## ಸಮರ್ಪಣ

ಇನ್ನು ಮೇಲೆ, ಎಲ್ಲವೂ ನಿಮ್ಮ ಇಚ್ಛೆ ಹಾಗು ಋಜುತೆಯನ್ನು ಅವಲಂಬಿಸಿದೆ. ನಿಮ್ಮ ಇಚ್ಛೆ ಇನ್ನು ಮುಂದೆ ಸಾಮಾನ್ಯ ಮಾನವನಾಗಿ ಉಳಿಯಬಾರದು ಎಂದು ಇದ್ದರೆ, ಇನ್ನು ಮುಂದೆ ಕೇವಲ ಉತ್ಕ್ರಾಂತಿ ಹೊಂದಿದ ಪಶುಗಳಾಗಿ ಬಾಳಬಾರದು ಎಂದು ಇದ್ದರೆ, ಹಾಗು ನಿಮ್ಮ ಇಚ್ಛೆ ಶ್ರೀಅರವಿಂದರ ಅತಿಮಾನಸಚೈತನ್ಯದ ಆದರ್ಶವನ್ನು ಪಡೆದ ಹೊಸಮಾನವರಾಗಿ ಪರಿಣಮಿಸಿ ಹೊಸಜಗತ್ತಿನಲ್ಲಿ ಹೊಸದಾದ ಹಾಗು ಉಚ್ಚತಮವಾದ ಜೀವನವನ್ನು ಸಾಗಿಸಬೇಕೆಂದಿದ್ದರೆ, ನಿಮಗೆ ಇಲ್ಲಿ ನಿಮ್ಮ ಧ್ಯೇಯಸಾಧನೆಗೆ ಅನುಕೂಲವಾದ ಸಕಲ ಸಹಾಯವು ದೊರಕುವುದು. ಆಶ್ರಮವಾಸದಿಂದ ಸಂಪೂರ್ಣ ಸಫಲತೆಯನ್ನು ನೀವು ಪಡೆಯುವಿರಲ್ಲದೆ, ಕೊನೆಯಲ್ಲಿ ಜಗತ್ತಿಗೇ ಸಜೀವ ಆದರ್ಶಗಳಾಗುವಿರಿ.

೨೪ ಜುಲೈ ೧೯೫೧. — ಶ್ರೀಮಾತೆಯವರು

---

ಧ್ಯಾನದಲ್ಲಿ ಎಷ್ಟು ಗಂಟೆ ಕೂಡಲಾಗುತ್ತಿದೆ ಎಂಬುದು ಆಧ್ಯಾತ್ಮಿಕ ಪ್ರಗತಿಯ ಪ್ರಮಾಣ ಸೂಚಿಯಲ್ಲ. ಧ್ಯಾನಮಗ್ನತೆಗೆ ಯಾವ ಪ್ರಕಾರದ್ದೂ ಪ್ರಯಾಸವೆನ್ನಿಸಕೂಡದು. ಈ ಅವಸ್ಥೆಯನ್ನು ಮುಟ್ಟಿದಾಗಲೇ ಆಧ್ಯಾತ್ಮಿಕ ಪ್ರಗತಿ ಪಥದಲ್ಲಿ ಮುಂದರಿದಂತೆ ಈ ಅವಸ್ಥೆಯನ್ನು ಹೊಂದಿದಾಗ ಧ್ಯಾನವನ್ನುಳಿದು ಹೊರಬರುವದೇ ದುಸ್ತರವಾಗಿ ಅದಕ್ಕೋಸುಗ ತುಂಬ ಪ್ರಯಾಸಪಡಬೇಕಾದ ಅವಶ್ಯಕತೆ ಉಂಟಾಗುವದು. ಭಗವಂತನ ಚಿಂತನವನ್ನು ತೊರೆದು ಸಾಧಾರಣ ಚೇತನದ ಜೊತೆಗೆ ಇಳಿದು ಬರುವದು ಕಠಿಣವಾಗಿ ಬಿಡುವದು. ಭಗವಂತನಲ್ಲಿಯ ಏಕಾಗ್ರತೆಯು ನಿಮ್ಮ ಜೀವನದ ಅವಶ್ಯಕತೆ ಎನ್ನಿಸಿದಾಗ, ಇದನ್ನುಳಿದು ನೀವು ಬದುಕುವುದೇ ಅಸಾಧ್ಯವೆಂದು ತೋರಿದಾಗ, ಹಾಗೂ ಈ ಅವಸ್ಥೆಯು ಹಗಲಿರುಳೂ ತಾನಾಗಿ ಉಂಟಾಗತೊಡಗಿದಾಗ ಮಾತ್ರ ನೀವು ಅದಾವುದೇ ಬಗೆಯ ಕೆಲಸದಲ್ಲಿರಲೊಲ್ಲಿರೇಕೆ—ನಿಮ್ಮ ಪ್ರಗತಿಯು ನಿಶ್ಚಿತರೂಪದಲ್ಲಿ ಆಗಿದೆ ಎಂದು ತಿಳಿಯತಕ್ಕದ್ದು. ಆಗಲೇ ನಿಜವಾದ ಉನ್ನತಿಯನ್ನು ನೀವು ಸಾಧಿಸಿದಂತೆ. ನೀವು ಬೇಕಾದರೆ ಧ್ಯಾನಹಚ್ಚಿ ಕುಳ್ಳಿರಬಹುದು, ಮಲಗಬಹುದು, ತಿರುಗಬಹುದು, ಕೆಲಸಬೊಗಸೆ ಮಾಡಬಹುದು. ಆದರೆ ಮುಖ್ಯವಾಗಿ ಗಮನಿಸಬೇಕಾದದ್ದು ನಿಮ್ಮ ಚಿತ್ತವೃತ್ತಿಯ ನಿರೋಧ. ಭಗವಂತನ ನಿತ್ಯಜ್ಞಾನವೇ ಸರ್ವದಾ ಸ್ಥಾಯಿಯಾಗಿರುವದು ಅತ್ಯವಶ್ಯ.

— ಶ್ರೀಮಾತೆಯವರು

# ಮಹಾಪ್ರಸ್ಥಾನ

ಆಗೊ ಜೀವಸ್ಫೋಟ ಆ ಸೋಮವಾರದಾ ಮಧ್ಯರಾತ್ರಿಯಲ್ಲಿ
ಆಕಾಶಗಂಗೆ ಅಭಿಷೇಕ ಮಾಡೆ ಕೈಲಾಸ ಜಾತ್ರೆಯಲ್ಲಿ
ಮಘಾ-ವೇದವಾಣಿ, ಮಘಾ-ರಾಜರಾಣಿ-ನಕ್ಷತ್ರಪುಂಜ ಕರೆಯೆ
ಓಂಕಾರದೆದೆಯೆ ಝೇಂಕರಿಸಿದಂತೆ ನವ ಜೀವರಾಶಿ ಮೊರೆಯೆ ||

ಪಾತಾಳ-ಶೇಷ-ಮಸ್ತಕದ ಮಣಿಯೆ ಇಗೊ ಸ್ವರ್ಣ ಗರುಡನಾಗಿ
ದಿಗ್ದಂತಿ-ನಾಗ ನೆಗೆದಂತೆ ಮೇಗೆ ಪಾರದದ ಹಂಸವಾಗಿ
ಯೋಗೇಶನಿಂದ ಧನುಧಾರಿಯಲ್ಲಿ ಅನಿಮೇಷಭೇದವಾಯ್ತು
ಸುರವ್ಯಾಧ ನಮನದಾದರ್ಶವಾದ ಮೃಗಶೀರ್ಷ ವೇಧವಾಯ್ತು ||

ನಾರಾಯಣಾಸ್ತ್ರ ಎಸೆದಂತೆ ಮೆರೆಯೆ ವಿಜ್ಞಾನ-ಚಕ್ರದಲ್ಲಿ
ನವನೀತ ತೇಲಿ ಘನಮನದ ಮೇಲೆ ಸುರಮಥನ ತಕ್ರದಲ್ಲಿ
ಸಾವಿತ್ರ ಮಂತ್ರ ಯಮತಂತ್ರವನ್ನೆ ಸಂಯಮಿಸಿ ಅಮಲವಾಗಿ
ನಚಿಕೇತ ಅಗ್ನಿ ವಿಚಿಕೇತಿಸಿತ್ತು ನವಕಮಲ ಕಮಲವಾಗಿ ||

ಆದಿತ್ಯಶಕ್ತಿ ಚಂದ್ರಮನ ಹೊಂದಿ ಕೌಮುದಿಯೆ ಭ್ರಮಿಸುವಂತೆ
ಸಾವಿರದಸೂರ್ಯ ನಕ್ಷತ್ರರಾಗಿ ತಮವನ್ನೆ ಶಮಿಸುವಂತೆ
ಶ್ರದ್ಧೆಯಲಿ ಶಿರವು, ಋತಸತ್ಯದರಿವು ಎದೆಯೋಗ ಸಾಕ್ಷಿಯಾಗಿ
ಮಾಸೃಷ್ಟಿಯಿಂದ ಬರುತಿಹವು ಚೆಂದ ಶಿವ ಪಕ್ಷಿ ಪಕ್ಷಿಯಾಗಿ ||

ಕಳೇವರದ ನೀರಲ್ಲಿ ಶಾರದೆಯ ದೀಪ್ತಿ ತೊಳಗುತಿಹುದು
ಹಣತೆ ತುಂಬ ನೇಹದಲಿ ನಗೆಯ ಹೂ-ಬತ್ತಿ ಬೆಳಗುತಿಹುದು
ಎದೆಯ ಹಾಲಿನಲಿ ಬಗೆಯ ಸಕ್ಕರೆಯ ಹರಳು ಕರಗುತಿಹುದು
ತೇಜದಲ್ಲಿ ತಮ ಶಮಿಸಿ ಸೋಮರಸಿಕತೆಯೊಳೊರಗುತಿಹುದು ||

ದುರ್ಬಲತೆ ಸುಳ್ಳು, ಹುಸಿಯಾಸೆ ಜೊಳ್ಳು, ಸಾವೊಂದು ಪೊಳ್ಳುಬದುಕು
ಬಯಲಾಯ್ತು ಬಸಿರು, ಒಲವಾಯ್ತು ಹಸಿರು, ಕಸುರಾಯ್ತು ಅದಕು ಇದಕು
ನವಧರ್ಮ ಮೇಘ ಘನ ಘೋಷಗೊಂಡು ಅವತರಿಸೆ ದೇವವೃಷ್ಟಿ
ಸುಕ್ಷೇತ್ರದಲ್ಲಿ ಮೊಗದೋರಲುಂಟು ಆನಂದದೊಂದು ಸೃಷ್ಟಿ ||

ಆ ಜ್ಞಾನದಾಚೆ ವಿಜ್ಞಾನದುದಯವಿದೆ ಗಂಟೆ ಬಾರಿಸಿತ್ತು
ಚಾತುರ್ಥಸರ್ಗ ನೈಸರ್ಗ ಮಾರ್ಗ ಡಂಗುರವ ಸಾರಿಸಿತ್ತು

ನೆರಿತೆರಿಯಲುಂಟು ಸೌಂದರ್ಯ ಸತ್ಯ ಸಜ್ಜನಿಕೆ ಇರುವ ನೆಲೆಯು
ಸಿರಿಮನದ ವೈಭವದಿ ಮುಗಿಯಲಿಲ್ಲ ಈಶ್ವರನ ಸೃಷ್ಟಿಕಲೆಯು ||

ಓ ಎಂತು ಬಂತೊ ಜಡದಿಂದ ಪ್ರಾಣ ಉದ್ಭಿಜ್ಯ ಸ್ವೇದವಾಗಿ
ತರುಮರವು ಆಗಿ ಕ್ರಿಮಿಕೀಟವಾಗಿ ಪಶುಪಕ್ಷಿ ಭೇದವಾಗಿ
ಪಾಶವಿಳಗ್ರಂಥಿ ಬಿಡಿಸಿತ್ತು ಎಂತೊ ಮಾನವ್ಯದೊಂದು ರೀತಿ
ಮಾನವನ ಹೃದಯವನೆ ಯೋನಿಗೊಳಿಸಿ ಬರಲಿಹುದು ದೇವಜಾತಿ ||

ಈ ದೇಹವಿರಲಿ ಇಗೊ ಬರುವೆ ಅಮೃತ-ಹೃತ್ಕಲಶಪಾಣಿಯಾಗಿ
ಬಾನುಲಿಯ ಕ್ಷೇತ್ರ ಸಿಡಿಲೆಂದು ಮೊರೆಯೆ ಆಕಾಶವಾಣಿಯಾಗಿ
ಅಹ ಅರುಣ ಕಿರಣ ಆವರಣ ಹರಿವ ಸುಸ್ಫಟಿಕ ಕನಕದಂತೆ
ಅಗೊ ಎದ್ದ ಗೆದ್ದ ಋಷಿರಾಜತೇಜ ವೈದೇಹ ಜನಕ ನಂತೆ ||

ತಾಪಾರ್ತಜನಕೆ ನೆರಳಾಗಿ ನೀಡಿ ವಟವೃಕ್ಷವಾದ ಜೀವ
ತತ್ ಬ್ರಹ್ಮದಲ್ಲಿ ಬೇರ್ಬಿಟ್ಟು ಇಳಿದ ಅಶ್ವತ್ಥದಂಥ ಭಾವ
ಧೀಪ್ರಳಯ ಜಲದಿ ತೇಲಾಡುತಿಹುದು ಅರಳೆಲೆಯಲೇನೊ ಒಂದು
ತಾನಾಗಿ ನಾಳೆ ನವಜೀವ ಕೋಟಿಯೆನೆ ಮೆರೆಯಲಿಹುದು ಬಂದು ||

ನವಜನ್ಮಯಜ್ಞ ಪರಿಪೂರ್ಣವಾಯ್ತು, ಅಜ್ಞಾನವಾಯ್ತು ಹವಿಯು
ಅವಭೃತದ ಸ್ನಾನ ಈ ದೇಹದಾನ, ಗ್ರಹಮುಕ್ತನಾದ ರವಿಯು
ಪುಷ್ಕರಿಣಿಯಲ್ಲಿ ಅರವಿಂದ ತತ್ತ್ವ ಸೋಪಾನಗೊಳಿಸಿ ಸಾರ್ಥ
ಶ್ರೀಮಾತೆಯವರ ಗುರುಪಾದವಾದವೋ ವಿಶ್ವಯೋಗ-ತೀರ್ಥ ||

ಅರವಿಂದವೆಂಬ ಬರಿ ಹೆಸರಿನಲ್ಲೆ ಸೌಗಂಧ ತುಂಬಿ ಬಹುದು
ಚಾರಿತ್ರ್ಯವನ್ನು ನೆನೆಸಿದರೆ ಸಾಕು ಬ್ರಹ್ಮಾಂಡ ಬಿಂಬಿಸುವದು
ಆ ಒಂದೆ ರಾತ್ರಿಯಲಿ ಬಯಲು ತುಂಬಿತೋ ಪಾರಿಜಾತ-ಕೀರ್ತಿ
ಈ ವಿಶ್ವದೊಡನೆ ಒಂದಾಗಿ ನಿಂತಿತೋ ಆ ವಿರಾಟ ಮೂರ್ತಿ ||

ಪಾರ್ಥಿವದ ಗರ್ಭ ಭೇದಿಸುತ ಬಂತು ಅರ್ಭಕನ ಧ್ವನಿಯು ಒಂದು —
"ವಾಮನನ ಮುಂದಿನಾ ವಾಸುದೇವ ಕ್ರಮಯೋಗದಿಂದ ಇಂದು
ಶ್ರೀಕೃಷ್ಣ ಪಕ್ಷದಲಿ ಕಂಸರನ್ನು ಸಂಹರಿಸಿ ಮುಂದೆ ನಡೆದೆ
ಅಮವಾಸೆ ಕಳೆದು ಚಿತ್ಕಲೆಯ ತಳೆದು ಪೌರ್ಣಿಮೆಯ ಹಾದಿ ಹಿಡಿದೆ"

* * *

ಹನ್ನೆರಡುಕಾಲ ಹದಿಮೂರ ನಾಡಿ ಪ್ರಜ್ಞಾನ ಬಿಂಬವಾಗಿ
ಮಹಮನೆಯ ನೆಲೆಗೆ ವಿಜ್ಞಾನ ಕಲೆಗೆ ಕೈದೀಪಗಂಬವಾಗಿ
ಅಂಬಿಕೆಯ ಬಸಿರ ನಂಬಿಕೆಯ ಬೊಂಬೆ ಸುಜ್ಞಾನ ಪಿಂಡವಾಗಿ
ಭಗವಂತ ದತ್ತ ಚಾತುರ್ಯ ಪಾದಕರ್ಷಿತ ಉದಂಡವಾಗಿ

* * *

## ಮಹಾಪ್ರಸ್ಥಾನ

ಕಾಳಿ ಗಾಳಿಯಲಿ ಗಾಡಿಯೇರಲಿರೆ
ಗಾಲಿ ತಿರುಗುತಿಹವು.
ಕಾಲ ಕಾಲಕೂ ಕಾಲ ತಾಲದಲಿ
ಗೆಜ್ಜೆ ಮಿರುಗುತಿಹವು.

ಪರಾರ್ಧಕೋಟಿ ಬೆಳುಮೀನ ಮಿಂಚುತಿವೆ
ಬಾನಿನೊಡಲಿನಲ್ಲಿ.
ಅಬ್ಜಕೋಟಿ ಬಾಳ್ಮೀನ ನೋಡುತಿವೆ
ಬದುಕುಗಡಲಿನಲ್ಲಿ.

ತುಂಬಿ ಮೊರೆದು ಪರಮೆಯನು ಕರೆಯುತಿದೆ
ತುಂಬು ಬಾಳಿಗಾಗಿ
ಪರಮಜೀವನವ ಜೇನ ಕೂಡಿಸಲು
ಇಂದು ನಾಳೆಗಾಗಿ.

ಠಾವು ಠಾವು ಇವು ಹೂವು ನೋಡು ಈ
ನಾವು ನೀವು ಕೂಡ.
ಹೂ ಹೂವು ಇದರ ರಸರಸವು ಬೆರೆಯೆ ಮಧು-
ಪಾಕವಹುದು ನೋಡ.

ಹಾದಿ ಕಾಣದಲಿ ಹಾದಿ ತೆರೆಯುತಿದೆ
ಹಕ್ಕಿ ಹಕ್ಕಿಗಾಗಿ.
ಕೂಗಿ ಕರೆಯುತಿದೆ ಕುಣಿದು ಒರೆಯುತಿದೆ
ಸಾಕ್ಷಿ ಪಕ್ಷಿಗಾಗಿ

ಇದು ಯಾವ ಗೀತಿ ನವರೀತಿಯಲ್ಲಿ ಭಯ-
ಭೀತಿ ತೊರೆದು ಬಂತು
ನಾಂದಿಯಾಗಿ ನವನಾಟ್ಯ ನಡೆಸಿರಲು
ವಿಶ್ವನಟನೆ ನಿಂತು.

— ಅಂಬಿಕಾತನಯದತ್ತ

# ಹಗಲ ಕನಸು

ಹಗಲ ಮೂರನೆ ಜಾವ. ಆರ್ದ್ರೆ ಮಳೆ ಸಲಿಸುತಿರೆ,
ಮೊಳಗಾಡೆ ಮೋಡ, ಮಿರ್ರನೆ ಮಿಂಚು ಮಿನುಗೆ,
ಹಗಲಿನಿರುಳಾಗೆ, ಹಲವೆಣಿಸಿ ಹಂಬಲಿಸುತಿರೆ,
ಕುಳಿತಲ್ಲೆ ಕುಸಿತಲ್ಲೆ ಕಣ್ತಾಗಿದೆನಗೆ
ಕಾಣಿಸಿತಗೋ ವಸುಧೆ ಏಕವಾರಾಶಿಸಿದೆ,[೧]
ಆಗಸವ ಮುಟ್ಟಿ ಹತ್ತಂಗುಲವೆ ಕೆಳಗೆ;
ಒಂದುಳಿಯದೊಲು ಚರಾಚರವೆಲ್ಲ ನಾಶಿಸಿದೆ —
ಬಿದಿಗೆಯ ಬಿದುವಿನನಿತೆ ಬೆಳಕದನು ಬೆಳಗೆ,
ಕಾಣಿಸಿತು ಆ ಜಲೌಘದೊಳೊಂದು ಲಘು ಶೃಂಗ[೨]
ವದರ ಮೇಲೊಬ್ಬ ನಿಂದಿಹ ಪ್ರತಿಚ್ಛಾಯೆ;
ನೀರಿನೇಕಾಂತ ನೀರವದೊಳಾ ನಿಃಸಂಗ[೩]
ನಾರು? ಬೆನ್ನಿಕ್ಕಿ ನಿಟ್ಟಿಪನೇನು ಕಾಯೆ?
ಕಾಣಿಸಿತು ಎತ್ತಣಿಂದಲೊ ತೇಲಿ ಬರುವೊಂದು
ಆಲದೆಲೆ; ಅದರೊಳಿಹ ಹಸುಳೆಯನು ಕಾಣ
ಲಾತ ಮೊಗದಿರುಹುವುದೆ ಅರವಿಂದ ಋಷಿಯೆಂದು
ಕಾಣಿಸಿತು. ನೀರುಕ್ಕಿ ಋಷಿನಿಂದ ತಾಣ
ಕೈದಿತೆಲೆ. ಕೂಸನವನೆತ್ತಿ ಕೈಚಾಚೆ,
ಮಗುವೊಳೊಮ್ಮೈಸಿ[೪] ಮಾಯ್ದನು ಮಾಯೆಯಾಚೆ.

**ಗೋವಿಂದ ಪೈ**

೧ ಒಂದೇ ಸಮುದ್ರವಾಗಿದೆ. ೨ ಪರ್ವತದ ಶಿಖರ. ೩ ಒಬ್ಬಂಟಿಗ.
೪ ಒಂದು ಮೈಯ್ಯಾಗಿ, ಒಂದಾಗಿ.

# ದಿವ್ಯಜೀವನ ದರ್ಶನ

"I shall manifest again in a supramental body built in the supramental way"

—**Sri Aurobindo**

೧

ಮಾನಸೋತ್ತರ ಶಕ್ತಿ ಸಿದ್ಧಿಯೊ-
ಳಿಳೆಗೆ ಅವತರಿಸುವ ವರೇಣ್ಯನೆ,
ಕೋಟಿ ಸೂರ್ಯ ಪ್ರಕಾಶದನುಪಮ
ಸತ್ಯ ಜ್ಞಾನದ ಸುಪ್ರತಿಷ್ಠನೆ!

೨

ಮಾನವತೆಯುತ್ಕ್ರಾಂತಿಯಲಿ ಅತಿ-
ಮಾನವತೆಯನುಗೊಳಿಸುತಿರುವುದು;
ಸತ್ಯ-ಸೌಂದರ್ಯದ ಪ್ರಕಾಶದ
ಪರಮ ಆನಂದವನು ಪಡೆವುದು!

೩

ದೇವಲೋಕದ ದಿವ್ಯ ತೇಜವು
ಮಾನವತೆಯೊಳಗಿಳಿಯುತಿರುವುದು;
ಮನುಜ ದೇವತೆಯಾಗಿ ಬಾಳುವ
ದಿವ್ಯ ಜೀವನವರಳುತಿರುವುದು!

೪

ತೊರೆದು ದೇಹವ ಪೂರ್ಣಯೋಗದೊ-
ಳಾತ್ಮ ಸಾಧನ ಸಿದ್ಧ ಪುರುಷನು
ಪಡೆದು ಲೋಕೋತ್ತರದ ಸಿದ್ಧಿಯ
ದಿವ್ಯ ಮಾನವನಾಗಿ ಬರುವನು!

೫

ಮಾನಸೋತ್ತರ ಸೂರ್ಯಪ್ರಭೆಯೊಳು
ಪೃಥಿವಿ ಥಳ ಥಳ ಹೊಳಪ ಪಡೆವುದು,
ಮಾನವತೆಯರವಿಂದವರಳುತ
ಬೆಳಕ ಬಾಳಿನ ಸುರಭಿ ಪರಿವುದು !!

— ಸ. ನಾ.

# ಮೀರಾ ಮಾತೆ

ನಡೆದು ಬಂದೆಯಾ ಎನ್ನ ಕವಿಯ ಮಂದಿರಕೆ ।
ಮಾತೆ ಮೀರಾ ಇಂದು ಹೃದಯ ಮಂದಿರಕೆ ॥

ಬಾ ತಾಯಿ ಅಳವಡಿಸು ಏಸು ದಿನ ಕಾದಿದ್ದೆ
ಈ ನಿನ್ನ ಬರುವಿಕೆಯ ದಾರಿಯತ್ತ
ಅಂದು ಕಂಡಾಗಿಂದ ಮನ ಬಯಸಿ ಎದೆತೆರೆದು
ನಿನ್ನೆಡೆಗೆ ಧಾವಿಸಿದೆ ನೋಡದತ್ತ

ಅಂದು ಇಂದಿಗು ಏಸು ವರುಷಗಳು ಕಳೆದವೋ
ಮೊದಮೊದಲು ಕವಿದಿತ್ತು ಅಂಧಕಾರ
ಹೃದಯಸುಮವರಳಿತೋ ಶಾಂತಿಸೂರ್ಯನ ಕಂಡು
ಕಡೆಗೊಮ್ಮೆ ಚದುರಿತೋ ಅಂಧಕಾರ

* * *

ಮನಮೆಚ್ಚಿ ಬೆನ್ನಟ್ಟಿ ಓಡುತೋಡುತ ಹಿಡಿಯೆ
ಕೈನೀಡಿ ಮುಖತೋರಿ ಮತ್ತೆ ನುಸುಳಿ
ಈಗ ನೀನೇ ಬಂದು ಹೃತ್ಕಮಲದೊಳು ನಿಂದು
ಶಾಂತಿರಸ ತುಂಬುತಿಹೆ ಏಕೆ ಮರಳಿ

ಏನು ಬೇಡಲಿ ತಾಯಿ ನಿನಗೆ ತಿಳಿಯದೆ ಎನ್ನ
ಮನದ ಇಂಗಿತ ಮತ್ತೆ ಬೇರೆಯುಂಟೇ
ನಿನ್ನ ನೆಲೆ ಎನ್ನಲ್ಲಿ ತಳವೂರಿ ಎನ್ನ ನೀ
ನಿನ್ನ ಮಗುವಾಗಿರಿಸು ಸಾಕು ತಂಟೆ

* * *

ಇನ್ನು ಭಯವೆನಗಿಲ್ಲ ಮಾತೆ ಮೀರಾ ಎನ್ನ
ಕೈ ಹಿಡಿದು ನಡಿಸುವಳು ಮುಂದು ಮುಂದೆ
ಏರಿಳಿತ ಕಗ್ಗಲ್ಲು ಮುಳ್ಳು ಬೇಲಿಗಳೆಲ್ಲ
ಮಾಯವಾಗುತ್ತಿಹವು ಹಿಂದು ಹಿಂದೆ

## ಮೀರಾ ಮಾತೆ

ಜಗಕೆ ಒಬ್ಬಳೆ ಜನನಿ ಎನ್ನ ಮೀರಾ ಮಾತೆ
ಅವಳ ಸರಿಸಮ ಇನ್ನು ಬೇರೆ ಇಲ್ಲ
ಅವಳ ತಿಳಿನಗೆ ಎನ್ನ ದಾರಿದೀಪವು ಮುನ್ನ
ಕಾಳರಾತ್ರಿಯ ಭಯವು ಇನ್ನು ಇಲ್ಲ

ಅವಳ ಕರುಣೆಯೆ ಎನ್ನ ಬಾಳ ಸೊತ್ತಾಗಿಹುದು
ಅಲ್ಲಿ ಕಾಣಲು ಸಿಗದು ಹಿರಿದು ಕಿರಿದು
ಮನಬಿಚ್ಚಿ ಎದೆಯರಳಿ ಭಕ್ತಿಗೈಯನು ನೀಡಿ
ನಿಲ್ಲುವದೆ ಅವಳೆದುರು ಜಗದಿ ಹಿರಿದು

ಬಾ ಬಂಧು ಬಾ ಭಗಿನಿ ಭಯವೇಕೆ ನಿಮಗಿನ್ನು
ಒಟ್ಟಾಗಿ ಹೇಳೋಣ ಮಾತೃವಾಣಿ
ಜಡಜಗವೆ ಹುಚ್ಚಾಗಿ ತನ್ನನ್ನೆ ಮರೆತಿರಲು
ಎಚ್ಚರಿಸಿ ಹಾಡೋಣ ದಿವ್ಯವಾಣಿ

* * *

ಹತ್ತಿರದಿ ಯಾರಿಲ್ಲವೆಂಬ ಕಳವಳವೇಕೆ
ತಾಯಿ ಮೀರಾ ತೀರ ಸನಿಹದಲೆ ಇರಲು
ನಿನ್ನ ಮನಮಂದಿರದ ಬಾಗಿಲಲ್ಲಿಯೆ ನಿಂದು
ಹೃದಯಮಂದಿರದಲ್ಲಿ ಇಣುಕುತಿಹಳು

ಹೃದಯಮಂದಿರ ತೆರೆದು ಭಕ್ತಿಗದ್ದುಗೆ ಇಟ್ಟು
ಪಾವಿತ್ರ್ಯ ಮಲ್ಲಿಗೆಯ ಮಾಲೆಕಟ್ಟು
ಆಶೆ-ಆಕಾಂಕ್ಷೆಗಳ ಚೆಂಗುಲಾಬಿಯನಿಟ್ಟು
ಅವಳ ಪಾದಕೆ ಎರಗು ಮೋಹಬಿಟ್ಟು

ಇನ್ನು ಕಳವಳವೇಕೆ ಮಾತೆ ನಿನ್ನೊಳಗಿರಲು
ಒಳಗು ಹೊರಗೂ ಒಂದೆ ಎಂದೆ ಅರಿತು
ಹಗಲು ಇರುಳೂ ಒಂದೆಮಾಡಿ ಅವಳೆಡೆ ನೋಡು
ಅಲ್ಲಿ ಹೊಳೆವುದು ದಾರಿ ಅನವರತವು

**—ಹ. ಮ. ಬಬಲೇಶ್ವರ**

# ಶ್ರೀ ಮಹಾ ತಾಯಿಯವರಿಗೆ

ಜನನಿ ನಿಮ್ಮ ಚರಣ ಕಮಲ
ಗಳಲಿ ಭ್ರಮರನಾಗಿ ಬರುವೆ !
ಸರುವವನ್ನು ತೊರೆದು ನಿಮ್ಮ
ಚರಣ ಕ್ಷೇತ್ರದಲ್ಲಿ ಇರುವೆ ||೧||

ಕ್ಷಿತಿಯೊಳಾರು ಇಲ್ಲವಮ್ಮ
ಹಿತರು ಎನಗೆ ನಿಮ್ಮನುಳಿದು
ಗತಿಯು ನೀವೆ ಮತಿಯು ನೀವೆ
ಹಿತರು ನೀವೆ ಎನಗೆ ಅಮ್ಮ ||೨||

ಒಲುಮೆಗಾಗಿ ತೊಳಲಿ ಬಳಲಿ
ಹಲವು ಕಡೆಗೆ ಅಲೆದು ಅಲೆದು
ಎಲ್ಲು ನೆಲೆಯ ಕಾಣದಾಗ
ಹೊಲಬುಗೆಟ್ಟು ಹೋದೆನಮ್ಮ ||೩||

ಒಲವುದಪ್ಪಿ ದಲಿತನಾಗಿ
ಅಲೆಯುತಿರ್ದ ಸಮಯದಲ್ಲಿ
ಒಲವ ನೀಡಿ ಬಲವ ನೀಡಿ
ನೆಲೆಯನಿತ್ತಿರಮ್ಮ ಎನಗೆ ||೪||

ನಿಮ್ಮ ನೆಲೆಯೆ ಪರಮ ನೆಲೆಯು
ನಿಮ್ಮ ನೆಲೆಯೆ ಸರುವ ನೆಲೆಯು
ನಿಮ್ಮ ನೆಲೆಯೆ ಹಿರಿಯ ನೆಲೆಯು
ನಿಮ್ಮ ನೆಲೆಯೆ ಚರಮ ನೆಲೆಯು ||೫||

ನಿಮ್ಮ ನೆಲೆಯ ಪಡೆಯಲಾವ
ಘೋರ ತಪವು ಜಪವು ಬೇಡ
ಪೂರ್ಣಭಾವದಿಂದ ನಿಮಗೆ
ಶರಣು ಬಂದರದುವೆ ಸಾಧ್ಯ ||೬||

ಆದರೇನು ? ಶರಣಭಾವ
ಬರಲು ನಿಮ್ಮ ಕೃಪೆಯೆ ಬೇಕು
ನಿಮ್ಮ ಕೃಪೆಯ ಸೋಂಕಿನಿಂದ
ಎನ್ನ ಬಾಳು ಬೆಳಗಿತಮ್ಮ ||೭||

ಜಾತಿ ನೀತಿ ದೇಶ ಧರ್ಮ-
ದೆಲ್ಲ ಛಲಗಳನ್ನು ಮರೆತು
ವಾಸಿಸುವೆನು ಅಮ್ಮ ನಿಮ್ಮ
ಪಾದಧೂಳಿಯಲ್ಲಿ ಬೆರೆತು ||೮||

(೧೯೪೫ ರ ಜುಲಾಯಿ ತಿಂಗಳಲ್ಲಿ ನನಗೆ ಆಶ್ರಮದಲ್ಲಿ ಶಾಶ್ವತವಾಗಿ ಸ್ವೀಕರಿಸಿದ ಬಗ್ಗೆ ಶ್ರೀ ಮಹಾತಾಯಿಯವರಿಂದ ಬಂದ ಕೃಪಾಪತ್ರವನ್ನು ಓದಿ ಉದ್ಭವಿಸಿದ ಭಾವವೇ ಇಲ್ಲಿ ಪಡಿಮೂಡಿದೆ)

**ಆದಮ ಸಾಹೇಬ**

---

# ನವೋದಯದ ಭಾಗ್ಯ

ಭೂಮಧ್ಯ ಸಾಗರದೊಳುತ್ತರದ ತೀರದೊಳು
ಉತ್ತರೋತ್ತರ ಗತಿಯ ಪ್ರತಿಭೆ ತಾ ತಲೆದೋರೆ,
ದಾಂತೆ-ದಾವಿನ್ಸಿಯರು ಹೊಸಬಾಳ ಸೃಜಿಸುತಿರೆ
ರೋಮಾಂಚಿತವು ರೋಮ* ವೆನೆ ರೋಮ ರೋಮದೊಳು –

ಯವನ ಜ್ಞಾನೋದಧಿಯ ನವನಿಧಿಯ ತೇಜವನು
ನವಯುಗದ ರವಿಯಾಂತು ನವರುಚಿರತೆಯ ತಳೆದು
ಮಧ್ಯಯುಗಯಾಮಿನಿಯ ಜವನಿಕೆಯ ಕಳೆದೊಗೆದು
ಐರೋಪ್ಯ ಗಗನದೆ ನವೋದಯವ ಬೆಳಗಿದನು.

ಭಾರತ ನವೋದಯದ ಬ್ರಾಹ್ಮೀ ಮುಹೂರ್ತವದು
ರಾಮಮೋಹನ ರವವು; ಪರಮಹಂಸನ ಪರಮ
ಪ್ರಭೆಯು ತಾನುಷೆಯಹುದು; ಅರುಣೋದಯವು ದಯಾ
ನಂದನಿಂದಾದುದೈ; ಭಾಸುರದ ಸ್ವಾತಂತ್ರ್ಯ-
ಭಾಸ್ಕರನು ಗಾಂಧಿಯೈ; ಅರವಿಂದರರಳಿಸುವ
ಅಧ್ಯಾತ್ಮ ಸಾಮ್ರಾಜ್ಯ ಭಾರತದ ಭಾಗ್ಯವೈ!!

---

* ರೋಮ ರಾಜ್ಯ

— ಸ. ನಾ

# ಶ್ರೀ ಅರವಿಂದರ ಸಂದೇಶ

[ಈ ಸಂಪುಟದಲ್ಲಿಯ ''ಶ್ರೀ ಅರವಿಂದರ ಸಂದೇಶ'' ''ಶ್ರೀ ಅರವಿಂದರ ಅಂತರಾಷ್ಟ್ರೀಯ ವಿಶ್ವ ವಿದ್ಯಾಲಯ ಕೇಂದ್ರ''– ಈ ಎರಡು ಲೇಖನಗಳು ಆಶ್ರಮದವರು ಅಧಿಕೃತವಾಗಿ ಪ್ರಕಟಿಸಿರುವ ''ಶ್ರೀ ಅರವಿಂದರ ಸಂದೇಶ ಹಾಗು ಆಶ್ರಮ'' ಎಂಬ ಚಿಕ್ಕ ಪುಸ್ತಕದ ಒಂದನೆಯ ಮತ್ತು ಮೂರನೆಯ ಲೇಖನಗಳ ಅನುವಾದಗಳಾಗಿವೆ. ಆಶ್ರಮವನ್ನು ಕುರಿತ ಎರಡನೆಯ ಲೇಖನದ ಅನುವಾದವನ್ನು ಈಗಾಗಲೇ ಸಮರ್ಪಣದ ೩ ನೆಯ ಸಂಪುಟದಲ್ಲಿ ಕೊಡಲಾಗಿದೆ.]

ಒಂದು ದೃಷ್ಟಿಯಿಂದ ಶ್ರೀ ಅರವಿಂದರ ಸಂದೇಶವು ಅತಿ ಸರಳ, ಬಹುಮಟ್ಟಿಗೆ ಸ್ವತಃ ಸ್ಪಷ್ಟವಾಗಿದೆ. ಅವರು ಹೇಳುವುದೆಲ್ಲದರ ಒಟ್ಟು ಅರ್ಥವೆಂದರೆ, ಮಾನವನು ಚೇತನದಲ್ಲಿ ವಿಕಾಸಗೊಳ್ಳುತ್ತಿರುವನು; ಕೇವಲ ವೈಯಕ್ತಿಕ ಜೀವನದಲ್ಲಿ ಅಲ್ಲದೆ ಸಾಮೂಹಿಕ ಅಂದರೆ ಸಾಮಾಜಿಕ ಜೀವನದಲ್ಲಿ ಸಹ ಪೂರ್ಣ ಹಾಗು ಸಮಗ್ರ ಚೇತನವನ್ನು ಪಡೆಯುವವರೆಗೆ ಅವನು ಬೆಳೆಯಬೇಕು. ವಾಸ್ತವವಾಗಿ, ಚೇತನದ ವಿಕಾಸವೇ ಜೀವನದ ಪರಮ ರಹಸ್ಯ, ಪೃಥ್ವಿಯ ವಿಕಾಸದ ಸರ್ವ ತಂತ್ರ ಸಾಧನ.

ಶ್ರೀ ಅರವಿಂದರು ವಿಕಾಸದಲ್ಲಿ ಶ್ರದ್ಧೆಯುಳ್ಳವರು. ಅವರ ಪ್ರಕಾರ ಸೃಷ್ಟಿಗೆ ಒಂದು ಉದ್ದೇಶವುಂಟು. ಹಾಗು ಮಾನವನು ಒಂದು ಗುರಿಯತ್ತ ಸಾಗುತ್ತಿರುವನು. ಅದು ವಿಕಾಸದ ಹೊರತು ಬೇರೆಯಲ್ಲ. ಆರಂಭದಲ್ಲಿ ಎಲ್ಲವೂ ಜಡವಾಗಿತ್ತು, ನಿರ್ಜೀವವಾಗಿತ್ತು. ಒಂದು ದೆಸೆಯಲ್ಲಿ ಜಡದಿಂದ ಪ್ರಾಣವು ಹೊರಹೊಮ್ಮಿತು; ಯಾವುದು ನಿರ್ಜೀವವಾಗಿತ್ತೋ ಅಥವಾ ಹಾಗೆ ತೋರುತ್ತಿತ್ತೋ ಅದು ಸಜೀವವಾಯಿತು. ಹೀಗೆ ಸಸ್ಯಜಗತ್ತು ಉತ್ಪನ್ನವಾಯಿತು–ಚೇತನದ ಪ್ರಥಮ ಚಲನವಾಯಿತು; ಅಸ್ಪಷ್ಟವಾದ, ಕುರುಡಾದ, ಪ್ರಾಯಶಃ ಅಚೇತನವಾದ ಆದರೂ ಹೊಸದಾಗಿ ಪಡೆದುಕೊಂಡ, ಅಥವಾ ಜಾಗೃತವಾದ ಒಂದು ಸ್ಪಂದನದಿಂದ ಪ್ರೇರಿತವಾದ ಚೇತನವದು. ಆ ತರುವಾಯ ಪುನಃ ಗರ್ಭಧಾರಣೆ, ಪರಿಪಾಕಾವಸ್ಥೆ. ಆ ಕೊನೆಯಲ್ಲಿ ಮನದ ಅಂಕುರ, ಪ್ರಥಮ ಸಚೇತನ ಚೇತನ. ಹೀಗೆ ಪಶುವಿನ ಉತ್ಪತ್ತಿಯಾಯಿತು. ಇಲ್ಲಿ ಚೇತನವು ಹೆಚ್ಚು ಸ್ಪಷ್ಟವೂ ಸ್ವತಂತ್ರವೂ ಆಗಿದೆ; ನಿರ್ದಿಷ್ಟ ರೂಪವನ್ನು ತಳೆದಿದೆ. ಅದು ಸಹಜ ಪ್ರವೃತ್ತಿಯಾಗಿ ಅಥವಾ ಸಂವೇದನ ಶಕ್ತಿಯಾಗಿ ಪರಿಣಮಿಸಿದೆ. ಮೇಲಿನ ಸ್ತರಗಳಲ್ಲಿ ಅದು ಸ್ವಯಂಸ್ಫೂರ್ತ ವಿಚಾರಶಕ್ತಿಯ ರೇಖೆಯನ್ನು ಒಳಗೊಂಡಿದೆ. ಇಂದ್ರಿಯ ರಚಿತ ಮನೋವೃತ್ತಿಯು ಕಳೆದು ವಿಶುದ್ಧ ಮನವು ಮೂಡಿ ಬಂದಿತು, ಅಂದರೆ ವಿಚಾರ ಮನನಗಳು ಉದಿಸಿದವು. ಹಾಗು ಮಾನವನು ಪ್ರತ್ಯಕ್ಷನಾದನು. ಮಾನವ ಚೇತನದ ಹೆಗ್ಗುರುತೆಂದರೆ, ಪೂರ್ಣವಾಗಿ ಎಚ್ಚರಗೊಂಡ ಚೇತನ, ತನ್ನನ್ನು ತಾನೆ ಅವಲೋಕಿಸಬಲ್ಲ ಸಾಮರ್ಥ್ಯವುಳ್ಳ ಚೇತನ.

ಚೇತನದ ವಿಕಾಸಕ್ರಮದಲ್ಲಿ ಹಂತಗಳು ಇಂತಿವೆ; ಅವುಗಳನ್ನು ಸ್ಪಷ್ಟವಾಗಿ ನಿರೀಕ್ಷಿಸಬಹುದು ಹಾಗೂ ಅವು ಪ್ರಾಯಶಃ ಎಲ್ಲರಿಂದ ಒಪ್ಪಿಕೊಳ್ಳಲಾಗಿವೆ. ಇಷ್ಟೇ, ಶ್ರೀಅರವಿಂದರು ಈ ಚಲನೆಯಲ್ಲಿ ಎರಡು ನಿರ್ಣಾಯಕ ಲಕ್ಷಣಗಳನ್ನು ತೋರಿಸುವರು. ಒಂದು: ಜಡ, ಪ್ರಾಣ, ಮನ, ಬುದ್ಧಿ ಇವು ಬೇರೆ ಬೇರೆ ಪ್ರತ್ಯೇಕ

ವಸ್ತುಗಳಲ್ಲ; ಎಲ್ಲಿಂದ ಬರುವವೋ ನಮಗೆ ಗೊತ್ತಿಲ್ಲದೆ, ಹಿಂದಿನದಕ್ಕೆ ಸಂಖ್ಯೆ ಕೂಡಿಸಿ ಒಂದರ ತರುವಾಯ ಒಂದು ಬರುವ ತತ್ತ್ವಗಳಲ್ಲ. ಹಾಗಲ್ಲ, ಏಕೆಂದರೆ ಶೂನ್ಯದಿಂದ ಏನೂ ಸಂಭವಿಸುವುದಿಲ್ಲ. ಪ್ರಾಣವು ಜಡದಿಂದ ಹೊರಬಂದಿದ್ದರೆ, ಪ್ರಾಣವು ಜಡದಲ್ಲಿ ಗುಪ್ತವಾಗಿದ್ದಿತೆಂದೇ; ಜಡವು ರಹಸ್ಯವಾಗಿ ಪ್ರಾಣಕ್ಕೆ ಆಶ್ರಯವನ್ನು ಕೊಟ್ಟಿತ್ತು, ಪ್ರಾಣಭರಿತವಾಗಿತ್ತು. ಯಾವುದು ನಿವರ್ತಿತವಾಗಿರುವುದೋ ಅದು ಮಾತ್ರ ಪ್ರಕಟವಾಗಬಲ್ಲದು. ಹಾಗೇ, ಮನವು ಪ್ರಾಣದಿಂದ ಹೊರಬಂದಿದ್ದರೆ, ಮನವು ಪ್ರಾಣದಲ್ಲಿ ಅಡಕವಾಗಿತ್ತೆಂದೇ. ಮತ್ತೆ ಪ್ರಾಣಿಕ ಮನವು ವಿಶುದ್ಧ ಬುದ್ಧಿ ಹಾಗು ಚೇತನಗಳಾಗಿ ಅರಳಿತು. ಏಕೆಂದರೆ ಅವೂ ಅದರ ರಹಸ್ಯ ಸ್ವಭಾವದಲ್ಲಿದ್ದವು. ಎಂದೇ ಪ್ರಾಣದ, ಜಡದ, ರಹಸ್ಯ ಸ್ವಭಾವವೂ ಕೂಡ. ಹೀಗೆ ಮೇಲು ಕೀಳು ತತ್ತ್ವಗಳ ಸರಪಣಿಯು ಒಡೆಯಲು ಬಾರದಂತೆ ಹೊಂದಿಸಲಾಗಿದೆ. ವಾಸ್ತವವಾಗಿ ಈ ಎಲ್ಲವನ್ನು ಪ್ರವೇಶಿಸಿ ಒಟ್ಟುಗೂಡಿಸುವ ಸತ್ಯವೆಂದರೆ ಚೇತನವೇ, – ಪ್ರಕಟವಿರಲಿ, ಅಪ್ರಕಟವಿರಲಿ. ಜೀವನದ ಬುಡದಲ್ಲಿ ನೆಲೆಸಿರುವುದೆಂದರೆ, ಅದರ ಮೂಲವಸ್ತುವೆಂದರೆ ಚೇತನ. ಚೇತನವು ಅಚೇತನವಾಗಿ ಪರಿಣಮಿಸಿದ್ದೇ ಜಡ, ಬೇರೆ ಅಲ್ಲ; ಹಾಗು ಸೃಷ್ಟಿಯ ಇಡೀ ಯೋಜನೆ, ಪ್ರಕ್ರಿಯೆ-ಪರಂಪರೆಯೆಲ್ಲಿ ಆ ಚೇತನದ ಅಧಿಕಾಧಿಕ ಪ್ರಕಟನೆ ಆವಿಷ್ಕಾರಗಳೇ ಆಗಿವೆ. ಎರಡನೆಯದಾಗಿ ಮತ್ತೊಂದು ಲಕ್ಷಣವೆಂದರೆ, ಪ್ರತಿಯೊಂದು ಸಂಧಿಯಲ್ಲಿ ಚೇತನವು ಮೇಲೇರುವುದಲ್ಲದೆ ಹಿಮ್ಮೊಗವಾಗುವುದು, ಅಂದರೆ ಸಾಧಿಸಿದ ಮಟ್ಟವು ಅದರ ಹಿಂದಿನ ಮಟ್ಟಗಳತ್ತ ಮರಳಿ ಹೊರಳಿ ಅವುಗಳ ಮೇಲೆ ಪ್ರಭಾವವನ್ನು ಬೀರಿ ಅವುಗಳನ್ನು ಶಕ್ಯವಿದ್ದಷ್ಟು ತನ್ನ ಜೀವನ ಧರ್ಮ-ರೀತಿಗಳಂತೆ ರೂಪಿಸುವುದು. ಜಡದಲ್ಲಿ ಪ್ರಾಣವು ಕಾಣಿಸಿಕೊಂಡಾಗ, ಎಲ್ಲೆಲ್ಲಿ ಜಡಜೀವನವಿತ್ತೋ ಅಲ್ಲಲ್ಲಿ ಪ್ರಾಣದ ಅಧೀನದಲ್ಲಿ ಬಂದ ಜಡವು ನಿರ್ಜೀವ ಜಡಕ್ಕಿಂತ ಬೇರೊಂದು ರೀತಿಯಲ್ಲಿ ವರ್ತಿಸಿತು; ಸಜೀವ ವಸ್ತುವು ನಿರ್ಜೀವ ವಸ್ತುಗಳ ಕಟ್ಟುನಿಟ್ಟಿನ ಯಾಂತ್ರಿಕ ನಿಯಮಗಳನ್ನು ಅನುಸರಿಸುವುದಿಲ್ಲ. ಹಾಗೇ, ಮನದಿಂದ ಕೂಡಿದ ಪ್ರಾಣದ ಕ್ರಿಯೆಯೂ ಬೇರೆ, ಕೇವಲ ಪ್ರಾಣದ ಕ್ರಿಯೆಯು ಬೇರೆ. ಪ್ರಾಣಮನಗಳಿಗೆ ಇಂಬುಗೊಟ್ಟ ಶರೀರವು, ಪ್ರಾಣಮನಗಳಾಗಿಯೇ ಅರಳಿದ ಶರೀರವು ಚಲಿಸುವ ಕೃತಿಗೈಯುವ ರೀತಿಯೇ ಬೇರೆ, ಜಡ ಶರೀರದ ಅಥವಾ ಪ್ರಾಣವನ್ನೊಳಗೊಂಡ ಶರೀರದ ರೀತಿಯೇ ಬೇರೆ. ಮಾನವನ ಬುದ್ಧಿ ತರ್ಕಗಳು ಅವನ ಪ್ರಾಣಪ್ರವೃತ್ತಿಗಳನ್ನೂ ಪ್ರತಿಕ್ರಿಯೆಗಳನ್ನೂ ಅವನ ಶಾರೀರಿಕ ಕ್ರಿಯೆಗಳನ್ನೂ ಪ್ರಕಾರಗಳನ್ನೂ ಸಹ ಪರಿವರ್ತಿಸಿವೆ ಅಥವಾ ಪರಿವರ್ತಿಸಲನುವಾಗಿವೆ. ಬುದ್ಧಿಪೂರ್ವಕ ನಿಯಂತ್ರಣ, ಹಾಗೂ ಪ್ರಾಣ ಶರೀರಗಳ ಪುನರ್ರಚನೆಗಳೇ ಮಾನವ ಚೇತನದ ಅಂತಃಸತ್ತ್ವ, ಅವನ ಸ್ವಭಾವದ ಪ್ರೇರಣೆ; ಕೇವಲ ಪ್ರಾಣದ ಸ್ವಯಂಸ್ಫೂರ್ತ ತಾಟಸ್ಥ್ಯಗತಿಯಾಗಲಿ ಜಡ ಅಸ್ತಿವಾರದ ಯಾಂತ್ರಿಕ ಚಕ್ರಗತಿಯಾಗಲಿ ಅಲ್ಲ. ಜಡ, ಪ್ರಾಣ ಮನಗಳೆಂಬ ಚೇತನದ ಈ ಮೂರು ಮುಖ್ಯ ಸೀಮೆ ಅಥವಾ ಸ್ತರಗಳನ್ನು ಮಾನವನು ತನ್ನೊಳಗೆ ಸಮಾವೇಶ ಮಾಡಿಕೊಂಡು, ತನ್ನ ಚೇತನೆಯ ಬುದ್ಧಿಯ ಬೆಳಕಿನಲ್ಲಿ ಅವುಗಳನ್ನು ಅಭ್ಯಸಿಸಿ, ಸುವಿದಿತ ಭೌತವಿಜ್ಞಾನ (Physics) ಜೀವವಿಜ್ಞಾನ (Biology) ಮನೋವಿಜ್ಞಾನ (Psychology) ಗಳೆಂಬಂತೆ ಅವುಗಳನ್ನು ಅನುಕ್ರಮವಾಗಿ ಏರ್ಪಡಿಸಿ ವರ್ಗೀಕರಿಸಿದ್ದಾನೆ.

ಶ್ರೀ ಅರವಿಂದರು ಹೇಳುವಂತೆ ವಿಕಾಸವು ಮುಂದೆ ಮುಂದೆ ಸಾಗುತ್ತದೆ, ಮನದ ಮೇಲೇರುತ್ತದೆ, ಅವರು ಅತಿಮಾನಸವೆಂದು ಕರೆಯುವ ಮತ್ತೊಂದು ಚೇತನಾವಸ್ಥೆಯನ್ನು ಮುಟ್ಟುತ್ತದೆ ಹೀಗೆ ಪಾರ್ಥಿವ ಯೋಜನೆಯಲ್ಲಿ ಒಂದು ಹೊಸ ಬಗೆಯು, ಮಾದರಿಯು ಪ್ರಕಟಗೊಳ್ಳುವುದು; ಚೇತನದ ಒಂದು ವಿಶೇಷ ಕ್ರಿಯಾಶೀಲತೆಯು ತೋರಿಬರುವುದು ಹಾಗೂ ಈ ನವಚೇತನವನ್ನೇ ಸಾರ್ವಭೌಮ ತತ್ತ್ವವಾಗಿ ಉಳ್ಳ ಒಂದು ಹೊಸ ಜನಾಂಗ ಅಥವಾ ಜಾತಿಯು ಪೃಥ್ವಿಯಲ್ಲಿ ತಲೆದೋರುವುದು. ಶಿಲೆ ಖನಿಜಗಳಿಂದ ಸಸಿಯು ಉದ್ಭವಿಸಿತು, ಸಸಿಯಿಂದ ಪಶು ಉದ್ಭವಿಸಿತು. ಪಶುವಿನಿಂದ ಮಾನವನು ಉದ್ಭವಿಸಿರುವನು. ಹಾಗೂ ಮಾನವನಿಂದ ಅತಿಮಾನವನು ಅನಿವಾರ್ಯವಾಗಿ ಉದ್ಭವಿಸುವನು.

ಮಾನಸಿಕ ಭೂಮಿಕೆಯ ಮೇಲೆ ನೆಲೆಗೊಂಡು, ತರ್ಕ ಹಾಗು ಮಾನಸಿಕ ಬುದ್ಧಿಗಳ ಪ್ರಮಾಣಗಳಲ್ಲಿ ಕಟ್ಟುಬಿದ್ದು, ನಾವು ಭಾವೀ ಚೇತನೆಯ ಬಗೆಯನ್ನು ಊಹಿಸಿ ತಿಳಿಯುವುದು ಸುಲಭವಲ್ಲ— ತನ್ನ ತರುವಾಯ ಬಂದ ಮಾನವನ ಆಗಮನವನ್ನು ಮನಸ್ಸಿನಲ್ಲಿ ರೂಪಿಸಿಕೊಳ್ಳುವುದು ಮಂಗನಿಗೆ ಕಠಿಣವಾದ ಹಾಗೆ. ಆದರೆ ಮಾನಸಿಕ ಚೇತನದ ಇಂದಿನ ಸ್ಥಿತಿಯಲ್ಲಿಯೂ ಸಹ ಮೇಲಿನ ಸ್ತರದ ಹಲವು ವಿಶೇಷ ಚಿನ್ಹೆಗಳು, ಆರಂಭಾವಸ್ಥೆಯ ಅಥವಾ ಹೋಳು ಹೋಳಾದ ಚಲನೆಗಳು ಗೋಚರಿಸುವವು. ಮಂಗನಿಗೆ ವಿಚಾರ ಹಾಗು ತರ್ಕಗಳ ನಸುನೋಟವಿಲ್ಲದಿರಲಿಲ್ಲ. ಮಾನವನ ಏಕಮಾತ್ರ ಸ್ವತ್ತೆಂದು ತೋರುವ, ಶಾಸ್ತ್ರೀಯ ರೀತಿಯಲ್ಲಿ ತರ್ಕಿಸುವ ಸಹಜ ಶಕ್ತಿಯಾದರೂ ಮಂಗನಲ್ಲಿರದಿರಲಿಲ್ಲ. ಉದಾಹರಣೆಗಾಗಿ, ನಾವು ಅಂತರ್ ಜ್ಞಾನ (Intuition) ಎಂದು ಕರೆಯುವ ಒಂದು ಚಲನವಿದೆ. ಅದು ತರ್ಕದಿಂದ ತೀರ ವ್ಯತ್ಯಸ್ತವಾಗಿದೆ. ವೈಜ್ಞಾನಿಕರೂ ಗಣಿತಶಾಸ್ತ್ರಜ್ಞರೂ ತಾವು ಹೊಸದಾಗಿ ಕಂಡು ಹಿಡಿದ ನಿರ್ಮಿಸಿದ ವಸ್ತುವಿಷಯಗಳು ಈ ಅಂತರ್‌ಜ್ಞಾನದ ಪ್ರಸಾದವೆಂದು ಕೃತಜ್ಞತೆಯಿಂದ ಒಪ್ಪಿಕೊಂಡಿದ್ದಾರೆ.

ಸಾಮಾನ್ಯ ಮಾನವೀ ಚೇತನಕ್ಕೆ ಲಭ್ಯವಾಗದ ಸೌಂದರ್ಯ-ಸತ್ಯ ಲೋಕವನ್ನು ಕವಿಕಲಾವಿದರಿಗೆ ತೋರಿಸಿ ಕೊಡುವ ಮತ್ತೊಂದು ಅಂಥ ಚಲನವಿರುವುದು.—ಅದೇ ಸ್ಫೂರ್ತಿ ಅಥವಾ ಪ್ರೇರಣೆ (Inspiration). ವಿಕಾಸದ ಏಣಿಯ ಮೇಲ್ಮೆಟ್ಟಲಲ್ಲಿ ನಿಂತ ವ್ಯಕ್ತಿಗಳ,—ಅನುಭಾವಿಗಳು, ಜ್ಞಾನಿಗಳು— ಪ್ರಕಾಶಮಯವಾದ ಪ್ರತ್ಯಕ್ಷಾನುಭವದ ಮುಖಾಂತರ ಸತ್ಯವನ್ನು ಕಾಣುವರು, ನೇರವಾಗಿ ಪಡೆಯುವರು. ಇದೇ ಶ್ರುತಿ (Revelation) ಎಂದು ಕರೆಯಲ್ಪಡುತ್ತದೆ. ಸಾಮಾನ್ಯ ಮಾನವರ ಸೀಮೆಯಲ್ಲಿ ಮೇಲಿಂದ ಮೇಲೆ ನಡೆಯುವ ಚೇತನದ ಈ ಸ್ವಾಭಾವಿಕ ಕ್ರಿಯೆಗಳು ಚೇತನದ ಒಂದು ಉನ್ನತತರ ರೀತಿಯ ಅಭಿವ್ಯಕ್ತಿಗಳೇ ಸರಿ; ಮಾನವೀ ಚೇತನದ ವೈಶಿಷ್ಟ್ಯವನ್ನು ನಿರ್ದೇಶಿಸುವ ತಾರ್ಕಿಕ ಬುದ್ಧಿಯ ಇಲ್ಲವೆ ವಿಚಾರದ ಫಲವಲ್ಲ, ಲೀಲೆಯಲ್ಲ.

ಆದರೆ ಇದೀಗ ಈ ಕ್ರಿಯೆಗಳು ಬೇರೊಂದೆಡೆಯಿಂದ ಹೊಳೆದ ಮಿಂಚುನೋಟಗಳಾಗಿರುವವು ಹಾಗು ಮಾನವನಿಗೆ ಅವುಗಳ ಮೇಲೆ ಅಧಿಕಾರವಾಗಲಿ ನಿಯಂತ್ರಣ ಸಾಮರ್ಥ್ಯವಾಗಲಿ ಇಲ್ಲ. ಅವು ರೂಢಿಯ ಸಚೇತನ ಇಚ್ಛೆಗೆ ಅತೀತವಾಗಿವೆ. ಮನಬಂದಂತೆ ಅವು ಬಂದುಹೋಗುವುವು,—ಮತ್ತೊಂದು ಲೋಕದ ಸಂತುಷ್ಟ ಅತಿಥಿಗಳಂತೆ. ಅವು ನಮ್ಮ ಪ್ರಶ್ನೆಯನ್ನು ಲಕ್ಷಿಸುವುದಿಲ್ಲ, ನಮ್ಮ ಆಜ್ಞಾನುವರ್ತಿಗಳಲ್ಲ. ಅದಕ್ಕೆ ಪ್ರತಿಯಾಗಿ, ಇವುಗಳೆಲ್ಲಾ ಯಾವ ಚೇತನದ ಪ್ರಥಮ ಸೂಚನೆಗಳೋ, ದೂರದ ಪ್ರತಿಧ್ವನಿಗಳೋ ಅಂಥ ಚೇತನವನ್ನು ಅತಿಮಾನಸವು ಸಂಪೂರ್ಣವಾಗಿ ಪಡೆದಿರುವುದು. ಮಾನವನು ತನ್ನ ಮನದ ಮೇಲೇರಿ ಅತಿಮಾನಸ ಚೇತನದಲ್ಲಿ ಪ್ರವೇಶಿಸಿದಾಗ ಅತಿಮಾನವನ ಸೃಷ್ಟಿಯಾಗುವುದು.

ಒಂದು ಸಂಗತಿಯನ್ನು ನಾವು ಇಲ್ಲಿ ಕಾಣಿಸಬೇಕು; ಅದೇನೆಂದರೆ, ಮಾನವನು ತನ್ನನ್ನು ತಾನು ಪ್ರಜ್ಞಾಪೂರ್ವಕವಾಗಿ ಮೀರುವನೆಂದೂ ಅತಿಮಾನವತ್ವವನ್ನು ಹೊರಗೆಡುಹುವನೆಂದೂ ನಿರೀಕ್ಷಿಸಲಾಗಿದೆ; ಇದು ಸಚೇತನ ಪ್ರಕ್ರಿಯೆಯಾಗಿರಬೇಕು, ಜಾಗರೂಕ ಇಚ್ಛೆಯ ಪರಿಶ್ರಮವಾಗಿರಬೇಕು. ಈ ಹೊಸ ಸಂಕ್ರಮಣವು ತನ್ನೊಡನೆ ತಂದ ಮಹತ್ತರ ಅಂತರವೇ ಇದು. ಇಲ್ಲಿಯ ವರೆಗೆ ವಿಕಾಸವು ಸ್ವತಃಸ್ಫೂರ್ತ ಹಾಗೂ ನೋಡಲು ಅಚೇತನ ಪ್ರಕ್ರಿಯೆಯಾಗಿತ್ತು. ಪ್ರಕೃತಿಯಲ್ಲಿ ವಸ್ತುಗಳು ಸಾಮಾನ್ಯವಾಗಿ ನಡೆಯುವಂತೆ ವಿಕಾಸವದರೂ ಮಂದವಾಗಿ ಅಜಾಗರೂಕವಾಗಿ ನಡೆಯುತ್ತಿತ್ತು. ಮಾನವನು ಪಶುವಿನಿಂದ ಉದ್ಭವಿಸಿದನು; ಒಂದು ದಿನ ಅವನು ತನ್ನನ್ನು ಮಾನವನನ್ನಾಗಿ ಸಹಜವಾಗಿ ಕಂಡನು,—ಯಾವ ಪ್ರಜ್ಞಾಪೂರ್ವಕ ಪ್ರಯತ್ನವಿಲ್ಲದೆಯೇ, ಪರಿವರ್ತನೆಗೆ ಒಳಗಾಗುತ್ತಿರುವ ಪಶುವಿಗೆ ಆ ಪರಿವರ್ತನೆಯ ಪೂರ್ವಜ್ಞಾನವಿಲ್ಲದೆಯೇ.

ಹೀಗೆ ಪಶುವು ಸಹ ವನಸ್ಪತಿಮೂಲದಿಂದ ತನ್ನ ತಾನರಿಯದೆ ಸಹಜವಾಗಿ ಹೊರಬಂದಿತು; ನಿಶ್ಚೇಷ್ಟ ನಿರ್ಜೀವ ಜಡದಿಂದ ವನಸ್ಪತಿಯಾದರೂ ಹುಟ್ಟಿಬಂದಿತು. ಆದರೆ ಇದೀಗ ಮಾನವತ್ವದ ದೆಸೆಯಲ್ಲಿ ಚೇತನವು ಸಂಪೂರ್ಣವಾಗಿ ಜಾಗೃತವಾಗಿದೆ, ತನ್ನ ಪ್ರತೀತಿಯುಳ್ಳದ್ದಾಗಿದೆ. ಆದುದರಿಂದ ಅದರ ಇನ್ನು ಮುಂದಿನ ಉತ್ಕರ್ಷವು ಅನಿವಾರ್ಯವಾಗಿ ಸಚೇತನವಾಗಿಯೇ ಆಗಬೇಕು. ಇನ್ನೂ ಅಧಿಕವಾಗಿ ಸಚೇತನವಾಗಬೇಕು. ಬುದ್ಧಿಪೂರ್ವಕ ಮಾಡಿದ ಪರಿಶ್ರಮದ ಫಲವಾಗಬೇಕು. ಇದು ಸ್ವಪರಿವರ್ತನೆಯ ಪ್ರಕ್ರಿಯೆ. ಅದಕ್ಕೆ ಒಂದು ಪದ್ಧತಿಯಿದೆ, ಒಂದು ವಿಧಾನವಿದೆ ತನ್ನದೇ ಆದ ಪೂರ್ಣ ವ್ಯವಸ್ಥೆಯಿದೆ. ಚೇತನದ ಬೆಳವಣಿಗೆಯೇ, ಅದರ ಸಾಧನ-ಸಂಸ್ಕಾರ-ಪರಿವರ್ತನೆಯೇ ಎಲ್ಲ ಸಾರ್ಥಕವಾದ ವಿದ್ಯೆಯ ಮೂಲೋದ್ದೇಶ; ಯೋಗದಿಂದ ಲಕ್ಷಿತವಾದ ಅನುಭಾವಿಯ ಆಂತರಿಕ ಸಂಯಮ ಪದ್ಧತಿಯೇ ಅದರ ಪರಾಕಾಷ್ಠೆ, ಅದರ ಪರಮ ಪರಿಣತಿ.

ಹಾಗಾದರೆ ಚೇತನದ ಅತಿಮಾನಸೀಕರಣವೇ ಪ್ರಕೃತಿಯ ಲಕ್ಷ್ಯದಲ್ಲಿರುವ ಗುರಿ. ಮಾನವನು ಪ್ರಯತ್ನಿಸುತ್ತಿರುವುದೂ ಅದೇ ನಿಮಿತ್ತವಾಗಿ ವಿಕಾಸದ ಮುನ್ನಡೆಯಲ್ಲಿ ಪೃಥ್ವಿ ಹಾಗು ಮಾನವನು ಮುಂದೆ ಇಡುವ ಹೆಜ್ಜೆಯೇ ಇದಾಗಿದೆ. ಮಾನವನು ಒಂದು ಅತಿ ನಿರ್ಣಾಯಕ ಅವಸ್ಥೆಯನ್ನು ಪ್ರತಿನಿಧಿಸುತ್ತಾನೆ. ಎರಡು ಗೋಲಾರ್ಧಗಳನ್ನು ಪ್ರತ್ಯೇಕಿಸುವ ರೇಖೆಯೇ ಅವನು. ಅವು ಚೇತನದ ಎರಡು ಬಗೆಗಳು, ಎರಡು ನಮೂನೆಯ ಸೃಷ್ಟಿ. ನಾನು ಈಗಾಗಲೆ ನಿವೇದಿಸಿರುವಂತೆ, ಮಾನವನವರೆಗೆ ವಿಕಾಸವು ಸ್ವಾಭಾವಿಕ, ಸ್ವಯಂಸ್ಫೂರ್ತ, ವಿಚಾರರಹಿತ, ಹಾಗು ಅಚೇತನವಾಗಿರುವುದು. ಮಾನವನನ್ನು ಮೊದಲುಮಾಡಿ ಅದು ಸಚೇತನವಾಗಿರುವದು, ಉದ್ದೇಶವನ್ನು ಒಳಗೊಂಡಿರುವದು, ಇಚ್ಛಾಪ್ರೇರಿತವಾಗಿರುವದು. ತೆರೆಯ ಮರೆಯಲ್ಲಿ ಅಜ್ಞಾನದಿಂದ ಇಲ್ಲಿಯವರೆಗೆ ನಡೆಯುತ್ತಿದ್ದುದು ಇನ್ನು ಮುಂದೆ ಪ್ರಕಟವಾಗಿ ಪೂರ್ಣ ಜ್ಞಾನದಿಂದ ನಡೆಯುವುದು. ಇದರ ತೀರ ಮೊದಲನೆಯ ಪರಿಣಾಮವೆಂದರೆ ಕಾಲಾವಧಿಯನ್ನು ಹ್ರಸ್ವಗೊಳಿಸುವದು. ಸಚೇತನ ಪ್ರಕ್ರಿಯೆಯು ವೇಗವನ್ನು ಹೆಚ್ಚಿಸುವುದು, ಸಾಧಾರಣವಾಗಿ ಶತಕಗಳೋ ಅಥವಾ ಅದಕ್ಕೂ ಹೆಚ್ಚು ಕಾಲಮಾನವೋ ಹಿಡಿಯಬಹುದಾದ ಪ್ರಕ್ರಿಯೆ ಅಥವಾ ಬೆಳವಣಿಗೆಯನ್ನು ದಶಕಗಳಲ್ಲಿ ಅಥವಾ ವರ್ಷಗಳಲ್ಲಿ ಸಾಧ್ಯವಾಗುವಂತೆ ಸಾಮೀಪ್ಯವನ್ನು ಒದಗಿಸಿಕೊಡುವುದು; ಸಾಧಾರಣವಾಗಿ ಅನೇಕ ಜನ್ಮಗಳ ಅವಧಿಯಲ್ಲಿ ಸಾಧಿಸಬಹುದಾದ ವಿಕಾಸವನ್ನು ಮಾನವನಲ್ಲಿ ಒಂದೇ ಜನ್ಮದ ಅವಧಿಯಲ್ಲಿ ಪ್ರಾಪ್ತಮಾಡಿಕೊಡುತ್ತದೆ. ಇನ್ನೊಂದು ವಿಶಿಷ್ಟವಾದ ಪರಿಣಾಮವೆಂದರೆ ಅತಿಮಾನಸವು ಸ್ಥಾಪಿತವಾದಾಗ ಅಜ್ಞಾನವು ಉಳಿಯುವುದಿಲ್ಲ; ಜ್ಯೋತಿ–ಜ್ಞಾನಗಳು ಎಲ್ಲೆಡೆಯೂ ಪಸರಿಸುವುವು. ಮನೋರಾಜ್ಯದ ಪರ್ಯಂತವೂ, – ಅವರ ಅತ್ಯುನ್ನತ ಶ್ರೇಣಿಗಳಲ್ಲಿ ಸಹ-ನಮಗೆ ಕಂಡುಬರುವುದು ಬೆಳಕು ಕತ್ತಲೆಗಳ ಮಿಶ್ರಣ, ಜ್ಞಾನ ಅಜ್ಞಾನಗಳ ಮಿಶ್ರಣ; ಸಂಶಯ, ಅನಿಶ್ಚಿತತೆ, ಅಪೂರ್ಣ ಗ್ರಹಿಕೆಗಳನ್ನೊಳಗೊಂಡ ಭಾಗವು ಸದಾ ಉಳಿಯುವುದು; ತಡಕಾಟ, ಪ್ರಯೋಗಮಾಡಿ ನೋಡುವುದೂ ಉಳಿಯುವುದು. ಬಹಳವೆಂದರೆ, ಮಹಾಂಧಕಾರದಿಂದ ಸ್ವಲ್ಪ ಕಡಿಮೆ ಕತ್ತಲಿನತ್ತ ವ್ಯಕ್ತಿಯು ಸಾಗುವನು. ಅತಿಮಾನಸದ ಪ್ರಭಾವದಿಂದ ಅದೆಲ್ಲ ಒದಲಾಗುವುದು; ಅತಿಮಾನವನು ಸದಾ ತುಂಬು ಹಗಲಲ್ಲಿ, ಅತ್ಯುನ್ನತ ಚೇತನದಲ್ಲಿ, ಪರಿಪೂರ್ಣ ಜ್ಞಾನದಲ್ಲಿ ವಿಹರಿಸುವನು. ಇಂದಿನ ಮಾನವ-ಚೇತನದಲ್ಲಿ ಅಂತರ್ಗತವಾಗಿರುವ ದ್ವಂದ್ವ-ಭೇದಗಳಿಂದ ಪರಿಮಿತಿಗೊಳ್ಳದೆ ಅವನು ಬೆಳಕಿನಿಂದ ಬೆಳಕಿನತ್ತ, ವಿದ್ಯೆಯಿಂದ ವಿದ್ಯೆಯತ್ತ ಧಾವಿಸುವನು. ಮಾನವನು ಅತಿಮಾನಸ ಶಿಖರವನ್ನು ಒಮ್ಮೆಲೆ ಮುಟ್ಟದೆ ಇರಬಹುದು; ಏಕೆಂದರೆ ಅಲ್ಲಿ ನಿಮ್ನ ಶ್ರೇಣಿಗಳಿವೆ. ಪರಂಜ್ಯೋತಿಯು ತನ್ನ ಇಚ್ಛೆಯಂತೆ ಕಲ್ಪಿಸಿಕೊಂಡ ಮಿತಿಗಳಿವೆ. ಪೂರ್ಣಜೀವಿಯ ಅಷ್ಟು ಕೇವಲವಲ್ಲದ ರೂಪರಚನೆಗಳಿವೆ. ತನ್ನ ಸ್ವಭಾವದ ಸಿರಿಯನ್ನು ಹೆಚ್ಚಿಸಲು ಹಾಗು ಪೃಥ್ವಿಯ ಮೇಲೆ ಜ್ಯೋತಿರ್ಮಯ

ಜೀವನದ ಇತರ ವರ್ಗಗಳನ್ನು ಸ್ಥಾಪಿಸಲು ಮಾನವನು ಇವುಗಳ ಮೂಲಕ ಹಾದುಹೋಗಬೇಕು. ಈ ಸಂಬಂಧದಲ್ಲಿ ಶ್ರೀ ಅರವಿಂದರು ಅಧಿಮಾನಸ (Over mind) ಹಾಗು ಜ್ಯೋತಿರ್ಮನ (Mind of Light) ಗಳನ್ನು ಕುರಿತು ಪ್ರಸ್ತಾಪಿಸಿರುವರು. ಆದರೆ ಇವೂ ಸಹ ಮಾನಸಿಕ ನಸುಬೆಳಕಿನ ಸೆರಗಿನಾಚೆ ಇರುವವು. ಇವು ಜ್ಯೋತಿಯ ವಲಯಗಳು, ಅತಿಮಾನಸದ ಸ್ವಂತ ಪ್ರತಿನಿಧಿಗಳು.

ಈ ಸೆರಗಿನಾಚೆಯ ಅತಿಮಾನಸ ಚೇತನದ ಮುಖ್ಯ ಲಕ್ಷಣಗಳನ್ನು ಇಲ್ಲಿ ಸೂಚಿಸುವುದು ಅಪ್ರಸ್ತುತವಾಗಲಾರದು. ಮೊದಲನೆಯದಾಗಿ ಅದು ಪೂರ್ಣ ಜ್ಞಾನದ ನೆಲೆ ಹಾಗು ಜ್ಞಾನಸಾಧನವೇ ಆಗಿದೆ. ಈ ಜ್ಞಾನವು ಅನುಮಾನ ತರ್ಕಗಳ ಪರಿಣಾಮವಲ್ಲ; ಅದು ಅನುಕೂಲ ಪ್ರತಿಕೂಲ ವಾದಗಳ ತುಲನೆ ಮಾಡಿ, ಅನಿಶ್ಚಿತ ಸಾಧ್ಯತೆಗಳಿಂದ ಸರಾಸರಿ ಸಂಭವಿಸಬಹುದಾದುದನ್ನು ಗೊತ್ತುಪಡಿಸುವುದಲ್ಲ; ಅದು ನೇರವಾದುದು, ಪ್ರತ್ಯಕ್ಷವಾದುದು, ನಿಶ್ಚಿತವಾದುದು, ಕೇವಲವಾದುದು ಜ್ಞಾನವು ಇಲ್ಲಿ ತಾದಾತ್ಮ್ಯದಿಂದ ಲಭಿಸುವುದು. ಜ್ಞಾತೃ-ಜ್ಞೇಯಗಳು ಇಲ್ಲಿ ಒಂದೇ. ಆದ್ದರಿಂದ ಜ್ಞಾತವಾದದ್ದು ಆತ್ಮಜ್ಞಾನವೇ ಆಗಿರುವುದು. ಎರಡನೆಯದಾಗಿ ಇಚ್ಛೆಯೂ ಸಹ ಪ್ರಯತ್ನವಾಗಲಿ, ಹೆಣಗಾಟ ಹೋರಾಟವಾಗಲಿ ಅಲ್ಲ ಚೇತನದ ಸ್ವಶಕ್ತಿಯ ಸ್ವಯಂಸ್ಫೂರ್ತ ಅಭಿವ್ಯಕ್ತಿ. ಇಚ್ಛಿಸುವುದೆಂದರೆ ಕಾರ್ಯತಃ ಸಾಧಿಸುವುದೇ; ಅನಿವಾರ್ಯ ಸತ್ಯವನ್ನೇ ವ್ಯಕ್ತಿಯು ಇಚ್ಛಿಸುವನು. ಏಕೆಂದರೆ ಜ್ಞಾನ-ಇಚ್ಛೆಗಳೂ ಸಹ ಏಕವೇ. ಮೂರನೆಯದಾಗಿ, ಅದು ಪೂರ್ಣ ಆನಂದದ ಒಂದು ಸ್ಥಿತಿ ಏಕೆಂದರೆ ವ್ಯಕ್ತಿಯು ದುಃಖಾಶ್ರುಗಳ ಕಣಿವೆಯನ್ನು ದಾಟಿ ಅನಿರ್ವಚನೀಯ ಶಾಂತಿಯನ್ನು ಪಡೆದಿರುವನು. ಆನಂದವೇ ಸೃಷ್ಟಿಯ ಮೂಲವೆಂದೂ, ಜೀವನದ ಸತ್ಯವು ಆನಂದದ ಪರವಶತೆಯಲ್ಲಿ ಭದ್ರವಾಗಿ ಹಿಡಿಯಲ್ಪಟ್ಟಿದೆಯೆಂದೂ ಅವನು ಮನಗಂಡಿರುವನು.

ಬೇರೆ ಮಾತಿನಲ್ಲಿ ಇದು ನಾರವತ್ ವೇದಾಂತ ಸಿದ್ಧವಾದ ಸತ್-ಚಿತ್-ಆನಂದ ಸ್ಥಿತಿಯೇ ಆದರೆ ಇದು ವ್ಯಕ್ತಿಯಲ್ಲಿ ಕೇಂದ್ರೀಕೃತವಾಗಿ ಜಗಜ್ಜೀವನದ ಅಸ್ತಿತ್ವಗಳ ಆಧಾರ ಸತ್ಯವಾಗಿ ಉಪಯುಕ್ತ ವಾಗಿದೆ. ಆ ಜೀವನ ತನ್ನ ಧರ್ಮದಂತೆ, ಪರಮ ಶಾಸನದಂತೆ ಅಸ್ತಿತ್ವಗಳ ಪ್ರಾಕೃತಿಕ ರೂಪ ರೀತಿಗಳಲ್ಲಿ ಹಾಗು ಅವುಗಳ ಮುಖಾಂತರ ಪ್ರಕಟವಾಗಲೂ ವ್ಯವಹರಿಸಲೂ ಹವಣಿಸುವುದು ಇದೇ. ಇವರಾಚೆಗೆ ಈ ರಹಸ್ಯದ ಇನ್ನು ಮುಂದಿನ ತತ್ವಗಳ ವಿವೇಚನೆಯನ್ನು ಇಲ್ಲಿ ಮಾಡುವುದು ಸಾಧ್ಯವಿಲ್ಲ

ಕೊನೆಯದಾಗಿ ಒಂದು ವಿವರವನ್ನು ಕೊಟ್ಟು ನಾವು ಮುಗಿಸುವೆವು. ಬರುತ್ತಿರುವುದೆಂದು ಅಥವಾ ನಿಶ್ಚಿತವಾಗಿ ಬರಲಿರುವುದೆಂದು ಶ್ರೀ ಅರವಿಂದರು ಕಾಣುವ ಈ ಉಚ್ಚಾಶ್ರಯ ದೆಸೆಗೆ, ಭೂತಕಾಲದಲ್ಲಿ ಯಾವದೇ ಕ್ಷೇತ್ರದಲ್ಲಿ, ವಲಯದಲ್ಲಿ ಉಚ್ಚ ಜೀವನವನ್ನು ಉದ್ದೇಶಿಸಿ ನಡೆದಿರುವ ಮಾನವಪ್ರಯತ್ನಗಳೆಲ್ಲಾ ಪೋಷಕವಾಗಿರುವುವು. ಮೇಲಿಂದಮೇಲೆ ಹೀಗೆ ಹೇಳಿದುದುಂಟು,—ಮಾನವೀ ಸ್ವಭಾವಕ್ಕೆ ಉಪಾಯವಿಲ್ಲ. ಮಾನವನ ಸಹಜಪ್ರವೃತ್ತ ಜೀವನವನ್ನು – ವಿಶೇಷವಾಗಿ ಸಂಘಜೀವಿಯ ದೃಷ್ಟಿಯಿಂದ – ಸ್ವಲ್ಪ ಸುಧಾರಿಸ ಬಹುದಾದರೂ ಅವನ ಪಾರ್ಥಿವ ಸ್ವಭಾವವನ್ನು ಕಳಂಕಕ್ಕೆ ಒಳಪಡಿಸಿದ ಅಜ್ಞಾನ ಅಚೇತನಗಳ ಮೂಲ ದೋಷವನ್ನು ಶಾಶ್ವತವಾಗಿಯಾಗಲಿ ಆಮೂಲಾಗ್ರವಾಗಿಯಾಗಲಿ ಗುಣಪಡಿಸಲಾಗುವುದಿಲ್ಲ. ಸುಧಾರಕರು, ಆದರ್ಶವಾದಿಗಳು, ಸಂತರು, ಜ್ಞಾನಿಗಳು, ಈ ಕೆಡುಕನ್ನು ಕಂಡು ಎದುರಿಸಲು ಪ್ರಯತ್ನಿಸಿರುವರು— ಕೆಲವರು ಅದನ್ನು ನಿರ್ಮೂಲಮಾಡಲು, ಉಳಿದವರು ಉಪಾಯದಿಂದ ತಪ್ಪಿಸಿಕೊಳ್ಳಲು; ಆದರೂ ಅದು ಅಲ್ಲಿಯೇ ಉಳಿದಿದೆ, ಎಂದಿನಂತೆ ಉಗ್ರವಾಗಿ, ಯಾವ ಪರಿಣಾಮವೂ ಆಗಿರದಂತೆ. ಒಂದು ಮಾತೆಂದರೆ, ಅಶುಭವನ್ನು ಅದರ ವಿರುದ್ಧವಾದ ಶುಭದಿಂದ ಗೆಲ್ಲಲು ಪ್ರಯತ್ನಿಸಿದೆ. ಆದರೆ ಅದು ಎಂಥ ಶುಭವೆಂದರೆ, ಅಶುಭವು ಯಾವ ಚೇತನದ ಮಟ್ಟಕ್ಕೆ ಸೇರಿದೆಯೋ ಅದೇ ಮಟ್ಟಕ್ಕೆ ಸೇರಿದ ಶುಭವು. ಬೇರೆ ರೀತಿಯಲ್ಲಿ

ಹೇಳುವುದಾದರೆ, ನಾವು ಜಗತ್ತನ್ನು ಮನಃಶಕ್ತಿಯಿಂದ ವ್ಯವಸ್ಥೆಗೊಳಿಸಲು ಪ್ರಯತ್ನಿಸಿದ್ದೇವೆ. ಆ ಮನವು ಉಚ್ಚಮನವಾಗಿರಬಹುದು. ಅಥವಾ ಅತ್ಯುನ್ನತ ಆಧ್ಯಾತ್ಮಿಕ ಮನವೇ ಆಗಿರಬಹುದು. ನಮ್ಮ ಅತಿ ಒಳಗಿನ ತಂತುಗಳ ವರೆಗೆ ಹಬ್ಬಿರುವ, ನಮ್ಮ ಅನ್ನಮಯ ಕೋಶವನ್ನೇ ಜಡ ಅಚೇತನವನ್ನೇ ಆವರಿಸಿರುವ, ರೋಗದ ಮೂಲ ಪರಿಹಾರವಾಗಬೇಕಾದರೆ, ನಾವು ಚೇತನದ ಉಗಮವನ್ನೇ ಮೊರೆಹೋಗಬೇಕು. ಪ್ರತಿಭಾನ್ವಿತ ಋತಚಿತ್ತವನ್ನೇ (Truth-Consicousness) ಮೇಲೇರಿ ಪಡೆಯಬೇಕು. ಅತಿಮಾನಸವೊಂದೇ ಪೃಥ್ವಿಯನ್ನು ಪರಿವರ್ತಿಸಬಲ್ಲದು, ಪಾರ್ಥಿವ ಜೀವನವನ್ನು ರೂಪಾಂತರಿಸಬಲ್ಲದು. ಎರಡನೆಯದಾಗಿ, ಹಿಂದಿನ ಪ್ರಯತ್ನಗಳೆಲ್ಲಾ ವ್ಯರ್ಥವಾಗಿಲ್ಲ. ಬೇರೆ ಬೇರೆ ಮಟ್ಟಗಳಲ್ಲಿ ಮಾನವ ಜೀವನದ ಹಾಗು ಚೇತನದ ಬೇರೆ ಬೇರೆ ವಲಯಗಳಗಲ್ಲಿ ಬೆಳಕು ಸೋಕಿಕೊಂಡು ವ್ಯಾಪಿಸಿವಲ್ಲೆಲ್ಲ ಎಷ್ಟೆ ಪ್ರಮಾಣದಲ್ಲಿಯಾಗಲಿ ಅವು ಪೂರ್ವಸಿದ್ಧತೆ-ಪ್ರಥಮ ಆಧಾರಗಳಾಗಿ ಪರಿಣಮಿಸಿವೆ. ಇದ್ದ ವಸ್ತುಗಳಲ್ಲಿ ಶಕ್ತಿಗಳಲ್ಲಿ, ಕ್ಷೋಭೆ ಅದಲುಬದಲುಗಳಾದವು,–ಇತರ ಶಕ್ತಿಗಳಿಗೆ ಪ್ರೇರಣೆಗಳಿಗೆ ಅವಕಾಶಮಾಡಿಕೊಡಲು. ಏನಿಲ್ಲವೆಂದರೂ ಕನಿಷ್ಠ ಪಕ್ಷದಲ್ಲಿ ಅದರ ಸಾಧ್ಯತೆಯು ಸ್ಥಾಪಿತವಾಯಿತು.

ನಾವು ತಿಳಿಸಿದಂತೆ ಎಷ್ಟೇ ಉಜ್ವಲವಾದರೂ, ಜಯಪ್ರದವಾದರೂ ವೈಯಕ್ತಿಕ ಸಾಫಲ್ಯತೆ ಶ್ರೀ ಅರವಿಂದರ ಗುರಿಯಲ್ಲ. ಹಾಗು ವ್ಯಕ್ತಿಯ ಒಂದೇ ಒಂದು ಅಂಗದ ಎಷ್ಟೇ ಅಗಾಧವಾದ ಉನ್ನತವಾದ ಪೂರ್ಣತೆಯಾಗಲಿ ಅವರ ಉದ್ದೇಶವಲ್ಲ. ಶ್ರೀ ಅರವಿಂದರು ಇಡೀ ಮಾನವನನ್ನು, ಇಡೀ ಸಮಾಜವನ್ನು ತಮ್ಮ ಪ್ರೇಮಾಲಿಂಗನದಲ್ಲಿ ಸೇರಿಸಿಕೊಂಡರು. ಪೃಥ್ವಿಯಲ್ಲಿ ಸಮಾಜದೊಳಗೆ ಸಾರ್ಥಕಗೊಂಡ ಜೀವನ,– ಸಾಧ್ಯವಿದ್ದಷ್ಟು ಅತ್ಯುನ್ನತ ಹಾಗು ಪರಿಪೂರ್ಣವಾದ ಜೀವನ ಕೇವಲ ಸಾಧ್ಯಮಾತ್ರವಲ್ಲ, ಆದರೆ ಮಾನವನಿಗೆ ಅನಿವಾರ್ಯವಾಗಿ ಲಭಿಸತಕ್ಕದ್ದು – ಈ ಕೆಲಸಕ್ಕಾಗಿಯೇ ಅವರು ತಪಸ್ಗೈದರು. ಮಾನವನ ಮನ-ಬುದ್ಧಿ, ಅವನ ಪ್ರಾಣ-ಶಕ್ತಿ, ಅವನ ಶರೀರ-ಯಂತ್ರಗಳನ್ನೆಲ್ಲಾ ವಹಿಸಿಕೊಂಡು ನಿಮ್ನ ರಚನೆಯ ಕಳಂಕವನ್ನು ಶುದ್ಧಗೊಳಿಸಿ, ಅತಿಮಾನಸ ಸತ್ಯ-ಪ್ರಜ್ಞೆಯ ಪಡಿಯಚ್ಚಿನ ರೀತಿಯಲ್ಲಿ ಅವುಗಳನ್ನು ಪುನರ್ನಿರ್ಮಿಸಲಾಯಿತು.

ಕೇವಲ ಸತ್ಯ, ಜ್ಞಾನ, ಶಕ್ತಿ ಆನಂದಗಳಿಂದ ತುಂಬಿದ ಪರತತ್ತ್ವವನ್ನು ತನ್ನ ಎಲ್ಲ ಅಂಗಾಂಗಗಳಲ್ಲಿಯೂ ಚಲನೆಗಳಲ್ಲಿಯೂ ವ್ಯಕ್ತಮಾಡುವ ಹಾಗು ರೂಪುಗೊಡುವ ಪೂರ್ಣ ಸಮಗ್ರ ಉತ್ತಮ ಜೀವಿಯೇ ಮಾನವನು. ಇದು ಅವನ ವೈಯಕ್ತಿಕ ಜೀವನವಾಗಿದ್ದು, ಅವನ ಸಾಮೂಹಿಕ ಅಥವಾ ಸಾಮಾಜಿಕ ಜೀವನವು ಸಹ ಅದೇ ಮಾದರಿಯನ್ನು ರೂಪಿಸುವುದು .ತಮ್ಮ ತಮ್ಮ ಆತ್ಮದರ್ಶನವನ್ನು ಪಡೆದ ಹಾಗು ಅಂತರಂಗ ನಿಶ್ಚಿತ ಕರ್ತವ್ಯವನ್ನು ಕಂಡ ವ್ಯಕ್ತಿಗಳ ನವಸಮಾಜವು ಸಮರಸ ಹಾಗು ಏಕೀಕೃತವಾದ ಸಮಾಜವಾಗಿರುವುದು. ಅದರ ಘಟಕಗಳಾದ ವ್ಯಕ್ತಿಗಳು ಪ್ರತಿಯೊಬ್ಬರೂ ತಮ್ಮ ಆತ್ಮದಲ್ಲಿಯೇ ವಾಸಸ್ಥರಾಗಿದ್ದು ಎಲ್ಲರಲ್ಲಿಯೂ ವಾಸಿಸುವರು, ಹಾಗು ಎಲ್ಲರಲ್ಲಿ ವಾಸಸ್ಥರಾಗಿ ಪ್ರತಿಯೊಬ್ಬರೂ ತಮ್ಮ ತಮ್ಮ ಆತ್ಮದಲ್ಲಿಯೇ ವಾಸಿಸುವರು. ಇದೇ ಪ್ರಕಾರ ಇಂಥ ಸಮಾಜಗಳ ಸಮುದಾಯವು—ಈಗಾಗಲೇ ಭವಿಷ್ಯತ್ ಸೂಚಕ ಭಾಷೆಯಲ್ಲಿ ರಾಷ್ಟ್ರಗಳ ಸಂಘ ಎಂದು ಕರೆಯಲಟ್ಟ ಸಮುದಾಯವು-ಸ್ವಭಾವತಃ ಸಮರಸವಾಗಿ ಐಕ್ಯಗೊಂಡದ್ದಾಗುವುದು, ಏಕೀಕೃತ ಸಮಾಜವಾಗುವುದು. ಏಕೆಂದರೆ ಈ ದೊಡ್ಡ ದೊಡ್ಡ ಘಟಕಗಳು ತಮ್ಮ ಒಟ್ಟು ಜೀವನದ ಮುಖಾಂತರ ಒಂದೊಂದೂ ತನ್ನ ವಿಶಿಷ್ಟರೀತಿಯಲ್ಲಿ ದೈವೀಪ್ರಜ್ಞೆಯ ದಿವ್ಯಚೇತನ (Divine Consciousness) ದ ಯಶಸ್ಸನ್ನೂ ಮಹತ್ತನ್ನೂ ಪ್ರಕಟಿಸುವವು.

## ಸಮರ್ಪಣ

ಪಾರ್ಥಿವ ಜೀವನದ ಈ ಜಗದಗಲ ಪುನರ್ಘಟನೆಯಲ್ಲಿ ಶ್ರೀ ಅರವಿಂದರು ಭಾರತಕ್ಕೆ ಮಹತ್ವವಾದ ಪಾತ್ರವನ್ನು ಕಲ್ಪಿಸಿರುವರು—ಒಂದು ಪ್ರಬಲವಾದ ಪ್ರಾಪ್ತಿಯನ್ನೂ ಭಾರವಾದ ಹೊಣೆಯನ್ನೂ ಹೊರಿಸಿರುವರು. ಅವರು ಭಾರತವನ್ನು ಆಧ್ಯಾತ್ಮಿಕ ಚೇತನದ ಭಂಡಾರವೆಂದೂ, ವೇದದಲ್ಲಿ ಉಕ್ತವಾದಂತೆ ಸತ್ಯದ ಸಂರಕ್ಷಕ ದೇವತೆಯೆಂದೂ ಭಾವಿಸುವರು. ಹಾಗು ಜಾಗತಿಕ ಏಕೀಕರಣದ ನವಯುಗದಲ್ಲಿ ಭಾರತದ ರಾಷ್ಟ್ರಪುರುಷನು ಹಳೆಯ ಲೋಕದ ರಚನೆಗಳನ್ನು ಭೇದಿಸುವ ಆಯುಧವಾಗಿ ಮುಂಬರುವ ಸೃಷ್ಟಿ ಸ್ವರೂಪವನ್ನು ಸೂಚಿಸುವನೆಂದೂ ಅವರು ತಿಳಿಯುವರು.

— **ನಲಿನಿಕಾಂತ ಗುಪ್ತ,**
**ಕಾರ್ಯದರ್ಶಿ,**
**ಶ್ರೀ ಅರವಿಂದಾಶ್ರಮ, ಪಾಂಡಿಚೇರಿ**

(ಅನು: ಎ. ವೆಂಕಪ್ಪ ಶಾಸ್ತ್ರಿ)

---

# ಕಂಡೆ

ಕಣ್ಣಿನಿಂದ ಕಂಡೆ ನಾ ಕಣ್ಣಿನಲ್ಲಿ ಕಂಡೆ.

೧

ಈ ವಿಶ್ವಮೂಲ ಬ್ರಹ್ಮಾಂಡಲೋಲ ಉದ್ದಂಡ ಚಂಡ
ಶುಭ ಶಾಂತ ಕಾಂತ ನಲ್ ಬೆಳಕನೊಂದ ಕಂಡೆ.

೨

ಕಣ್ಣೆತ್ತಿದೆಡೆಗೆ ಕಣ್‌ಕಂಡ ಕಡೆಗೆ ಕಣ್‌ತೆರೆದ ಗಳಿಗೆ
ಕಣ್ ಮುಚ್ಚೆ ಒಳಗೆ ನಲ್ ಬೆಳಕನೊಂದ ಕಂಡೆ.

೩

ಮನ ಹೊರಳಿದಲ್ಲಿ ತಿಳಿವರಳಿದಲ್ಲಿ ಚಿತ್ ತೆರಳಿದಲ್ಲಿ
ಸತ್-ಕರುಳಿನಲ್ಲಿ ಆನಂದ ಬೆಳಕ ಕಂಡೆ

೪

ಜಗ ಜೀವಜಾತ ಸಕಲಕ್ಕು ಕಣ್ಣು ಪ್ರತಿಕಣ್ಣಿನಲ್ಲು
ತುಂತುಂಬಿ ಬೆಳಗುವಾ ದಿವ್ಯ ಬೆಳಕ ಕಂಡೆ.

೫

ತೋರುವುದು ಬೆಳಕು ತೋರಿಸುವುದೂನು ಆ ದಿವ್ಯ ಬೆಳಕೆ
ಎನಿಸುತಲೆ ಹೃದಯ ತುಳುಕುತಲೆ ತುಂಬಿ ಕಂಡೆ.

—**ದತ್ತಮೂರ್ತಿ**

# ಶ್ರೀ ಅರವಿಂದ ಅಂತರಾಷ್ಟ್ರೀಯ ವಿಶ್ವವಿದ್ಯಾಲಯಕೇಂದ್ರ

## ಅದರ ಉದ್ದೇಶ-ಧ್ಯೇಯಗಳು

ಸಾರ್ವಜನಿಕ ಸಹಾಯ ಬೆಂಬಲಗಳನ್ನು ಅಪೇಕ್ಷಿಸಲು ಅರ್ಹವಾಗುವಂತಹ ವಿಶೇಷ ಮಹತ್ವವು, ಸೂಚಿತವಾದ ಶ್ರೀ ಅರವಿಂದ ವಿಶ್ವವಿದ್ಯಾಲಯ ಕೇಂದ್ರದಲ್ಲಾವುದಿದೆ? ಅದರ ವೈಶಿಷ್ಟ್ಯವೇನು? ಎಂಬ ಪ್ರಶ್ನೆಯನ್ನು ಅನೇಕರು ಕೇಳಬಹುದು. ಇದಕ್ಕೆ ಉತ್ತರವು ಆಶ್ರಮದಲ್ಲಿ ಹಾಗು ಮುಖ್ಯ ಸಂಸ್ಥೆಯ ಅಂಗವಾಗಿ ಬೆಳೆದಿರುವ ಶಾಲೆಯಲ್ಲಿ ಕಂಡು ಬರುತ್ತಿರುವ ಜೀವನದ ರೀತಿಯಲ್ಲಿ ದೊರೆಯಬಲ್ಲದು.

ವೈಯಕ್ತಿಕ ಸಾಧಕನ ಆಂತರಿಕ ಜೀವನದ ತಳಹದಿಯ ಮೇಲೆ ಆಶ್ರಮದಲ್ಲಿ ಬೆಳೆದು ಬಂದಿರುವ ಸಾಂಘಿಕ ಜೀವನವನ್ನು ಆಧ್ಯಾತ್ಮಿಕ, ಮಾನಸಿಕ ಮತ್ತು ಶಾರೀರಿಕ ಎಂದು ಮೂರು ಹಂತಗಳಲ್ಲಿ ಅಭ್ಯಸಿಸಬಹುದು. ಆತ್ಮಿಕ ಜೀವನಕ್ಕೆ ಹೆಚ್ಚು ಪ್ರಾಧಾನ್ಯವನ್ನಿತ್ತು ಅಂತರ್ಮುಖ ಜೀವನದಿಂದ ಬಹಿರ್ಮುಖ ಜೀವನದೆಡೆಗೆ ಸಾಗುವ ಹಾಗು ಆತ್ಮಜೀವನದ ಆಳದಲ್ಲಿ ಒಳಹೋಗುವದಕ್ಕೋಸುಗ ಅವಶ್ಯಕವಾದ ಮಾರ್ಗದರ್ಶನವನ್ನು ಮಾಡುವದು ಮುಖ್ಯವಾಗಿದೆ. ಶ್ರೀ ಅರವಿಂದರ ಆತ್ಮತೇಜಸ್ಸಿನಿಂದ ವೈತುಂಬಿದ ಮಾತೆಯ ಪ್ರತ್ಯಕ್ಷ ಸಾನ್ನಿಧ್ಯವು ಪರಮಾತ್ಮ ಸಾಕ್ಷಾತ್ಕಾರದ ಆಕಾಂಕ್ಷೆಯ ಸ್ವಾಭಾವಿಕ ವಿಕಾಸಕ್ಕೆ ಪೋಷಕವಾದ ಸನ್ನಿವೇಶವನ್ನು ಆಶ್ರಮದಲ್ಲಿ ಹುಟ್ಟಿಸಿದೆ. ಆತ್ಮದ ಉನ್ನತಿಗೆ ಮನಸ್ಸು ಸಮೀಪದ ಸಾಧನ. ಪ್ರಯುಕ್ತ ಇಲ್ಲಿಯ ಜೀವನದ ರೀತಿನೀತಿಗಳ ಫಲಿತಾಂಶಗಳು ಬೌದ್ಧಿಕ, ಸಾಂಸ್ಕೃತಿಕ. ಹಾಗೂ ಸೌಂದರ್ಯೋಪಾಸಕ ರಂಗಗಳಲ್ಲಿ ಎಲ್ಲಕ್ಕಿಂತ ಹೆಚ್ಚು, ಎದ್ದು ಕಾಣುತ್ತಿವೆ. ಗುರು ಅರವಿಂದರ ದಿವ್ಯ ಮಾರ್ಗದರ್ಶನದಲ್ಲಿ ಗದ್ಯಪದ್ಯ ಕ್ಷೇತ್ರಗಳಲ್ಲಿ ಸಾಹಿತ್ಯದ ಅಭಿನವ ಪ್ರಕಾರ ಬೆಳೆದು ಬಂದಿದೆ. ಪ್ರಾಚೀನ ಭಾರತೀಯ ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಗಳ ಕ್ಷೇತ್ರಗಳಲ್ಲಿ ಅತಿ ಮೌಲಿಕ ಸಂಶೋಧನವು ಮಾಡಲ್ಪಟ್ಟಿದೆ. ವಿಶೇಷತಃ ವೇದ ಉಪನಿಷತ್ತುಗಳ ಸಂಶೋಧನೆಯು ಉಲ್ಲೇಖನೀಯವಾಗಿದೆ. ವೇದಕಾಲದ ವೇದಾಗಮ ಸಾಹಿತ್ಯದಲ್ಲಿ ಮಾತ್ರ ಗೋಚರವಾಗುವ ಅನುಭಾವ ಹಾಗು ಆಧ್ಯಾತ್ಮಿಕ ಪದ್ಧತಿಯ ಕಾವ್ಯ ವಿಕಾಸದ ಪ್ರಯೋಗಗಳನ್ನೂ ಯಶಸ್ವಿಯಾಗಿ ನಡೆಸಲಾಗಿದೆ. ಈ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಚಟುವಟಿಕೆಯನ್ನು ಹಾಗೆಯೇ ಮುಂದುವರಿಸಲಾಗುತ್ತಿದೆಯಲ್ಲದೆ ನಮ್ಮ ನಾಡಿನ ಬೇರೆ ಬೇರೆ ಮಹತ್ವದ ಮುಖ್ಯ ಭಾಷೆಗಳಲ್ಲಿ ಅದರ ಪರಿಣಾಮ ಪ್ರಯೋಗಗಳು ಕಂಡು ಬಂದಿವೆ. ಇದರಂತೆಯೇ ಸಂಸ್ಕೃತದಂತಹ ಅಭಿಜಾತ ಭಾಷೆಗಳಲ್ಲಿಯೂ ಅದರ ಪ್ರತಿಬಿಂಬವು ಬಿದ್ದಿದೆ. ಆಶ್ರಮಕ್ಕೆ ಸಂಬಂಧಿಸಿದ ಹತ್ತಾರು ಪತ್ರಿಕೆಗಳು ಈ ದಿಕ್ಕಿನಲ್ಲಿ ನಡೆದಿರುವ ಕಾರ್ಯದ ಅಲ್ಪಾಂಶವನ್ನು ಮಾತ್ರ ಜಗತ್ತಿಗೆ ಬೀರುತ್ತವೆ. ಸ್ಫೂರ್ತಿಯ ಹೊಸ ಹೊಸ ಉಗಮಗಳ ಅನುಭವವನ್ನು ಪಡೆಯುತ್ತಿರುವ ನೂರಾರು ತರುಣ ಹಗೂ ವೃದ್ಧ ಕಲಾವಂತರು ಇಲ್ಲಿರುವರು. ಹಾಗೆಯೇ ತಮ್ಮ ಕಂಠಗಳಲ್ಲಿ ಮತ್ತು ಕೈಬೆರಳುಗಳ ತುದಿಯಲ್ಲಿ ಹರಿದಾಡುತ್ತಿರುವ ಹೊಸ ಹೊಸ ರಾಗತಾನಗಳನ್ನು ಕಂಡುಹಿಡಿಯುವ ಕುತೂಹಲವುಳ್ಳ ಅಭಿಜ್ಞ ಸಂಗೀತಗಾರರೂ ಇರುವರು. ಆತ್ಮಕಾಂತಿಗೇ ಯೋಗ್ಯ ಆವಾಸವಾಗುವಂತೆ ಅಂದರೆ

ದೇಹವನ್ನು ದೇಗುಲವಾಗಿಸುವಂತೆ ಪಂಚಭೌತಿಕ ದೇಹವನ್ನು ಸುಂದರವಾಗಿ ವಿಕಸಿತಗೊಳಿಸಲು ಹೆಚ್ಚಿನ ದಕ್ಷತೆ ಪರಿಶ್ರಮಗಳನ್ನು ಇಲ್ಲಿ ವಹಿಸಲಾಗುತ್ತಿದೆ. ಆತ್ಮವು ತನ್ನ ಈ ಮೂಲಭೂತವಾದ ಉಪಕರಣವನ್ನು ಕುರಿತು ಅಪೇಕ್ಷಿಸುವ ಬುದ್ಧಿವಂತಿಕೆ ಚಾಪಲ್ಯ ಮುಂತಾದವುಗಳು ದೇಹದಲ್ಲಿ ಉಂಟಾಗುವಂತೆ ಯೋಗ್ಯ ಓರಣವನ್ನು ಇಟ್ಟುಕೊಳ್ಳುವ ದಕ್ಷತೆಯನ್ನು ಬಿಂಬಿಸಲಾಗಿದೆ.

ಈ ಎಲ್ಲ ಉತ್ಕಟ ಜೀವನದ ಹಿನ್ನೆಲೆಯಲ್ಲಿ ಮತ್ತು ಆಚೆಗೆ ಒಂದು ದಿವ್ಯ ಆಧ್ಯಾತ್ಮಿಕ ಶಕ್ತಿಯುಂಟು. ಅದುವೇ ಲೋಕಗುರು ಪೂಜ್ಯ ಶ್ರೀ ಅರವಿಂದರಿಂದ ಈ ಲೋಕಕ್ಕೆ ತರಲಾದ ಮತ್ತು ಮಾತೆಯಿಂದ ಪರಿಪೂರ್ಣಾವಸ್ಥೆಗೆ ಒಯ್ಯಬೇಕಾಗಿರುವ ಪರಮೋಚ್ಚ ಪ್ರಜ್ಞೆಯ ಜ್ವಲತ್ತೇಜಸ್ಸು, ಆಶ್ರಮದಲ್ಲಿರುವದಕ್ಕೆಲ್ಲ ಮಹತ್ವವು ಬಂದಿರುವದು ಅದರಿಂದಲೇ. ಸದ್ಯದ ಲೇಖಕನಿಗೆ ಮೊದಮೊದಲು ಸಾವಿರಾರು ಕಾಗದಗಳ ರಾಶಿಯಲ್ಲಿ ತನಗೆ ಬೇಕಾದ ಕಾಗದದ ಮೇಲೆಯೇ ತನ್ನ ಬೆರಳು ಬೀಳುವದು ವಿಸ್ಮಯಕರವಾಗಿ ತೋರಿತು. ಪುನಃ ಪುನಃ ಹೀಗೆಯೇ ಅನೇಕ ಸಲ ಆಗಲಾರಂಭಿಸಿದ್ದರಿಂದ ಇದು ಆಕಸ್ಮಿಕವೆಂಬ ವಿಚಾರವು ನಿರಾಕೃತವಾಯ್ತು. ಬಳಿಕ ಸ್ವಯಂಚಾಲಕ ಪ್ರಜ್ಞೆ ಅಥವಾ ಮನೋವ್ಯಾಪಾರವಿದೆಂದು ಗುರುತಿಸಬೇಕಾಯ್ತು. ಹಾಗೆಯೇ ಉತ್ತಮ ಸ್ಮರಣ ಶಕ್ತಿಯುಳ್ಳವನೆಂಬ ಖ್ಯಾತಿಯಿಲ್ಲದಿದ್ದರೂ ನೂರಾರು ಹೆಸರುಗಳನ್ನು ಅವುಗಳ ವಿವರಗಳೊಂದಿಗೆ ನೆನಪಿಡುವ ಶಕ್ತಿಯು ತನ್ನಲ್ಲಿರುವದೆಂಬದನ್ನು ಕಂಡು ಹಿಡಿದನು. ಆಶ್ರಮದ ಬೇರೆ ಬೇರೆ ಶಾಖೆಗಳಲ್ಲಿ ಕೆಲಸ ಮಾಡುತ್ತಿರುವ ಆಶ್ರಮವಾಸಿಗಳಲ್ಲಿ ಬಹು ಜನರಿಗೂ ಈ ಬಗೆಯ ಅನುಭವವಾಗಿದೆ. ಇಂತಹ ಉನ್ನತ ಮನೋವ್ಯಾಪಾರಗಳ ಯೋಗ್ಯ ನಿರ್ವಹಣಕ್ಕೆ ಅನುಕೂಲವಾಗುವ ಸಮೀಚೀನ ಸನ್ನಿವೇಶವನ್ನು ನಿರ್ಮಿಸುವದವಶ್ಯವೆಂಬ ಅಂಶವನ್ನು ನಿಮ್ಮ ಗಮನಕ್ಕೆ ತರಲು ಮಾತ್ರ ಈ ದೃಷ್ಟಾಂತಗಳನ್ನು ಉಲ್ಲೇಖಿಸಿದ್ದೇನೆ.

ಅನೇಕಾನೇಕ ಸ್ತ್ರೀ–ಪುರುಷರ ಜೀವನದ ಸಂಪೂರ್ಣ ವಿಕಾಸದ ಅನುಕೂಲತೆಗಳನ್ನು ಒದಗಿಸಲು ನಿರ್ಮಾಣವಾಗಲಿರುವ ಸಂಸ್ಥೆಯ ಹಿನ್ನೆಲೆಯನ್ನು ಮೇಲೆ ವಿವರಿಸಿದ್ದಾಯಿತು ಶ್ರೀ ಅರವಿಂದರು ನೀಡಿದ ಸ್ಫೂರ್ತಿ ಹಾಗೂ ಅವರು ತೋರಿದ ಆದರ್ಶಗಳ ಸಾಧನೆಗಾಗಿ ಸ್ತ್ರೀ ಪುರುಷರಿಗೆ ಇಂಥ ಸಂಸ್ಥೆಯು ವಿಶೇಷ ಉಪಯುಕ್ತವೆನಿಸಬಹುದು. ಆಶ್ರಮದಲ್ಲಿ ಈಗಾಗಲೇ ಇಂಥ ಸಂಸ್ಥೆಯ ಅಂಕುರವಾಗಿ ೯೦೦ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುವ ಶಾಲೆಯು ನಡೆಯುತ್ತಿದೆ. ವಿದ್ಯಾರ್ಥಿಗಳಲ್ಲಿ ಎಳೆ ವಯಸ್ಸಿನ ಬಾಲ ಬಾಲಿಕೆಯರೂ ಇರುವರು. ಕೆಲ ವರ್ಷಗಳ ಹಿಂದೆಯೇ ಶ್ರೀ ಅರವಿಂದರ ಆಶೀರ್ವಾದ ಬಲದಿಂದ ತಾಯಿಯವರು ಈ ಶಾಲೆಯನ್ನು ಪ್ರಾರಂಭಿಸಿದರು. ಈ ಶಾಲೆ ಎಂದರೆ ತಮ್ಮ ಸಂದೇಶವನ್ನು ಬೀರುವ ಹೊಸ ಸಾಧನದ ನಿರ್ಮಾಣವೆಂದು ಶ್ರೀ ಅರವಿಂದರು ಭಾವಿಸಿದರು. ಎಳೆ ಮಕ್ಕಳು ಇಂಥ ಶಾಲೆಯಲ್ಲಿ ಶಿಕ್ಷಣ ಪಡೆಯುವದು ತಾಯಿಯವರಿಗೆ ಹೆಚ್ಚು ಮೆಚ್ಚಿಗೆಯ ವಿಷಯವಾಗಿದೆ. ಯಾಕಂದರೆ ಎಳೆ ಮಕ್ಕಳ ಮನಸ್ಸು ತಿಳಿಯಾದುದಾಗಿದ್ದು ಇಚ್ಛಿತ ವಿಚಾರಗಳನ್ನು ಬಿಂಬಿಸಲು ಅರಿಕೆಗೊಳಿಸಲು ತಕ್ಕದಾಗಿರುವದೆಂಬುದೇ ಇದಕ್ಕೆ ಕಾರಣ. ಈ ಮಕ್ಕಳಿಗೆ ಯೋಗ, ಆಧ್ಯಾತ್ಮ ಅಥವಾ ನೀತಿಶಾಸ್ತ್ರಗಳನ್ನು ಪ್ರಯತ್ನಪೂರ್ವಕವಾಗಿ ಕಲಿಸುವದಿಲ್ಲ. ಅದೇ ಮಕ್ಕಳು ಆಶ್ರಮದ ವಾತಾವರಣದಲ್ಲಿರುವದರಿಂದ ಇವುಗಳನ್ನು ಸ್ವಾಭಾವಿಕವಾಗಿಯೇ ಗ್ರಹಿಸಿಕೊಳ್ಳುವವು ಮತ್ತು ಆತ್ಮ–ಪರಮಾತ್ಮರ ಸಂಬಂಧದಲ್ಲಿ ಯಾವ ಭೀತಿ, ಭಯಗಳಿಗೂ ಒಳಗಾಗದೆ ಸ್ವಭಾವ ಸಿದ್ಧವಾದ ರೀತಿಯಲ್ಲಿ ಆತ್ಮವಿಜ್ಞಾನದ ಗುಟ್ಟನ್ನು ಅರಿಯುವವು.

ಶಾಲೆಯಲ್ಲಿಯ ಅಭ್ಯಾಸ ಕ್ರಮವನ್ನು ನಿಯಂತ್ರಿಸಲು ಕಲಿಸಬೇಕಾದ ವಿಷಯ, ಪಠ್ಯ ಪುಸ್ತಕ, ಪರೀಕ್ಷೆ ತೆಗೆದುಕೊಳ್ಳುವ ಪದ್ಧತಿ ಎಲ್ಲವೂ ಇರುವವು. ಆದರೆ ವಿದ್ಯಾರ್ಥಿಗಳಿಗೆ ತಮ್ಮ ಪ್ರೀತಿಯ ವಿಷಯದಲ್ಲಿ

ಹೆಚ್ಚು ಆಸ್ಥೆ ವಹಿಸಿ ಅವನ್ನು ಕಲಿಯುವಂತೆ ಉತ್ತೇಜನ ಕೊಡಲಾಗುವದು. ಇದರಿಂದ ಒಬ್ಬನೇ ವಿದ್ಯಾರ್ಥಿಯು ೪ನೆಯ ಇಯತ್ತೆಯಲ್ಲಿ ಇತಿಹಾಸವನ್ನೂ ೨ನೇ ಇಯತ್ತೆಯಲ್ಲಿ ಗಣಿತವನ್ನೂ ಕಲಿಯುತ್ತಿರಬಹುದು. ಯಾವದೇ ವಿಷಯದಲ್ಲಿ ಹಿಂದೆ ಉಳಿದ ಕಾರಣದಿಂದ ಇತರ ವಿಷಯಗಳಲ್ಲಿ ವಿದ್ಯಾರ್ಥಿಯ ಪ್ರಗತಿಯನ್ನು ಕುಂಠಿತಗೊಳಿಸಲಾಗುವದಿಲ್ಲ ಶಿಕ್ಷಣ ಶಾಸ್ತ್ರದ ಪಂಡಿತರು ಹೇಳುವ ಅಭಿಪ್ರಾಯಕ್ಕೆ ವಿರೋಧವಾಗಿ ಎಳೆ ವಯಸ್ಸಿನ ವಿದ್ಯಾರ್ಥಿಗಳಲ್ಲಿ ಭಾಷೆಗಳನ್ನು ಕಲಿತುಕೊಳ್ಳುವ ಅಪಾರವಾದ ಸಾಮರ್ಥ್ಯವಿದೆ ಎಂಬುದು ಇಲ್ಲಿಯ ವಿದ್ಯಾರ್ಥಿಗಳಿಂದ ಮನಗಾಣಬಹುದಾಗಿದೆ. ಭಾಷೆಯನ್ನು ಕಲಿಯುವ ಒತ್ತಾಯ ಅವರ ಮೇಲೆ ಹೇರಲಾಗದು. ಇದು ಮಾತ್ರ ನಿಜ. ಆಶ್ರಮದಲ್ಲಿರುವ ಯಾವ ಬಾಲಕ-ಬಾಲಕಿಯನ್ನೇ ನೋಡಿರಿ. ಇಂಗ್ಲೀಷ, ಫ್ರೆಂಚ, ಹಿಂದುಸ್ತಾನಿ ಅಲ್ಲದೆ ಆ ಬಾಲಕನ ಮಾತೃಭಾಷೆಯಾದ ಬಂಗಾಲಿ, ಅಥವಾ ಗುಜರಾತಿ ಅಲ್ಲದೆ ಪ್ರಾದೇಶಿಕ ಭಾಷೆಯಾದ ತಮಿಳ ಇಷ್ಟು ಭಾಷೆಗಳ ಜ್ಞಾನವಿರುವದು ಕಂಡು ಬರುವದು. ಎಳೆ ಮಕ್ಕಳು ಫೋಟೋಗ್ರಾಫಿ, ಚಿತ್ರಕಲೆ ಇವುಗಳಲ್ಲಿಯೂ ಹೆಚ್ಚು ಮನಸ್ಸು ಹಾಕುವವು. ಕೆಲವು ವಿದ್ಯಾರ್ಥಿಗಳು ಕೈಗಾರಿಕೆಗಳತ್ತ ಗಮನ ಕೊಡುವದೂ ಉಂಟು. ಇಂಥ ವಿದ್ಯಾರ್ಥಿಗಳು ಆಶ್ರಮದ ಬಡಿಗ ಶಾಲೆಯಲ್ಲಿ ಆವಶ್ಯಕ ಜ್ಞಾನ ಪಡೆಯುವ ಸೌಲಭ್ಯವಿದೆ. ಇಂಥ ವಿಷಯಗಳು ಅಭ್ಯಾಸಕ್ರಮದಲ್ಲಿಲ್ಲದಿದ್ದರೂ ಅವುಗಳಲ್ಲಿ ವಿದ್ಯಾರ್ಥಿಗಳು ಆಸ್ಥೆ ತೋರಿದರೆ ಅದಕ್ಕೆ ಉತ್ತೇಜನ ಕೊಡಲಾಗುವದು.

ಶಾಲೆಯನ್ನು ನಡೆಸುವ ಧೋರಣದ ಬಗ್ಗೆ ಶ್ರೀ ಅರವಿಂದರ ಕೆಳಗಿನ ಶಬ್ದಗಳನ್ನೇ ಮಾರ್ಗದರ್ಶನದ ತತ್ತ್ವಗಳೆಂದು ಅಂಗೀಕರಿಸಲಾಗಿದೆ :

"ಎಲ್ಲ ಎಳೆ ಮಕ್ಕಳು ಮನೋರಂಜಕ ಕತೆಗಳನ್ನು ಪ್ರೀತಿಯಿಂದ ಕೇಳುವವರೂ ವೀರ ವ್ಯಕ್ತಿಗಳ ಬಗ್ಗೆ ಆದರ ಭಾವವುಳ್ಳವರೂ ದೇಶಪ್ರೇಮಿಗಳೂ ಆಗಿರುವರು. ಬಾಲಕನಲ್ಲಿರುವ ಈ ಗುಣಗಳ ವಿಕಾಸ ಮಾಡಲು ಪ್ರಯತ್ನಿಸಿದರೆ ಅವನಿಗೆ ಗೊತ್ತಿಲ್ಲದೆ ಅವನು ತನ್ನ ದೇಶದ ಸಜೀವ ಇತಿಹಾಸದ ಎಲ್ಲ ಅಂಗಗಳನ್ನೂ ತಿಳಿದುಕೊಳ್ಳುವನು. ಪ್ರತಿಯೊಬ್ಬ ಬಾಲಕನು ಚಿಕಿತ್ಸಕ, ಎಲ್ಲವನ್ನೂ ತಿಳಿದುಕೊಳ್ಳುವ ಕುತೂಹಲವುಳ್ಳವ, ಸಂಶೋಧಕ, ಶರೀರದ ಅಂಗಾಂಗಗಳ ಜ್ಞಾನ ಮಾಡಿಕೊಳ್ಳಲು ಹಾತೊರೆಯುವ ಸ್ವಭಾವದವ ಆಗಿರುವನು. ಅವನಲ್ಲಿರುವ ಈ ಗುಣಗಳನ್ನು ವಿಕಾಸಗೊಳಿಸುವದರಿಂದ ಬಾಲಕನು ತನಗೆ ಗೊತ್ತಿಲ್ಲದೆ ಶ್ರೇಷ್ಠ ವಿಜ್ಞಾನಿಯ ಮಾನಸಿಕ ಒಲವಿನ ಮೂಲತತ್ತ್ವಗಳನ್ನು ಪಡೆಯುವನಾಗುವನು. ಪ್ರತಿಯೊಂದು ಮಗುವಿಗೂ ಅಮಿತವಾದ ಜ್ಞಾನಾಸಕ್ತಿ ಇರುವದು, ಅದನ್ನು ಸೃಷ್ಟಿಯ ಜ್ಞಾನ ಮಾಡಿಕೊಳ್ಳುವತ್ತ ಸಿಧಾನವಾಗಿ ಹೊರಳಿಸಿದರೆ ಅವನಲ್ಲಿ ಜಗತ್ತಿನ ಹಾಗೂ ತನ್ನ ಜ್ಞಾನವನ್ನು ಮಾಡಿಕೊಳ್ಳುವ ಆಸಕ್ತಿ ಹುಟ್ಟುವದು.

ಪ್ರತಿಯೊಬ್ಬ ಬಾಲಕನಲ್ಲಿಯೂ ಅನುಕರಣಶಕ್ತಿ ಹಾಗೂ ಕಲ್ಪನಾ ಶಕ್ತಿ ಇರುವದು. ಅದನ್ನು ಉಪಯೋಗಿಸಲು ಕಲಿಸುವದರಿಂದ ಅವನು ಒಳ್ಳೇ ಕಲಾವಿದನಾಗುವನು

ಈಗ ಸ್ಥಾಪಿಸಲಿರುವ ವಿಶ್ವವಿದ್ಯಾಲಯ ಕೇಂದ್ರವು ಈಗಿರುವ ಶಾಲೆಯ ತಳಹದಿಯ ಮೇಲೆಯೇ ರೂಪುಗೊಂಡು ನಿಲ್ಲುವದು. ಎಲ್ಲ ದೇಶಗಳ ಬೇರೆ ಬೇರೆ ವರ್ಣ, ಜನಾಂಗಗಳ ಸ್ತ್ರೀಪುರುಷರು ಇಲ್ಲಿ ಇದ್ದು ತಮಗೆ ಆಸ್ಥೆಯಿದ್ದ ವಿಷಯದಲ್ಲಿ ಪ್ರಗತಿ ಹೊಂದಲು ಅವಕಾಶವಿದೆ. ಆದರೆ ಜೀವನದ ವಿಕಾಸವು ಆಧ್ಯಾತ್ಮಿಕ ಗುರಿ ಸಾಧಿಸುವ ಹಿನ್ನೆಲೆಯಾಗಿ ಈ ಪ್ರಗತಿಯು ಇರಬೇಕೆಂಬುದು ಸ್ಪಷ್ಟವಿದೆ. ವಿವಿಧ ವಿಷಯಗಳಲ್ಲಿ ಜ್ಞಾನಾರ್ಜನೆಯ ಸೌಲಭ್ಯ ಒದಗಿಸಲಾಗುವದು. ವಿಜ್ಞಾನ, ತಾಂತ್ರಿಕ ವಿಜ್ಞಾನ, ಸಮಾಜ ಶಾಸ್ತ್ರ, ಮೊದಲಾದ ವಿಷಯಗಳಲ್ಲಿಯೂ ಪಾರಂಗತರಾಗುವ ಶಿಕ್ಷಣದ ಸೌಲಭ್ಯಗಳ ವ್ಯವಸ್ಥೆ ಮಾಡಲಾಗುವದು ಇದು ಅಲ್ಲದೆ

ಅಧ್ಯಾತ್ಮ ಸಾಧನೆಯ ಇಚ್ಛೆ ಇದ್ದವರಿಗೆ ಸಾಧನ ಮಾರ್ಗದಲ್ಲಿ ಮಾರ್ಗದರ್ಶನ, ಸಾಧಕನಿಗತ್ಯವಾದ ಸಂಸ್ಕಾರ ಇವನ್ನು ನೀಡಲಾಗುವದು.

ಮನಸ್ಸನ್ನೂ ಅದರ ಸ್ವಾಭಾವಿಕ ಚಟುವಟಿಕೆಗಳನ್ನೂ ಜ್ಞಾನಾರ್ಜನೆಗಾಗಿ ಸಾಧನಗಳೆಂದು ಉಪಯೋಗಿಸುವ ವಾತಾವರಣವಿರುವದರಿಂದ ಜಗತ್ತಿನ ಹಾಗೂ ವಿಜ್ಞಾನದ ಜ್ಞಾನ ಮಾಡಿಕೊಳ್ಳಲು ಉಳಿದ ಜ್ಞಾನೇಂದ್ರಿಯಗಳ ಉಪಯೋಗ ಮಾಡಿಕೊಳ್ಳುವದೂ ಸ್ವಾಭಾವಿಕವಾಗುವದು.

ಈಗಾಗಲೇ ಐದು ಭೂಖಂಡಗಳಿಂದ ಬಂದ ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಪಡೆಯುತ್ತಿರುವರು. ಅನೇಕ ದೇಶಗಳಿಂದ ಈ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡಲು ಇಚ್ಛೆ ಇದ್ದವರು ತಿಳಿಸಿದ್ದೂ ಉಂಟು. ಶಿಕ್ಷಣವು ವಿದ್ಯಾರ್ಥಿಗಳ ಮಾತೃಭಾಷೆಯ ಮೂಲಕವೇ ದೊರೆಯುವದು.

ಈ ವಿಶ್ವವಿದ್ಯಾಲಯವು ಆಧುನಿಕ ಸೌಕರ್ಯಗಳನ್ನೊಳಗೊಂಡ ಗುರುಕುಲ ಪದ್ಧತಿಯದಾಗಿರುವದು. ಇಲ್ಲಿ ಬೇರೆ ಬೇರೆ ದೇಶಗಳ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಒಂದು ಗುಂಪು ಕಟ್ಟಿಕೊಂಡು ಜೀವಿಸುವ ಅವಕಾಶವೂ ಇದೆ. ಆದರೂ ಇಂಥ ಪ್ರತ್ಯೇಕತೆಯು ಸಾಮೂಹಿಕ ಜೀವನಕ್ಕೆ ವಿಸಂಗತವೆನಿಸದಂತೆ ನೋಡಿಕೊಳ್ಳಲಾಗುವದು. ಅಂತರ್‌ರಾಷ್ಟ್ರೀಯ ವಸ್ತು ಸಂಗ್ರಹಾಲಯವನ್ನೊಂದು ಏರ್ಪಡಿಸುವ ಯೋಜನೆಯೂ ಇದೆ. ಇದರಲ್ಲಿ ವಿದ್ಯಾರ್ಥಿಗಳೂ ಪ್ರೇಕ್ಷಕರೂ ಹಿಂದಿನ ಮತ್ತು ಇಂದಿನ ಬೇರೆ ಬೇರೆ ಸಂಸ್ಕೃತಿಗಳು ಬೇರೆ ಬೇರೆಯಾಗಿ ಸುವ್ಯವಸ್ಥಿತವಾಗಿ ಪ್ರದರ್ಶಿಸಲ್ಪಟ್ಟಿದ್ದನ್ನು ನೋಡಬಹುದು. ಬೇರೆ ಬೇರೆ ದೇಶದ ಕಲಾವಿದರು ತಮ್ಮ ರಾಷ್ಟ್ರದ ಕಲಾಜೀವನದ ಪರಿಚಯ ಮಾಡಿ ಕೊಡುವಂಥ ಕಲಾಕೃತಿಗಳನ್ನು ಈ ವಸ್ತು ಸಂಗ್ರಹಾಲಯದಲ್ಲಿ ಮಂಡಿಸುವ ಏರ್ಪಾಡು ಮಾಡಲಾಗುವದು.

ಈ ವಿಶ್ವವಿದ್ಯಾಲಯ ಸ್ಥಾಪನೆಯ ಹಾಗು ಮಾರ್ಗದರ್ಶನದ ಸಂಪೂರ್ಣ ಹೊಣೆಯು ಮಹಾಮಹಿಮರೂ ಶ್ರೀ ಅರವಿಂದರಿಗಾಗಿ ೩೦ ವರ್ಷಗಳ ಹಿಂದೆ ಈ ಆಶ್ರಮವನ್ನು ಸ್ಥಾಪಿಸಿದವರೂ ಶ್ರೀ ಅರವಿಂದರ ಧ್ಯೇಯಗಳನ್ನು ಕೃತಿಗಿಳಿಸುವ ರೀತಿಯನ್ನ ಬಲ್ಲವರೂ ಆದ ಮಾತೆಯವರಿಗೇ ಸೇರಿದೆ. ಇದು ಹೊರಗಿನ ಜನರ ಹಸ್ತಕ್ಷೇಪಕ್ಕೆ ಅವಕಾಶವಿಲ್ಲದಂತಹ ಸ್ವಾಯತ್ತ ಸಂಸ್ಥೆಯಾಗುವದು. ಈ ಸಂಸ್ಥೆಯು ಸ್ಥಾಪಿಸಲ್ಪಡುವ ಸ್ಥಳದ ಮೇಲೆ ಪ್ರಭುತ್ವವಿದ್ದ ಸರಕಾರದಲ್ಲಿಯ ಬದಲಾವಣೆಯಿಂದಾಗಲಿ ಇಲ್ಲವೆ ಇತರ ರಾಜಕೀಯ ಸ್ಥಿತ್ಯಂತರಗಳಿಂದಾಗಲಿ ಈ ಸಂಸ್ಥೆಯು ಅಬಾಧಿತವಾಗಿದ್ದು ಈ ಮಾತು ಅದರ ಕಾರ್ಯವನ್ನು ಮುಂದುವರಿಸಲು ಅನುಕೂಲವಾಗುವದು.

ಇಲ್ಲಿಯ ಜೀವನ ಕ್ರಮವು ಶ್ರೀ ಅರವಿಂದರ ಕಲ್ಪನೆಯಲ್ಲಿದ್ದಂತೆಯೇ ಸಾಗುವದು. ಅದು ಅಮೇರಿಕನ್ ಅಥವಾ ಯುರೋಪಿಯನ್, ಪಾಶ್ಚಿಮಾತ್ಯ ಇಲ್ಲವೆ ಪೌರ್ವಾತ್ಯ ಈ ಎಲ್ಲ ಜೀವನಕ್ರಮಗಳಲ್ಲಿಯ ಉತ್ತಮಾಂಶಗಳನ್ನೊಳಗೊಂಡಿರುವದೆಂದು ಹೇಳಬಹುದು. ಇದು ಅಲ್ಲದೆ ಇಲ್ಲಿ ೪೦ ವರ್ಷಗಳ ವರೆಗೆ ಶ್ರೀ ಅರವಿಂದರು ಅಭೂತಪೂರ್ವವಾದ ಏಕಾಂತವಾಸದಿಂದ ಕಂಡು ಹಿಡಿದ ವ್ಯಕ್ತಿತ್ವದ ಸಂಪೂರ್ಣ ವಿಕಾಸದ ಧ್ಯೇಯ ಸಾಧನೆಯ ಗುರಿಯನ್ನಿಟ್ಟುಕೊಂಡು ಸಾಗುವದು ಈ ಸಂಸ್ಥೆಯ ವೈಶಿಷ್ಟ್ಯವಾಗಿದೆ.

ಮನುಷ್ಯ ಮನುಷ್ಯರಲ್ಲಿ ಸೌಹಾರ್ದ ಬೆಳೆಯುವದರಿಂದಲೇ ಮಾನವ ಕೋಟಿಯು ಒಂದೆಂಬ ಆದರ್ಶ ಸಾಧನೆಯ ಮಾರ್ಗದಲ್ಲಿ ಪ್ರಗತಿ ಸಾಧಿಸುವದೆಂದೂ ಈ ಗುರಿಯನ್ನಿಟ್ಟುಕೊಂಡೇ ಜೀವನದ ವಿವಿಧ ಚಟುವಟಿಕೆಗಳನ್ನ ಕೈಕೊಳ್ಳತಕ್ಕದ್ದೆಂದೂ ಶ್ರೀ ಅರವಿಂದರು ಬೋಧಿಸಿರುವರು.

## ಶ್ರೀ ಅರವಿಂದ ಅಂತರಾಷ್ಟ್ರೀಯ ವಿಶ್ವವಿದ್ಯಾಲಯ ಕೇಂದ್ರ

ಈ ಸಂಸ್ಥೆಯಲ್ಲಿ ಶಿಕ್ಷಣವನ್ನು ವ್ಯಾಪಾರಿ ದೃಷ್ಟಿಯಿಂದ ಕೊಡಲಾಗುವದಿಲ್ಲ. ''ನಾನು ಶಿಕ್ಷಣವನ್ನು ಮಾರುವದಿಲ್ಲ" ಎಂದು ಮಾತಾಜಿಯವರು ಹೇಳಿರುವರು. ಈ ವಿಚಾರವು ವ್ಯಾವಹಾರಿಕವಾಗುವಂತೆ ನೋಡಿಕೊಳ್ಳುವದು ಜಗತ್ತಿನ ಮಹಾನುಭಾವರು ನೀಡುವ ಸಹಾಯವನ್ನೇ ಅವಲಂಬಿಸಿದೆ. ಸಾರ್ವಜನಿಕರು ಇದರಲ್ಲಿ ಸಹಕರಿಸಿ ಸಹಾಯ ನೀಡಬೇಕೆಂದು ನಾವು ಬಿನ್ನವಿಸಿಕೊಂಡಿರುವೆವು. ಈ ಯೋಜನೆಯ ಬಗ್ಗೆ ಸಹಾನುಭೂತಿ ಹಾಗೂ ಸದಯಾಂತಃಕರಣವಿದ್ದವರೆಲ್ಲರನ್ನೂ ನಾವು ಸಹಾಯಕ್ಕಾಗಿ ಕೇಳಿಕೊಳ್ಳುವೆವು. ಇದರಲ್ಲಿ ನಾವು ಭಿಕ್ಷಾಪಾತ್ರೆಯನ್ನು ಅವರ ಮುಂದೆ ಒಡ್ಡುವ ಭಾವನೆಯಿಂದ ಕೇಳುತ್ತಿರದೆ ಹೊಸ ತತ್ತ್ವದ ತಳಹದಿಯ ಮೇಲೆ ಸಮಾಜವನ್ನು ಕಟ್ಟುವ ಕಾರ್ಯದಲ್ಲಿ ನಮ್ಮೊಡನೆ ಕೂಡಿ ಕೆಲಸ ಮಾಡುವ ಸಹಕಾರಿಗಳು ತಮ್ಮ ಶಕ್ತಿಗುಚಿತವಾದ ರೀತಿಯಲ್ಲಿ ತಮ್ಮ ಸಹಕಾರಿಗಳಿಗೆ ನೆರವು ನೀಡಬೇಕೆಂಬ ಭಾವನೆಯಿಂದ ಕೇಳುತ್ತಿರುವೆವು.

**ಎಂ ಪಿ. ಪಂಡಿತ,**

ಕಾರ್ಯದರ್ಶಿ ಶ್ರೀ ಅರವಿಂದ ಅಂತರಾಷ್ಟ್ರೀಯ ವಿಶ್ವವಿದ್ಯಾಲಯ ಕೇಂದ್ರ ನಿಧಿ ಸಮಿತಿ, ಪಾಂಡಿಚೆರಿ.

(ಅನು-ಪ್ರಲ್ಹಾದ ನರೇಗಲ್ಲ)

ಇಂದು ನನಗೆ ಆಗದು ಹೋಗದು ಎಂದು ತೋರಿದ್ದು ಮುಂದೆ ಅದೇ ನನಗೆ ಆಗುವದು ಹೋಗುವದು ಎಂಬುದರ ಮುನ್ಸೂಚನೆ. ಆಗದು ಹೋಗದು ಎಂಬುದರ ಹೊಟ್ಟೆಯಲ್ಲಿಯೇ ಆಗುವದು ಹೋಗುವದು ಎಂಬುದರ ಅಂಕುರಗಳಿವೆ. ಯಾಕಂದರೆ ಈ ಸ್ಥೂಲ ವಿಶ್ವದ ಉತ್ಪತ್ತಿಯು ಒಂದು ವಿರೋಧಾಭಾಸವೆಂದೂ ಅಸಂಭವನೀಯವೆಂದೂ ತೋರಿದಾಗಲೇ ಅನಂತನು ಅದನ್ನು ತನ್ನ ಸತ್ವದಿಂದ ನಿರ್ಮಿಸಿದನು.

ಆಗದು ಹೋಗದು ಎಂಬದು ಕೈಗೆ ನಿಲುಕದ ಸಂಭಾವ್ಯಗಳ ಮಹಾ ನಿಧಿಯಾಗಿದೆ. ಈ ಅವಶ್ಯಕತೆಯು ಮುಂದಿನ ಉನ್ನತಾವಸ್ಥೆಯನ್ನೂ ನಡೆಯಬೇಕಾದ ದಾರಿಯನ್ನೂ ಮರೆಮಾಚುತ್ತದಷ್ಟೇ.

—ಶ್ರೀ ಅರವಿಂದರು

ಯೋಗ ಸಾಧನೆಗೆ ಎರಡು ದಾರಿಗಳು ಒಂದು ತಪೋಮಾರ್ಗ, ಇನ್ನೊಂದು ಸಮರ್ಪಣ ಮಾರ್ಗ. ತಪೋಮಾರ್ಗವು ಕಠೋರವಿದೆ. ಆ ದಾರಿಯಲ್ಲಿ ನೀನು ನಿನ್ನ ಮೇಲೆ ಅವಲಂಬಿಸಿರಬೇಕು. ನಿನ್ನ ಅಳವರಿತು ಮುಂದುವರಿಯಬೇಕು. ನಿನ್ನ ಶಕ್ತಿಯ ಮೇರೆಗೆ ದಾರಿ ಸಾಗುತ್ತದೆ; ಫಲ ದೊರಕುತ್ತದೆ. ಈ ದಾರಿಯಲ್ಲಿ ಹಿಂತಿರುಗಿ ಬೀಳುವ ಭಯ ಹೆಚ್ಚು. ಬಿದ್ದಿಯಾದರೆ ಏಳುವದು ಜಡ.

—ಶ್ರೀ ಮಾತೆಯವರು

# ಪೂರ್ಣಯೋಗದ ಸ್ವರೂಪ

(ಶ್ರೀ ನಾರಾಯಣ ಪ್ರಸಾದ "ಬಿಂದು" ಅವರಿಂದ ಹಿಂದಿಯಲ್ಲಿ ರಚಿತವಾದ "ಶ್ರೀ ಅರವಿಂದ ಪೂರ್ಣಯೋಗ" ಎಂಬ ಗ್ರಂಥದ ಎರಡನೆಯ ಪ್ರಕರಣದ ಅನುವಾದ. ಮೊದಲನೆಯ ಪ್ರಕರಣವಾದ "ಪೂರ್ಣಯೋಗ ಕೀ ಪ್ರಧಾನ ಪ್ರಕ್ರಿಯಾ" ಈಗಾಗಲೇ ಸಮರ್ಪಣದ ಮೊದಲನೆಯ ಸಂಪುಟದಲ್ಲಿ ಪ್ರಕಟವಾಗಿದೆ.)

ಶ್ರೀ ಅರವಿಂದರ ಪೂರ್ಣ ಯೋಗವನ್ನು ಕೆಲವೇ ಪುಟಗಳ ಮೇಲೆ ಬರೆದು ತಿಳುಹಿಸುವುದೆಂದರೆ ಸಾಗರದ ನೀರನ್ನು ಕೊಡದಲ್ಲಿ ತುಂಬಿ ತೋರಿಸಲು ಯತ್ನಿಸಿದಂತೆಯೆ ಸರಿ. ಆದರೆ ನಾನಿಲ್ಲಿ ಆ ಪೂರ್ಣ ಯೋಗದ ಮುಖ್ಯ ಭಾಗದ ಮೇಲೆ ತುಸು ತಿಳುವಳಿಕೆಯುಂಟಾಗುವಂತೆ ಹೇಳಲು ಪ್ರಯತ್ನಿಸುತ್ತೇನೆ. ಮೊಟ್ಟ ಮೊದಲು ಈ ಯೋಗವು ಹೇಗೆ ಎಲ್ಲ ಅಂಶಗಳಿಂದಲೂ ಪೂರ್ಣವಿರುವದೆಂಬದನ್ನು ಹೇಳಲು ಪ್ರಯತ್ನ ಪಡುವೆ. ಸಾಮಾನ್ಯವಾಗಿ ಪ್ರತಿಯೊಂದು ಯೋಗದಲ್ಲಿಯೂ ಒಂದೊಂದು ಅಂಗದ ಪರಿ ಪೂರ್ಣತೆಯ ಸಿದ್ಧಿಗಾಗಿ ಹೆಣಗಲಾತ್ತದೆ. ಅದೇ ಒಂದು ಭಾವದ ಪೂರ್ತಿಗಾಗಿಯೇ— ಪರಿಪೂರ್ಣತೆಗಾಗಿಯೇ— ಉಳಿದೆಲ್ಲ ಅಂಗಗಳನ್ನು ಬಿಟ್ಟುಬಿಡಲಾಗುತ್ತದೆ. ಉಳಿದ ಅಂಗಗಳ ವಿಕಾಸಕ್ಕಾಗಿ ಪ್ರಯತ್ನವನ್ನೇ ಮಾಡಲಾಗುವದಿಲ್ಲ: ಮತ್ತು ಅದಕ್ಕೆ ಅವಕಾಶವನ್ನೇ ಕೊಡಲಾಗುವದಿಲ್ಲ ಉದಾಹರಣೆಗಾಗಿ, ಹಠಯೋಗವನ್ನು ತೆಗೆದುಕೊಳ್ಳೋಣ; ಇದರಲ್ಲಿ ಶರೀರ ಮತ್ತು ಪ್ರಾಣಗಳನ್ನು ಶುದ್ಧ ಮತ್ತು ಸಿದ್ಧವನ್ನಾಗಿ ಮಾಡಲಿಕ್ಕೆ ಎಲ್ಲ ಶಕ್ತಿಯನ್ನು ಉಪಯೋಗಿಸಲಾಗುತ್ತದೆ. ಆದರೆ ಅಲ್ಲಿ ಚಿತ್ತ, ಮನಸು, ಬುದ್ಧಿಗಳು ವಿಕಸಿತವಾಗುವಂತೆ ಯಾವ ಪ್ರಯತ್ನಗಳೇ ನಡೆಯುವದಿಲ್ಲ. ವೇದಾಂತಿಗಳು " ಪುರುಷ " ನನ್ನೇ ಲಕ್ಷಿಸುತ್ತಾರೆ. ಶಕ್ತಿಯನ್ನು ಬಿಟ್ಟು ಬಿಡುತ್ತಾರೆ. ತಾಂತ್ರಿಕರು ಶಕ್ತಿಯನ್ನೇ ಲಕ್ಷಿಸಿ ಪುರುಷನನ್ನು ಮರೆತು ಬಿಡುತ್ತಾರೆ. ಆದರೆ ಶ್ರೀ ಅರವಿಂದರ ಪೂರ್ಣಯೋಗದಲ್ಲಿ ಜೀವನದ ಪ್ರತ್ಯೇಕ ಅಂಗಗಳನ್ನು ವಿಕಸಿತಗೊಳಿಸಿ ಅದನ್ನು ಪ್ರಭುವಿಗೆ ಉಪಯುಕ್ತವೂ ಪಾತ್ರವೂ ಆಗುವಂತೆ ಮಾಡಲಾಗುತ್ತದೆ. ಶರೀರದ ಒಳಗೆ ಅಥವಾ ಹೊರಗೆ, ಎಲ್ಲೆಲ್ಲಿಯೂ ಸೂಕ್ಷ್ಮಕ್ಕಿಂತ ಸೂಕ್ಷ್ಮವಾದ ಭಾಗವೂ ಕೂಡ ಉಳಿಯುದಂತೆ ಪ್ರಭುವಿನ ನಿವಾಸಕ್ಕೆ ತಕ್ಕುದಾಗುವಂತೆ ಆಗುತ್ತದೆ. ಇದೇ ಈ ಪೂರ್ಣಯೋಗದ ವೈಲಕ್ಷಣ್ಯ. ಅಲ್ಲದೆ ಎಲ್ಲ ಪ್ರಕಾರದ ಯೋಗಗಳ, ಅದರಂತೆ ಅವುಗಳ ಮೂಲತತ್ವಗಳ ಸುಂದರ ಸಮನ್ವಯವೇ ಈ ಪೂರ್ಣ ಯೋಗವಾಗಿರುವುದರಿಂದ ಪ್ರತಿಯೊಂದಕ್ಕೂ ಇದರಲ್ಲಿ ಉಪಯುಕ್ತ ಸ್ಥಾನ ದೊರಕುತ್ತದೆ.

ಈಗ ಆ ಪೂರ್ಣ ಯೋಗದಲ್ಲಿ ಉಳಿದ ಯೋಗಗಳ ಸಮಾವೇಶವೆಂತಾಗುವದೆಂಬದರ ವರ್ಣನೆಯನ್ನು ಕೆಳಗೆ ನೋಡಬಹುದು.

ಈ ಪೂರ್ಣಯೋಗದಲ್ಲಿ ಹಠಯೋಗದ ಸಾರವನ್ನು, ಹಠಯೋಗಿಗಳ ಕಲ್ಪನೆಯಲ್ಲಿಯೂ ಮೂಡದಂತಹ ವಿಸ್ತೃತವಾದ ರೂಪವನ್ನು ನಾವು ಕಾಣಬಹುದು. ಶರೀರ ಮತ್ತು ಪ್ರಾಣಗಳ ಮೇಲೆ ಒಡೆತನವನ್ನು ಗಳಿಸಿ ಆ ದಾರಿಯಿಂದ ಭಗವಂತನ ಸ್ಪರ್ಶ ಪಡೆಯಬೇಕೆಂಬುದೇ ಹಠಯೋಗಿಗಳ ಉದ್ದೇಶ, ಗುರಿ

ಊಹಾಗಿರುತ್ತದೆ. ಅವರು ಇಲ್ಲಿಯು ವರೆಗೆ ಯಾವ ಸಿದ್ಧಿಗಳನ್ನು ಪಡೆದಿರುವರೋ ಅವುಗಳ ಪರಿಣಾಮವು ಹೀಗಾಗಿರುತ್ತದೆ. ಅದೆಂದರೆ ಅವರು ತಮ್ಮ ಜೀವನವನ್ನು ಒಂದು ಕಾಲಪರಿಮಿತಿಯ ವರೆಗೆ ಪರಿವರ್ಧಿಸಲು ಶಕ್ತರಾಗುತ್ತಾರೆ. ಆದರೆ ಪೂರ್ಣ ಯೋಗದಲ್ಲಿ ಹಠಯೋಗದ ಮುಖ್ಯಾಂಗವಾದ ಶರೀರದೊಳಗೆ ಕೂಡ, ಅದು ಅಚೇತನವಿದ್ದರೂ, ಅದರಲ್ಲಿ ಭಾಗವತ ಚೈತನ್ಯದ ಅವತರಣವಾಗಿ ಅದೊಂದು ರೀತಿಯಿಂದ ರೂಪಾಂತರ ಹೊಂದಿ ಜರಾವ್ಯಾಧಿ ಮೃತ್ಯು ಮುಖಗಳಿಂದ ಅದು ಮುಕ್ತವಾಗುತ್ತದೆ. ಮನಸ್ಸು ಮತ್ತು ಬುದ್ಧಿಗಳನ್ನು " ದಿವ್ಯ " ವನ್ನಾಗಿ ಮಾಡುವುದು ಸಹಜವೆನಿಸಿದರೂ ಕಲ್ಲಿನಂತೆ ಜಡವಾದ ಈ ಶರೀರವನ್ನೂ ಭಗವಂತನದನ್ನಾಗಿ ಮಾಡುವುದು ಮತ್ತು ಅದರಲ್ಲಿ ಭಗವಂತನ ದಿವ್ಯ ಚೇತನವು ಅವತರಿಸುವಂತೆ ಮಾಡುವುದು. ಹಾಗೂ ಭಗವಂತನು ನಿತ್ಯರೂಪದಲ್ಲಿ ಅಲ್ಲಿ ನಿವಾಸಿಸುವಂತೆ ಮಾಡುವುದು ಸಹಜವಾದ ಹಾಗೂ ಸರಳವಾದ ವಿಷಯವಲ್ಲ. ಪೂರ್ಣಯೋಗದ ಸಾಧಕನಿಗೆ ಹಠಯೋಗಿಯಂತೆ ಅತ್ಯಂತ ಕಷ್ಟಕರವಾದ ಸಾಧನೆಗಳನ್ನು ಅನುಸರಿಸುವ ಅವಶ್ಯಕತೆಯಿಲ್ಲ. ಭಿನ್ನ ಭಿನ್ನ ಆಸನಗಳ ಸಾಧನೆ ಮಾಡುವ ಅವಶ್ಯಕತೆಯೂ ಇಲ್ಲ. ಅವನಿಗೆ ಕೇವಲ ಅಂತರಾತ್ಮನ ಅಭೀಪ್ಸೆಯೊಡನೆ ಶರೀರದ ಸಹಯೋಗ ಮಾಡಿಸಿ ಕೊಡುವುದು ಮಾತ್ರ ಅವಶ್ಯ. ಹಾಗಾದೊಡನೆ ಶರೀರವೂ ತನ್ನ ಜಡತ್ವವನ್ನು ತೊರೆದು ಕ್ರಮವಾಗಿ ಶುದ್ಧವೂ ಮತ್ತು ಉಪಯುಕ್ತವೂ ಆಗುವುದು.

ರಾಜಯೋಗಿಯು, ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ ಸಮಾಧಿಗಳ ದಾರಿಯಿಂದ ಮನವನ್ನು ಶಾಂತಗೊಳಿಸಿ ಮೇಲಕ್ಕೇರುತ್ತಾನೆ. ಮತ್ತು ಸಮಾಧಿಯ ಅವಸ್ಥೆಯಲ್ಲಿ ಅವನು ಶಾಂತಿಯನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ. ಇದೇ ಅವನನ್ನು ಮುಕ್ತಿಯ ವರೆಗೂ ಮುಟ್ಟಿಸುತ್ತದೆ. ಹೀಗೆ ಸಿದ್ಧಿ ಪಡೆದ ಯೋಗಿಗಳಲ್ಲಿಯೂ ಕೂಡ, ಕೆಲವೇಳೆ ಅವರಲ್ಲಿ ಕಾಮ ಕ್ರೋಧ ಮೊದಲಾದ ವಿಕಾರಗಳು ಮೇಲೇಳುತ್ತವೆ. ಹಾಗೂ ಆಗ ಅವರು ತಮ್ಮ ಶಾಂತಿಯನ್ನೇ ಕಳೆದುಕೊಂಡು ಬಿಡುತ್ತಾರೆ. ರಾಜಯೋಗಿಯು ನೈತಿಕ ಬಲದ ಮೇಲೆಯೇ ಬಹಳ ಜೋರು ಕೊಡುತ್ತಾನೆ. ಆದರೆ ಪೂರ್ಣಯೋಗದ ಸಾಧಕನು ಅದರಲ್ಲಿ ( ನೈತಿಕ ಬಲದಲ್ಲಿ ) ಅಷ್ಟು ವೇಳೆಯನ್ನು ಕಳೆದು ಕೊಳ್ಳುವದಿಲ್ಲ. ಅವನ ಪ್ರತಿಯೊಂದು ಚಲನವಲನವೂ ತನ್ನೊಳಗಿನ ಆಧ್ಯಾತ್ಮಿಕತೆಯ ವಿಕಾಸವನ್ನು ಮಾಡಿಕೊಳ್ಳುವುದರಲ್ಲಿಯೇ ರತವಿರುತ್ತದೆ. ಅವನ ಸರ್ವಕರ್ಮದ ಆರಂಭವೂ ಆಧ್ಯಾತ್ಮಿಕತೆಯಿಂದಲೇ. ಆಧ್ಯಾತ್ಮಿಕತೆಯು ವಿಕಸಿತವಾಗುತ್ತ ನಡೆದಂತೆಲ್ಲ ನೈತಿಕತೆಯು ಸ್ವಾಭಾವಿಕ ರೂಪದಲ್ಲಿ ತಂತಾನೇ ಬಂದು ಬಿಡುತ್ತದೆ. ಯಾರು ಆಧ್ಯಾತ್ಮಿಕತೆಯನ್ನು ಪ್ರಾಪ್ತ ಮಾಡಿಕೊಂಡಿರುವರೋ ಅವರು ಎಂದೆಂದೂ ದುಃಶೀಲರಾಗುವದು ಸಾಧ್ಯವಿಲ್ಲ. ಆದರೆ ನೈತಿಕತೆಯ ಮೇಲೆಯೇ ಆಧ್ಯಾತ್ಮಿಕತೆಯು ನಿರ್ಭರವಾಗಿರುವದಿಲ್ಲ. ಮನದ ಶಾಂತಿ, ಚಿತ್ತದ ಸ್ಥಿರತೆ, ಪ್ರಾಣದ ಏಕಾಗ್ರತೆ, ಹೃದಯದ ತನ್ಮಯತೆ ಹಾಗೂ ಶರೀರದ ಸಮಸ್ತ ವಿಕಾರಗಳಿಂದ ನಿಷ್ಕೃತಿ ಇವೇ ಪೂರ್ಣಯೋಗದ ಆಧಾರ ಭೂಮಿಯಾಗಿವೆ. ಇಂತಹ ಶಾಂತಿಮಯ ನಿಶ್ಚಲ ಆಧಾರವೇ ಈ ಪೂರ್ಣಯೋಗದ ಸಂಪೂರ್ಣ ಸ್ಥಾಯಿತ್ವಕ್ಕೆ ಅವಶ್ಯಕವಾದದ್ದೆಂದು ಒಪ್ಪಲಾಗಿದೆ, ಮನಸಿನ ಭಾವಗಳು, ಭಾವನೆಗಳು, ವಾಸನೆಗಳು ಚಿಂತೆಗಳು ಮತ್ತು ವಿಚಾರಗಳು ಇವುಗಳನ್ನೆಲ್ಲ ಅದುಮಿ ಹಿಡಿದು ಶಾಂತಿಯನ್ನು ಪ್ರಾಪ್ತ ಮಾಡಿಕೊಳ್ಳಲಾಗುವುದಿಲ್ಲ ಆದರೆ ಸಾಧನೆಯ ಮಾರ್ಗವಾಗಿ ಕ್ರಮ ಕ್ರಮವಾಗಿ ಈ ಸ್ಥಿತಿಯು ( ಶಾಂತಿ ) ತನ್ನಿಂತಾನೆ ಬಂದು ಬಿಡುತ್ತದೆ. ಮತ್ತು ಇದು ಶಾಂತಿ ಸಾಧಕನ ಸ್ವಭಾವದ ಒಂದು ಅಂಗವಾಗಿ ಪರಿಣಮಿಸುತ್ತದೆ. ಇಂತಹ ಶುದ್ಧ, ಶಾಂತ, ನಿಶ್ಚಲ, ಸ್ಥಿರವ ಆಧಾರದಿಂದಲೇ ಮೇಲಿನ ಭಾಗವತ ಆನಂದ ಪ್ರೇಮ ಜ್ಞಾನಗಳ ಅವತರಣವು ಸಹಜ ಸುಲಭವಾಗುತ್ತದೆ. ಮತ್ತು ಸ್ಥಾಯಿಯಾಗಿ ನಿಲ್ಲಲು ಶಕ್ಯವಾಗುತ್ತದೆ. ಹೀಗೆ ರಾಜ ಯೋಗದ ಸುಂದರ ಸಮಾವೇಶವೂ ಈ ಪೂರ್ಣಯೋಗದಲ್ಲಿ ಕಂಡು ಬರುತ್ತದೆ.

ಇನ್ನು ಕರ್ಮಯೋಗವನ್ನು ತೆಗೆದುಕೊಳ್ಳೋಣ. ಶ್ರೀ ಅರವಿಂದರು ಕರ್ಮಯೋಗಕ್ಕೆ ಕೊಡುವಷ್ಟು ಮಹತ್ವವನ್ನು ಉಳಿದ ಯಾವ ಯೋಗಗಳಿಗೂ ಕೊಡುವದಿಲ್ಲ. ಈ ಸಂಸಾರವು ಭಗವಂತನ ಲೀಲಾ ಕ್ಷೇತ್ರವೆಂದು ಅವರು ಹೇಳುತ್ತಾರೆ. ಭಗವಂತನು ಅಣುರೇಣುಗಳಲ್ಲಿ ತುಂಬಿಕೊಂಡಿದ್ದು ಅವನ ಬಯಕೆಯ ವಿರುದ್ಧವಾಗಿ ಒಂದು ಎಲೆಯೂ ಅಲುಗಾಡುವದಿಲ್ಲ. ಒಂದು ವೇಳೆ ನಾವು ಈ ಕರ್ಮ ಕ್ಷೇತ್ರದಿಂದ ನಿವೃತ್ತರಾಗಿ ಈ ಪೂರ್ಣ ಯೋಗದ ಯೋಗಿಗಳಾಗಬೇಕೆಂದರೆ ಸಾಧ್ಯವೇ ಇಲ್ಲವೆಂದರೆ ತಿಲಮಾತ್ರವೂ ಅತ್ಯುಕ್ತಿಯಾಗಲಾರದು. ಪೂರ್ಣ ಯೋಗದಲ್ಲಿ ಕರ್ಮಕ್ಕೆ ಇಷ್ಟು ಮಹತ್ವವನ್ನು ಶ್ರೀ ಅರವಿಂದರು ಕೊಡುತ್ತಾರೆ. ಅದ್ದರಿಂದ ಶ್ರೀ ಅರವಿಂದರ ಉದ್ದೇಶವು ಜಗತ್ತ್ಯಾಗ, ಜೀವನತ್ಯಾಗ, ಮತ್ತು ಕರ್ಮತ್ಯಾಗವಾಗಿರುವದಿಲ್ಲ. ಆದರೆ ಈ ಸಂಸಾರದಲ್ಲಿ ಮನುಷ್ಯ ಜಾತಿಯಲ್ಲಿ, ಜೀವನದಲ್ಲಿ, ಕರ್ಮದಲ್ಲಿ ಭಗವಂತನನ್ನೇ ಮೂರ್ತಿಮಂತನನ್ನಾಗಿ ಮಾಡುವದಿರುವದು. ವಾಸನೆ ಮತ್ತು ಅಹಂಕಾರಗಳೇ ಅಜ್ಞಾನದ ಕಠಿಣ ಗ್ರಂಥಿಗಳಾಗಿರುತ್ತವೆ. ವಾಸನೆಯಿಂದ ಮುಕ್ತನಾಗಿ ಫಲಾಸಕ್ತ ರಹಿತನಾಗಿ, ಅಹಂಭಾವ ಶೂನ್ಯನಾಗಿ ಭಗವತ್ ಕಾರ್ಯವನ್ನು ಭಗವತ್ ಯಂತ್ರದಂತೆ ಏಕಮಾತ್ರ ಭಗವಂತನಿಗಾಗಿ ಮಾಡುತ್ತಿರುವುದೇ ಪೂರ್ಣಯೋಗದ ಕರ್ಮ ಯೋಗವಾಗಿರುತ್ತದೆ. ಇತ್ತೀಚೆಗೆ ಲೋಕಹಿತದ ಜಾತಿಹಿತದ ದೇಶಹಿತದ ಕರ್ಮವು ನಿಷ್ಕಾಮ ಕರ್ಮವೆಂದು ಎಣಿಸಲಾಗುತ್ತದೆ ಆದರೆ ಯಾವ ಕರ್ಮವು ಅಹಂಕಾರ ಮತ್ತು ವಾಸನೆಗಳಿಂದ ಮುಕ್ತವಿರುವದಿಲ್ಲವೋ ಅದಕ್ಕೆ ಭಗವದ್ಗೀತೆಯಲ್ಲಿ ಹೇಳಿದ ಕರ್ಮಯೋಗವೆಂದು ಹೇಳಲಾಗುವದಿಲ್ಲ. ಯಾವ ಕರ್ಮದಿಂದ ಅಹಂ ನಿವೃತ್ತಿಯಾಗುವದಿಲ್ಲವೋ ಹಾಗೂ ಭಗವದರ್ಪಣ ಬುದ್ಧಿಯಿಂದ ಕರ್ಮವನ್ನು ಮಾಡಲಾಗುವದಿಲ್ಲವೋ ಅದು ಯಜ್ಞ ರೂಪ ಕರ್ಮವೆಂದೆಣಿಸಲಾಗುವದಿಲ್ಲ. ಮತ್ತು ಇಂತಹ ಕರ್ಮದಿಂದ ನಮ್ಮ ಶುದ್ಧಿಯೂ ಆಗುವದಿಲ್ಲ. ಆದರೆ ಯಾರಾದರೂ ಶುದ್ಧ ಸಿದ್ಧ ಭಾವ ಪೂರಿತರಾಗಿ ಕೇವಲ ನಿಷ್ಕಾಮ ಕರ್ಮವನ್ನೇ ಮಾಡುತ್ತ ಬರುವರೋ ಅಂಥವರು ಮಾತ್ರ ಕರ್ಮಯೋಗದಿಂದ ಆತ್ಮ ಚೈತನ್ಯವನ್ನು ಪ್ರಾಪ್ತ ಮಾಡಿಕೊಳ್ಳಲು ಸಮರ್ಥರಾಗುತ್ತಾರೆ.

ಭಕ್ತಿಯೇ ಭಗವಂತನನ್ನು ವಶಪಡಿಸಿಕೊಳ್ಳಬಲ್ಲದು.. ಭಗವಂತನನ್ನು ಅತಿ ತೀರ ಹತ್ತಿರ ಬರಮಾಡಿಕೊಳ್ಳುವ ಶಕ್ತಿಯು ಭಕ್ತಿಯೊಂದರಲ್ಲಿಯೇ ಇರುತ್ತದೆ. "ಜ್ಞಾನವು ಆಜ್ಞಾಪಾಲನ ಮಾಡುತ್ತದೆ; ಭಕ್ತಿಯು ಬಾಧ್ಯತೆಯನ್ನುಂಟು ಮಾಡುತ್ತದೆ." ಎಂದು ಹೇಳಲಾಗುತ್ತದೆ. ( Knowledge obeys, Bhakti compels ) ಪೂರ್ಣ ಯೋಗದ ಸಾಧಕನು ಜೀವನದಲ್ಲಿಯ ಪ್ರತ್ಯೇಕ ಕೆಲಸವನ್ನು, ಭಗವಚ್ಚಿಂತನೆಯನ್ನು ಮಾಡುತ್ತ, ಭಗವಂತನಿಗೆಂದೇ ಮಾಡುತ್ತಾನೆ. ಅವನು ಭಗವಂತನ ಸ್ಮರಣೆಯನ್ನು ಕ್ಷಣಮಾತ್ರವಾದರೂ ತನ್ನ ಸ್ಮೃತಿ ಪಥದಿಂದ ಅಗಲಗೊಡುವದಿಲ್ಲ. ಈ ರೀತಿ ಪೂರ್ಣಯೋಗದ ಸಾಧಕನು ಎಲ್ಲವನ್ನು ಮಾಡುತ್ತಿದ್ದೂ ಸದಾ ಸರ್ವದಾ ಭಗವತ್ ಪೂಜೆಯಲ್ಲಿಯೇ ರತನಾಗಿರುತ್ತಾನೆ. ಭಗವಂತನನ್ನುಳಿದು ಯಾವ ವಸ್ತುವೂ ಅವನಿಗೆ ತನ್ನದಾಗಿ ಉಳಿಯುವದಿಲ್ಲ. ಅವನು ಈ ಸಂಸಾರದಲ್ಲಿರುವುದೂ ಕೂಡ ಕೇವಲ ಭಗವಂತನಿಗಾಗಿಯೇ ಆಗಿರುವುದು. ಅದರಂತೆ ಅವನ ಸಾಧನೆಯಾದರೂ ಈ ಪ್ರಕಾರವಾಗಿ ವಾಸನಾ ರಹಿತವಾಗಿ ಅದರ ಧ್ಯೇಯವು ತನ್ನ ನಿರ್ವಾಣಕ್ಕಾಗಿ ಅಥವಾ ಮುಕ್ತಿಗಾಗಿ ಇಲ್ಲವೆ ಮಹಾನ್ ಶಕ್ತಿಯನ್ನು ಪ್ರಾಪ್ತ ಮಾಡಿಕೊಳ್ಳುವುದಕ್ಕಾಗಿ ಆಗಿರದೆ, ಕೇವಲ ಭಗವದಿಚ್ಛೆಯನ್ನು ಪೂರ್ತಿಗೊಳಿಸುವುದೇ ಆಗಿರುತ್ತದೆ. ಅವನ ವ್ಯಕ್ತಿತ್ವವೆಲ್ಲ ಭಗವಂತನಲ್ಲಿ ಲೀನವಾಗಿರುತ್ತದೆ; ಆ ಸ್ಥಳದಲ್ಲಿ ಕೇವಲ ಭಗವಂತನನೊಬ್ಬನೇ ತುಂಬಿರುತ್ತಾನೆ. ಅವನ ಜೀವನದ ತುಂಬೆಲ್ಲ, ಭಗವಂತನೆ ಅವನನ್ನು ತನ್ನ ಯಂತ್ರವನ್ನಾಗಿಸಿಕೊಂಡು ಕಾರ್ಯ ಮಾಡಿಸುತ್ತಾನೆ. ಈ ರೀತಿಯಾಗಿ ಅವನ ಹೃದಯವೆಲ್ಲ ಇಷ್ಟು ಭಗವನ್ಮಯವಾಗಿ ಹೋಗುತ್ತದೆ. ಭಗವತ್ ಸ್ಪರ್ಶದ ಅನುಭವವೂ ಕೂಡ ( ಏಕಮಯವಾಗುವದರಿಂದ ) ಆಗ ಅವನಿಗೆ ತಿಳಿಯದಾಗುತ್ತದೆ. ಸಾಧಕನು ಈ ರೀತಿ

ಭಗವಂತನೊಡನೆ ಅವಿಚ್ಛಿನ್ನವಾಗಿ ಏಕತೆಯ ಅನುಭವವನ್ನು ಪಡೆಯುತ್ತಾನೆ. ಇದು ವೈಷ್ಣವರ ಶ್ರೇಷ್ಠ ಗುರಿಗೂ ಪರಕೀಯ ವಸ್ತುವಾಗಿರುತ್ತದೆ. ಈ ಪ್ರಕಾರವಾಗಿ ಪೂರ್ಣ ಯೋಗದಲ್ಲಿ ಭಕ್ತಿ ಯೋಗದ ಸಮಾವೇಶವು ಸುಪೂರ್ಣವಾಗಿಯೂ ಓತಪ್ರೋತವಾಗಿಯೂ ತುಂಬಿಕೊಂಡಿರುತ್ತದೆ.

ಪೂರ್ಣಯೋಗದಲ್ಲಿ ಜ್ಞಾನಯೋಗದ ಸಮಾವೇಶವೂ ಹೇಗೆ ಆಗಿರುವುದೆಂದರೆ, ಮೊದಲು ನಾವು ಅಂತರಾತ್ಮನನ್ನು ಜಾಗ್ರತಗೊಳಿಸಿ ಅದನ್ನು ಅಜ್ಞಾನ ಸುಷುಪ್ತಿಗಳಿಂದ ಎತ್ತಿ ಉನ್ಮುಖ ಮಾಡಲು ಪ್ರಯತ್ನ ಮಾಡಬೇಕಾಗುವುದು. ಆಯಾ ಸಾಧನೆಗಳ ಮೂಲಕ ಕಾಮನೆ ವಾಸನೆ ಮೊದಲಾದವುಗಳ ಗ್ರಂಥಿಗಳನ್ನು ಬಿಚ್ಚಿ ಬಿಚ್ಚಿದಂತೆ ಆಗಿ ಆತ್ಮಕ್ಕೆ ವಿಕಸಿತವಾಗುವ ಅವಕಾಶವು ದೊರೆಯುತ್ತದೆ. ಹೀಗೆ ಇವುಗಳೆಲ್ಲ ಹೊರಗೆ ಬಂದ ಬಾನಂತೆ ಆತ್ಮಪ್ರಕಾಶ ದ್ವಾರದಿಂದ ಬಂಧನಗಳೆಲ್ಲ ಕಳಚಿದಂತಾಗಿ ಮನಸು ಮತ್ತು ಪ್ರಾಣಗಳ ಮೇಲೆ ಪ್ರಭುತ್ವವನ್ನು ಸ್ಥಾಪಿಸುವ ಕಾರ್ಯಕ್ಕೇ ಅಗತ್ಯತೆಯು ದೊರೆಯುವುದು. ಈ ಪ್ರಕಾರ ನಮ್ಮ ಹೃದಯ ಸಿಂಹಾಸನದಲ್ಲಿ ನಿಮ್ಮ ಪ್ರಕೃತಿಯ ಸ್ಥಾನದಲ್ಲಿ ಆತ್ಮನ ಅಧಿಕಾರವು ಪ್ರಸ್ಥಾಪಿತವಾಗುತ್ತ ಬರುವುದು ಹಾಗೂ ಅಲ್ಲಿ ಮೆಲ್ಲ ಮೆಲ್ಲಗೆ ಚೇತರವು ಪ್ರಾಪ್ತವಾಗುತ್ತ ನಡೆಯುವುದು. ನನ್ನ ಸಾಧನೆಯು ಯಾವ ಮಾರವಾಗಿ ನಡೆಯುವುದೋ ಅಲ್ಲಿ ಯಾವದೇ ಕರ್ಮ ಮಾಡುತ್ತಿದ್ದರೂ ಅದು ಭಗವದನುಕೂಲವಾಗಿಯೇ ಇರುವುದೆಂದು ನಾನು ಹೇಳಿಯೇ ಇದ್ದೇನೆ. ಎಲ್ಲವು ಭಗವಂತನ ದ್ವಾರಾ ಪ್ರೇರಿತವಾಗಿ ಬರುವುದರಿಂದ, ಯಾವುದನ್ನು ತ್ಯಜಿಸಬೇಕು, ಯಾವುದನ್ನು ನಮ್ಮೊಳಗೆ ಬರಗೊಡಬೇಕು ಎಂಬ ವಿಷಯಗಳಲ್ಲಿ ಅಲ್ಲಿ ಪ್ರಕಟಿತವಿರುವ ಅಂತರಾತ್ಮವು, ದೊಡ್ಡ ನೆರವನ್ನೇ ನೀಡುವುದು. ಕೊನೆಗೆ ಈ ಅಂತರಾತ್ಮವೇ ಜೀವಾತ್ಮನೊಡನೆ ಸಮರಸವಾಗುತ್ತ ಪರಮಾತ್ಮನ ವರೆಗೆ ಕೊಂಡೊಯ್ಯುವುದು. ಶ್ರೀ ಅರವಿಂದರು ಒಂದು ಕಡೆಗೆ ಹೀಗೆ ಹೇಳಿದ್ದಾರೆ. "ಒಂದು ವೇಳೆ ನೀವು ಮನ ಪ್ರಾಣಗಳನ್ನು ಹಿಡಿತದಲ್ಲಿ ತರಲು ಶಕ್ಯವಾದರೆ, ಅನುಭವ ಭಾಂಡಾರವನ್ನು ತುಂಬಿ ಬಿಟ್ಟರೆ, ಶಾರೀರಿಕ ಸಿದ್ಧಿ ದ್ವಾರಾ ಜನರನ್ನು ಚಕಿತಗೊಳಿಸುವುದರಲ್ಲಿ ಸಾಮರ್ಥ್ಯವನ್ನು ಪಡೆದಿದ್ದರೆ ಆಗ ಅಂತರಾತ್ಮವನ್ನು ಸಾಧನೆಯ ಪ್ರಧಾನ ಅಂಗವಾಗಿ ಮಾಡುವುದರಲ್ಲಿ ನೀವು ಅವಕಾಶವನ್ನೇ ಕೊಟ್ಟಿಲ್ಲವೆಂದೂ, ವಾಸ್ತವವಾಗಿ ನೀವು ಮಹತ್ವಪೂರ್ಣವಾದ ಏನನ್ನೂ ಮಾಡಿಲ್ಲವೆಂದೂ ಆಗುವುದು." ಆದ್ದರಿಂದ ಈ ಯೋಗದಲ್ಲಿ ಜ್ಞಾನಯೋಗದ ಸಾರವಿದೆ. ಮನುಷ್ಯನಲ್ಲಿ ವ್ಯಕ್ತಿಗತನಾಗಿರುವ ಈಶ್ವರನೆಂದು ಹೃದಯಸ್ಥಿತನಾದ ವಿಶ್ವೇಶ್ವರನ ಸಂಪೂರ್ಣ ಶಕ್ತಿಯನ್ನು ಜೀವನದ ಪ್ರತಿಯೊಂದು ಅಂಗಗಳಲ್ಲಿ ಪ್ರಸ್ಥಾಪಿತವಾಗುವಂತೆ ಮಾಡಬೇಕು.

ಇನ್ನು ಈ ಯೋಗದಲ್ಲಿ ತಾಂತ್ರಿಕ ಯೋಗದ ರೂಪವನ್ನು ನೋಡಿರಿ. ಶ್ರೀ ಅರವಿಂದರ ಯೋಗದಲ್ಲಿ ಶಕ್ತಿಯು ಪ್ರಾಣವೆಂದೇ ಒಪ್ಪಲಾಗಿದೆ. ತಾಂತ್ರಿಕಯೋಗದಲ್ಲಿ ತಂತ್ರಮಂತ್ರಗಳ ದ್ವಾರಾ ಸಾಧನೆಗೈದು ಶಕ್ತಿಯನ್ನು ಜಾಗ್ರತ ಗೊಳಿಸಬೇಕಾಗುತ್ತದೆ. ಆದರೆ ಪೂರ್ಣಯೋಗದಲ್ಲಿ ಶಕ್ತಿಯು ಪ್ರತಿಯೊಬ್ಬ ಮನುಷ್ಯನಲ್ಲಿ ಸ್ಥಿತವಿರುವುದೆಂದು ತಿಳಿದೇ ನಡೆಯಲಾಗುತ್ತದೆ. ಮತ್ತು ದಯಾಮಯಿಯಾದ ತಾಯಿ ಆ ಶಕ್ತಿಯನ್ನು ಶಿದ್ಧ ಶುದ್ಧವನ್ನಾಗಮಾಡಿ ಅದನ್ನೊಂದು ಪ್ರಭುವಿನ ಸುಂದರ ಯಂತ್ರವನ್ನಾಗಿ ಮಾಡಬಯಸುತ್ತಾಳೆ. ಆದರೆ ಮನುಷ್ಯನು ಇದಕ್ಕೆ ಅವಕಾಶ ಕೊಡದೆ, ಅಂಧಕಾರ ಕೂಪದಿಂದ ಅದನ್ನು ಮೇಲಕ್ಕೆಬ್ಬಿಸದೆ ಇರುವನು. ಆದ್ದರಿಂದ ಈ ಯೋಗ ಸಾಧನೆಯಲ್ಲಿ ಶಕ್ತಿಯೇ ಸರ್ವ ಪ್ರಧಾನವಾಗಿರುವುದು. ಹಾಗೂ ಶಕ್ತಿಗೆ ಶರಣು ಹೋಗುವುದು ಈ ಯೋಗದ ಪ್ರಧಾನಾಂಗವಾಗಿರುವುದು. ಈ ಯೋಗದಲ್ಲಿ ತಮ್ಮನ್ನು ಸಂಪೂರ್ಣವಾಗಿ ತಾಯಿಯ ಪಾದ ಕಮಲಗಳಲ್ಲಿ ಸಮರ್ಪಿತ ಮಾಡಿಕೊಳ್ಳುತ್ತ ಸಾಧನೆಯ ಸರ್ವ ಭಾರವನ್ನು ಆಕೆಯ ಮೇಲೆಯೇ ಒಪ್ಪಿಸಿ ಸಾಧಕನು ನಿಶ್ಚಿಂತನಾಗಿ ಬಿಡುವನು. ಯಾವನಿಗೆ ತಾಯಿಯ ಪಾದ ಕಮಲಗಳಲ್ಲಿ ಭಕ್ತಿ ಉದ್ಭವಿಸಲಿ

ಲ್ಲವೋ, ಯಾರು ತಾಯಿಯ ಕೃಪೆಯನ್ನು ದೊರಕಿಸಿಕೊಳ್ಳಲು ಯೋಗ್ಯರಾಗರೋ ತಾಯಿಯ ಚರಣಕಮಲಗಳಲ್ಲಿ ತನ್ನ ಸರ್ವಸ್ವವನ್ನು ಅರ್ಪಿಸಲು ಸಿದ್ಧರಾಗಲಿಲ್ಲವೋ, ತಾಯಿಯ ಅಂತಃಕರಣದ ಹೊಸಲಿನಲ್ಲಿ ತಾನೂ ಸಮರಸವಾಗಲು ಸಮರ್ಥನಾಗಲಿಲ್ಲವೋ, ಅವನು ಸುಖರೂಪವಾಗಿ ಈ ಯೋಗಯಾತ್ರೆಯನ್ನು ಮಾಡಲಾರನು. ಹಾಗೆಯೇ ಪ್ರಕೃತಿಯ ದುರ್ಭೇದ್ಯ ಮಾಯೆಯನ್ನು ಭೇದಿಸಿ ಆಕೆಯ ದಿವ್ಯಜ್ಯೋತಿಯ ಮಂದಾಕಿನಿಯನ್ನು ತನ್ನ ಸತ್ತೆಯ ಮೇಲೆ ಪ್ರವಹಿಸುವಂತೆ ಮಾಡಲಾರನು. ಯಾವನಿಗೆ ಮಾತೆಯ ಪದ ಪದ್ಮಗಳಲ್ಲಿ ದೃಢ ವಿಶ್ವಾಸವೂ ಮತ್ತು ಆಕೆಯ ಶಕ್ತಿಯಲ್ಲಿ ಸಂಪೂರ್ಣ ನಿರ್ಭರತೆಯೂ ಉತ್ಪನ್ನವಾಗಿದೆಯೇ ಅವನಿಗೆ ಈ ವಿಜಯ ಯಾತ್ರೆಯುವ ರದಾನವು ಪ್ರಾಪ್ತವಾಗಿರುವುದೆಂದೇ ತಿಳಿಯಬೇಕು. ಆ ಮೇಲೆ ಅವನಿಗೆ ಕೇವಲ ಅಸೀಮ ಧೈರ್ಯ, ಉತ್ಕಟವಾದ ತತ್ಪರತೆ, ಮತ್ತು ಏಕಾಗ್ರತೆಗಳೊಡನೆ ಕೆಲವು ಸಾರೆ ತ್ವರಿತವಾಗಿಯೂ ಕೆಲವು ಸಾರೆ ಮಂದವಾಗಿಯೂ ನಡೆದು ಪಥ ಕ್ರಮವನ್ನು ಪೂರ್ಣಗೊಳಿಸುವದು ಮಾತ್ರ ಇರುವದು. ಭಯ ಹಾಗೂ ನಿರಾಶೆಗಳನ್ನು ಅವನು ತನ್ನ ಎಡಬಲಕ್ಕೂ ಸುಳಿಯಗೊಡಕೂಡದು. ಯಾರಿಗೆ ಮಾತೆಯ ಪ್ರಸಾದದ ಕಣ ಮಾತ್ರವಾದರೂ ದೊರಕಿದೆಯೋ ಅವನಿಗೆ ಪಥಕ್ರಮವನ್ನು ಪೂರ್ಣಗೊಳಿಸುವಲ್ಲಿ ಅಡ್ಡ ಬರುವಂಥ ಯಾವ ಬಾಧೆಯು ಈ ಜಗತ್ತಿನಲ್ಲಿದೆ ? ತಾಯಿಯು, ನಮಗೆ ನೆರವು ನೀಡಲೆಂದು, ನಮ್ಮ ಕೂಗನ್ನು ಕೇಳಲೆಂದು, ನಮ್ಮ ಸಂಕಟಗಳಲ್ಲಿ ತನ್ನ ದಿವ್ಯ ಕೃಪೆಯನ್ನು ಕರುಣಿಸಲು, ಸದಾ ಸಿದ್ಧಳೇ ಇರುವಳು; ಕೇವಲ ದೃಢತೆಯಿಂದ ಆಕೆಯ ಚರಣಗಳನ್ನು ಅಪ್ಪಿಕೊಳ್ಳುವ ಅವಶ್ಯಕತೆ ಮಾತ್ರ ಉಂಟು. ಯಾರು ಆ ತಾಯಿಯನ್ನು ತಮ್ಮ ಹೃದಯ ಮಂದಿರದಲ್ಲಿ ಪ್ರಸ್ಥಾಪಿಸಿ ಆಕೆಯ ನಿಸ್ಸೀಮ ಭಕ್ತರಾಗಿ ಬಿಡುವರೋ, ಅವರನ್ನು, ಆ ತಾಯಿ ಒಂದು ದಿನ ಮಾನವೀಯತೆಯಿಂದ ಎತ್ತಿ ದಿವ್ಯತೆಯ ಪೀಠದಲ್ಲಿ ಕುಳ್ಳಿರಿಸಿ ಬಿಡುವಳು.

ಅನುವಾದಕರು—**ದೇಸಾಯಿ ದತ್ತಮೂರ್ತಿ**

ತಾಪಸ ವೈರಾಗ್ಯವನ್ನೂ ತಾಮಸಿಕವೈರಾಗ್ಯವನ್ನೂ ನಾನು ಹಿಂದಕ್ಕೆ ಆಕ್ಷೇಪಿಸಿದ್ದುಂಟು. ಜಗತ್ತು ದಯಪಾಲಿಸಿದ ವರದಾನಗಳನ್ನೆಲ್ಲ ಆಸ್ವಾದಿಸಿ ಆ ಮೇಲೆ ಅವು ನಿಸ್ಸಾರವೆಂದೂ ತ್ರುಟಿಪೂರ್ಣವೆಂದೂ ಅರಿತು ಹೆಚ್ಚಿನ ಗುರಿಯತ್ತ ಹೊರಳಿದವನ ವೈರಾಗ್ಯವು ಅಥವಾ ಜೀವನ ಸಂಗ್ರಾಮದಲ್ಲಿ ತನ್ನ ಪಾಲಿನ ಹೋರಾಟವನ್ನು ಎಸಗಿಯೂ ಅತ್ತಕ್ಕೆ ಇದಕ್ಕೂ ಮಿಗಿಲಾದುದು ಬೇಕೆಂದು ಅರಿತವನ ವೈರಾಗ್ಯವು ಸಂಪೂರ್ಣ ಸಹಕಾರಿಯಾಗಿದೆಯಲ್ಲದೆ ಅದು ಯೋಗಕ್ಕೆ ಸಿಂಹದ್ವಾರವಾಗಿದೆ. ಜೀವನವನ್ನೂ ಜಗತ್ತನ್ನೂ ಅನುಕೂಲವಾಗ, ಅಲ್ಲಗಳೆದು ಅನಿರ್ವಚನೀಯದಲ್ಲಿ ಲೀನವಾಗ ಬಯಸುವ ವೃತ್ತಿಗೇ ನಾನು ತಾಪಸ ವೈರಾಗ್ಯವೆಂದು ಕರೆದುದು. ಇದನ್ನು ನಾನು ಆಕ್ಷೇಪಿಸುತ್ತೇನೆ ಯಾಕಂದರೆ ಜೀವನದಲ್ಲಿ ದೈವತ್ವವನ್ನು ತರುವದೇ ನನ್ನ ಗುರಿಯಾಗಿದೆ. ಆದರೆ ಈಗಿದ್ದ ಸ್ಥಿತಿಯಲ್ಲಿಯೇ ಸಮಾಧಾನ ಹಚ್ಚಿಕೊಂಡುದಾದರೆ ದೈವತ್ವವನ್ನು ತರುವ ಹವಣಿಕೆಗೆ ಅರ್ಥವೇ ಇಲ್ಲ ಆದ್ದರಿಂದ ಸಾಮಾನ್ಯ ಜೀವನದ ಅತೃಪ್ತಿಯಿಂದುಂಟಾದ ವೈರಾಗ್ಯವು ನನ್ನ ಯೋಗಕ್ಕೆ ಸಂಪೂರ್ಣ ಗ್ರಾಹ್ಯವಾಗಿದೆಯಷ್ಟೇ ಅಲ್ಲ; ಅದು ಒಂದು ದೃಷ್ಟಿಯಿಂದ ಅನಿವಾರ್ಯವೇ ಆಗಿದೆ.

**—ಶ್ರೀ ಅರವಿಂದರು**

# ಇಂದಿನ ದಾರ್ಶನಿಕರಲ್ಲಿ ಶ್ರೀ ಅರವಿಂದರ ಸ್ಥಾನ

ಇಂದಿನ ದಾರ್ಶನಿಕರಲ್ಲಿ ಮುಕುಲಿತವಾಗಿರುವ ಅನೇಕ ಭವ್ಯ ಭಾವನೆಗಳು ಶ್ರೀ ಅರವಿಂದರಲ್ಲಿ ಅರಳಿವೆ. ಅವರ ದರ್ಶನದಲ್ಲಿ ಇಹಪರಗಳ ಸಮನ್ವಯ ಬಹು ಮುಖ್ಯವಾದದ್ದು. ಅವರ ದರ್ಶನವನ್ನು ಪಾರಲೌಕಿಕ (other worldly) ಎಂದಾಗಲಿ ಐಹಿಕ (this worldly) ವೆಂದಾಗಲಿ ವರ್ಣಿಸಲು ಸಾಧ್ಯವಿಲ್ಲ. 'ಇಹೈವ ತೈರ್ಜಿತಸ್ಸರ್ಗೋ ಏಷಾಂ ಸಾಮ್ಯೇ ಸ್ಥಿತಂ ಮನಃ' 'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತಂ ಸಮಾಃ' ಎಂಬ ವಾಕ್ಯಗಳು ಶ್ರೀಅರವಿಂದದರ್ಶನದ ಮೂಲ ಸೂತ್ರಗಳು. ಶ್ರೀಅರವಿಂದರ ಸಿದ್ಧಾಂತವನ್ನು ಇಹ ಪರ ಸಮನ್ವಯ ಸಿದ್ಧಾಂತ ಎಂದು ಕರೆಯಬಹುದು.

ಪ್ರತಿ ಚೇತನವೂ ಜ್ಞಾನ ಶಕ್ತಿ, ಇಚ್ಛಾಶಕ್ತಿ, ಕ್ರಿಯಾಶಕ್ತಿಗಳ ಸಮನ್ವಯ ಮತ್ತು ಸಾಮರಸ್ಯವೆಂಬುದು ಶ್ರೀ ಅರವಿಂದದರ್ಶನದ ಮತ್ತೊಂದು ಮೂಲತತ್ತ್ವ. ಆದ್ದರಿಂದ ಮಾನವನ ವ್ಯಕ್ತಿತ್ವದ ಪರಿಪುಷ್ಟಿಯಲ್ಲಿ ಇವೆಲ್ಲ ಅಂಶಗಳನ್ನೂ ಕಾಣುತ್ತೇವೆ. ಸಾಧನಮಾರ್ಗದಲ್ಲಿ ಜ್ಞಾನ, ಭಕ್ತಿ, ಕರ್ಮಗಳ ಪರಿಪಾಕ ಅವಶ್ಯಕ. ಮನುಷ್ಯನ ಮಸ್ತಿಷ್ಕ, ಹೃದಯ, ಹಸ್ತಗಳ ಸಮೀಕರಣ ಶಿಕ್ಷಣದ ಗುರಿಯಾಗಬೇಕೆಂಬುದು ಇದರಿಂದ ಉಗಮವಾದ ತತ್ತ್ವ. ಶ್ರೀಅರವಿಂದರ ದರ್ಶನದಲ್ಲಿ ಪಾರಮಾರ್ಥಿಕ ವ್ಯಾವಹಾರಿಕ ಎಂಬ ದ್ವೈತ ಭಾವಕ್ಕೆ ಅವಕಾಶವಿಲ್ಲ. ವ್ಯವಹಾರದಲ್ಲಿ ಪರಮಾರ್ಥವನ್ನೂ ಪರಮಾರ್ಥದಲ್ಲಿ ವ್ಯವಹಾರವನ್ನೂ ಕಾಣುವುದು ಜೀವನದ ಜಾಣತನ. ಈ ಜಾಣತನವಿಲ್ಲದೆಡೆ ಮನುಷ್ಯನು ಮೋಹ ಮುದ್ಗರಕ್ಕೆ ಬಲಿಯಾಗುತ್ತಾನೆ. ಈ ಜಾಣತನವಿದ್ದೆಡೆ ವ್ಯಕ್ತಿತ್ವದ ಪರಿಪುಷ್ಟಿ ಸಾಧ್ಯವಾಗುತ್ತದೆ.

ಮನುಷ್ಯ ಜೀವನದ ಮುಖ್ಯ ಗುರಿ ಮುಕ್ತಿಪ್ರಾಪ್ತಿ. ಶ್ರೀಅರವಿಂದರ ದೃಷ್ಟಿಯಲ್ಲಿ ಮುಕ್ತಿಯೆಂದರೆ ವ್ಯಕ್ತಿತ್ವದ ವಿನಾಶವಲ್ಲ. ಇದನ್ನು ಶೂನ್ಯವೆಂದೂ ನಿರ್ವಾಣವೆಂದೂ ಕೆಲವು ಸಿದ್ಧಾಂತಗಳು ಕರೆದಿವೆ. 'ಶೂನ್ಯಸಂಪಾದನೆ' ಎಂದರೆ ಮೋಕ್ಷ ಸಂಪಾದನೆ ಎಂಬ ಭಾವವನ್ನು ಕಾಣುತ್ತೇವೆ. ಶ್ರೀಅರವಿಂದ ದರ್ಶನದ ದೃಷ್ಟಿಯಿಂದ 'ಶೂನ್ಯ' ವೆಂದರೆ ವರ್ಣನಾತೀತವಾದದ್ದು, ಅವಾಙ್ಮನಸಗೋಚರವಾದದ್ದು, ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ ಎಂದು ಹೇಳುವಂಥಾದ್ದು. ಬೌದ್ಧ ಸಿದ್ಧಾಂತದಲ್ಲಿ ಮುಕ್ತಿಪ್ರಾಪ್ತಿಯನ್ನು ನಿರ್ವಾಣಪ್ರಾಪ್ತಿಎಂದು ವರ್ಣಿಸಿದೆ. ಮಾಧ್ಯಮಿಕ ಸಿದ್ಧಾಂತದ ಪ್ರಕಾರ, ನಾಗಾರ್ಜುನ ಸಿದ್ಧಾಂತದ ಪ್ರಕಾರ ನಿರ್ವಾಣವೆಂಬುದು ಆತ್ಮನ ಅವರ್ಣನೀಯ ಸ್ವಾತಂತ್ರ್ಯಸ್ಥಿತಿ. 'ನಿರ್ವಾಣ' ಪದದ ರೂಢಾರ್ಥ 'ಆರಿಸುವುದು' 'ಅಳಿಸುವುದು' ಎಂದಿದೆ. ಹೊತ್ತಿಸಿದ ದೀಪವೊಂದು ನಂದಿ ಹೋಗುವಂತೆ ನಾವು ತೃಷ್ಣಾಸಂಗ ಸಮುದ್ಭವವಾದ ಅಹಂ' ಎಂಬ ನಾವೇ ಹೊತ್ತಿಸಿಕೊಂಡ ದೀಪವನ್ನು ಅಳಿಸುವುದು ನಿರ್ವಾಣದ ಕುರುಹು. ಅಹಂಕಾರದಿಂದ ಮಮಕಾರದ ಉತ್ಪತ್ತಿಯಾಗುತ್ತದೆ. ಮಮಕಾರದಿಂದ ದುಃಖ ಪರಂಪರೆ ಪ್ರಾಪ್ತವಾಗುತ್ತದೆ. ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಭಿಜಾಯತೇ ಕ್ರೋಧಾತ್ ಭವತಿ ಸಮ್ಮೋಹಃ ಸಮ್ಮೋಹಾತ್ ಸ್ಮೃತಿ ವಿಭ್ರಮಃ, ಸ್ಮೃತಿ ಭ್ರಂಶಾತ್ ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ ಎಂದು ಭಗವದ್ಗೀತೆಯು ಮನುಷ್ಯನ ಅಂತರಂಗದಲ್ಲಿ ಆಗುವ ವಿನಾಶಕ ಪ್ರತಿಕ್ರಿಯೆಯ

ಸರಪಣಿಯನ್ನು ವರ್ಣಿಸುತ್ತದೆ. ನಿರ್ವಾಣವನ್ನು ಶ್ರೀಅರವಿಂದರು 'extinction, not necessarily of all being, but of being as we know it; extinction of ego, desire and egoistic action and mentality' ಎಂದು ವಿವರಿಸಿದ್ದಾರೆ. ನಿರ್ವಾಣವೆಂದರೆ ಅಹಂಭಾವದ ಅವಶೇಷ ಕಿಂಚಿತ್ತೂ ಉಳಿಯದ ಲಯ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀಅರವಿಂದರ ದೃಷ್ಟಿಯಲ್ಲಿ ಮೋಕ್ಷವೆಂದರೆ ಆತ್ಮವಿನಾಶವಲ್ಲ, ಆತ್ಮವಿಕಾಸ. ನಿರ್ವಾಣವೆಂದರೆ ಸ್ವಾರ್ಥದ ವಿನಾಶ ಮತ್ತು ಪರಾರ್ಥದ ಪ್ರಾದುರ್ಭಾವ. ವಿಕಾಸ ಎಂದರೆ ಹೂವು ಅರಳಿದಂತೆ ಅರಳುವದು. ಹೂವು ಮೊಗ್ಗಾಗಿರುವವರೆಗೂ ಇತರರ ಆಘ್ರಾಣಕ್ಕೆ ಸುವಾಸನೆಯನ್ನು ಹೊರಸೂಸುವುದಿಲ್ಲ. ಅದು ಅರಳಿದಾಗ ಮಾತ್ರ ಪರಾರ್ಥವಾದ ಸುವಾಸನೆಯನ್ನು ಕೊಡುತ್ತದೆ, ಪರಿಮಳವನ್ನು ಪ್ರಪಂಚದ ಮೇಲೆ ಬೀರುತ್ತದೆ. ಆತ್ಮವಿಕಾಸಮಾಡಿಕೊಂಡ ಮಹಾಯೋಗಿಗಳಿಂದ ಲೋಕಕ್ಕೆ ಆಗುವ ಉಪಕಾರವೇ ಇದು. ಕುಳಿತಲ್ಲಿ ಕುಳಿತು, ಇದ್ದಲ್ಲಿ ಉಳಿದು ತನ್ನ ವ್ಯಕ್ತಿವಿಕಾಸದಿಂದ ಲೋಕಕ್ಕೆ ಪರಿಮಳ ಬೀರಿದ ಮಹಾ ಯೋಗಿಗಳಲ್ಲಿ ಶ್ರೀಅರವಿಂದರಿಗೆ ಹಿರಿದಾದ ಸ್ಥಾನವಿದೆ. ಮಾನವ ಎಲ್ಲಿಯವರೆಗೆ ತನಗಾಗಿ ಮಾತ್ರ ಬದುಕುವನೋ ಅಲ್ಲಿಯವರೆಗೆ ಅವನ ಬಾಳ್ವೆಯ ಮೊಗ್ಗು ಮೊಗ್ಗಾಗಿಯೇ ಉಳಿಯುತ್ತದೆ ಹಾಗೆಯೇ ಬಾಡಿಯೂ ಹೋಗಬಹುದು. ಆದರೆ ಇತರರಿಗಾಗಿ ತಾನು ಬದುಕಲು ಮೊದಲು ಮಾಡಿದರೆ ಅವನ ಜೀವನದ ಮೊಗ್ಗು ಕ್ರಮೇಣ ಅರಳಲು ತೊಡಗುತ್ತದೆ

ಮಾನವನು ತನಗಾಗಿ ತಾನಿರುವ ಸಿದ್ಧಿಯನ್ನು ಪಡೆಯಬೇಕಾದರೆ ಅದರ ಸಲುವಾಗಿ ಯತ್ನ ಮಾಡುವದು ಅವಶ್ಯಕ. ಆದರೆ ಲೋಕದಲ್ಲಿ ಕೆಲವರು 'ಪುಣ್ಯಸ್ಯ ಫಲಮಿಚ್ಛಂತಿ ಪುಣ್ಯಂ ನೇಚ್ಛಂತಿ ಮಾನವಾಃ' ಎಂದು ಹೇಳಿದಂತೆ ಪುಣ್ಯಕರ್ಮವನ್ನೆಸಗದೆ ಪುಣ್ಯದ ಫಲವನ್ನು ಮಾತ್ರ ಬಯಸುವವರು. ಆದರೆ ಇದು ಸಾಧ್ಯವಿಲ್ಲ. ಹೇಗೆ ಭೌತ ಪ್ರಪಂಚದಲ್ಲಿ ಕಾರ್ಯ ಕಾರಣ ನಿಯಮವನ್ನು ಉಲ್ಲಂಘಿಸಲು ಸಾಧ್ಯವಿಲ್ಲವೋ ಅದೇರೀತಿ ಚಿತ್ತವೃತ್ತಿಯಲ್ಲಿಯೂ ಕಾರ್ಯಕಾರಣನಿಯಮವಿದೆ. ಸಾಧನವಿಲ್ಲದೆ ಸಿದ್ಧಿಯಿಲ್ಲವೆಂಬ ತತ್ತ್ವ ಶ್ರೀಅರವಿಂದರ ದರ್ಶನದಲ್ಲಿ ಪ್ರಮುಖಸ್ಥಾನ ಪಡೆದಿದೆ. ಸಿದ್ಧಿಯನ್ನು ಪಡೆಯಲು ಪುರುಷ ಪ್ರಯತ್ನ ಅವಶ್ಯಕವಾಗಿರಬೇಕು. ಆದರೆ ಈ ಸಾಧನೆಯಲ್ಲಿ ಇತರ ಸಾಧಕ, ಸಿದ್ಧಪುರುಷರ ನೆರವನ್ನು ಬಯಸುವುದು ತಪ್ಪಲ್ಲ. ಅವರ ಸಹಾಯವನ್ನು ಕೋರುವುದೂ ತಪ್ಪಲ್ಲ. ಸಾಧಕನಿಗೆ ಗುರು ಸಾನ್ನಿಧ್ಯ, ಗುರು ಕೃಪೆ ಅವಶ್ಯಕವೆಂಬುದು ಅರವಿಂದರಲ್ಲಿಯೂ ಸಂದೇಹವಿಲ್ಲ; ಆದರೆ ಗುರು ಮಾರ್ಗದರ್ಶಕ ಮಾತ್ರ. ತಾನು ಹೋಗುವ ದಾರಿಯಲ್ಲಿ ಸಾಧಕನು ತನ್ನನ್ನು ಹಿಂಬಾಲಿಸಬೇಕೆಂದು ಕೋರುವನು. ಪ್ರಾತಿಸಿಧ್ಯದ ಮೋಕ್ಷಕ್ಕೆ ಶ್ರೀ ಅರವಿಂದರ ದರ್ಶನದಲ್ಲಿ ಸ್ಥಾನವಿಲ್ಲ ಗುರುಕೃಪೆ ಮತ್ತು ಭಾಗವತ ಅನುಗ್ರಹಗಳು ಪ್ರೋತ್ಸಾಹಕಾರಕವಾದುವಷ್ಟೇ ಎಂಬುದು ಶ್ರೀಅರವಿಂದರ ಮತ. 'ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು'ಎನ್ನುವ ಸ್ವತಂತ್ರ ವಿಚಾರಕ್ಕೆ ಶ್ರೀ ಅರವಿಂದರ ದರ್ಶನದಲ್ಲಿ ಯಥೇಚ್ಛಸ್ಥಾನವಿದೆ. ಅಂಧ ಶ್ರದ್ಧೆಗೆ ಇಲ್ಲಿ ಎಡೆಯಿಲ್ಲ.

ಸಾಧನ ಕ್ರಮದಲ್ಲಿ ಒಂದು ಕ್ರಮವಿದೆ; ಶಿಸ್ತಿದೆ, ಸಂಯಮವಿದೆ, ಶ್ರಮಸಹಿಷ್ಣುತೆಯಿದೆ. ಇದನ್ನು ತಪಸ್ಸು ಎಂದು ಕರೆಯ ಬಹುದು ಶ್ರೀ ಅರವಿಂದರ ದೃಷ್ಟಿಯಲ್ಲಿ ತಪಸ್ಸೆಂದರೆ ಬರಿಯ ದೇಹ ದಂಡನೆಯಲ್ಲ. ಅನೇಕರ ಭಾವನೆಯಲ್ಲಿ ತಪಸ್ಸೆಂದರೆ ಈ ದೇಹವನ್ನು ಸದೆಬಡಿಯುವುದೆಂಬ ಅರ್ಥ ಕಂಡು ಬರುತ್ತದೆ. ಈ ಭಾವನೆಯಲ್ಲಿ ಈ ದೇಹ ನಮ್ಮ ಶತ್ರುವೆಂತಲೂ ಇದನ್ನು ನಿಕೃಷ್ಟವಾಗಿ ಕಂಡಷ್ಟೂ ನಾವು ಆಧ್ಯಾತ್ಮಿಕ ಮಾರ್ಗದಲ್ಲಿ ಮುಂದುವರಿದಿರುವೆವೆಂದೂ ಒಂದು ಭ್ರಮೆ ಇದೆ. ಈ ಭ್ರಮೆಯನ್ನು ಶ್ರೀಅರವಿಂದರು ಹೋಗಲಾಡಿಸುತ್ತಾರೆ. ಇವರ ದೃಷ್ಟಿಯಲ್ಲಿ ಈ ದೇಹ ಧರ್ಮದ ಸಾಧನ, ಇವರು ಕಾಳಿ

ದಾಸನ 'ಶರೀರಮಾದ್ಯಂ ಖಲು ಧರ್ಮಸಾಧನಂ' ಎಂಬ ತತ್ತ್ವವನ್ನು ಸಂಪೂರ್ಣವಾಗಿ ನಂಬುವರು. ರವೀಂದ್ರನಾಥ ಠಾಕೂರರೂ ಇದೇ ನಂಬಿಕೆಯನ್ನು ಪಡೆದಿದ್ದರು. ಈ ರೀತಿಯ ದೇಹ ಧರ್ಮ ಸಂಬಂಧ ತತ್ತ್ವದಲ್ಲಿ ದೇಹದ ದಂಡನೆಯೇ ಪರನು ಪ್ರಯೋಜನವಲ್ಲ. ದೇಹವನ್ನು ದುರ್ಬಲಗೊಳಿಸದೆ ಶಕ್ತಿಯುತ ವನ್ನಾಗಿ ಮಾಡಿಕೊಳ್ಳಬೇಕು. ಆರೋಗ ದೃಢಕಾಯವನ್ನು ಪಡೆಯಬೇಕಾದುದಗತ್ಯ ಸಾಧನ ಮಾರ್ಗದಲ್ಲಿ ನಮ್ಮ ದೈಹಿಕ ಮತ್ತು ಮಾನಸಿಕ ಶಕ್ತಿಗಳೆಲ್ಲವನ್ನೂ ಕೇಂದ್ರೀಕರಣ ಮಾಡಬೇಕಾಗುವದು. ದೈಹಿಕ ದೌರ್ಬಲ್ಯ ಮತ್ತು ಮಾನಸಿಕ ದೌರ್ಬಲ್ಯಗಳು ವಿಲಿಯಮ್ ಜೇಮ್ಸ್ (William James) ಎಂಬ ಮನಃಶಾಸ್ತ್ರಜ್ಞ ಮತ್ತು ದಾರ್ಶನಿಕನು ತನ್ನ 'ವರೈಟೀಸ್ ಆಫ್ ರಿಲಿಜಸ್ ಎಕ್ಸಪೀರಿಯನ್ಸ್' (Varieties of Religious Experience) ಎನ್ನುವ ಗ್ರಂಥದಲ್ಲಿ ವಿವರಿಸಿರುವ "ವ್ಯಾಧಿಗ್ರಸ್ತ ಚೇತನ (Sick soul)" ವನ್ನು ನಿರ್ಮಾಣ ಮಾಡುವವು. ಇವಕ್ಕೆ ಅವಕಾಶ ಕೊಡದ ರೀತಿಯಲ್ಲಿ ನಮ್ಮ ದೇಹ ಶಕ್ತಿ ಪ್ರಾಣಶಕ್ತಿಗಳನ್ನು ಆಧ್ಯಾತ್ಮಿಕ ಶಕ್ತಿಯ ಪ್ರಾದುರ್ಭವಕ್ಕೆ ವಿನಿಯೋಗ ಮಾಡಿಕೊಳ್ಳುವ ಕ್ರಮವನ್ನು ಹಠಯೋಗದಲ್ಲಿ ಪ್ರತಿಪಾದಿಸಿದೆ. ತಪಸ್ಸಿನ ಕ್ರಮವನ್ನೂ ಹಠಯೋಗ ಹೇಳಿಕೊಡುತ್ತದೆ. "ತಪಸ್ಸು ಬರಿದೇಹ ದಂಡನೆಯಲ್ಲ; ಸೃಷ್ಟಿಸ್ಥಿತಿ ಲಯನಿರ್ಮಾಪಕವಾದ, ನಮ್ಮಲ್ಲಿ ಅಂತರ್ಹಿತವಾದ ದಿವ್ಯಶಕ್ತಿಯನ್ನು ಆಧ್ಯಾತ್ಮಿಕ ಸಾಧನೆಯಿಂದ ವ್ಯಕ್ತಗೊಳಿಸುವುದು ಮತ್ತು ದೇಹ ತಾಳಿ ಬರುವಂತೆ ಮಾಡುವುದು" (Tapasya is more than discipline; it is the materialisation in ourselves by spiritual means of the divine energy creative, preservative and destructive) ತಪಸ್ಸು ವಿಷಯಲಂಪಟರಿಗೆ ಸಾಧ್ಯವಿಲ್ಲವೆಂಬುದು ಸ್ಪಷ್ಟ. ವಿಷಯವಾಸನೆಗಳಿಗೆ ಗುಲಾಮನಾದವನಿಂದ ಆತ್ಮದ ಧೀರತನ ಸ್ವಾತಂತ್ರ್ಯ ಸ್ವರಾಜ್ಯಗಳನ್ನು ಗಳಿಸಲು ಸಾಧ್ಯವಿಲ್ಲ ಸಾಧಕನನ್ನು ಉಪನಿಷತ್ತು 'ಧೀರ' ನೆಂದು ಕರೆದುದು ಈ ಅರ್ಥದಲ್ಲಿ. ಸಾಧಕನ ಮಾರ್ಗ ಸುಲಭಸಾಧ್ಯವೆಂದು ಯಾರೂ ಭಾವಿಸಬಾರದು. 'ಕ್ಷುರಸ್ಯ ಧಾರಾ ನಿಶಿತಾ ದುರತ್ಯಯಾ' ಎಂಬ ಉಪನಿಷತ್ತಿನ ವಾಕ್ಯದ ಭಾವವೇ ಇದು.

ಸಿದ್ಧಿಯ ಪೂರ್ವಭಾವಿಯಾಗಿ ಸಾಧಕನ ಮೊದಲಿನ ಹಂತವಾಗಿ ಏರ್ಪಡಿಸಿರುವ ಕ್ರಮವನ್ನು ಹಠಯೋಗ ಎಂದು ಕರೆಯಬಹುದು. ಆಸನ ಪ್ರಾಣಾಯಾಮಗಳು ಇದರ ಅಂಗಗಳು. ಆಹಾರ ವಿಹಾರ ಶುದ್ಧಿಗಳೂ ಇದರ ಆವಶ್ಯಕ ಅಂಶಗಳು. "ಆಹಾರಶುದ್ಧೌ ಸತ್ತ್ವಶುದ್ಧಿಃ ಸತ್ತ್ವಶುದ್ಧೌ ಧ್ರುವಾ ಸ್ಮೃತಿಃ" ಎಂದು ಉಪನಿಷದ್ವಾಕ್ಯ ಹೇಳುತ್ತದೆ. ಶ್ರೀ ಅರವಿಂದರ ಅಭಿಪ್ರಾಯದಲ್ಲಿ ಸೂಕ್ಷ್ಮವಾದ ಮನೋಮಯ ಕೋಶ ವಿಜ್ಞಾನಮಯ ಕೋಶಗಳನ್ನೂ ಶುಭಾಶ್ರಯ ಶುಭಚಿಂತನೆಗಳಿಂದ ನಿರ್ಮಲ ಮಾಡಿಕೊಳ್ಳಬೇಕಾಗಿರುವಂತೆ ಅವುಗಳಿಗಿಂತಲೂ ಸ್ಥೂಲವಾದ ಅನ್ನಮಯ ಮತ್ತು ಪ್ರಾಣಮಯ ಕೋಶಗಳನ್ನೂ ಪರಿಶುದ್ಧಿಗೊಳಿಸುವುದು ಆವಶ್ಯಕ. ಮನೆಗೆ ದೇವತೆಯೊಂದನ್ನು ಬರಮಾಡಿಕೊಳ್ಳುವಾಗ ಮನೆಯನ್ನು ಗುಡಿಸಿ ತೊಳೆದು ರಂಗವಲ್ಲಿ ಹಾಕಿ ಶುಭವಾದ ತಳಿರು ತೋರಣಗಳಿಂದ ಅಲಂಕಾರ ಮಾಡಿ ಅಣಿ ಮಾಡುವಂತೆ ಪರಮಾತ್ಮನ ದಿವ್ಯಜ್ಯೋತಿಯು ನಮ್ಮ ಪಂಚಕೋಶಗಳಲ್ಲಿ ಪ್ರವೇಶಿಸಿ ಅವುಗಳನ್ನು ತೇಜಃಪುಂಜವಾಗಿ ಮಾಡಲು ಪ್ರವೇಶಿಸುವಾಗ ನಮ್ಮ ಕೋಶಗಳನ್ನೂ ಕಶ್ಮಲಗಳಿಂದ ಗುಡಿಸಿ ತೊಳೆದು ಅಲಂಕಾರವಮಾಡಿಕೊಳ್ಳಬೇಕು. ಆಗಲೇ ನಿಜವಾದ ಆಧ್ಯಾತ್ಮಿಕ ಅರ್ಥದಲ್ಲಿ ದೇವರು ನಮ್ಮ ಮೈಮೇಲೆ ಬಂದಾನು. ಆ ದೇವಾವೇಶಕ್ಕೆ ಒಳಗಾದೇವು. ಆ ದೈವ ನಮ್ಮನ್ನು ಹಿಡಿದೀತು. ನಮ್ಮಿಂದ ಅದರ ಸಂಕಲ್ಪಗಳನ್ನು ಈಡೇರಿಸಿಕೊಂಡೀತು. ಇಂತಹ ಸಿದ್ಧತೆಯನ್ನು ನಮಗೆ ಮಾಡಿಕೊಡುವ ಹಠಯೋಗವನ್ನು ಕುರಿತು ಶ್ರೀ ಅರವಿಂದರು ಹೀಗೆ ಹೇಳುತ್ತಾರೆ. "ಅದು ಅನ್ನಮಯ ಪ್ರಾಣಮಯ ಕೋಶಗಳನ್ನು ಪರಿಪೂರ್ಣತೆಯ ಮತ್ತು ಸಿದ್ಧಿಯ ಸಾಧನ ಸಾಮಗ್ರಿಯನ್ನಾಗಿ ಆರಿಸಿಕೊಳ್ಳುತ್ತದೆ. ಸ್ಥೂಲ ದೇಹವು ಅನ್ನಮಯ ಪ್ರಾಣಮಯ ಕೋಶಗಳ

ಅವಿನಾಭೂತ ಸಂಗಮವಾಗಿದೆ. ಮಾನವನಲ್ಲಿ ಇವುಗಳ ಸಾಮರಸ್ಯವು ನೈಸರ್ಗಿಕ ಶಕ್ತಿಗಳ ಚಲನವಲನಗಳ ಆಧಾರವಾಗಿದೆ. ಮಾನವನ ನೈಸರ್ಗಿಕವಾದ ಬಾಳಿಗೆ ಪ್ರಕೃತಿದತ್ತವಾದ ಈ ಸಮಧಾತು ಸಾಮರಸ್ಯಗಳು ಸಾಕು. ಆದರೆ ಹಠಯೋಗಿಗೆ ಇದಿಷ್ಟೇ ಸಾಲದು. ಅಗಾಧವಾದ ಪರಿಪುಷ್ಟವಾದ ಮತ್ತೊಂದು ದಿವ್ಯ ಚೇತನವು ಈ ದೇಹ ಪ್ರಾಣಗಳ ಮೂಲಕ ಹರಿದು ಬರಲು, ಆ ಪ್ರಚಂಡ ಶಕ್ತಿಯ ಉದ್ವೇಗವನ್ನು ತಾನು ಶಿಥಿಲವಾಗದಂತೆ ಸಹಿಸಲು ಬೇಕಾದ ದಾರ್ಢ್ಯವನ್ನು ದೇಹ ಪ್ರಾಣಗಳಿಗೆ ಹಠಯೋಗ ಒದಗಿಸಿ ಕೊಡುತ್ತದೆ. ಈ ಸಾಧನ ಕ್ರಮದಲ್ಲಿ ಆಸನ, ಪ್ರಾಣಾಯಾಮಗಳು ಬಹು ಮುಖ್ಯವಾದ ಅಂಗಗಳು.

ಯೋಗ ಎಂದರೆ ಒಂದುಗೂಡುವದು ಎಂದರ್ಥ. ಆದರೆ ಎರಡು ಬಾಹ್ಯಪದಾರ್ಥಗಳು ಒಂದುಗೂಡುವ ಪ್ರಸಂಗ ಆಧ್ಯಾತ್ಮದಲ್ಲಿ ಅಸಂಗತ. ತನ್ನಲ್ಲಿಯೇ ಅಂತರ್ಹಿತವಾದ ಪರಮಾತ್ಮನೊಡನೆ ಸೇರುವುದು ಯೋಗ. ಇದರಿಂದಲೇ ಯೋಗಿಯು ಧ್ಯಾನಪರನಾಗುತ್ತಾನೆ, ಅಂತರ್ಮುಖಿಯಾಗುತ್ತಾನೆ. ಬಹಿರ್ಮುಖವಾದ ಇಂದ್ರಿಯಗಳನ್ನು ಮುಚ್ಚುತ್ತಾನೆ. ಅಂತರಿಂದ್ರಿಯ ನಿಗ್ರಹದಲ್ಲಿ ನಿರತನಾಗುತ್ತಾನೆ. ಇಂತಹ ಧ್ಯಾನದಿಂದ ಮಾತ್ರ ಪರಮಾತ್ಮನನ್ನು ಕಾಣಬಲ್ಲೆವು, 'ದಿವ್ಯಂ ದದಾಮಿ ತೇ ಚಕ್ಷುಃ ಪಶ್ಯ ಮೇ ಯೋಗಮೈಶ್ವರಂ' ಎಂದು ಶ್ರೀಕೃಷ್ಣನು ಅರ್ಜುನನಿಗೆ ಅನುಗ್ರಹಿಸಿದ ಚಕ್ಷುಸ್ಸು ಚರ್ಮಚಕ್ಷುಸ್ಸೂ ಅಲ್ಲ, ತರ್ಕ ದೃಷ್ಟಿಯೂ ಅಲ್ಲ. ಇದರಿಂದ ಉಂಟಾದ ಜ್ಞಾನವನ್ನು ಬೇರೊಂದು ಮಾತಿನಿಂದ ಉಲ್ಲೇಖಿಸಬೇಕು. ಬೌದ್ಧ ದರ್ಶನದಲ್ಲಿ ಪ್ರಜ್ಞಾಪಾರಮಿತವೆಂದು ಇದಕ್ಕೆ ಹೆಸರು ಕೊಟ್ಟಿದೆ. ಈ ರೀತಿಯ ವಿಶೇಷ ಜ್ಞಾನವನ್ನು ತರ್ಕದಿಂದ ಪಡೆಯಲು ಸಾಧ್ಯವಿಲ್ಲವೆಂದು ಉಪನಿಷತ್ತು ಹೇಳುತ್ತದೆ. ನೈಷಾ ತರ್ಕೇಣ ಮತಿ ಮಾಪನೇಯಾ ! ಶ್ರೀಅರವಿಂದರು ಈ ಜ್ಞಾನವನ್ನು ಅತೀಂದ್ರಿಯ ಮಾತ್ರವಾದದ್ದೆಂದು ವರ್ಣಿಸದೆ 'ಮಾನಸಾತೀತ' (Supra-mental) ವಾದದ್ದೆಂದು ವರ್ಣಿಸಿದ್ದಾರೆ. ಮಾನಸಾತೀತವಾದ ಮಾತ್ರಕ್ಕೆ ಇದು ಯಾವ ಮನುಷ್ಯನಿಗೂ ಅತೀತವಾದ ಜ್ಞಾನ ಅಥವಾ ಅನುಭೂತಿ ಎಂದು ಭಾವಿಸಬಾರದು. ಆದಕ್ಕಾಗಿ ಯತ್ನಿಸುವ ಪ್ರತಿ ಮಾನವನಿಗೂ ಸಿಲುಕಬಲ್ಲ ಅನುಭವ ಇದು ಎಂದು ಶ್ರೀಅರವಿಂದರು ಸ್ಪಷ್ಟಪಡಿಸಿದ್ದಾರೆ. ಇಂತಹ ಜ್ಞಾನಾನುಭವವನ್ನು ಪಡೆದ ಮಾನವನು ಮಾನವತ್ವದ ಹೊಸ್ತಿಲನ್ನು ದಾಟಿ ಮಾನವಾತೀತ ಸ್ಥಿತಿಗೆ ಬರುತ್ತಾನೆ. ದೇವಾಂಶ ಸಂಭೂತನಾದವನು ದೇವನೇ ಆಗಬಲ್ಲನು. ಇವನು ದೇವನಾದಾಗಲೇ ದೇವನೊಡನೆ ಸಾಯುಜ್ಯ ಪಡೆಯಬಲ್ಲನು. ಪೂರ್ಣದಿಂದ ಮಾತ್ರವೇ ಪೂರ್ಣವನ್ನು ಪಡೆಯಬಲ್ಲನು.

ಶ್ರೀ ಅರವಿಂದ ದರ್ಶನಕ್ಕೆ ವೈಶಿಷ್ಟ್ಯವಾದ ತತ್ತ್ವಗಳಲ್ಲಿ ಮತ್ತೊಂದು ಮುಖ್ಯವಾದ ತತ್ತ್ವ 'ಅತಿಮಾನವ' ತತ್ತ್ವ. ಕೆಲವು ಪಾಶ್ಚಾತ್ಯ ದಾರ್ಶನಿಕರಲ್ಲಿ ಕಂಡುಬರುವ 'ಅತಿ ಮಾನವ' ಆದರ್ಶಕ್ಕೂ ಶ್ರೀ ಅರವಿಂದರ 'ಅತಿಮಾನವ' ಆದರ್ಶಕ್ಕೂ ಅಜಗಜಾಂತರ ವ್ಯತ್ಯಾಸವಿದೆ ಎಂಬುವುದನ್ನು ಸ್ಪಷ್ಟಪಡಿಸಬೇಕಾದುದು ಅಗತ್ಯ. ನೀಟ್ಸೆ ಎಂಬ ಜರ್ಮನಿಯ ತತ್ತ್ವಜ್ಞ 'ಅತಿಮಾನವ' ವಾದವನ್ನು ಮುಂದಿಟ್ಟನು. ನೀಟ್ಸೆ ಶಕ್ತಿ ಉಪಾಸಕ. ಈ ಶಕ್ತಿ ಯಾವ ರೀತಿಯದ್ದೆಂದು ಅವನ ದರ್ಶನದಲ್ಲಿ ಸ್ಪಷ್ಟವಾಗಲಿಲ್ಲ. ಒಟ್ಟಿನಲ್ಲಿ ನೀಟ್ಸೆಯ 'ಅತಿಮಾನವ' ರಾಜಸ ಪ್ರವೃತ್ತಿಯುಳ್ಳವನು. ಅಹಂಕಾರ ಭೂಯಿಷ್ಠನಾದವನು. 'ಆಢ್ಯೋಽಭಿಜನವಾನಸ್ಮಿ ಕೋಽನ್ಯೋಽಸ್ತಿ ಸದೃಶೋ ಮಯಾ' ಎಂದು ಹೇಳಿಕೊಳ್ಳತಕ್ಕವನು. ಇವನಿಗೆ ಇತರರಿಗೆ ಅನ್ವಯಿಸುವ ಪಾಪ ಪುಣ್ಯ, ನೀತಿ ಅನೀತಿಗಳು ಅಂಟಲಾರವು. ಇವೆರಡನ್ನೂ ದಾಟಿದವನು. (Beyond good and evil) ಎಲ್ಲರನ್ನೂ ತನ್ನ ದಾಸರನ್ನಾಗಿ ಮಾಡಿಕೊಳ್ಳುವ ಪ್ರವೃತ್ತಿಯುಳ್ಳವನು. ಇಂತಹ ರಾಜಸ ಶಕ್ತಿ ಸಿದ್ಧಾಂತಕ್ಕೆ ಶ್ರೀ ಅರವಿಂದರ ದರ್ಶನದಲ್ಲಿ ಅವಕಾಶವಿಲ್ಲ. ಶ್ರೀ ಅರವಿಂದರ 'ಅತಿಮಾನವ' ಭಗವದ್ಗೀತೆಯ ಸ್ಥಿತಪ್ರಜ್ಞ. ಲೋಕ ಕಲ್ಯಾಣಕ್ಕಾಗಿ ಬಾಳತಕ್ಕವನು. ಸ್ವಾರ್ಥತ್ಯಾಗ ಕಾರುಣ್ಯಗಳು

ಇವನಲ್ಲಿ ಪ್ರಧಾನ ಗುಣಗಳು. ಇವನು ದುರ್ಬಲನಲ್ಲ, ಮಹಾ ಶಕ್ತ. ಆದರೆ ಈ ಶಕ್ತಿ ಆತ್ಮ ಶಕ್ತಿ, ಆಧ್ಯಾತ್ಮಿಕ ಶಕ್ತಿ, ತ್ಯಾಗದಿಂದ ತಪಸ್ಸಿನಿಂದ ಉತ್ಪನ್ನವಾದ ಶಕ್ತಿ, ಇದರ ತೇಜಸ್ಸು ಇವನ ಶಾಂತ ಮುಖ ಮುದ್ರೆಯಲ್ಲಿ ತೇಜಃಪುಂಜವಾದ ಕಣ್ಣುಗಳಲ್ಲಿ ಬೆಳಗುತ್ತದೆ. ಕಾಂಚನವರ್ಣ ಸದೃಶವಾದ ಇವನ ದೇಹದಲ್ಲಿ ಮಿಂಚಿನಂತೆ ಹೊಳೆಯುತ್ತದೆ. ಇವನ ತಪಸ್ಸಿನಲ್ಲಿ ಎರಕ ಹುಯ್ದ ಹಿರಣ್ಮಯ ಪಾತ್ರೆಯಂತೆ ಆತ್ಮನ ಈ ದೇಹಪಾತ್ರೆ ಪ್ರಕಾಶಿಸುತ್ತದೆ. ಇವನ ಕರುಣಾಕಟಾಕ್ಷಕ್ಕೆ ಪಾತ್ರವಾದ ಜೀವ ಜಂತುಗಳೆಲ್ಲವೂ ಇವನ ದಯಾ ರಾಜ್ಯದಲ್ಲಿ ಸಮಾನ ಸಹಾನುಭೂತಿಗಳನ್ನು ಅನುಭವಿಸುತ್ತವೆ. ಶ್ರೀ ಅರವಿಂದರ 'ಅತಿಮಾನವ' ಬಲಿಷ್ಠ, ಗರಿಷ್ಠ, ಶ್ರೇಷ್ಠ. ಈ ಶ್ರೇಷ್ಠತೆ ಇವನಿಗೆ ಬಂದದ್ದು ಕಲ್ಮಷ ರಹಿತವಾದ ಅನುಷ್ಠಾನದಿಂದ, ರಾಗ ದ್ವೇಷ ರಹಿತವಾದ ಮಾನವ ಪ್ರೇಮದಿಂದ, ಅಹಂಕಾರ ರಾಹಿತ್ಯದಿಂದ, ಪ್ರಪತ್ತಿ ನಿಷ್ಠೆಯಿಂದ ಎಂದು ಭಾವಿಸಬೇಕು. ಇವನ ಬಲ ಬ್ರಹ್ಮತೇಜಸ್ಸಿನಿಂದ ಉತ್ಪನ್ನವಾದ ಬಲ, 'ನಾಯಮಾತ್ಮಾ ಬಲಹೀನೇನ ಲಭ್ಯಃ' ಎಂದು ಉಪನಿಷತ್ತು ಹೇಳಿದಾಗ ಈ ಆತ್ಮಬಲವನ್ನು ಲಕ್ಷ್ಯದಲ್ಲಿಟ್ಟುಕೊಂಡು ಹೇಳಿದ ಮಾತುಗಳೆಂದು ಭಾವಿಸಬೇಕು. 'ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ' ಎಂಬ ಉಪನಿಷದ್ವಾಕ್ಯಾನುಸಾರವಾದವನ್ನು ಶ್ರೀ ಅರವಿಂದರ ತರ್ಕಾತೀತವಾದ ಯೋಗದರ್ಶನ.

ಶ್ರೀಅರವಿಂದರು ತಮ್ಮ ಪೂರ್ಣ ಸಮನ್ವಯ ಯೋಗದಲ್ಲಿ ಭಾರತದ ಆಧ್ಯಾತ್ಮಿಕ ಸೂತ್ರಗಳನ್ನೆಲ್ಲಾ ಮನೋಹರವಾದ ರೀತಿಯಲ್ಲಿ ಹೆಣೆದಿದ್ದಾರೆ ಈ ದರ್ಶನದಲ್ಲಿ ಪ್ರಾಚ್ಯ ಪ್ರತೀಚ್ಯಗಳ ಪ್ರಾಚೀನ ಅರ್ವಾಚೀನಗಳ ಸಾಮರಸ್ಯವನ್ನು ಕಾಣುತ್ತೇವೆ. ಇಂದಿನ ಏಕಪಕ್ಷದ ಮಾನವವಾದ (Humanism), ಬುದ್ಧಿವಾದ (Rationalism) , ಮಾರ್ಕ್ಸ್‌ವಾದ (Marxism) , ಪ್ರಯೋಜನವಾದ (Utilitarianism) , ಫಲವಾದ (Pragmatism) ಮತ್ತಿತರ ಚಾರ್ವಾಕಛಾಯೆಯ ವಾದಗಳು ಶ್ರೀಅರವಿಂದ ದರ್ಶನದ ಪೂರ್ವಪಕ್ಷಗಳು. ಪಕ್ಷಪಾತಯುತವಾದ, ಸಮನ್ವಯ ದೃಷ್ಟಿಯಿಲ್ಲದ ಈ ವಾದಗಳ ಖಂಡನೆಯನ್ನು ಒಂದಲ್ಲ ಒಂದು ರೀತಿ ಶ್ರೀ ಅರವಿಂದರ ದರ್ಶನದಲ್ಲಿ ಕಾಣುತ್ತೇವೆ.

ನಮ್ಮ ಶತಮಾನದ ದರ್ಶನಗಳ ಘರ್ಷಣೆಯಿಂದ ಎದ್ದ ಮೋಡಗಳ ಹಿಂದೆ ಶ್ರೀಅರವಿಂದರ ದರ್ಶನ ಆಶಾಕಿರಣವನ್ನು ಜಗತ್ತಿನ ಮೇಲೆ ಬೀರಿದೆ. ಇದರ ಪರಿಣಾಮ ವಿಚಾರಪ್ರಪಂಚದಲ್ಲಿ ಎಷ್ಟು ದೂರ ಪ್ರಸಾರವಾಗಬಲ್ಲದೆಂಬುದು ಕಾಲಗರ್ಭದಲ್ಲಿ ಅಡಗಿದೆ. (ಅರವಿಂದ ದರ್ಶನದ ವೈಶಿಷ್ಟ್ಯವನ್ನೂ ಹಿರಿಮೆಯನ್ನೂ ತಿಳಿಯಲು ತುಲನಾತ್ಮಕ ದೃಷ್ಟಿಯಿಂದ ಅಭ್ಯಸಿಸುವುದು ಅತ್ಯಗತ್ಯ. ಮೇಲಿನ ಲೇಖವು ಈ ದಿಶೆಯಲ್ಲಿ ಸ್ತುತ್ಯ ಉಪಕ್ರಮವಾಗಿದೆ. ಇನ್ನೂ ವಿಶೇಷ ಸಾಹಿತ್ಯವನ್ನು ಇಲ್ಲಿಸೂಚಿಸಲಾಗಿದೆ.)

— ಎಂ. ಯಾಮುನಾಚಾರ್ಯ

# ಭಾರತ ಇತಿಹಾಸ ದರ್ಶನ

"ಹಿಂದುಸ್ಥಾನವನ್ನು ಒಂದು ಅಖಂಡ ರಾಷ್ಟ್ರಮಾಡುವ ಸಲುವಾಗಿ ಪರಮಾತ್ಮನು ಎರಡು ಸಾವಿರ ವರುಷಗಳಿಂದ ಪ್ರಯತ್ನಿಸುತ್ತಿದ್ದಾನೆ"

—ಶ್ರೀ ಅರವಿಂದರು ("ಮಾನವ ಐಕ್ಯದ ಆದರ್ಶ")

ಶ್ರೀ ಕೃಷ್ಣ ಪರಮಾತ್ಮನಿಂದ ಬುದ್ಧ ದೇವರ ವರೆಗಿನ ಎರಡೂವರೆ ಸಾವಿರ ವರುಷಗಳ ಕಾಲವು, ಒಂದು ಧಾರ್ಮಿಕ ಸಮಯವಾಗಿದ್ದಿತೆಂದು ಹೇಳಬಹುದು. ವೇದಗಳ ಸಂಗ್ರಹ, ಉಪನಿಷತ್ತುಗಳ ಉದಯ ಇವು ಆ ಕಾಲದ ಮಹತ್ವದ ಸಂಗತಿಗಳು. ಜ್ಯೇಷ್ಠಪಾಂಡವನಾದ ಯುಧಿಷ್ಠಿರನಿಗೆ ಧರ್ಮರಾಜನೆಂಬ ಧರ್ಮಾಂಕಿತವನ್ನು ಕೊಟ್ಟು, ಶ್ರೀಕೃಷ್ಣ ಪರಮಾತ್ಮನು ಸ್ಥಾಪಿಸಿದ ಧರ್ಮರಾಜ್ಯವು ಸುಮಾರು ಒಂದು ಸಾವಿರ ವರ್ಷಗಳ ಕಾಲ ನಡೆಯಿತೆಂದು ಪುರಾಣಗಳು ಹೇಳುತ್ತವೆ. ಆ ಮೇಲೆ ಕೈಕೆಳಗಿನ ಮಂತ್ರಿಗಳೋ, ಮಾಂಡಲೀಕರೋ ಪ್ರಬಲರಾಗುತ್ತ ಒಬ್ಬರನ್ನೊಬ್ಬರು ಹಟ್ಟದಿಂದ ಉರುಳಿಸುತ್ತ, ಹೊಸ ಹೊಸ ವಂಶಗಳ ಅರಸೊತ್ತಿಗೆಗಳನ್ನು ಆರಂಭಿಸಿದರು ಹೀಗೆ ದೇಶದಲ್ಲಿ ಅನೇಕ ಚಿಕ್ಕ ಪುಟ್ಟ ಗಣರಾಜ್ಯಗಳು ತಲೆದೋರಿದ್ದವೆಂದು ತೋರುತ್ತದೆ. ಇದಾಯಿತು ಅಂದಿನ ಇಂದ್ರಪ್ರಸ್ಥದ (ಅಥವಾ ದಿಲ್ಲಿಯ) ಮಾತು.

ಪಂಚಪಾಂಡವರಲ್ಲೊಬ್ಬನಾದ ನಕುಲನ ವಂಶವು ಮಗಧ (ಬಿಹಾರ) ಪ್ರಾಂತದಲ್ಲಿ, ಪಾಟಲೀಪುತ್ರ (ಪಾಟಣಾ) ರಾಜಧಾನಿಯಲ್ಲಿ, ದಿಲ್ಲಿಯ ವಂಶದಂತೆಯೇ ಅನೇಕ ಕಾಲ ಆಳಿದ ಬಳಿಕ ಅಲ್ಲಿಯೂ ಒಂದರ ಹಿಂದೊಂದು ಬೇರೆ ಬೇರೆ ರಾಜವಂಶಗಳು ಆಳಿದವು. ಆಗೊಮ್ಮೆ ಧರ್ಮವು ಈಗಿನಂತೆ ತನ್ನ ಪುರಾತನ ಸತ್ಯಜ್ಞಾನವನ್ನು ಕಳೆದುಕೊಂಡು ಬಾಹ್ಯಿಕ ಕರ್ಮಕಾಂಡಕ್ಕೆ (ಆಚಾರಕ್ಕೆ) ಬಹಳ ಮಹತ್ವ ಕೊಡುವಂತಹ ವಸ್ತುವಾಗಿದ್ದಿತೆಂದು ತೋರುತ್ತದೆ. ಆಗ ಈ ಬಾಹ್ಯಿಕ ಆಚಾರಕ್ಕೆ ದಿವ್ಯ ವಿಚಾರದ ಕಳೆಯನ್ನು ಕೊಡುವದಕ್ಕೂ ನಿಯಮ ನಿಷ್ಠೆಗಳ ಕಠೋರತೆಗೆ ಕರುಣೆಯ ಮೆರಗು ಕೊಡುವದಕ್ಕೂ, ಎರಡೂವರೆ ಸಾವಿರ ವರ್ಷಗಳ ಹಿಂದೆ ಅದೇ ಮಗಧ (ಬಿಹಾರ) ಪ್ರಾಂತದಲ್ಲಿ ಪುಣ್ಯಶಾಲಿಯಾದ ಶಿಶುನಾಗ ವಂಶದಲ್ಲಿ ಶ್ರೀ ಬುದ್ಧ ದೇವರು ಅವತರಿಸಿದರು ಅನೇಕ ಮಹಾ ಪುರುಷರ ತತ್ವಗಳಿಗಾದಂತೆಯೇ ಬುದ್ಧ ದೇವರ ತತ್ವಕ್ಕೂ ಅವರ ಅನುಯಾಯಿಗಳಿಂದ ಭಿನ್ನ ಭಿನ್ನ ಪ್ರಕಾರವಾಗಿ ಅರ್ಥ ಮಾಡುವದಕ್ಕೆ ಆಗಲೇ ಆರಂಭವಾಯಿತೆಂದು ತೋರುತ್ತದೆ. ಮುಂದೆ ಪಾಟಲೀ ಪುತ್ರದಲ್ಲಿಯೇ ಆಳಿದ ಮೌರ್ಯವಂಶದ ಸುವಿಖ್ಯಾತನೂ, ಧರ್ಮನಿಷ್ಠನೂ ಆದ ಅಶೋಕ ಮಹಾರಾಜನು ನೆರೆಯಿಸಿದ ಬೌದ್ಧ ಮಹಾ ಸಮ್ಮೇಲನದಲ್ಲಿ ಒಂದು ಪಕ್ಷದವರು ಮುನಿದು ಸಭೆಯಿಂದ ಎದ್ದು ಹೋದರೆಂದು ಇತಿಹಾಸದಲ್ಲಿ ಹೇಳಿದ ಮಾತು ಇದಕ್ಕೊಂದು ಸಾಕ್ಷಿಯಂತಿದೆಯೆಂದು ಹೇಳಬಹುದು ಇಷ್ಟೇ ಏಕೆ? ಶ್ರೀ ಅರವಿಂದ ಆಶ್ರಮದ ಶ್ರೀ ಮಾತಾಜಿಯವರು ತಮ್ಮದೊಂದು ಗ್ರಂಥ [ವರ್ಡ್ಸ್ ಆಫ್ ದಿ ಮದರ್) ದಲ್ಲಿ "ಸ್ವಯಂ ಶ್ರೀ ಬುದ್ಧ ದೇವರ ಕಾಲದಲ್ಲಿಯೇ ಅವರ ತತ್ವಕ್ಕೆ ಭಿನ್ನ ಭಿನ್ನ ಅರ್ಥ ಮಾಡಿಕೊಳ್ಳುವ ಅನೇಕ ಶಿಷ್ಯ ಪಂಗಡಗಳಾಗಿದ್ದವು" ಎಂದು ಹೇಳಿರುವರು. ಈ ಭೇದವೇ ಆಗಿನ ಕಾಲದ ರಾಜಕೀಯ ಅರಾಜಕತೆಯಂತೆ (ಅನೇಕಾನೇಕ ಸಣ್ಣ ಪುಟ್ಟ ರಾಜ್ಯಗಳಾಗಿದ್ದವಂತೆ) ಧಾರ್ಮಿಕ ಅರಾಜಕತೆಯಾಗುವದಕ್ಕೂ ಕಾರಣವಾಯಿತೋ ಏನೋ ಎಂದು ಹೇಳಬಹುದು.

ಬುದ್ಧದೇವನ ಅನುಯಾಯಿಗಳಲ್ಲಿ ಕೆಲವರು ಶೂನ್ಯವಾದವನ್ನು ಪ್ರತಿಪಾದಿಸುತ್ತಲೂ, ಇನ್ನೂ ಕೆಲವರು ನೀತಿವಾದವನ್ನು ಪ್ರತಿಪಾದಿಸುತ್ತಲೂ ಒಬ್ಬರು ಇನ್ನೊಬ್ಬರಿಗೆ ಹೀನಯಾನ (ಹೀನ ಮಾರ್ಗ) ದವರೆಂದು ಹೆಸರಿಡುತ್ತಲೂ ಸಾಗಿದರೆಂದು ಕಂಡು ಬರುತ್ತದೆ. ತಮ್ಮೊಳಗಿನವರನ್ನೇ ತಾವು ಹೀಯಾಳಿಸ ತೊಡಗಿದವರು, ಇಲ್ಲಿಯ ಮೂಲ ಧರ್ಮವಾದ ಋಷಿಪ್ರಣೀತ ವೇದಧರ್ಮವನ್ನು ಬುಡಮಟ್ಟ ಮುಳುಗಿಸಲು ಪ್ರಯತ್ನಮಾಡಿರಬಹುದೆಂದು ಊಹಿಸಲಿಕ್ಕೆ ಬೇಕಾದಷ್ಟು ಅವಕಾಶವಿದೆ. ಅಂತೆಯೇ ಅದರ ಮುಂದಿನ ಕಾಲದಲ್ಲಿ ಸಾವಿರಾರು ವರುಷ ಈ ಎರಡೂ ಧರ್ಮಗಳು ಒಂದರ ಮೇಲೊಂದು, ತಮ್ಮ ಪ್ರಭುತ್ವವನ್ನು ಕೂಡಿಸಲಿಕ್ಕೂ, ತಾವು ತಾವು ಉಳಿದುಕೊಳ್ಳಲಿಕ್ಕೂ ಪ್ರಯತ್ನ ಮಾಡಿದವೆಂದು ಇತಿಹಾಸದಿಂದ ಕಂಡು ಬರುತ್ತದೆ.

ಸ್ವಾಮಿ ಶ್ರೀ ವಿವೇಕಾನಂದರು ವಿಶ್ವಧರ್ಮ ಸಮ್ಮೇಳನಕ್ಕೆಂದು ಅಮೇರಿಕೆಗೆ ಹೋದ ಕಾಲದಲ್ಲಿ ಆ ದೇಶದಲ್ಲಿ ಮಾಡಿದ ಒಂದು ಉಪನ್ಯಾಸದಲ್ಲಿ, ಅವರು ಇದೇ ಮಾತನ್ನು ಪ್ರತಿಪಾದಿಸಿದ್ದಾರೆ. ಅದು ಹೇಗೆಂದರೆ:—

“ಕರ್ಮಠತೆಗೆ ಬಂದಿದ್ದ ಹಿಂದೂ ಧರ್ಮಕ್ಕೆ ಬೌದ್ಧ ಧರ್ಮವು ಕಾರುಣ್ಯದ ಮೆರುಗನ್ನು ಕೊಟ್ಟಿತು. ಆದರೆ ಮುಂದುಮುಂದಿನ ಬೌದ್ಧ ಅನುಯಾಯಿಗಳು ಹಿಂದೂ ಧರ್ಮವನ್ನೇ ಹತ್ತಿಕ್ಕಲು ಪ್ರಯತ್ನಿಸಿದ್ದರಿಂದ ಅದು ಚೀನಾ, ಬರ್ಮಾ, ಶಿಲೋನ ಮೊದಲಾದ ಪರದೇಶಗಳನ್ನು ಸೇರಬೇಕಾಯಿತು” ಎಂದಂದಿದ್ದಾರೆ.

— ೨ —

ಬುದ್ಧದೇವರಿಂದ ಈಚೆಗಿನ ಈ ಎರಡೂವರೆ ಸಾವಿರ ವರ್ಷಗಳೆಂದರೆ ಭರತಖಂಡದ ಇತಿಹಾಸದಲ್ಲಿ ಇದೊಂದು ರಾಜಕೀಯ ಸಮಯವೆಂದು ಹೇಳಬಹುದು. ಧರ್ಮನಿಷ್ಠ ಅಶೋಕಮಹಾರಾಜನ ಮುತ್ತಜ್ಜನಾದ ಸಾಮ್ರಾಟ ಚಂದ್ರಗುಪ್ತನೇ ಸಾವಿರಾರು ವರ್ಷಗಳಿಂದ ಸಣ್ಣ ಪುಟ್ಟ ರಾಜ್ಯಗಳಾಗಿ ವಿಭಾಗಿಸಲ್ಪಟ್ಟಿದ್ದ ಭರತ ಖಂಡವನ್ನು ಮೊಟ್ಟಮೊದಲು ಏಕಛತ್ರಾಧಿಪತ್ಯವಾಗಿ ಏರ್ಪಡಿಸಿದ ಅಮರಪುರುಷನು. ಆ ಕಾಲದಲ್ಲಿ ಹಿಂದು ಸ್ಥಾನಕ್ಕೆ ದಂಡೆತ್ತಿ ಬಂದ ಮೊದಲನೆಯ ಪರಕೀಯ ಸಮ್ರಾಟನಾದ ಅಲೆಗ್ಝಾಂಡರನನ್ನು ಹೊಡೆದೋಡಿಸಿ ಇಲ್ಲಿಯ ಸಾಮ್ರಾಜ್ಯವನ್ನು ಕಟ್ಟಿದ ಸಮರ್ಥ ಭಾರತೀಯ ಸಾಮ್ರಾಟನೆಂದರೆ ಈ ಚಂದ್ರಗುಪ್ತಮಹಾರಾಜನೆ. ಅರ್ಥಶಾಸ್ತ್ರದ ಆದಿ ಪ್ರವರ್ತಕನೂ, ಮಹಾ ರಾಜತಂತ್ರಕುಶಲನೂ ಆದ ಚಾಣಕ್ಯನೇ ಈತನ ಮಂತ್ರಿಯು. ಈ ಚಾಣಕ್ಯನ ಸಹಾಯದಿಂದ ಸಾಮ್ರಾಟ ಚಂದ್ರಗುಪ್ತನು ಕಟ್ಟಿದ ಭಾರತ ಚಕ್ರಾಧಿಪತ್ಯದ ಅಂತರ್ವ್ಯವಸ್ಥೆಯು ಇಂದಿನ ಮಹಾಮಹಾ ಪಾಶ್ಚಾತ್ಯ ಪ್ರಜಾಪ್ರಭುತ್ವ ರಾಷ್ಟ್ರಗಳ ಸುಸಂಘಟಿತ ರಾಜ್ಯ ಪದ್ಧತಿಯನ್ನು ನೆನಪಿಗೆ ತರುತ್ತದೆಂದು ಅನೇಕ ಪಾಶ್ಚಾತ್ಯ ಇತಿಹಾಸಕಾರರು ಬೆರಗುಬಟ್ಟು ವರ್ಣಿಸಿದ್ದಾರೆ. ಅಲೆಗ್ಝಾಂಡರನ ಸರದಾರನಾದ ಸೆಲ್ಯೂಕಸನು ಸೋತು ಚಂದ್ರಗುಪ್ತನೊಡನೆ ಒಡಂಬಡಿಕೆ ಮಾಡಿಕೊಂಡು ತನ್ನ ಮಗಳನ್ನು ಆತನಿಗೆ ಮದುವೆ ಮಾಡಿಕೊಟ್ಟನು ಮತ್ತು ತನ್ನ ರಾಯಭಾರಿಯಾದ ಮೆಗೆಸ್ಥನೀಸನನ್ನು ಈತನ ರಾಜಸಭೆಯಲ್ಲಿ ರಾಯಭಾರಿಯನ್ನಾಗಿ ಮಾಡಿ ಇಟ್ಟನು. ಈ ರಾಯಭಾರಿಯು ಬರೆದ ಹಿಂದುಸ್ಥಾನ ವೃತ್ತಾಂತದಲ್ಲಿ ‘‘ಈ ದೇಶದ ಜನರು ಕಳ್ಳತನ ವ್ಯಭಿಚಾರಗಳನ್ನು ಅರಿಯರು ಮನೆಯ ಬಾಗಿಲುಗಳಿಗೆ ಕೀಲಿ ಸಹ ಹಾಕುವದಿಲ್ಲ. ಒಂದು ಬಂಗಾರದ ಆಭರಣವನ್ನು ಒಂದು ಕೋಲಿನ ತುದಿಗೆ ಕಟ್ಟಿಕೊಂಡು ಕಾಶಿಯಿಂದ ರಾಮೇಶ್ವರದವರೆಗೆ ತಿರುಗಾಡಿದರೂ ಕಳವಿನ ಭಯವಿಲ್ಲ’’ ಎಂದು ಮುಂತಾದುದಾಗಿ ಬರೆದ ಸುವರ್ಣ ವಾಕ್ಯಗಳು ಸಮ್ರಾಟ ಚಂದ್ರಗುಪ್ತನ ಆಳಿಕೆಯ ಘನತೆಯನ್ನು ವ್ಯಕ್ತಮಾಡುವವು.

ಈ ಸಮ್ರಾಟನ ಮೊಮ್ಮಗನಾದ ಧರ್ಮನಿಷ್ಠ ಅಶೋಕ ಮಹಾರಾಜನ ಕಾಲದಲ್ಲಿ ಭಾರತ ಸಾಮ್ರಾಜ್ಯವು ಇನ್ನೂ ಘನತೆಗೆ ಏರಿ ಇಡೀ ಹಿಂದುಸ್ಥಾನವಲ್ಲದೆ ಹಿಂದುಸ್ಥಾನದ ಹೊರಗೆ ಎರಡೂವರೆ ಸಾವಿರ ಹರದಾರಿಯೊಳಗಿನ ಇಜಿಪ್ತ, ರಶಿಯಾ, ಗ್ರೀಸ ಮೊದಲಾದ ದೇಶಗಳು ಸಹ ಭಾರತದ ಮಿತ್ರ ರಾಷ್ಟ್ರಗಳಾಗಿದ್ದವು.

ಮುಂದೆ ಈ ವಂಶದ ಕೊನೆ ಕೊನೆಯ ಅರಸರನ್ನು ಪಟ್ಟದಿಂದ ತಳ್ಳಿ ಕಣ್ವ, ಸುಂಗ, ಮೊದಲಾದ ವೈದಿಕ ರಾಜವಂಶಗಳು ಪಟ್ಟಕ್ಕೆ ಬಂದವು. ಅಶೋಕ ಮಹಾರಾಜನ ಕಾಲದಲ್ಲಿ ಪ್ರಾಬಲ್ಯಹೊಂದಿದ ಬೌದ್ಧಧರ್ಮದ ಮೂಲಕ ಹತ್ತಿಕ್ಕಲ್ಪಟ್ಟ ವೇದಧರ್ಮವು ತನ್ನ ಪೂರ್ವ ವೈಭವವನ್ನು ಪಡೆಯಲು ಪುನಃ ಪ್ರಯತ್ನಿಸಿತೆಂದು ಹೇಳಬಹುದು. ಆದರೆ ಇಷ್ಟರಲ್ಲಿ ಹಿಂದುಸ್ಥಾನದ ಹೊರಗೆ ಅಲ್ಲಿಯೇ ಸಮೀಪದಲ್ಲಿ ನೆಲೆಗೊಂಡಿದ್ದ ಗ್ರೀಕರು ಪುನಃ ಪಶ್ಚಿಮ ಪಂಜಾಬ, ಸಿಂಧಪ್ರಾಂತ ಮೊದಲಾದ ಸೀಮಾಪ್ರದೇಶಗಳನ್ನು ಆಕ್ರಮಿಸ ತೊಡಗಿದರು. ಆಗ ಭಾರತದ ಅಂತಃಶಕ್ತಿಯು ಅತ್ಯಂತ ಪ್ರಬಲವಾಗಿದ್ದಿತಾದ್ದರಿಂದ ಅದು ಪರಕೀಯರಿಗೆ ತನ್ನ ಧರ್ಮದೀಕ್ಷೆಕೊಟ್ಟು ಅವರನ್ನು ತನ್ನೊಳಗೆ ಜೀರ್ಣಿಸಿಕೊಂಡಿತು. ಮಿನಾಂಡರನೆಂಬ ಪ್ರಖ್ಯಾತ ಗ್ರೀಕರಾಜನು ಬೌದ್ಧಧರ್ಮವನ್ನು ಸ್ವೀಕರಿಸಿ ಮಿಲಿಂದನೆಂಬ ಹೆಸರನ್ನಿಟ್ಟುಕೊಂಡಿದ್ದೂ, ಇನ್ನೊಬ್ಬ ಗ್ರೀಕ ರಾಜನು ವಾಸುದೇವನೆಂಬ ಹೆಸರನ್ನಿಟ್ಟುಕೊಂಡು ಗರುಡಸ್ತಂಭವನ್ನು ನಿಲ್ಲಿಸಿದ್ದೂ, ಇತಿಹಾಸ ಪ್ರಸಿದ್ಧ ಸಂಗತಿಗಳಾಗಿವೆ. ಆದರೂ ಹಿಂದುಸ್ಥಾನದ ಬೆಳೆಯುಳ್ಳ ಭೂಮಿ, ಹಾಗೂ ಅಗಣಿತ ಸಂಪತ್ತಿಗೆ ಮರುಳಾದ ಪರಕೀಯರ ತಂಡಗಳು ಹಾಗೆಯೇ ಒಂದರ ಹಿಂದೊಂದು ಬರಹತ್ತಿದವು. ಹಿಂದುಸ್ಥಾನದ ಆಚೆಗೆ ವಾಯುವ್ಯ ದಿಕ್ಕಿನಲ್ಲಿದ್ದ ಶಕ, ಪಾರದ(ಸಿಥಿಯನ್ ಪಾರ್ಥಿಯನ್) ಮೊದಲಾದ ಜನಾಂಗಗಳು ನೂರಾರು ವರ್ಷ ದಾಳಿ ಮಾಡುತ್ತಲೇ ಬಂದವು. ಮೊದಮೊದಲಿಗೆ ಇಲ್ಲಿಯ ಗಣರಾಜ್ಯಗಳು ಆ ತಂಡಗಳನ್ನು ಸೋಲಿಸಿ (ಸಂವತ್) ಎಂಬ ಶಕವನ್ನು ಸ್ಥಾಪಿಸಿದ್ದರೂ, ಕೊನೆಗೆ ಶಕರು ಪ್ರಬಲರಾಗಿ ಕ್ರಿಸ್ತೀಯ ಮೊದಲನೆಯ ಶತಮಾನದಲ್ಲಿ ( ಕ್ರಿ. ಶ. ೭೮ ) ಏಕ ಕಾಲಕ್ಕೆ ಮಥುರಾ, ಉಜ್ಜಯಿನಿ ನಾಶಿಕಗಳಲ್ಲಿ ತಮ್ಮ ರಾಜ್ಯಗಳನ್ನು ಸ್ಥಾಪಿಸಿದರು.

ಇನ್ನು ದಕ್ಷಿಣ ಹಿಂದುಸ್ಥಾನದ ಪಾತ್ರವು ಪ್ರಾರಂಭವಾಯಿತು, ಉತ್ತರದಲ್ಲಿ ಅಶೋಕ ಮಹಾರಾಜನ ವಂಶವು ಇಳಿಗಾಲಕ್ಕೆ ಬಂದ ಸುಮಾರಿನಲ್ಲಿಯೇ ದಕ್ಷಿಣದಲ್ಲಿ ಸಾತವಾಹನರೆಂಬ ಪ್ರಖ್ಯಾತರಾದ ಆಂಧ್ರರಾಜರು ಪ್ರಾಬಲ್ಯಕ್ಕೆ ಬಂದರು. ಇವರು ನಾಶಿಕದ ಪರಕೀಯ ಶಕರಾಜರನ್ನು ಗೆದ್ದು ಅವರು ಸ್ಥಾಪಿಸಿದ ಶಕಕ್ಕೆ ತಮ್ಮ ಹೆಸರಿನಿಂದ ಸಾತವಾಹನ ಶಕ ಅಥವಾ ಶಾಲಿವಾಹನ ಶಕವೆಂದು ನಾಮದೀಕ್ಷೆಯನ್ನು ಕೊಟ್ಟರು. ಈ ವಂಶದ ಸುಮಾರು ಮೂವತ್ತು ಜನ ಪ್ರಖ್ಯಾತ ರಾಜರು ಸುಮಾರು ಐದುನೂರು ವರುಷಗಳ ವರೆಗೆ ದಕ್ಷಿಣ ಹಿಂದುಸ್ಥಾನವನ್ನಷ್ಟೇ ಅಲ್ಲ, ಕೆಲಕಾಲ ಉತ್ತರ ಹಿಂದುಸ್ಥಾನದ ಕೆಲಭಾಗವನ್ನು ಸಹ ಆಳಿದರೆಂದು ತೋರುತ್ತದೆ. ಹಿಂದೆ ಹೇಳಿದ ಕಣ್ವ, ಸುಂಗ ಮತ್ತು ಈ ಸಾತವಾಹನರ ಕಾಲದಲ್ಲಿಯೇ ವೇದ ಧರ್ಮದ ಪ್ರಖ್ಯಾತವಾದ ಅನೇಕ ಶ್ರುತಿ, ಸ್ಮೃತಿ ಗ್ರಂಥಗಳು ರಚಿತವಾದವೆಂದು ತೋರುತ್ತದೆ.

— ೩ —

ಇಷ್ಟರಲ್ಲಿ ಉತ್ತರ ಹಿಂದುಸ್ಥಾನದೊಳಗೆ ಪಾಟಲೀಪುತ್ರದಲ್ಲಿಯೇ ಇನ್ನೊಬ್ಬ ಪ್ರಖ್ಯಾತ ಸಮ್ರಾಟನು ಉದಯಿಸಿದನು. ಗುಪ್ತವಂಶದ ಸಮುದ್ರಗುಪ್ತ ಮಹಾರಾಯನೇ ಅವನು. ಈತನು ಉತ್ತರ ಹಿಂದುಸ್ಥಾನದ ಪರಕೀಯ ರಾಜರನ್ನೆಲ್ಲ ಸದೆ ಒಡೆದದ್ದಲ್ಲದೆ ಇಡೀ ಭರತಖಂಡದ ದೇಶೀಯ ಚಿಕ್ಕ ಪುಟ್ಟ

ಅನೇಕಾನೇಕ ರಾಜರನ್ನು ತನ್ನ ಅಂಕಿತದಲ್ಲಿ ತಂದು ಪುನಃ ಏಕಛತ್ರಾಧಿಪತ್ಯವನ್ನು ಕಟ್ಟಿ ಅಶೋಕನ ಧರ್ಮ ಸ್ತಂಭದ ಮೇಲೆ ತನ್ನ ವಿಜಯಲಿಪಿಯನ್ನು ಬರೆಯಿಸಿದನು. (ಇದು ಈಗ ಅಲ್ಹಾಬಾದದಲ್ಲಿದೆ. ಕ್ರಿ. ಶ. ೩೩೦) ಈತನು ಮಹಾಶೂರ ಧೀರನಿದ್ದಂತೆ ಸಾಹಿತ್ಯ ಸಂಗೀತಾದಿಗಳಲ್ಲಿಯೂ ಮಹಾ ವಿದ್ವಾಂಸನಾಗಿದ್ದನು. ಅದರಂತೆಯೇ ಈತನು ಅತಿಶಯ ಉದಾರ ಹೃದಯನೂ ಆಗಿದ್ದನು.

ಮಥುರಾ, ನಾಶಿಕಗಳ ಶಕರಾಜ್ಯಗಳು ಹೀಗೆ ಸದೆಬಡೆಯಲ್ಪಟ್ಟಿದ್ದರೂ ಉಜ್ಜಯನಿಯ ಶಕರು ಭಾರತೀಯ ಧರ್ಮವನ್ನೂ, ನಾಮಗಳನ್ನೂ ಸ್ವೀಕರಿಸಿದವರಾದ್ದರಿಂದಲೇ ಏನೋ (ಅಥವಾ ಉದಾರ ಹೃದಯಿಯಾದ ಸಮ್ರಾಟ ಸಮುದ್ರಗುಪ್ತನೊಡನೆ ಒಡಂಬಡಿಕೆ ಮಾಡಿಕೊಂಡದ್ದರಿಂದಲೋ ಏನೋ) ಗುಪ್ತರೊಡನೆ ರಾಯಭಾರಿ ಸಂಬಂಧವನ್ನು ಸ್ಥಾಪಿಸಿಕೊಂಡು ಇನ್ನೂ ಉಳಿದುಕೊಂಡಿದ್ದರು. ಆದರೆ ಸಮುದ್ರ ಗುಪ್ತನ ಮಗನೂ, ಭಾರತೀಯರಾದ ಪ್ರತಿಯೊಬ್ಬ ನರ ನಾರಿಯರ ನಾಲಗೆಯ ಮೇಲೆ ಇಂದಿಗೂ ಮಂಡಿಸಿರುವವನೂ ಆದ ಪರಮ ಪ್ರಖ್ಯಾತನಾದ ವಿಕ್ರಮರಾಜನು ಉಜ್ಜಯನಿಯ ಈ ಶಕ ರಾಜರನ್ನು ಸಂಪೂರ್ಣವಾಗಿ ಸದೆಬಡೆದು ಸಿಂಧ, ಸೌರಾಷ್ಟ್ರ, ಮಾಳವಗಳನ್ನೆಲ್ಲ ತನ್ನ ಸಾಮ್ರಾಜ್ಯಕ್ಕೆ ಸೇರಿಸಿ ಉಜ್ಜಯನಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿದನು. ಪ್ರಖ್ಯಾತ ಕವಿ ಚಕ್ರವರ್ತಿಯಾದ ಕಾಳಿದಾಸನು ಈ ವಿಕ್ರಮ ರಾಜನ ಆಸ್ಥಾನದಲ್ಲಿಯೇ ಇದ್ದನು. ಆಗ ಆರ್ಯ ಸಂಸ್ಕೃತಿಗೆ ಪುನಃ ಕಳೆ ಏರಿತು. ಜ್ಯೋತಿಷ್ಯಶಾಸ್ತ್ರ, ವೈದ್ಯಶಾಸ್ತ್ರ, ಸಾಹಿತ್ಯಶಾಸ್ತ್ರ ಮೊದಲಾದ ಅನೇಕ ಭಾರತೀಯ ಶಾಸ್ತ್ರಗಳೆಲ್ಲ ವೃದ್ಧಿಂಗತವಾದವು. ಚೀನದ ಯಾತ್ರಿಕನಾದ ಫಾಹಿಯನ್ನನು ಈ ಕಾಲದಲ್ಲಿ ಭಾರತ ಯಾತ್ರೆಗೆ ಬಂದಿದ್ದು ವಿಕ್ರಮರ ಜನ ಆಳಿಕೆಯ ಬಗೆಗೆ ಹೀಗೆ ಘಂಟಾ ಘೋಷವಾಗಿ ಹೇಳಿರುವನು:— "ಬಹು ದೊಡ್ಡ ಸಂಖ್ಯೆಯ ಪ್ರಜೆಗಳು ಯಾವ ಅಂಜಿಕೆಯೂ, ಚಿಂತೆಯೂ ಇಲ್ಲದೆ ನಿಶ್ಚಿಂತರಾಗಿ ಬಾಳಿ ಬದುಕುತ್ತಿದ್ದರು" ಇದಕ್ಕಿಂತ ಹೆಚ್ಚಿಗೆ ಏನು ಬೇಕು? ಅಂದಿನಿಂದ ಇಂದಿನ ವರೆಗೆ ಸಮಸ್ತ ಭಾರತ ನರ-ನಾರಿಯರ ಹೃದಯವನ್ನೆಲ್ಲ ಆಕರ್ಷಿಸಿದ ಈ ವಿಕ್ರಮ ಮಹಾರಾಯನ (ಗುಪ್ತವಂಶದ ೨ ನೆಯ ಚಂದ್ರಗುಪ್ತನ) ಮಹಿಮೆಯ ದ್ಯೋತಕವಾಗಿಯೇ ಮುಂದೆ ಕೆಲಕಾಲದ ಮೇಲೆ (ಕ್ರಿಸ್ತೀಯ ಎಂಟೊಂಬತ್ತನೆಯ ಶತಮಾನದಲ್ಲಿ) ಉತ್ತರ ಹಿಂದುಸ್ಥಾನದಲ್ಲಿ ಮೊದಲಿನಿಂದಲೂ ಪ್ರಖ್ಯಾತವಾಗಿದ್ದ "ಸಂವತ್" ಎಂಬ ಶಕಕ್ಕೆ "ವಿಕ್ರಮ ಸಂವತ್" ಎಂದು ಹೆಸರು ಕೊಡಲಾಯಿತು. ಮೊದಲು ಅದಕ್ಕೆ "ಮಾಳವ ಸಂವತ್" ಎಂದು ಹೆಸರಿದ್ದಿತು.

ಭಾರತ ಸಂಸ್ಕೃತಿಯ ವೈಶ್ವಾನರ ಪುರುಷನು ಆಗಲೂ ಪ್ರಜ್ವಲಿತನಾಗಿಯೇ ಇದ್ದನೆಂದು ಹೇಳಬಹುದು. ಏಕೆಂದರೆ ಆಗಲೂ ಅದು ಪರಕೀಯರನ್ನು ತನ್ನೊಳಗೆ ಜೀರ್ಣಮಾಡಿ ಕೊಂಡೇ ಬಿಟ್ಟಿದ್ದಿತು. ಹೇಗೆಂದರೆ ಮಥುರೆಯ ಶಕರಾಜ್ಯ ಸ್ಥಾಪಕನಾದ ಕನಿಷ್ಕನನ್ನು ಬೌದ್ಧಧರ್ಮದ ಮಹಾಯಾನ ಶಾಖೆಯವರು (ಬಹುಶಃ ಅಶೋಕ ಮಹಾರಾಜನ ಸಭೆಯಲ್ಲಿ ಮುನಿಸುಗೊಂಡು ಹೋದವರು) ತಮ್ಮ ಮತಕ್ಕೆ ಸೆಳೆದುಕೊಂಡು ಈತನನ್ನು ಅಭಿನವ ಅಶೋಕನನ್ನಾಗಿ ಮಾಡಿದರು. ಇತ್ತ ಉಜ್ಜಯನಿಯ ಶಕರನ್ನು ವೈದಿಕಧರ್ಮಾನುಯಾಯಿಗಳು ತಮ್ಮ ಕಡೆಗೆ ಹೊರಳಿಸಿಕೊಂಡು ಅವರ ಚಷ್ಟಣ ಮೊದಲಾದ ವಿಚಿತ್ರ ಹೆಸರುಗಳನ್ನು ಕಿತ್ತು ಹಾಕಿ ಅವರಿಗೆ ರುದ್ರದಾಮ, ಶ್ರೀದಾಮ, ಜಯದಾಮ ಮೊದಲಾದ ಭಾರತೀಯ ಹೆಸರುಗಳನ್ನಿಟ್ಟು ಕೊಳ್ಳುವಂತೆ ಮಾಡಿದರು. ಕಾಲಿದಾಸನಿಗಿಂತ ಮುಂಚಿನ ಪ್ರಖ್ಯಾತ ನಾಟಕಕಾರನಾದ ಭಾಸ ಮಹಾಕವಿಯು ಈ ಶಕರಾಜನ ಆಶ್ರಯದಲ್ಲಿಯೇ ಇದ್ದುಕೊಂಡು ರಾಮಾಯಣ ಮಹಾ ಭಾರತಗಳೊಳಗಿನ ಅನೇಕ ಆಖ್ಯಾನಗಳನ್ನು ಅವಲಂಬಿಸಿ ನಾಟಕಗಳನ್ನು ಬರೆದನೆಂದು ತೋರುತ್ತದೆ. ಆದರೂ ಇವರಿಗೆ ತಾವು ಪರಕೀಯ ರಾಜ್ಯವಂಶದವರೆಂಬ ಕಲ್ಪನೆಯು ಒಳಗೊಳಗೇ ಇದ್ದೇ ಇದ್ದಿತ್ತೆಂದು ತೋರುತ್ತದೆ. ಏಕೆಂದರೆ ಸ್ವದೇಶದ ಅರಸೊತ್ತಿಗೆಗಳು ತಲೆಯೆತ್ತಿದಾಗ ಇವರು ತೋರಿಕೆಗೆ ಅವರ ಕೂಡ ಹೊಂದಿಕೊಂಡವರಂತೆ ತೋರಿಸಿ ಒಳಗೊಳಗೆ

ಅವರನ್ನು ಹತ್ತಿಕ್ಕುವ ಪ್ರಯತ್ನ ಮಾಡುತ್ತಿದ್ದರೆಂದು ತೋರುತ್ತದೆ. ಉದಾಹರಣಾರ್ಥವಾಗಿ ನಾಶಿಕದ ಶಕ ರಾಜರು ಸಾತವಾಹನರಿಗೆ ತಮ್ಮ ಮಗಳನ್ನು ಮದುವೆ ಮಾಡಿಕೊಟ್ಟು ಮಿತ್ರತ್ವ ಬೆಳಸಿದವರಂತೆ ತೋರಿಸಿ ಹಿಂದಿನಿಂದ ಅಕಸ್ಮಾತ್ತಾಗಿ ಅವರ ಕೂಡ ಕಾಲುಕೆದರಿ ಜಗಳತೆಗೆದು ಯುದ್ಧಕ್ಕೆ ನಿಂತರು. ಇದನ್ನರಿತು ಸಾತವಾಹನರು ಕ್ರುದ್ಧರಾಗಿ ನಾಶಿಕದ ಶಕರನ್ನು ಸಂಪೂರ್ಣ ನಿರ್ನಾಮ ಮಾಡಿದ್ದು ಇತಿಹಾಸ ಪ್ರಸಿದ್ಧ ಸಂಗತಿಯಾಗಿದೆ. ಇದರಂತೆಯೇ ಉಜ್ಜಯಿನಿಯ ಶಕರೂ ಕೂಡ ಸುವಿಖ್ಯಾತ ಗುಪ್ತ ಸಾಮ್ರಾಟ ನಾದ ಸಮುದ್ರಗುಪ್ತನ ಕೂಡ ಎಷ್ಟೋ ಒಡಂಬಡಿಕೆ ಮಾಡಿಕೊಂಡು ರಾಯಭಾರಿ ಸಂಬಂಧವನ್ನು ಸ್ಥಾಪಿಸಿ ದ್ದರೂ ಆತನ ಮಗನಾದ ಪುಣ್ಯಶ್ಲೋಕ ವಿಕ್ರಮರಾಜನು (ಎರಡನೆಯ ಚಂದ್ರಗುಪ್ತನು) ಪರಕೀಯರ ಈ ಒಳಗುಟ್ಟನ್ನು ತಿಳಿದೋ ಏನೋ ಉಜ್ಜಯಿನಿಯ ಶಕರನ್ನು ಹೇಳಹೆಸರಿಲ್ಲದಂತೆ ನಿರ್ನಾಮ ಮಾಡಿಬಿಟ್ಟನೆಂಬ ವಿಷಯವನ್ನು ಈ ಮೊದಲೇ ಹೇಳಿದ್ದೇನೆ.

ಒಳ್ಳೆಯ ಕಾರ್ಯಕ್ಕೆ ವಿಘ್ನಗಳು ಬಹಳವೆಂಬ ನಾಣ್ಣುಡಿಗನುಸರಿಸಿ ಭಾರತದ ಏಕಛತ್ರಾಧಿಪತ್ಯದ ಸ್ಥಾಪನೆಗೆ ಒಂದರ ಹಿಂದೊಂದು ಗಂಡಾಂತರಗಳು ಬರುತ್ತಲೇ ಇದ್ದವು. ಗುಪ್ತಸಾಮ್ರಾಟರ ಮುಂದು ಮುಂದಿನ ಅರಸರು ಸ್ವಲ್ಪ ಇಳಿಕೆಗೆ ಬಂದ ಹಾಗೆಲ್ಲ ಬೇರೆ ಬೇರೆ ಪರಕೀಯರ ಆಕ್ರಮಣವು ಮತ್ತೆ ಆರಂಭವೇ ಆಯಿತು. ಚೀನ ಮಂಗೋಲಿಯಗಳ ಮಧ್ಯಪ್ರದೇಶಗಳಲ್ಲಿದ್ದ ಹೂಣರೆಂಬ ಜನಾಂಗದವರು ಭಾರತದ ಭಾಗ್ಯ ಶೋಷಣೆಗೆ ದುರಾಶೆಪಟ್ಟು ಹಿಂದುಸ್ತಾನವನ್ನು ಹೊಕ್ಕರು. ಗುಪ್ತ ರಾಜರು ಇವರ ಕೂಡ ಅನೇಕ ವರುಷ ಸತತ ಕಾದಾಡಿದರು ಆದರೆ ದುರ್ದೈವವಶಾತ್ ಕೊನೆಗೆ ಹೂಣರು ಉತ್ತರ ಹಿಂದುಸ್ತಾನದ ಬಹು ಭಾಗದಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸಿಯೇ ಬಿಟ್ಟರು. ಈ ವಂಶದ ತೋರಮಾಣ, ಮಿಹಿರಕುಲ ಮೊದ ಲಾದ ರಾಜರು ಅರಸೊತ್ತಿಗೆ ಮಾಡುವಷ್ಟರೊಳಗಾಗಿ ನಮ್ಮ ಸಂಸ್ಕೃತಿಯು ಪುನಃ ಅವರನ್ನು ತನ್ನ ಜಠರಾಗ್ನಿ ಯಲ್ಲಿ ಪಚನಮಾಡಿಕೊಳ್ಳಲಿಕ್ಕೆ ಆರಂಭಿಸಿತೆಂದು ಹೇಳಬಹುದು. ಏಕೆಂದರೆ ಮಿಹಿರ ಕುಲನ ಮಗನು ಪ್ರವರ ಸೇನನೆಂಬ ಹಿಂದೂ ಹೆಸರಿನ್ನಿಟ್ಟುಕೊಂಡನೆಂದು ಕಾಶ್ಮೀರದ ಪ್ರಖ್ಯಾತ ಪುರಾತನ ಗ್ರಂಥವಾದ 'ರಾಜ ತರಂಗಿಣಿ' ಯಲ್ಲಿ ಹೇಳಲಾಗಿದೆ. ಆದರೆ ಗುಪ್ತರು ಕೊನೆಗೆ ಇವರನ್ನೂ ಸೋಲಿಸಿಯೇ ಬಿಟ್ಟರು. ಆದರೂ ಈ ಪರಕೀಯ ದಾಳಿಗಾರರ ಕೂಡ ಗುದ್ದಾಡಿ ಗುದ್ದಾಡಿ ದಣಿದ ಗುಪ್ತವಂಶದ ಅರಸರು ಕೊನೆ ಕೊನೆಗೆ ಮಗಧ ಪ್ರಾಂತದ ಮಟ್ಟಿಗೆ ಮಾತ್ರ ಅರಸರಾಗಿ ಉಳಿದು ಉತ್ತರ ಹಿಂದುಸ್ತಾನವು ಪುನಃ ಚಿಕ್ಕ ಪುಟ್ಟ ರಾಜ್ಯಗಳ ಗೂಡಾಯಿತು.

— ೪ —

ಹಿಂದೂ ವೈದಿಕ ಧರ್ಮವು ಇಳಿಕೆಗೆ ಬಂದಕೂಡಲೆ ಬೌದ್ಧ ಧರ್ಮವೂ, ಬೌದ್ಧ ಧರ್ಮವು ಇಳಿಕೆಗೆ ಬಂದ ಕೂಡಲೇ ಹಿಂದೂ ವೈದಿಕ ಧರ್ಮವೂ ತಾವು ತಾವು ಪ್ರಬಲವಾಗಲು ಪ್ರಯತ್ನ ಮಾಡುತ್ತಲೇ ಇದ್ದ ವೆಂದು ಈ ಮೊದಲೇ ಹೇಳುವೆನಷ್ಟೆ? ಅದರಂತೆ ಹಿಂದೂ ವೈದಿಕ ಧರ್ಮದ ಪರಮ ಪೋಷಕರಾದ ಈ ಗುಪ್ತರಾಜರೊಳಗಿನ ಕೊನೆ ಕೊನೆಯ ಅರಸರನ್ನು ಬೌದ್ಧ ಧರ್ಮವು ಪುನಃ ತನ್ನೆಡೆಗೆ ಸೆಳೆದುಕೊಂಡಿತು. ಅದರಿಂದ ಪುನಃ ಬೌದ್ಧ ಧರ್ಮದ ನಾಲಂದಾ, ತಕ್ಷಶಿಲಾ ಮೊದಲಾದ ಪ್ರಖ್ಯಾತ ವಿಶ್ವ ವಿದ್ಯಾಲಯಗಳು ಸ್ಥಾಪಿತವಾಗಿ ವೈದಿಕ ಧರ್ಮವನ್ನು ಹಿಂದೆ ಹಾಕಿದವು. ಆದರೆ ಇಷ್ಟು ಹೊತ್ತಿಗೆ ಉತ್ತರ ಹಿಂದುಸ್ತಾನದಲ್ಲಿ ಇನ್ನೊಬ್ಬ ವೈದಿಕ ಹಿಂದೂ ಮಹಾಸಾಮ್ರಾಟನು ಕ್ರಿಸ್ತೀಯ ಏಳನೆಯ ಶತಮಾನದಲ್ಲಿ ಝುಗಿಝುಗಿಸಿದನು. ಆತನೇ ಅತಿ ಪ್ರಖ್ಯಾತನಾದ (ಕನೋಜದ) ಹರ್ಷವರ್ಧನನು. ಪ್ರಖ್ಯಾತ ಕವಿಯಾದ ಬಾಣನು ಈತನ ಆಸ್ಥಾನ ಕವಿಯಾಗಿದ್ದನು. ಬಾಣನ ಕಾದಂಬರಿಯು ಬಹುಶಃ ಇವರೀರ್ವರ (ಕವಿ ಹಾಗೂ ಪೋಷಕರ)

ಅನ್ಯೋನ್ಯ ಪ್ರೇಮುವನ್ನು ಸೂಚಿಸುವ ಆತ್ಮ ಚಗಿತ್ರವೇ ಆಗಿದೆಯೆಂದು ಹೇಳಬಹುದು. ಪ್ರಖ್ಯಾತ ಇತಿಹಾಸ ಕಾರರಾದ ವಿನ್ಸೆಂಟಸ್ಮಿಥ್‌ರವರು ಸಹ ತಮ್ಮ "ಪುರಾತನ ಭಾರತ ಇತಿಹಾಸ'' ಗ್ರಂಥದಲ್ಲಿ(Early History of India) ಈ ಅಭಿಪ್ರಾಯವನ್ನೇ ವ್ಯಕ್ತಪಡಿಸಿರುವರು. ಹೀಗೆ ಹರ್ಷವರ್ಧನನು ಇಡೀ ಉತ್ತರ ಹಿಂದುಸ್ತಾನವನ್ನೆಲ್ಲ ಪುನಃ ಗೆದ್ದು ಏಕಛತ್ರಾಧಿಪತ್ಯವನ್ನು ತಿರುಗಿ ಮತ್ತೆ ಸ್ಥಾಪಿಸಿದನು. ಈತನು ಮಹಾ ಶೂರ ಧೀರನಾಗಿದ್ದುದಲ್ಲದೆ ಸ್ವತಃ ಕವಿಯೂ ಸಾಹಿತಿಯೂ ಸಹ ಆಗಿದ್ದನು. ''ರತ್ನಾವಳೀ ನಾಟಕವೂ, ನೈಷಧ ಕಾವ್ಯ"ವೂ ಈತನ ರಮ್ಯಕೃತಿಗಳು.

ಮೊದಲಿಗೆ ಹರ್ಷವರ್ಧನನು ವೈದಿಕ ಹಿಂದೂ ಧರ್ಮದ ಪೋಷಕನಾಗಿದ್ದನಷ್ಟೆ? ಆದರೆ ಕೊನೆಗೆ ಅಶೋಕಮಹಾರಾಜನಂತೆ ಈತನೂ ಬೌದ್ಧಧರ್ಮವನ್ನು ಸ್ವೀಕರಿಸಿ ಐದು ವರ್ಷಕ್ಕೊಮ್ಮೆ ತನ್ನ ಬೊಕ್ಕಸವನ್ನೆಲ್ಲ ಎಳ್ಳಷ್ಟೂ ಸಹ ಉಳಿಸಿಕೊಳ್ಳದೆ ದಾನಮಾಡಿ ತನ್ನ ವೈರಾಗ್ಯದ ಪರಮ ಶಿಖರವನ್ನು ತೋರಿಸಿದನು. ಆದರೆ ರಾಜ್ಯಭಾರವನ್ನು ವಹಿಸಿಕೊಂಡವರು ಕೇವಲ ಧರ್ಮದ ಅಭಿಲಾಷೆಗೆ ಬಿದ್ದು ಸನ್ಯಾಸಿಗಳಂತೆ ವೈರಾಗ್ಯಶೀಲರಾಗಿ ವ್ಯವಹಾರವನ್ನು ತುಚ್ಛವೆಂದು ಭಾವಿಸಿ ರಾಜಶಾಸನವನ್ನು ಅಲಕ್ಷಿಸಿದರೆ ಆ ರಾಜ್ಯ ಉಳಿಯುವದು ಪರಮ ಕಷ್ಟ. ರಾಜಸಿಂಹಾಸನದ ಮೇಲಿದ್ದು ಪ್ರಖರ ಧರ್ಮಾಭಿಲಾಷೆಯುಳ್ಳವರಾಗುವದೆಂದರೆ ಅದು ಜನಕ, ಅಜಾತ ಶತ್ರುಗಳಂತೆ ಅಂದರೆ ಒಳಗೆ ಪೂರ್ಣ ಜ್ಞಾನ, ಹೊರಗೆ ಪೂರ್ಣ ಕರ್ತವ್ಯಪಾಲನ, ಈ ತತ್ತ್ವದವರಾಗ ಬೇಕೆಂಬುದು ಅವಶ್ಯವೆಂದು ಬೇರೆ ಹೇಳಬೇಕಾಗಿಲ್ಲ ನಿಜವಾಗಿಯೂ ಹೀಗಿರುವ ರಾಜರೇ ರಾಜರೆಂಬುದು ಹಿಂದಿನ ಕಾಲದಿಂದಲೂ ನಿಸ್ಸಂದಿಗ್ಧವಾದ ಮಾತಾಗಿದೆ. ಹೀಗಿದ್ದೂ ರಾಜರು ತಮ್ಮ ವೈಯಕ್ತಿಕ, ಧಾರ್ಮಿಕ ಉನ್ನತಿಗೆ ಮಹತ್ವ ಕೊಟ್ಟು ಜನತಾಹಿತವಾದಿಯಾದ ರಾಜ್ಯಯಂತ್ರವನ್ನು ಅದರ ನಿಯಮುಗಳಂತೆ ನಡಿಸ ದಿದ್ದರೆ ಅದು ಶಿಥಿಲವಾಗಿ ಹೋಗುವದೆಂಬುದು ಸಹಜವಾದ ಮಾತಾಗಿದೆ ಕಾಲಿದಾಸನು ರಘುವಂಶ ಮಹಾಕಾವ್ಯದ ರಾಜನೀತಿಯನ್ನು ಹೇಳುವಾಗ ಧರ್ಮ, ಅರ್ಥ, ಕಾಮುಗಳು ಒಂದಕ್ಕೊಂದು ಬಾಧಕವಾಗದೆ ಪರಸ್ಪರ ಸಾಧಕವಾಗಿರಬೇಕೆಂದು ಬರೆದಿದ್ದಾನೆ. ಅರ್ಥಾತ್, ಧರ್ಮಕ್ಕೆ ವ್ಯವಹಾರವೂ, ವ್ಯವಹಾರಕ್ಕೆ ಧರ್ಮವೂ ಒಂದಕ್ಕೊಂದು ಅಡ್ಡ ಬರಬಾರದೆಂಬುದೇ ಈ ಮಾತಿನ ತತ್ತ್ವ ಆದರೆ ಸಮ್ರಾಟ ಹರ್ಷವರ್ಧನನ ಸಾಮ್ರಾಜ್ಯವು ಆತನಿಂದಲೇ ಸ್ಥಾಪಿತವಾಗಿ ಆತನ ತಲೆಮಾರಿಗೇ ಮುಗಿದು ಹೋದದ್ದನ್ನು ನೋಡಿದರೆ ಈ ತತ್ವವನ್ನು ಮರೆತದ್ದೇ ಅದಕ್ಕೆ ಕಾರಣವೆಂದು ಅನಿಸುತ್ತದೆ. ಹಿಂದೆ ಸಮ್ರಾಟ ಅಶೋಕ ಮಹಾರಾಜನ ಸಾಮ್ರಾಜ್ಯವು ಇಳಿಗಾಲಕ್ಕೆ ಬಂದದ್ದಾದರೂ ಇದೇ ಕಾರಣವೇ ಮುಖ್ಯವಾದದ್ದೆಂದು ಬೇರೆ ಹೇಳಬೇಕಾಗಿಲ್ಲ.

ಆದರೆ ಈ ಹರ್ಷವರ್ಧನನ ಕಾಲಕ್ಕೆ ಒಂದು ಹೊಸ ಮಾತು ನಡೆಯಿತು. ಅದಾವುದೆಂದರೆ ಉತ್ತರ ಹಿಂದುಸ್ಥಾನ ಹಾಗೂ ದಕ್ಷಿಣ ಹಿಂದುಸ್ಥಾನಗಳ ಬೆಳವಣಿಗೆಯು ಆಗಿನಿಂದ ಪ್ರತ್ಯೇಕ ಪ್ರತ್ಯೇಕವಾಗಿ ಸಾಗುವದಕ್ಕೆ ಆರಂಭವಾಯಿತು. ಆಗ ದಕ್ಷಿಣದಲ್ಲಿ ಸಮ್ರಾಟನಾದ ಚಾಲುಕ್ಯರ ಎರಡನೆಯ ಪುಲಕೇಶಿಯು ಏಕೈಕ ವೀರನಾಗಿದ್ದನು. ಹರ್ಷವರ್ಧನನು ಆತನನ್ನು ಗೆಲ್ಲಬೇಕೆಂದು ಎಷ್ಟೇ ಪ್ರಯತ್ನಮಾಡಿದರೂ ಕೈಸಾಗದೆ ಕೊನೆಗೆ ಪುಲಕೇಶಿಯ ಕೂಡ ಒಪ್ಪಂದ ಮಾಡಿಕೊಂಡು ನರ್ಮದಾ ನದಿಯನ್ನು ಉತ್ತರ ದಕ್ಷಿಣ ಹಿಂದುಸ್ಥಾನಗಳ ಸೀಮೆ-ಯಾಗಿ ನಿರ್ಧರಿಸಿ ಉತ್ತರದಲ್ಲಿ ತಾನೂ, ದಕ್ಷಿಣದಲ್ಲಿ ಪುಲಕೇಶಿಯೂ ಆಳಬೇಕೆಂದು ನಿರ್ಣಯವಾಯಿತು.

ದಕ್ಷಿಣದಲ್ಲಿ ಸಮ್ರಾಟನಾದ ಪುಲಕೇಶಿಯು ನಿಜವಾಗಿಯೂ ಹಿಂದೂ ಸಂಸ್ಕೃತಿಯ ಮಹಾಪೋಷಕ ನಾಗಿದ್ದನು. ಆತನು ಅಶ್ವಮೇಧ ಯಜ್ಞವನ್ನು ಮಾಡಿ "ಸತ್ಯಾಶ್ರಯ" (ಸತ್ಯಕ್ಕೆ ಆಧಾರ) ನೆಂಬ ಬಿರುದನ್ನು ಧರಿಸಿದ್ದನು. ಒಟ್ಟಾರೆ ಚಾಲುಕ್ಯರು ತಮ್ಮ ಧ್ವಜದ ಮೇಲೆ ವರಾಹ ಚಿತ್ರವನ್ನು ಸ್ವೀಕರಿಸಿದ್ದು

ಈ ಮಾತಿಗೆ ಹೆಚ್ಚಿನ ಸಾಕ್ಷಿಯಾಗಿದೆ. ಮುಳುಗಿ ಹೋಗುತ್ತಿದ್ದ ಭೂಮಿಯನ್ನು ಎತ್ತಿ ಹಿಡಿದು ಉದ್ಧರಿಸಿದ್ದೇ ವರಾಹಾವತಾರದ ಮಹಾಕಾರ್ಯ. ಇಲ್ಲಿ ಒಂದು ಮಾತನ್ನು ಹೇಳಬಹುದು; ಅದಾವುದೆಂದರೆ ಉತ್ತರದಲ್ಲಿ ವೈದಿಕ ಹಿಂದೂ ಮತ್ತು ಬೌದ್ಧಧರ್ಮಗಳ ಹೋರಾಟ ನಡೆದಂತೆ ದಕ್ಷಿಣದಲ್ಲಿ ಜೈನ ಮತ್ತು ಹಿಂದು ಧರ್ಮಗಳ ತಿಕ್ಕಾಟವು ನಡದೇ ಇದ್ದಿತು (ಬಹುಶಃ ಜೈನರು ಮೌರ್ಯಚಂದ್ರಗುಪ್ತನ ಕಾಲಕ್ಕೇ ಉತ್ತರ ಹಿಂದುಸ್ತಾನದಿಂದ (೧೨ ವರುಷಗಳ ಬರಗಾಲದ ಮೂಲಕ) ದಕ್ಷಿಣ ಹಿಂದುಸ್ತಾನಕ್ಕೆ ಬಂದು ನೆಲೆಸಿದ್ದರೆಂದು ಜೈನ ಪುರಾಣಗಳಿಂದ ತಿಳಿಯುತ್ತದೆ.) ಉತ್ತರದಲ್ಲಿ ಬೌದ್ಧರು, ವಹಿಸಿದ ಪಾತ್ರವನ್ನೇ ಇತ್ತ ದಕ್ಷಿಣದಲ್ಲಿ ಜೈನರು ವಹಿಸಿದರೆಂದು ಅನ್ನಬಹುದು. ಇವರೂ ದೇವರ ಅಸ್ತಿತ್ವವನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ನಾಸ್ತಿಕ ಅಭಿಪ್ರಾಯದವರಾಗಿದ್ದರು. "ಭರತಖಂಡದ ಅಂತರಾತ್ಮನು ಆಸ್ತಿಕತೆಯ ಪರಮ ಮೂರ್ತಿ ಯಾಗಿರುವದರಿಂದ ಈ ದೇಶದಲ್ಲಿ ಯಾವ ನಾಸ್ತಿಕ ಪಂಗಡಗಳೂ ಬಾಳಿ ಬದುಕಲಾರವು" ಎಂದು ಶ್ರೀ ಅರವಿಂದರ ತತ್ತ್ವದ ಪತ್ರಿಕೆಯಾದ "ಮದರ್ ಇಂಡಿಯಾ"ದ ಅಗ್ರಲೇಖನವೊಂದರಲ್ಲಿ ಆಧುನಿಕ ನಾಸ್ತಿಕ ರಾಜಕೀಯ ಪಂಗಡಗಳ ಬಗೆಗೆ ಹೇಳಲಾಗಿದೆಯಲ್ಲದೆ ಈ ದೇಶದ ಪ್ರಮುಖ ರಾಜಕೀಯ ಪಂಗಡಗಳು ಆಧ್ಯಾತ್ಮಿಕತೆಯನ್ನು ಅಲ್ಲಗಳೆಯಬಾರದೆಂದು ಸೂಚಿಸಲಾಗಿದೆ. ಈ ಮಾತಿನ ಫಲಿತಾಂಶವನ್ನೇ ಪುರಾತನ ನಾಸ್ತಿಕ ಪಂಗಡಗಳ ಬಗೆಗೂ ಇತಿಹಾಸದಲ್ಲಿ ಕಾಣುವೆವು.

ತೀರ ದಕ್ಷಿಣದಲ್ಲಿ ಚೋಳರೂ ಪಾಂಡ್ಯರೂ, ಅಶೋಕ ಮಹಾರಾಜನ ಕಾಲಕ್ಕಿಂತಲೂ ಮೊದಲಿನಿಂದಲೇ ಪ್ರಖ್ಯಾತರಾಗಿದ್ದರೆಂಬುದು ಇತಿಹಾಸ ಪ್ರಸಿದ್ಧವಾಗಿದೆಯಷ್ಟೆ ? ಅದರಲ್ಲಿಯೂ ಪಾಂಡ್ಯರು ತಾವು ಪಾಂಡವರ ವಂಶವವರೆಂದು ತಿಳಿದುಕೊಂಡಿದ್ದರೆಂದು ತೋರುತ್ತದೆ. ಚೋಳರಾಜರಲ್ಲಿ ಅನೇಕ ಶೈವ, ವೈಷ್ಣವ ಭಗವದ್ಭಕ್ತರು ಉದಿಸಿದ ಕಥೆಯಂತೂ ಸರ್ವಶ್ರುತ. ಆದರೂ ಇತಿಹಾಸ ಕಾಲದ ಆರಂಭದಲ್ಲಿ ಸಾತವಾಹನರು ಪ್ರಸಿದ್ಧರಾಗಿ ಉತ್ತರ ಹಿಂದುಸ್ತಾನ ಮತ್ತು ಅತಿ ದಕ್ಷಿಣಗಳನ್ನು ಸಂಧಿಸುವ ಮಧ್ಯ ದಕ್ಷಿಣ ಪ್ರದೇಶ (ಈಗಿನ ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ಗುಜರಾಥಗಳು) ವನ್ನು ತಮ್ಮ ರಂಗಭೂಮಿಯನ್ನಾಗಿ ಮಾಡಿಕೊಂಡರೆಂಬುದು ಗೊತ್ತಿದ್ದ ಮಾತೇ ಆಗಿದೆ.

ಚೋಳರೂ, ಪಾಂಡ್ಯರೂ ಎಷ್ಟೋ ಪುರಾತನದವರಾಗಿದ್ದರೂ, ಅವರು ಹಿಂದುಸ್ತಾನದ ಅತಿ ದಕ್ಷಿಣ ಪ್ರದೇಶಕ್ಕೆ ಸಂಬಂಧಿಸಿದವರಿದ್ದರೆಂಬುದು ನಿರ್ವಿವಾದವಾದ ಮಾತಾಗಿದೆ. ಆದರೆ ವಿಂಧ್ಯ, ಸಹ್ಯಾದ್ರಿಗಳ ಸಮೀಪದ ಮಧ್ಯ ದಕ್ಷಿಣ ಪ್ರದೇಶವು ಪುರಾಣ ಕಾಲದಲ್ಲಿ ದಂಡಕಾರಣ್ಯವಾಗಿದ್ದು ಸಾತವಾಹನರಿಗಿಂತ ಮೊದಲು ಅಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ಯಾವುಗಳು ಸಾಗಿದವೋ ಏನೋ ತಿಳಿಯುವದು ಕಷ್ಟಕರವಾಗಿದೆ. ಅಗಸ್ತ್ಯರು ದಕ್ಷಿಣಕ್ಕೆ ಬಂದಾಗ ಈಗಿನ ಬಾದಾಮಿಯ ಪ್ರದೇಶದಲ್ಲಿ ವಾತಾಪಿ ಇಲ್ವಲರೆಂಬ ರಾಕ್ಷಸರು ಅಥವಾ ಕಾಡುಜನರು ಇದ್ದರೆಂದು ಪುರಾಣಗಳಿಂದ ತಿಳಿಯುತ್ತದೆ. ರಾಮಾಯಣ ಕಾಲದಲ್ಲಿಯಂತೂ ಹಂಪೆ ಅಥವಾ ಕಿಷ್ಕಿಂಧೆಯು ಕಪಿಗಳೆಂಬ ಕಾಡುಜನರ ವಾಸಸ್ಥಾನವಾಗಿತ್ತೆಂದು ಹೇಳಲಾಗಿದೆ. ಮಹಾಭಾರತದ ಕಾಲದಲ್ಲಿ ಮಾತ್ರ ಈ ಮಧ್ಯ ದಕ್ಷಿಣ ಪ್ರದೇಶವು ಕುಂತಳರಾಜ್ಯವೆಂದು ಪ್ರಸಿದ್ಧವಾಗಿತ್ತೆಂದೂ, ಆಗ ಇಲ್ಲಿ ಚೆನ್ನಾಗಿ ಸಂಸ್ಕೃತಿಯು ನೆಲೆಗೊಂಡಿತ್ತೆಂದೂ ಗೊತ್ತಾಗುತ್ತದೆ. ಆದರೆ ಸಾತವಾಹನರ (ಆಂಧ್ರರ) ಅನಂತರ ಬನವಾಸಿಯ ಕದಂಬರೇ ಈ ಪ್ರದೇಶದ ಪ್ರಥಮ ಪ್ರಬಲ ರಾಜರೆಂದು ತೋರುತ್ತದೆ. (ಗುಪ್ತರ ಕಾಲದಲ್ಲಿ ವಾಕಾಟಕರು ಉತ್ತರ ಕುಂತಳವನ್ನು ಆಳುತ್ತಿದ್ದರು.) ಆದರೆ ಕದಂಬರ ಮೂಲಪುರುಷನಾದ ಮಯೂರಶರ್ಮನ ಚಂದ್ರವಳ್ಳಿಯ ಶಿಲಾಶಾಸನದಿಂದ ಆಗ ಅಲ್ಲಿ ಪುನ್ನಾಟ ಮೊದಲಾದ ಅನೇಕ ಚಿಕ್ಕ ಪುಟ್ಟ ರಾಜ್ಯಗಳಿದ್ದವೆಂದು ತಿಳಿಯುತ್ತದೆ. ಇದನ್ನು ನೋಡಿದರೆ ಮಧ್ಯ ದಕ್ಷಿಣದ ಚಿಕ್ಕ ಪುಟ್ಟ ರಾಜ್ಯಗಳನ್ನೆಲ್ಲ

ಆಳುಕಿಸಿ ಮಹಾ-ರಾಷ್ಟ್ರಮಾಡುವ ಪ್ರಯತ್ನವನ್ನು (ಉತ್ತರದಲ್ಲಿ ಸಮುದ್ರಗುಪ್ತ ಮಾಡಿದಂತೆ) ದಕ್ಷಿಣದಲ್ಲಿ ಕದಂಬರ ಮೂಲಪುರುಷನಾದ ಮಯೂರಶರ್ಮನೇ ಮೊದಲಿಗೆ ಮಾಡಿದನೆಂದು ತೋರುತ್ತದೆ. ಮುಂದೆ ಅತಿ ದಕ್ಷಿಣದಲ್ಲಿ ಚೋಳರೂ, ಮಧ್ಯ ದಕ್ಷಿಣದಲ್ಲಿ ಚಾಲುಕ್ಯರೂ, ಬಹುಕಾಲ ಮುಖ್ಯಪಾತ್ರ ವಹಿಸಿದರೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಪಲ್ಲವರು ಇವರಿಬ್ಬರಿಗೆ ಅಡ್ಡಗಾಲಾಗಿ ಯಾವಾಗಲೂ ಇವರಿಬ್ಬರನ್ನು ಹತ್ತಿಕ್ಕುವ ಪ್ರಯತ್ನದಲ್ಲಿಯೇ ಇದ್ದರು. ಕೊನೆಗೂ ಚೋಳರೂ ಚಾಲುಕ್ಯರೂ ಕೂಡಿ ಪಲ್ಲವರನ್ನು ಮೂಲೆಗೊತ್ತಿ ತಾವಿಬ್ಬರೂ ಕನ್ಯಾ ವ್ಯವಹಾರ ಮಾಡಿ ಪರಸ್ಪರ ಐಕ್ಯಹೊಂದಿ ಕ್ರಿಸ್ತೀಯ ಹನ್ನೊಂದನೆಯ ಶತಮಾನದಲ್ಲಿ ಅಖಂಡ ದಕ್ಷಿಣ ಹಿಂದುಸ್ತಾನವನ್ನು ಮಾಡಿದರು. ಚೋಳರಲ್ಲಿ ರಾಜೇಂದ್ರ ಚೋಳನೂ, ಚಾಲುಕ್ಯರಲ್ಲಿ ಕಲ್ಯಾಣದ ವಿಕ್ರಮನೂ ಅತ್ಯಂತ ವೈಭವಶಾಲಿಗಳಾದ ರಾಜರಾಗಿ ದೇಶದ ವೃದ್ಧಿಯನ್ನು ಬಹುಮುಖವಾಗಿ ಸಾಧಿಸಿದರು. ಬಿಲ್ಹಣನೆಂಬ ಕಾಶ್ಮೀರದ ಮಹಾಕವಿಯೊಬ್ಬನು ಕಲ್ಯಾಣದ ವಿಕ್ರಮನ ಆಸ್ಥಾನ ಕವಿಯಾಗಿ ಆತನ ಅಮೌಲ್ಯ ಚರಿತ್ರವನ್ನು (ವಿಕ್ರಮಾಂಕ ದೇವಚರಿತ) ಬರೆದು ಆತನ ಅಮರ ಕೀರ್ತಿಯನ್ನು ಚಿರಗೊಳಿಸಿದನು. ಚೋಳರ ಪ್ರಖ್ಯಾತ ರಾಜನಾದ ರಾಜೇಂದ್ರ ಚೋಳನು ತನ್ನ ದೇಶದ ತುಂಬೆಲ್ಲ ಗ್ರಾಮಪಂಚಾಯತಿಗಳನ್ನು ಸ್ಥಾಪಿಸಿ ಅವುಗಳನ್ನು ಅತ್ಯಂತ ಊರ್ಜಿತ ಸ್ಥಿತಿಗೆ ಮುಟ್ಟಿಸಿ ದೇಶವು ಪ್ರಜಾಪ್ರಭುತ್ವದ ಸುಖವನ್ನು ಉಣ್ಣುವಂತೆ ಮಾಡಿದ್ದನೆಂಬುದನ್ನು ನೆನಿಸಿದರೆ ಯಾರ ಹೃದಯವು ಜುಮ್ಮೆನ್ನದು? ಅಲ್ಲದೆ ಚೋಳರು ಜಲ ಪರ್ಯಟನದಲ್ಲಿ ಅತ್ಯಂತ ಪ್ರಖ್ಯಾತರೆಂದೆನಿಸಿ ಮಲಯಾ, ಇಂಡೋಚೀನ, ಸುಮಾತ್ರಾ, ಜಾವಾ ಮೊದಲಾದ ಅತಿಪೂರ್ವ ಏಶಿಯಾದಲ್ಲಿ ತಮ್ಮ ಕೀರ್ತಿಸ್ತಂಭವನ್ನು ನಿಲ್ಲಿಸಿದ್ದರೆಂಬುದನ್ನು ನೆನಿಸಿದರೆ ಭಾರತ ಸಂಸ್ಕೃತಿಯ ವಿಸ್ತಾರದಲ್ಲಿ ದಕ್ಷಿಣದವರು ಮಾಡಿದ ಕಾರ್ಯವು ಎಷ್ಟು ಮಹತ್ವದ್ದೆಂಬುದು ಸ್ಪಷ್ಟವಾಗಿ ಗೊತ್ತಾಗುವದು. ಅಲ್ಲದೆ ಪಶ್ಚಿಮ ಏಶಿಯಾದ ಕೂಡ ವ್ಯಾಪಾರ ಬೆಳೆಸಿದವರೂ ಇವರೇ. ಹೇಗಂದರೆ ಚಾಲುಕ್ಯರ ಒಡ್ಡೋಲಗಕ್ಕೆ ಇರಾಣದ ರಾಯಭಾರಿಗಳು ಬಂದಿದ್ದಂತೂ ಅಜಂತಾಚಿತ್ರಗಳಲ್ಲಿ ಇಂದಿಗೂ ಮೂರ್ತಿಮಂತವಾಗಿ ನಿಂತಿದೆ. (ಪಶ್ಚಿಮ ಕರಾವಳಿಯ ಕೂಡ ಫಿನೀಸಿಯನ್ನರ ಕಾಲದಿಂದಲೂ ವ್ಯಾಪಾರವಿತ್ತು.) [ಪಾಂಡ್ಯರು ಕಟ್ಟಿಸಿದ ಮಧುರೆಯ ಶ್ರೀ ಮೀನಾಕ್ಷಿದೇವಿಯ ದೇವಾಲಯವಂತೂ ದಕ್ಷಿಣ ಹಿಂದುಸ್ಥಾನದ ಮಹಾಕಲಾಕೃತಿಯಾಗಿ ಅವರ ಅತಿ ಪುರಾತನ ವಂಶದ ಕೀರ್ತಿಯನ್ನು ಸಾರ್ಥಕಗೊಳಿಸಿದೆ.]

ಉತ್ತರ ಹಿಂದುಸ್ತಾನದಲ್ಲಿ ಹರ್ಷವರ್ಧನನ ಅನಂತರ ಪುನಃ ಅನೇಕ ಕಡೆಗೆ ಬೇರೆ ಬೇರೆ ಪರಾಕ್ರಮಿ ರಾಜವಂಶಗಳು ಸ್ಥಾಪಿತವಾಗಿ ಒಂದೊಂದು ಕಾಲಕ್ಕೆ ಒಂದೊಂದು ಪ್ರಬಲವಾಗಿ, ಅವು ಇಡೀ ಹಿಂದುಸ್ತಾನವನ್ನೋ ಅಥವಾ ಉತ್ತರ ಹಿಂದುಸ್ತಾನದ ಬಹು ಭಾಗವನ್ನೋ ಆಳಲಿಕ್ಕೆ ಪ್ರಯತ್ನಿಸಿದವು. ಉದಾಹರಣಾರ್ಥವಾಗಿ ಕ್ರಿಸ್ತೀಯ ಒಂಬತ್ತನೆಯ ಶತಮಾನದಲ್ಲಿ ಕನೋಜದ ಪ್ರತಿಹಾರವಂಶದ ಒಬ್ಬ ಭೋಜರಾಜನು ತನ್ನ ನಾಣ್ಯಗಳ ಮೇಲೆ "ಆದಿವರಾಹ" ವೆಂಬ ಶಬ್ದಗಳನ್ನು ಮುದ್ರಿಸಿ ತಾನು ಭಾರತ ಸಾಮ್ರಾಜ್ಯದ ಪುನರುದ್ಧಾರಕನೆಂಬ ಭಾವವನ್ನು ಸೂಚಿತಗೊಳಿಸಿದ್ದನು. ಮತ್ತು ಕ್ರಿಸ್ತೀಯ ಹನ್ನೊಂದನೆಯ ಶತಮಾನದಲ್ಲಿ ಮಾಳವದಲ್ಲಿ ಧಾರಾನಗರದೊಳಗೆ ರಾಜ್ಯಭಾರ ಮಾಡಿದ ಪ್ರಖ್ಯಾತನಾದ ಭೋಜರಾಜನಂತೂ ಬಹಳೇ ವಿದ್ಯಾಪಕ್ಷಪಾತಿಯೂ, ಪ್ರಜಾಹಿತಕಾರಿಯೂ ಆಗಿದ್ದನೆಂಬುದು ಇತಿಹಾಸ ಪ್ರಸಿದ್ಧವಾದ ವಿಷಯವಾಗಿದೆ. ಬಂಗಾಲದಲ್ಲಿ ಪಾಲರಾಜರೂ, ಸೇನರಾಜರೂ, ಪ್ರಖ್ಯಾತರಾಗಿದ್ದುದಲ್ಲದೆ ಹದಿನೆಂಟು ಪುರಾಣಗಳಲ್ಲೊಂದಾದ ಭಕ್ತಿರಸದ ಖಣಿಯಾದ ಭಾಗವತ ಪುರಾಣವೂ, ಲಲಿತಸುಂದರ ಶಬ್ದಗಳಿಂದ ಕೂಡಿದ ಗೀತಗೋವಿಂದ ಕಾವ್ಯವೂ ಈ ಸೇನ ರಾಜರ ಕಾಲದಲ್ಲಿಯೇ ನಿರ್ಮಿತವಾದವೆಂದು ಇತಿಹಾಸವು ಹೇಳುತ್ತದೆ. ದಿಲ್ಲಿಯ (ಇಂದ್ರ ಪ್ರಸ್ಥದ) ಕೊನೆಯ ಹಿಂದೂ ಅರಸನಾದ ವಿಖ್ಯಾತ ಪೃಥ್ವಿರಾಜನು ಸಹ ಮಹಾಶೂರ ಧೀರನೇ ಆಗಿದ್ದನೆಂಬುದಂತೂ ಸರ್ವಶ್ರುತವೇ ಆಗಿದೆ.

— ೫ —

ಇಲ್ಲಿಯಿಂದ ಮತ್ತೆ ಪರಕೀಯರ ದಾಳಿಗಳ ಆರಂಭವು ಆಗಿಯೇ ಬಿಟ್ಟಿತು. ತಿರುಗಿ ಕೇಳಿದರೆ ಹಿಂದಿನದಕ್ಕಿಂತ ಬಹಳೇ ಉಗ್ರದಾಳಿಗಳು ಆರಂಭವಾದವು ಗಿಝುನಿ ಮಹಮ್ಮೂದ, ಚಂಗೀಜಖಾನ, ತೈಮೂರಲಂಗ, ನಾದಿರಶಹಾ, ಅಹಮ್ಮದಶಹ ಅಬದಾಲಿ ಮೊದಲಾದ ಉಗ್ರದಾಳಿಗಾರರ ಹೊಡೆತದಿಂದ ಭಾರತವು ಕಂಗೆಟ್ಟು ಹೋಯಿತು. ಆ ಮೂಲಕ ವೈದಿಕ ಹಿಂದೂ ಧರ್ಮದೊಳಗಿನ ಉಪಮತ ಅನೈಕ್ಯವು ಅಳುಕಿ "ನಾವೆಲ್ಲ ಹಿಂದುಗಳು" ಎಂಬ ಧಾರ್ಮಿಕ ಐಕ್ಯತೆಯು ತಲೆದೋರತೊಡಗಿತು. "ಆಂತರಿಕ ಸಾಮ್ರಾಜ್ಯಗಳಿಂದ ಸಾಧಿಸಲಿಕ್ಕಾಗದ ಮಾತನ್ನು ಒಮ್ಮೊಮ್ಮೆ ಪರಮಾತ್ಮನು ಪರಕೀಯರ ಆಕ್ರಮಣದ ಮೂಲಕ ಬಹು ಅನಾಯಾಸವಾಗಿ ಸಾಧಿಸುತ್ತಿರುತ್ತಾನೆ" ಎಂದು ಶ್ರೀ ಅರವಿಂದರು ತಮ್ಮ 'ಮಾನವ ಐಕ್ಯದ ಆದರ್ಶ (Ideal of Human Unity)' ಎಂಬ ಗ್ರಂಥದಲ್ಲಿ ಹೇಳಿದ್ದಾರೆ.

ಹೊಸ ದಾಳಿಗಾರರನ್ನು ಎದುರಿಸುವದಕ್ಕೆ ಸಂಗರಾಜ ಮುಂತಾದವರು ಮಾಡಿದ ಐಕ್ಯ ಪ್ರಯತ್ನದಲ್ಲಿ ಹೆಣ್ಣು ಮಕ್ಕಳುಕೂಡ ತಮ್ಮ ಮೈಮೇಲಿನ ಆಭರಣಗಳನ್ನು ತೆಗೆದು ಕೊಟ್ಟರೆಂಬ ಮಾತು ನಿನ್ನೆ ಮೊನ್ನಿನ ಕಾಂಗ್ರೆಸ ಚಳವಳಿಯ ಕಾಲದಲ್ಲಿ ಸ್ವರಾಜ್ಯನಿಧಿಗೆ ಹೆಣ್ಣು ಮಕ್ಕಳು ಸಹ ತಮ್ಮ ಸರ್ವಸ್ವವನ್ನು ಸೂರೆಮಾಡಿದರೆಂಬ ಸಂಗತಿಯನ್ನು ನೆನಪಿಗೆ ತಂದುಕೊಡುವದಿಲ್ಲವೆ? ಮಹಾರಾಣಾ ಪ್ರತಾಪಸಿಂಗ, ಶಿವಾಜಿ ಮಹಾರಾಜರು, ಹರಿಹರ—ಬುಕ್ಕರಾಜರು ಶ್ರೀ ವಿದ್ಯಾರಣ್ಯ ಮಹಾಸ್ವಾಮಿಗಳು, ಸಮರ್ಥ ಶ್ರೀ ರಾಮ ದಾಸ ಸ್ವಾಮಿಗಳು ಇವರೆಲ್ಲ ಮಹಾಪುರುಷರು ಇದೇ ಸಂಕಟವನ್ನು ಎದುರಿಸಲಿಕ್ಕೆ ಪ್ರಕಟರಾಗಲಿಲ್ಲವೇ? ಇಡೀ ಭಾರತದಲ್ಲೊಂದು ಮಹಾ ಐಕ್ಯದ ನವಚೈತನ್ಯವೇ ಇದರಿಂದ ನಿರ್ಮಾಣವಾಯಿತೆಂಬುದರಲ್ಲಿ ಏನೂ ಸಂಶಯವಿಲ್ಲ.

ಇದಲ್ಲದೆ ದಾಳಿಗಾರರಾಗಿ ಬಂದು, ಪುನಃ ಇಲ್ಲಿ ನೆಲಸಿದ ಈ ಹೊಸವಂಶದ ರಾಜರು ತಮ್ಮ ತಮ್ಮೊಳಗೇ ನಾಲ್ಕೈದು ವರ್ಷಗಳೊಳಗೆ ಒಬ್ಬೊಬ್ಬರಂತೆ ಮೇಲಿನ ಅರಸರನ್ನು ಅವನ ಕೈ ಕೆಳಗಿನವರು ಪಟ್ಟ ದಿಂದ ತಳ್ಳಿ, ತಾವು ಅರಸರಾಗುತ್ತ ಹೀಗೆ ಅಖಂಡವಾಗಿ ಮೂರುನೂರು ವರುಷ ಸಾಗಿಬಂದಿತು. ಕೊನೆಗೆ ಹೀಗೆ ಬಂದು ನೆಲಸಿದ ಪರಕೀಯರಲ್ಲಿಯೇ ಒಂದು ವಂಶವನ್ನು ಭರತ ಖಂಡವು ತನ್ನ ಅಂತರಾತ್ಮನ ಪರಮ ಪುಣ್ಯ ಪ್ರಕಾಶದ ಕಿರಣಗಳಿಂದ ಎರೆದು ಅದನ್ನೊಂದು ಪಾವನ ವಂಶವಾಗುವಂತೆ ಮಾಡಿತು. ಇದೇ ಆ ಘನವಂತರಾದ ಮೊಗಲ ಸಮ್ರಾಟರ ವಂಶವು. ಭಕ್ತಿ ಯುಕ್ತನಾದ ಬಾಬರನೂ, ಕರುಣಾಯುಕ್ತನಾದ ಹುಮಾಯುನನೂ ಸರ್ವಧರ್ಮ ಸಮನ್ವಯಕಾರಿಯೂ-ಭಗವದ್ಭಕ್ತನೂ-ಜನತಾಪ್ರೇಮಿಯೂ ಆದ ಘನವಂತ ಸಮ್ರಾಟ ಅಕಬರಬಾದಶಹನೂ ಇವರೇ ಮೊದಲಾದ ಮಹಾವಿಭೂತಿಸಮಾನ ಪುಣ್ಯ ಪುರುಷರು ಆ ರಾಜ ವಂಶದಲ್ಲಿ ಒಬ್ಬರ ಹಿಂದೊಬ್ಬರು ಪಟ್ಟಕ್ಕೆ ಬಂದು ನಾಲ್ವತ್ತು ನಾಲ್ವತ್ತು ವರುಷ, ಐವತ್ತು ಐವತ್ತು ವರುಷ ಶಾಂತಿಯಿಂದ ರಾಜ್ಯಭಾರ ಮಾಡಿದರು. ಮುಖ್ಯವಾಗಿ ಆ ರಾಜವಂಶದಲ್ಲಿ ಸಮ್ರಾಟ ಅಕಬರ ಬಾದಶಹ ನೆಂದರೆ ನಿಜವಾಗಿಯೂ "ಅಕಬರ" ನೇ ಹೌದು. "ಅಕಬರ" ನೆಂದರೆ "ದೊಡ್ಡವ" ನೆಂದು ಅರ್ಥ. ಆತನು ಅಂಥ ದೊಡ್ಡವನು ಈತನು ಮಹಾವಿಭೂತಿಯೆಂದು ಶ್ರೀ ಅರವಿಂದರೇ ತಮ್ಮದೊಂದು ಗ್ರಂಥದಲ್ಲಿ ಹೇಳಿ ದ್ದಾರೆ. ಹರ್ಷವರ್ಧನನ ಅನಂತರ ಭಾರತದಲ್ಲಿ ಪುನಃ ಸಾಮ್ರಾಜ್ಯಕಟ್ಟಿದವನೆಂದರೆ ಈ ಪುಣ್ಯವಿಭೂತಿ ಯಾದ ಅಕಬರ ಬಾದಶಹನು. ಈತನ ಸಾಮ್ರಾಜ್ಯವು ಇಡೀ ಉತ್ತರಹಿಂದುಸ್ತಾನವನ್ನು ವ್ಯಾಪಿಸಿದ್ದಿತಲ್ಲದೆ ದಕ್ಷಿಣ ಹಿಂದುಸ್ತಾನದ ಬಹುಭಾಗವನ್ನು ಒಳಗೊಂಡಿತ್ತು.

ದೇವಭಕ್ತನಾದ ಈ ಸಮ್ರಾಟ ಅಕಬರ ಬಾದಶಹನು ಅಬುಲ್‌ಫಜಲ್‌ನಂಥ ಸರ್ವ ಧರ್ಮ ಸಮನ್ವಯಕಾರಿಯಾದ ಮಹಾಘನವಿದ್ವಾಂಸರ ಸಹಾಯದಿಂದ ಹಿಂದು-ಮುಸಲ್ಮಾನರಲ್ಲೆಲ್ಲ ಐಕ್ಯವನ್ನು ಸಾಧಿಸುವದಕ್ಕೆ ಸಂಪೂರ್ಣ ಸಕ್ರಿಯ ಪ್ರಯತ್ನವನ್ನು ಮಾಡಿದನು. ಹಿಂದೂ ವೀರರಿಗೂ ಬುದ್ಧಿಶಾಲಿಗಳಿಗೂ ಯೋಗ್ಯ ಅಧಿಕಾರಿಗಳನ್ನಾಗಿ ಮಾಡಿ ಭಾರತದಲ್ಲಿ ಮತ್ತೊಮ್ಮೆ ಏಕಛತ್ರಾಧಿಪತ್ಯದ ತಳಹದಿಯನ್ನು ಗಟ್ಟಿಗೊಳಿಸಿದನು. ಈತನ ಮೊಮ್ಮಗನಾದ ಶಹಾಜಹಾನನು ಕಟ್ಟಿಸಿದ ದೇದೀಪ್ಯಮಾನವಾದ ಭೂಸ್ವರ್ಗದಂತಿರುವ ತಾಜಮಹಾಲ್ ಎಂಬ ಕಟ್ಟಡವು ಈ ಸಾಮ್ರಾಜ್ಯದ ಅಮರಕೀರ್ತಿಯ ಅಗಾಧ ದ್ಯೋತಕವಾಗಿದೆಯೆಂಬುದನ್ನು ಸಮಸ್ತ ಜಗತ್ತೇ ಬಲ್ಲದು.

ಈ ಹೊಸದಾಳಿಗಾರರ ಹೊಡೆತವು ದಕ್ಷಿಣ ಹಿಂದುಸ್ತಾನದ ಮೇಲೆಯೂ, ಬೀಳದೆ ಏನೂ ಹೋಗಲಿಲ್ಲ. ಅಲ್ಲಾವುದ್ದೀನ ಖಿಲಜಿ, ಹಾಗೂ ಮಲಿಕ ಕಾಫೂರ ತೊಗಲಕ ಮಹಮ್ಮದ ಮೊದಲಾದವರೂ ಉತ್ತರ ಹಿಂದುಸ್ತಾನದ ತೈಮೂರಲಂಗ, ಚಂಗಿಜಖಾನ ಮೊದಲಾದ ದಾಳಿಗಾರರಂತೆಯೇ ದಕ್ಷಿಣದಲ್ಲಿಯೂ ಅತ್ಯುಗ್ರ ದಾಳಿಗಳನ್ನು ಮಾಡಿದರು. ಆದರೆ ಅವರ ಪ್ರತಿಕ್ರಿಯಾ ಸ್ವರೂಪವಾಗಿ ಭಾರತದ ಅಂತರಾತ್ಮನ ಜ್ಞಾನದ ಕೆಚ್ಚಿನೊಳಗಿಂದ ಶ್ರೀ ವಿದ್ಯಾರಣ್ಯ ಸ್ವಾಮಿಗಳೂ, ಸಮರ್ಥ ಶ್ರೀ ರಾಮ ದಾಸರೂ ಪ್ರಕಟರಾಗಿ ಶ್ರೀ ಕೃಷ್ಣ ಪರಮಾತ್ಮನು ಅರ್ಜುನನನ್ನು ಯಂತ್ರವಾಗಿ ಮಾಡಿಕೊಂಡು ಹಿಂದೊಮ್ಮೆ ಧರ್ಮರಾಜ್ಯ ಕಟ್ಟಿದಂತೆ ಮಹಾ ವಿಭೂತಿಗಳಾದ ಹರಿಹರ ಬುಕ್ಕರಾಜರು, ಶಿವಾಜಿ ಮಹಾರಾಜರು ಇವರೇ ಮೊದಲಾದವರನ್ನು ಮುಂದೆ ಮಾಡಿಕೊಂಡು ದಕ್ಷಿಣ ಹಿಂದುಸ್ತಾನದಲ್ಲಿ ಅಲೌಕಿಕ ಮಹಾರಾಜ್ಯಗಳನ್ನು ಕಟ್ಟಿದರು.

ಶ್ರೀ ವಿದ್ಯಾರಣ್ಯರು ಸ್ಥಾಪಿಸಿದ ವಿಜಯನಗರದ ವಿಜಯ ಸಾಮ್ರಾಜ್ಯದ ವಿಜಯ ದುಂದುಭಿಯನ್ನು ಐರೋಪ್ಯದ ಪ್ರವಾಸಿಗಳಾದ ಬರ್ನಿಯರ್ ಮೊದಲಾದವರ ಗ್ರಂಥಗಳಲ್ಲಿ ಇಂದಿಗೂ ನಾವು ಆಲಿಸಬಹುದು. ಅವರು ಬರೆದ ಮಾತುಗಳು ಹೀಗೆ ಇವೆ.—"ವಿಜಯ-ನಗರದಲ್ಲಿ ಅರವತ್ತು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯಿದ್ದಿತು. ಅಲ್ಲಿಯ ಮುತ್ತು ರತ್ನಗಳನ್ನು ಬೀದಿಗಳಲ್ಲಿ ಬೈಲಿಗಿಟ್ಟು ಮಾರುತ್ತಿದ್ದರು" ಇಂಥ ವೈಭವದಿಂದ ಎರಡುನೂರು ವರುಷಗಳವರೆಗೆ ತನ್ನ ಸಾಮ್ರಾಜ್ಯ ಪತಾಕೆಯನ್ನು ಮೆರೆಯಿಸಿದ ವಿಜಯನಗರವು ಕೊನೆಗೆ ಪುನಃ ದಾಳಿಗಾರರ ಮಹಾಸಾಗರದಲ್ಲಿ ಮುಳುಗಿ ಹೋಯಿತೆಂಬುದು ಭಾರತ ಇತಿಹಾಸ ಪುರುಷನ ಕ್ರಮ ಪ್ರಗತಿಯ ಕರುಣ ಕಥೆಯಾಗಿದೆಯೆಂಬುದನ್ನು ಯಾರು ಅರಿಯರು?

ಆದರೆ ಇದಾದ ಮೇಲೆ ಸರಿಯಾಗಿ ನೂರು ವರುಷಕ್ಕೆ ಇನ್ನೊಂದು ದಕ್ಷಿಣ ಸಾಮ್ರಾಜವು ಮಿಂಚಿನಂತೆ ಮೈದಾಳಿತು. ಅದೇ ವೀರ ಮರಾಠರ ಘನಶೌರ್ಯದ ಮರಾಠಾ ಸಾಮ್ರಾಜ್ಯವು ಸಮರ್ಥ ಶ್ರೀ ರಾಮದಾಸ ಸ್ವಾಮಿಗಳೂ, ಮಹಾ ವಿಭೂತಿಗಳಾದ ಶಿವಾಜಿ ಮಹಾರಾಜರೂ ಶ್ರೀ ಕೃಷ್ಣಾರ್ಜುನರಂತೆ ಕೂಡಿ ಕಟ್ಟಿದ ಈ ವಿಜಯೀ ಮರಾಠಾ ಸಾಮ್ರಾಜ್ಯದ ಹೊನ್ನ ಕಳಸವು ಮುಂದೆ ಪೇಶ್ವೆಯರ ಕಾಲದಲ್ಲಿ ದಿಲ್ಲಿ ಪಂಜಾಬಗಳವರೆಗೆ ಬೆಳಕು ಬೀರಿತು. ಆದರೆ ಶಿವಾಜಿ ಮಹಾರಾಜರಿಂದ ಬೆಳಕಿಗೆ ಬಂದ ಈ ವೀರ ಸಾಮ್ರಾಜ್ಯದ ಜ್ಯೋತಿಯು ಒಮ್ಮೆಲೇ ನಂದಿಯೇ ಹೋಗುವದೋ ಏನೋ ಎನ್ನುವಂಥ ದುರ್ಧರ ಸಂದರ್ಭವು ಒದಗಿದರೂ ಅವರ ತರುವಾಯ ತಕ್ಷಣವೇ ಸುದೈವದಿಂದ ಅವರ ಮುಖ್ಯ ಪ್ರಧಾನರಾದ ಪೇಶ್ವೆಯರ ಕೈಗೆ ಆ ಇಡಿಗಂಟು ಸಿಕ್ಕದ್ದರಿಂದ ಅದು ನಾಪಕ್ಕೀಡಾಗದೆ ತನ್ನ ಆತ್ಮಚೈತನ್ಯವನ್ನು ಕಾಯ್ದುಕೊಂಡು ಪುನಃ ಬೆಳೆದು ತನ್ನ ಮಹೋದ್ದೇಶವನ್ನು ಸಂಪೂರ್ಣವಾಗಿ ಸಾರ್ಥಕಗೊಳಿಸಿಕೊಂಡೇ ಬಿಟ್ಟಿತು. ಪುಣೆಯ ಪುಣ್ಯನಗರಿಯಲ್ಲಿ ನೆಟ್ಟ ಆ ನವ ಸಾಮ್ರಾಜ್ಯ ವೃಕ್ಷದ ರೆಂಬೆಗಳು ಮಧ್ಯ ಹಿಂದುಸ್ಥಾನದ ಗ್ವಾಲ್ಹೇರ, ಇಂದೂರಗಳ ವರೆಗೆ ಚಾಚಿ ದಿಲ್ಲಿಗೆ ತಾಕುವದರಲ್ಲಿದ್ದಿತು. ದಿಲ್ಲಿಯು ಪೇಶ್ವೆಯರ ವಶವಾಗದಿದ್ದರೂ

ಪಂಜಾಬದ ವರೆಗೂ ಅವರ ವೀರಗರ್ಜನೆಯು ದುಮುದುಮಿಸಿತು. ಇದೇನೂ ಸಣ್ಣ ಮಾತಲ್ಲ. ಹೀಗೆಯೇ ಬಂಗಾಲ ಮೊದಲಾದ ಕಡೆಗೂ ಪ್ರತಾಪರಾಯ ಮೊದಲಾದ ಮಹಾಪುರುಷರು ಯಶಸ್ವಿಯಾದ ಪ್ರಯತ್ನ ಮಾಡಿದರೆಂದು ತಿಳಿಯುತ್ತದೆ. ಮೇವಾಡದ ಉದಯಸಿಂಗ ಹಾಗೂ ಭೀಷ್ಮಪ್ರತಿಜ್ಞನಾದ ಮಹಾರಾಣಾ ಪ್ರತಾಪಸಿಂಗ ಮೊದಲಾದ ಮಹಾ ವೀರರ ಸಾಹಸಗಳಂತೂ ಸರ್ವಶ್ರುತವಾಗಿವೆ.

— ೬ —

ಹೀಗೆ ಭಾರತೀಯ ವೈದಿಕ ಹಿಂದುಗಳೆಲ್ಲ ತಮ್ಮೊಳಗಿನ ಧಾರ್ಮಿಕ ಅನೈಕ್ಯಗಳನ್ನೆಲ್ಲ ಮರೆತು ತಾವೆಲ್ಲರೂ ಒಂದೇ ಒಂದು ಧರ್ಮದವರು ಎಂಬ ಉಚ್ಚ ಭಾವಕ್ಕೆ ಬಂದು ಮುಟ್ಟಿದರಷ್ಟೆ? ಆದರೆ ಈ ಹೊಸದಾಗಿ ಬಂದು ನೆಲಸಿದ ಪರರಾಜರು ಹಾಗೂ ಅವರ ಸಂಪರ್ಕದಿಂದ ಬೆಳೆದ ಪಂಗಡದವರು ಈ ದೇಶದಲ್ಲಿ ವಿಜಾತಿಯವರೆಂದು ಅನಿಸಿಕೊಳ್ಳುವ ಪ್ರಸಂಗವು ಮಾತ್ರ ತಪ್ಪಲಿಲ್ಲ. ಹೀಗಾದರೆ ಏಕಛತ್ರಾಧಿಪತ್ಯ ಸಾಧಿಸಿದಂತೆ ಹೇಗೆ? ಜಾತಿ ವಿಜಾತಿಯೆಂಬ ಭೇದವನ್ನು ಸಹ ಮರೆತು "ನಾವೆಲ್ಲರೂ ಭಾರತ ವಾಸಿಗಳು, ಭಾರತೀಯರು" ಎಂಬ ಏಕತೆಯ ಏಕ ಭಾವನೆಯನ್ನು ತಳೆಯಬೇಕಾದ ಸಂದರ್ಭವೊಂದು ಬರಲೇಬೇಕಾಯಿತು. ಈ ಕಾರಣಕ್ಕಾಗಿಯೋ ಏನೋ ಅನ್ನುವಂತೆ ಆಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾದ ಬಹು ಪ್ರಬಲವಾದ ಇನ್ನೊಂದು ಪರಕೀಯ ಜನಾಂಗವು ಭಾರತದಲ್ಲಿ ಆಗ ಕಾಲಿಡಲು ಪುನಃ ಪ್ರಾರಂಭಿಸಿತು. ಅದೇ ಐರೋಪ್ಯರಾ ಸದ್ದಿಲ್ಲದ ಸಬಲ ಪ್ರವೇಶ. ಸಮ್ರಾಟನಾದ ಘನವಂತ ಅಕಬರ ಬಾದಶಹನ ಆಳಿಕೆ ಮುಗಿದು ಸರಿಯಾಗಿ ಆತನ ಮಗನ ಆಳಿಕೆ ಆರಂಭವಾಗುವ ಹೊತ್ತಿಗೇ ಇಂಗ್ಲಿಷರು ಹಿಂದುಸ್ತಾನಕ್ಕೆ ಬಂದು ಆತನಿಂದ ಅಂದರೆ ಜಹಾಂಗೀರ ಬಾದಶಹನಿಂದ ಈ ದೇಶದಲ್ಲಿ ನೆಲಸಿ ವ್ಯಾಪಾರ ಮಾಡುವದಕ್ಕೆ ಸನದನ್ನು ಪಡೆದುಕೊಂಡರೆಂಬುದು ಇತಿಹಾಸ ಪ್ರಸಿದ್ಧವಾದ ಸಂಗತಿಯಾಗಿದೆ.

"ಆಂತರಿಕ ರಚನೆಗಳಿಂದ ರಾಷ್ಟ್ರದಲ್ಲಿ ಆಗಬೇಕಾದ ಮಾತು ಅನೇಕ ಕಾಲಕ್ಕೂ ಆಗದೆ ಹೋದಾಗ ಅದನ್ನು ಒಮ್ಮೊಮ್ಮೆ ಪರಮಾತ್ಮನು ಪರಚಕ್ರಗಳ ದಾಳಿಯಿಂದ ಬಹುಬೇಗನೆ ಸಾಧ್ಯಗೊಳಿಸುವನು'' ಎಂದು ಶ್ರೀ ಅರವಿಂದರು ''ಮಾನವ ಐಕ್ಯ"ವೆಂಬ ತಮ್ಮ ಮಹಾ ಗ್ರಂಥದಲ್ಲಿ ಸಾರಿರುವ ವಿಷಯವು ಭಾರತದ ಈ ಪುನಃ ಪುನಃ ಪುನರುಕ್ತವಾದ ಪರಕೀಯ ದಾಳಿಗಳ ಪರಂಪರೆಯ ಇತಿಹಾಸಕ್ಕೆ ಸಂಪೂರ್ಣವಾಗಿ ಸಮನ್ವಯಿಸುವದೆಂಬುದು ಲಕ್ಷ್ಯದಲ್ಲಿಡಬೇಕಾದ ಸಂಗತಿಯಾಗಿದೆಯಲ್ಲವೆ?

ಇಂಗ್ಲಿಷರು ರಾಜ್ಯ ಗಳಿಸುವದಕ್ಕೆ ಇಲ್ಲಿ ಯಾವದೇ ಯುಕ್ತಿ ಪ್ರಯುಕ್ತಿಗಳನ್ನು ಮಾಡಿದ್ದರೂ ಅವರಿಂದ ನಮಗೆ ಅನೇಕ ಲಾಭಗಳೂ ಆಗದೆ ಏನೂ ಬಿಡಲಿಲ್ಲ. ಅವುಗಳಲ್ಲಿ ಅತಿ ಮುಖ್ಯವಾದ, ಅಥವಾ ಅದಕ್ಕಾಗಿಯೇ ಪರಮಾತ್ಮನು ಅವರನ್ನು ಇಲ್ಲಿಗೆ ತಂದಂಥ ಮಹಾಲಾಭವೆಂದರೆ ನಮ್ಮ ದೇಶವೊಂದು ಅಖಂಡರಾಷ್ಟ್ರವಾದದ್ದು. ''ಇಂಡಿಯಾ" ಎಂದರೆ ಎಲ್ಲರಿಗೂ ಅಭಿಮಾನದ ಒಂದು ಅಖಂಡ ದೇಶ, ಎಂಬ ಭಾವನೆ ಇಲ್ಲಿಯ ಎಲ್ಲ ಜಾತಿ ಧರ್ಮದವರಿಗೂ ಒಮ್ಮೆ ಸ್ಪಷ್ಟವಾಗಿ ಅನಿಸತೊಡಗಿತು. ಇದರ ಜೊತೆಗೆ ಇಂಗ್ಲಿಷರಿಂದ ನಮಗಾದ ಇನ್ನುಳಿದ ಲಾಭಗಳೆಂದರೆ ಯಾಂತ್ರಿಕ ವಿದ್ಯೆ, ಸಾರ್ವತ್ರಿಕ ಶಿಕ್ಷಣ, ಕೈ ಕಟ್ಟಿಕೊಂಡು ಕೂಡ್ರುವ ದೈವವಾದಕ್ಕೆ ಪ್ರತಿಯಾಗಿ ಪ್ರಯತ್ನವಾದ, ವೈದ್ಯ ವಿದ್ಯೆಯ ಬೆಳವಣಿಗೆ, ವ್ಯವಹಾರೋದ್ಯೋಗಗಳ ಅಭಿವೃದ್ಧಿ, ಸ್ವಾತಂತ್ರ್ಯದ ಕಲ್ಪನೆ, ಸಾಹಸಪ್ರಿಯತೆ, ವಿಚಾರವಾದ ಮೊದಲಾದ ಆಧುನಿಕ ಜಗತ್ತಿನ ಅಗಾಧವಾದ ಮುತ್ತು ಮಾಣಿಕಗಳು.

ಇಷ್ಟೆಲ್ಲಾ ನಿಜವೆ. ಆದರೂ ನಮ್ಮವರೇನೂ ಬ್ರಿಟಿಶರಿಗೆ ಸುಮ್ಮನೇ ಅನಾಯಾಸವಾಗಿ ನಮ್ಮ ದೇಶವನ್ನು ನುಂಗಗೊಡಲಿಲ್ಲ. ನೆಪೋಲಿಯನ್ನನ ನೆರವು ದೊರಕಿಸಲಿಕ್ಕೆ ಪ್ರಯತ್ನಮಾಡಿದ ದಕ್ಷಿಣದ ಹುಲಿಯಾದ ಟೀಪುಸುಲ್ತಾನನ ವಿಷಯವೇನು ಕಡಿಮೆ ಅಭಿಮಾನಾಸ್ಪದವಾಗಿದೆಯೆ? ನಾನಾಫಡಣವೀಸನ ಅಗಾಧ ಬುದ್ಧಿಚಾತುರ್ಯವು ನಮ್ಮ ಮುಂದಿನ ತಲೆಮಾರುಗಳಿಗೂ ಸಹ ಅನೇಕ ಕಾಲದ ವರೆಗೆ ಕೈದೀವಿಗೆಯಾಗಿ ಉಳಿಯಬಲ್ಲದೆಂಬುದನ್ನು ಯಾರು ಅರಿಯರು? ಹಿಂದಿನ ಕಾಲದ ಪಂಚತಂತ್ರದ ಕಥೆಗಳು ಇಂದು ಹಳೆಯ ಹೊತ್ತಿಗೆಯೊಳಗಿನ ಬೆಕ್ಕು ನರಿಗಳ ಕಥೆಗಳಾಗಿ ಬಿಟ್ಟಿರುವಾಗ ಅಂದಿನ ಆ ರಾಜಕೀಯ ಚಾತುರ್ಯದ ಆಶ್ಚರ್ಯಕರ ಕಥೆಗಳ ಕಾರ್ಯವನ್ನು ಇಂದು ನಾನಾಫಡಣವೀಸನ ಬುದ್ಧಿ ಚಾತುರ್ಯದ ಆಖ್ಯಾಯಿಕಗಳೇ ಸಾಧಿಸಬಲ್ಲವೆಂಬುದು ಎಲ್ಲರಿಗೂ ಅಹುದೆನಿಸುವ ಮಾತು. ಬರೀ ಪುರುಷರಷ್ಟೇ ಏಕೆ? ಝಾಂಸಿಯ ಲಕ್ಷ್ಮೀಬಾಯಿ, ಕಿತ್ತೂರ ಚೆನ್ನಮ್ಮಾಜಿ ಮೊದಲಾದ ವೀರರಾಣಿಯರೂ ಕೂಡ ಇಂಗ್ಲಿಷರೊಡನೆ ಪುರುಷರಂತೆ ಕಲಿತನದಿಂದ ಕಾದಿ ಕೈಯೊಳಗಿನ ಶಸ್ತ್ರಗಳು ಕೆಳಗೆ ಬಿದ್ದ ಮೇಲೆಯೇ ನಿರುಪಾಯರಾಗಿ ತಮ್ಮ ಪುಣ್ಯ ಭೂಮಿಯ ಮೇಲೆ ಅವರಿಗೆ ಬರಗೊಟ್ಟರು.

ಭಾರತದಲ್ಲಿ ಬ್ರಿಟಿಶರ ಸಾಮ್ರಾಜ್ಯ ಸ್ಥಾಪಕನೆಂದು ಹೆಸರುಗಳಿಸಿದ ರಣಶೂರ ಕ್ಲೈವನಿಗೆ ಸಹ ಪ್ಲಾಸಿ ಮೊದಲಾದ ಇತಿಹಾಸ ವಿಖ್ಯಾತವಾದ ಕಾಳಗಗಳಲ್ಲಿ ಏಳು ಕೆರೆಯ ನೀರು ಕುಡಿಸಿದ ಸುರಾಜ ಉದ್ದೌಲನ ಅಭಿಮನ್ಯು ಸದೃಶವಾದ ವೀರ ಕಥಾನಕವು ಎಷ್ಟು ಕಾಲಕ್ಕಾದರೂ ಮರೆತು ಹೋಗಬಲ್ಲುದೆ? ಭಾರತೀಯರು ರಣಹೇಡಿಗಳಲ್ಲ ವೆಂಬುದಕ್ಕೆ ಈ ಕಡುಗಲಿಗಳ, ಕಣ್ಣು ಕುಕ್ಕಿಸುವ ಕಥೆಗಳು ಭಾರತ ಇತಿಹಾಸದಲ್ಲಿ ಭೂಷಣಪ್ರಾಯವಾಗಿವೆ.

ಕೊನೆಗೆ, ರಾಜ್ಯ ಕಳಕೊಂಡ ಪೇಶ್ವೆಯ ನಾನಾಸಾಹೇಬನಿಂದ ದೇಶದಾದ್ಯಂತವಾಗಿ ಹೂಡಲ್ಪಟ್ಟ ಹದಿನೆಂಟುನೂರಾ ಐವತ್ತೇಳರ ಸಿಪಾಯಿಯರ ಬಂಡಾಯವು ನಿಜವಾಗಿಯೂ ಅದೊಂದು ಮಹಾ ಸ್ವಾತಂತ್ರ್ಯ ಯುದ್ಧವೇ ಆಗಿದ್ದಿತೆಂದು ಇಂದು ಐತಿಹಾಸಿಕರೆಲ್ಲ ಏಕಕಂಠವಾಗಿ ಘೋಷಿಸುತ್ತಿದ್ದಾರೆ. ಅಂದಿನ ಆ ಮಹಾಯುದ್ಧದಲ್ಲಿ ಅವರ ಹಿರೇಹುದ್ದರಿಗಳು ಗೆದೆಯದಿದ್ದರೂ ಮುಂದಿನ ಗೆಲವುಗಾರರಿಗೆ ಅವರು ಮಾರ್ಗದರ್ಶಕರಾದರೆಂಬ ಮಾತು ತ್ರಿವಾರಸತ್ಯವಾಗಿದೆ. ಅರ್ಥಾತ್ ಅಂದಿನ ಆ ವೀರ ಸ್ಫೂರ್ತಿಯು ಆಗ ಎಷ್ಟೂ ಉಳಿಯದಂತೆ ಬತ್ತಿಯೇ ಹೋಯಿತೆಂದೇನೂ ಅಲ್ಲ; ಮುಂದೆ ಕೇವಲ ಇಪ್ಪತ್ತೆಂಟೇ ವರುಷಗಳಲ್ಲಿ ಅಂದರೆ ಕ್ರಿಸ್ತ ಶಕದ ೧೮೮೫ ರಲ್ಲಿ ಸ್ವರಾಜ್ಯ ಪಿತಾಮಹ ದಾದಾಭಾಯಿ ನವರೋಜಿ ಮೊದಲಾದ ಆಧುನಿಕ ಪುಣ್ಯ ಪುರುಷರಿಂದ ಮಹಾ ಪ್ರಭಾವಶಾಲಿಯಾದ ರಾಷ್ಟ್ರೀಯ ಕಾಂಗ್ರೆಸ್ಸು ಸ್ಥಾಪಿಸಲ್ಪಟ್ಟಿತು ಅದರ ಮುಂದಿನ, ಸುವರ್ಣಾಕ್ಷರಗಳಿಂದ ಕೆತ್ತಿಸಿಡಲು ಯೋಗ್ಯವಾದ ಈ ಅರವತ್ತು ವರುಷಗಳ ಅಮರ ಇತಿಹಾಸವು ಸರ್ವ ಸಣ್ಣ ದೊಡ್ಡವರಿಗೆಲ್ಲ ವಿದಿತವೇ ಇದೆ

ಮಹರ್ಷಿ ಶ್ರೀ ಅರವಿಂದರು, ಲೋಕಮಾನ್ಯ ತಿಲಕರು, ಸ್ವಾಮಿ ಶ್ರೀ ವಿವೇಕಾನಂದರು, ಮಹಾತ್ಮಾ ಗಾಂಧಿಯವರು, ಪಂಡಿತ ಜವಾಹರಲಾಲರು ಇವರೇ ಮೊದಲಾದ ಯುಗಯುಗವಿಖ್ಯಾತ ಮಹಾಪುರುಷರಿಂದ ೧೯೪೭ ನೆಯ ಅಗಸ್ಟ ೧೫ ನೆಯ ಪರಮ ಪವಿತ್ರವಾದ ದಿನಾಂಕದಲ್ಲಿ, ೧೫೦ ವರ್ಷಗಳಿಂದ ಅಖಂಡವಾಗಿ ನಮ್ಮ ದೇಶದ ಹೆಗಲ ಮೇಲೆ ಹೇರಲ್ಪಟ್ಟದ್ದ ಬ್ರಿಟಿಷರ ಉಕ್ಕಿನ ನೊಗವು ಹೇಳ ಹೆಸರಿಲ್ಲದೆ ಕಿತ್ತಿ ಹೋಯಿತು!!! ಇದನ್ನರಿಯದವರಾರು??? ಇದನ್ನು ಕಂಡು ಹಿಗ್ಗದವರಾರು!!! ಅಂದಿಗೆ ಸಮಸ್ತ ಭಾರತೀಯರು ಧನ್ಯರು!!!

## ಸಮರ್ಪಣ

ಇತ್ತೀಚಿನ ಈ ನಾಲ್ಕು ವರ್ಷಗಳಲ್ಲಿ ಮಹಾ ಮೇಧಾವಿಗಳಾದ ಪಂಡಿತ ಜವಾಹರಲಾಲ ನೆಹರು ಅವರೂ, ದಿವಂಗತರಾದ ಉಕ್ಕಿನ ನರಗಳ ವೀರ ವಲ್ಲಭಭಾಯಿ ಪಟೇಲ ಅವರೂ ಅಂತರ್ರಾಷ್ಟ್ರೀಯ ಹಾಗೂ ಒಳದೇಶದ ಸಪ್ತಶತ ಸಂಸ್ಥಾನ ನಿರ್ಮೂಲನ ವ್ಯವಹಾರದಲ್ಲಿ ಸಾಧಿಸಿದ ಘನಕಾರ್ಯವು ಜಗತ್ತಿಗೆಲ್ಲ ಎಷ್ಟು ಬೆರಗುಗೊಳಿಸಿದೆ ಎಂಬ ವಿಷಯವು ಪಂಚಖಂಡಗಳಿಗೆಲ್ಲ ಘಂಟಾಘೋಷವಾಗಿಯೇ ಬಿಟ್ಟಿರುವದೆಂಬುದನ್ನು ಎಲ್ಲರೂ ಬಲ್ಲರು.

ಆದರೆ ಇಂದಿನ ನಮ್ಮ ಇಂಥ ಅವರ್ಣನೀಯ ಚಿರಸ್ಮರಣೀಯ ಸ್ವಾತಂತ್ರ್ಯ ರವಿಯ ಮೇಲೆಯೂ ಕೂಡ ಒಂದು ಕರಾಳ ವದನದ ಕಪ್ಪುಕಲೆಯು ಕಾಣಿಸಿಕೊಳ್ಳದೆ ಹೋಗಲಿಲ್ಲ!!! ಎಂದಿನಿಂದಲೂ ಬ್ರಿಟಿಶರು ತಾವು ಉಳಿದುಕೊಳ್ಳುವದಕ್ಕಾಗಿ ಯಾವಾಗಲೂ ಇಲ್ಲಿ ಒಳಗಿಂದೊಳಗೇ ಜಾತಿ ಭೇದದ ಬೆಂಕಿಯನ್ನು ಹೊತ್ತಿಸುತ್ತಲೇ ಬಂದಿದ್ದರಷ್ಟೆ? ಅವರ ಈ ಕುತಂತ್ರ ಜಾಲದ ಪರಿಣಾಮವು ಭಾರತದ ಸ್ವಾತಂತ್ರ್ಯ ಸುದಿನದ ಮೇಲೆಯೂ ಆಗದೆ ಬಿಡಲಿಲ್ಲ ಯಾವ ಎರಡು ಧರ್ಮಗಳಲ್ಲಿ ಏಕತಾನತೆಯನ್ನು ಹುಟ್ಟಿಸುವ ಸಲುವಾಗಿಯೇ ಐರೋಪ್ಯರೆಂಬ ಈ ಮೂರನೆಯ ಧರ್ಮದವರ ಪ್ರವೇಶವು ಈಶ ಸಂಕಲ್ಪದಂತೆ ಈ ದೇಶದಲ್ಲಿ ಆಗಿದ್ದಿತೋ ಆ ಆಂಗ್ಲರೇ ಕೊನೆಗೆ ಆ ಎರಡು ಧರ್ಮಗಳಲ್ಲಿ ಅಭೇದ್ಯವಾದ ಅಡ್ಡ ಗೋಡೆಯನ್ನು ಕಟ್ಟಿ ಇಬ್ಬರೂ ಅಣ್ಣ ತಮ್ಮಂದಿರನ್ನು ದುಃಖಕರವಾದ, ಅನೈಕ್ಯವಾದ, ಭೇದದ, ಭಿನ್ನತೆಯ, ಇಬ್ಭಾಗದ ಕಾಳರಾತ್ರಿಯಲ್ಲಿ ನೂಕಿದರು!!! ಇದಕ್ಕಾಗಿ ಅವರು ಅಂದು ವಂಗಭಂಗ ಮಾಡಿದ್ದು; ಇದಕ್ಕಾಗಿ ಅಂದು ಸಿಂಧ ಬೇರೆ ಮಾಡಿದ್ದು, ಇದಕ್ಕಾಗಿ ಅಂದು ರಾಷ್ಟ್ರೀಯತೆಯ ಹೆಬ್ಬುಲಿಗಳೆಂದೆನಿಸಿಕೊಂಡಿದ್ದ ವೀರ ಅಲ್ಲಿ ಬಂಧುಗಳನ್ನು ಅವರು ಮೌನ ತಾಳುವಂತೆ ಮಾಡಿದ್ದು. ಎಂದಿನಿಂದಲೋ ಇದನ್ನೆಲ್ಲ ಎದೆಯಲ್ಲಿಟ್ಟುಕೊಂಡು ಕೈಸಾಧಿಸುತ್ತ ಬಂದ ಅಂದಿನ ಆಂಗ್ಲರು ಇಂದು ಸಹ ಭಾರತಕ್ಕೆ ಅವರ ಮಹಾ ಸುಮಂಗಲ ಪ್ರಸಂಗದಲ್ಲಿಯೂ ಕೂಡ ದ್ವಿರಾಷ್ಟ್ರವೆಂಬ ಮರೆಯಲಾಗದ ಮಹಾ ಗಾಯವನ್ನು ಮಾಡಿದರು!!!

ಆದರೆ ಇಂದಿನ ಅಧುನಿಕ ಜಗತ್ತಿನ ಮಾನವರಾದ ನಾವು ಈ ಜಾತೀಯ ಭೂತಕ್ಕೆ ಉಪ್ಪು ಹಾಕಗೊಡದೆ ನಾವೆಲ್ಲರೂ ಅಂದರೆ ಇಬ್ಬರೂ ಅಣ್ಣ ತಮ್ಮಂದಿರು ಒಂದಾಗಲಿಕ್ಕೆ, ಒಂದು ರಾಷ್ಟ್ರವಾಗಲಿಕ್ಕೆ ಟೊಂಕಕಟ್ಟಿ ನಿಲ್ಲಲಿಕ್ಕೆಬೇಕು.

ಶ್ರೀರಾಮಕೃಷ್ಣ ಪರಮಹಂಸರ ಸರ್ವಧರ್ಮ ಸಮನ್ವಯ, ಶ್ರೀ ಅರವಿಂದರ ಸರ್ವಯೋಗ ಸಮನ್ವಯ, ಮಹಾತ್ಮಾಜಿಯವರ ಸರ್ವಮಾನವ ಸಮಾನತ್ವ ಎಂಬ ತ್ರಿಕಾಲಾಬಾಧಿತ ತತ್ತ್ವಗಳನ್ನು ಮನದಂದು ಸಮಸ್ತ ಭಾರತೀಯರಾದ ನಾವು ಜಾತಿವಿಜಾತಿಯೆಂಬ ಭೇದಭಾವಗಳನ್ನೆಲ್ಲ ದೂರತಳ್ಳಿ "ನಾವೆಲ್ಲರೂ ಭಾರತೀಯರು ಭಾರತವೆಂಬ ಉದಿತೋದಿತ ರಾಷ್ಟ್ರದವರು; ಏಕರಾಷ್ಟ್ರದವರು" ಎಂಬ ಅಖಂಡ ಭಾವನೆಯನ್ನು ತಳೆದಾಗಲೇ ಶ್ರೀಅರವಿಂದಾಶ್ರಮದ ಶ್ರೀಮಹಾಮಾತೆಯವರು ಬೀರಿದ ಈ ಭಾರತಮಾತೆಯ ಭವ್ಯ ಮಂತ್ರವು ಸರ್ವರನುಭವಕ್ಕೆ ಬರುವ ಸುದಿನಗಳು ಸಮೀಪಿಸುವವು. ಆ ದಿವ್ಯಮಂತ್ರವಾವುದೆಂದರೆ:—

"ಓ ನಮ್ಮ ತಾಯೆ, ಹಿಂದದೇಶದ ಆತ್ಮಳೆ, ನಾವು ಯಾವಾಗಲೂ ಮಹದಾದರ್ಶಗಳ ಪಕ್ಷವನ್ನು ವಹಿಸಿ 'ನೀನು ಆಧ್ಯಾತ್ಮ ಮಾರ್ಗದಲ್ಲಿ ನಾಯಕಿಯು, ನೀನು ಸಕಲಲೋಕಬಂಧುವು, ನೀನು ಸಕಲಲೋಕ ಸಹಾಯಳು' ಎಂಬ ನಿನ್ನ ನಿಜರೂಪವನ್ನು ಜನಾಂಗಗಳಿಗೆಲ್ಲ ತೋರಿಸಿಕೊಡುವಂತೆ ನಮ್ಮನ್ನು ಇರಿಸು ತಾಯೆ"

ಇದರ ಜೊತೆಗೆ, ಶ್ರೀಅರವಿಂದರು ಸಾರಿದ ಸಮಸ್ತ ಮಾನವಜಾತಿಯ ಭವ್ಯ ಭವಿತವ್ಯದ ಈ ದಿವ್ಯ ಮಂತ್ರವು ಮಾನವಕೋಟಿಗೇ ಕಣ್ಣು ಕುಕ್ಕಿಸುವ, ದೇದೀಪ್ಯಮಾನವಾದ, ಸೂರ್ಯಪ್ರಕಾಶವಾಗಿ ಪ್ರಜ್ವಲಿಸುವ ಉಜ್ವಲ ದಿವಸಗಳು ನಮ್ಮ ಕಣ್ಣ ಮುಂದೆ ಕುಣಿಯತೊಡಗುವವು. ಆ ಭವ್ಯ ಮಂತ್ರವಿದು:—

"ಏಕತೆಯ ಒಂದು ಹೊಸ ಭಾವವು ಇಡೀ ಮಾನವ ಜಾತಿಯನ್ನೇ ಆವರಿಸಿಕೊಳ್ಳುವದು"

ಅಂದಿಗೆ ನಾವು ಅಮೇರಿಕಾ, ಇಂಗ್ಲಂಡ್, ಫ್ರಾನ್ಸ ಮೊದಲಾದ ಘನರಾಷ್ಟ್ರಗಳ ಮಾಲಿಕೆಯಲ್ಲಿ ಸಮಾನ ವೈಭವದಿಂದ ಸೇರುವೆವು.

— ಓಂ ಶ್ರೀ ಓಂ —

ಜಗತಃ ಪಿತರೌ ವಂದೇ ಪರಮೇಶ್ವರೀ ಪರಮೇಶ್ವರೌ ॥

ಜಗತ್ತಿನ ತಾಯಿತಂದೆಗಳಾದ ಶ್ರೀಪರಮೇಶ್ವರ, ಪರಮೇಶ್ವರಿಯರ ಶ್ರೀಚರಣಗಳಲ್ಲಿ ಅನಂತಾನಂತ ಪ್ರಣಾಮಗಳು.

— ಓಂ ಶ್ರೀ ಓಂ —

— 'ಶಿಶು' ಮಧುರಚೆನ್ನ, ಹಲಸಂಗಿ.

---

# ಮಹಾಮೌನ ಮುಕ್ತಿ

೧

ಶಬ್ದ ಶಬ್ದಗಳ ಅರ್ಥ ಅರ್ಥದಲಿ ಜೀವಭಾವ ತುಂಬಿ
ಅಬ್ಧಿ ಅಬ್ಧಿಗಳ ಶಬ್ದದಲ್ಲೆ ಹಿಡಿದಿಡುವ ಗುಟ್ಟ ನಂಬಿ
ಶಬ್ದಮೂಲ ಅಕ್ಷರದ ದರ್ಶನವ ಮೌನದಲ್ಲೆ ಕಾಂಬಿ
ಅಬ್ಧಿ ಅಬ್ಧಿಯನೆ ಮೌನದಕ್ಷರದಿ ಅಳೆದು ಬಿಡುವ ಗೊಂಬಿ

೨

ಕಂಡೆ ನಿನ್ನ ಘನ ಮಹಾಮೌನದಾವರಣ ಮಧ್ಯದಲ್ಲಿ
ಚಂಡಕಿರಣನೊಲು ಮೇಘನೀಲಘನ ಮಹಾ ಬಾನಿನಲ್ಲಿ
ಮೌನದಿಂದಲೇ ಅಣು ಮಹತ್ತಿನಲಿ ಮಹತು ಅಣುವಿನಲ್ಲಿ
ಬೆರೆತು ಸಮರಸತೆ ವೇದ್ಯವಾಯ್ತು ಹೃದಯಾಂತರಾಳದಲ್ಲಿ

೩

ಅಣುವಿನಲ್ಲಿ ಅಣು ಮಹತು ಮಹತಿನಲಿ ನಾಮರಹಿತ ಶಕ್ತಿ
ಕಣದಿ ಕಣದಿ, ಕಣಕಣದ ಮಿಡಿತದಲಿ ಎಚ್ಚರಾಯ್ತು ಭಕ್ತಿ
ಜೀವಚೇತನವು ಅರಳಿ ನಿಂದಿತ್ತೈ ತೆರೆಮ ದೇಹಶುಕ್ತಿ
ತಾನೆ ತನ್ನೊಳಗೆ ಬೆರೆತು ಹೋಯಿತ್ತೈ ಮಹಾಮೌನಮುಕ್ತಿ.

-ದೇವದತ್ತ

# ಶ್ರೀ ಅರವಿಂದರೂ ರಸಶಾಸ್ತ್ರವೂ

### ೪ ಕಾವ್ಯ ಮತ್ತು ಕಲೆಗಳ ಕಂತ್ರ
### ಅತಿವಾಸ್ತವ, ಆಧುನಿಕ ಮತ್ತು ಪ್ರೈರಣಿಕ ಕವಿ.

ಕಾವ್ಯ ಅಥವಾ ಪದ್ಯವು ಮಾನವನ ಪ್ರಜ್ಞೆಯನ್ನು ವಿಶಾಲ, ಗಂಭೀರ ಮತ್ತು ಉನ್ನತವನ್ನಾಗಿ ಮಾಡುತ್ತದೆ. ಅದು ಮಾನವನ ಇಡಿ ಅಂತಃಕರಣವನ್ನು ಸ್ಪರ್ಶಿಸುತ್ತದೆ. ಸಮಗ್ರ ಚೈತನ್ಯದಿಂದ ಹೊರಡುವುದರಿಂದ ಅದು ಮಾನವ್ಯ ಚೈತನ್ಯ ಅಥವಾ ಪ್ರಜ್ಞೆ ಸಮಗ್ರವಾಗಿ ರೂಪಾಂತರ ಹೊಂದುವಂತೆ ಮಾಡುತ್ತದೆ. ವಿಚಾರ ಮತ್ತು ಭಾವನೆ, ವಾಸ್ತವ ಸಂಗತಿ ಮತ್ತು ಸ್ವಪ್ನ—ಈ ಎಲ್ಲವುದಕ್ಕೂ ಪದ್ಯದಲ್ಲಿ ಸ್ಥಾನವಿದೆ. ಅದಕ್ಕಿರುವ ಒಂದೇ ಒಂದು ಪರಿಮಾಪಕ ಉಪಾಧಿಯೆಂದರೆ, ಆ ಎಲ್ಲವೂ ದರ್ಶನಕ್ಕೆ, ತಾದಾತ್ಮ್ಯಭಾವಜನ್ಯ ಜ್ಞಾನಕ್ಕೆ ವಶವರ್ತಿಯಾಗಿರಬೇಕಾಗುತ್ತದೆ. ಪದ್ಯದ ಯಾವುದಾದರೊಂದು ಅಂಗವನ್ನು ಬಿಡುವುದೆಂದರೆ, ಅದರ ರಚನೆಯಿಂದ ಅಥವಾ ಕಟ್ಟಿನಿಂದ ಹೊರಗಿಡುವುದೆಂದರೆ ಕವಿವಾಗ್ಧಾರೆ ನಿಲ್ಲಿಸಿ ಕುಂಟಿಸಿದಂತೆಯೇ ಸರಿ. ಅದರ ಅಂಗಗಳಲ್ಲಿ ಯಾವುದಾದರೊಂದರ ಪ್ರಾಮುಖ್ಯವಿರಬೇಕೆಂದು ಒತ್ತಾಯ ತಂದರೆ ಆ ದರ್ಶನ ಸಾರ್ವಭೌಮಶಕ್ತಿಯಿಂದ ಪ್ರಕಟವಾಗಲಿರುವ ಒಂದೇ ಒಂದು ಬಗೆಯಾದ ಸುಕುಮಾರ ಸಮಾಹಿತತೆ ಮತ್ತು ಸಮತೋಲಗಳಿಗೆ ಭಂಗವುಂಟು ಮಾಡಿದಂತೆಯೇ ಸರಿ.

ಆದರೆ ತನ್ನ ದರ್ಶನ ವಿರತಧಾರಾವಾಹಿಯಾದಾಗ ಭಾವನಾ ಜೀವನೆನಿಸಿದ ಕವಿ ಹೆಚ್ಚು ಭಾವೋದ್ರೇಕತೆಯಲ್ಲಿ ಮುಳುಗುತ್ತಾನೆ. ಅಭಿಜಾತ ಪದ್ಧತಿಯ ಕವಿ, ಪ್ರೈರಣಿಕ ಪ್ರತ್ಯಕ್ಷದ ಮೇಲೆ ಹಿಡಿತ ತಪ್ಪಿದಾಗ, ವಿಚಾರದ ದೃಢಬಲವನ್ನು ಅವಲಂಬಿಸುವ ಪ್ರವೃತ್ತಿಯನ್ನು ತಾಳುತ್ತಾನೆ. ಅತಿವಾಸ್ತವವಾದಿಯು ಆಂತರಿಕ ಚೈತನ್ಯದ ಆಳಗಳನ್ನು ಸಂಶೋಧಿಸ ಹೊರಟವನು; ಅವನು ಬೌದ್ಧಿಕ ಪ್ರಜ್ಞೆಯನ್ನು ಸಂಪೂರ್ಣವಾಗಿ ಬಿಟ್ಟುಬಿಡಲು ಬಯಸುತ್ತಾನೆ. ಆಧುನಿಕ ಮತದವನು, ಹಾಗಲ್ಲದೆ, ಪದ್ಯವು ಬೌದ್ಧಿಕ ಚೈತನ್ಯದ ಘನಸಾರವೆಂದೂ ಅಧೋಚೈವಿಕ ಪ್ರಜ್ಞೆಯ ಅತಿಶಯಿತ ವೈಖರಿಯೆಂದೂ ತಿಳಿಯುವಂತೆ ತೋರುತ್ತದೆ. ಯೋಗ್ಯ ಮಾದರಿಯ ಮಟ್ಟವನ್ನರಿಯಬೇಕಾದರೆ ನಾವು ಕೆಲಮಟ್ಟಿಗೆ ವಿವರವಾಗಿ ಈ ಅಷ್ಟ ದಾಂಗಳನ್ನು ಪರಿಶೀಲಿಸಬೇಕಾಗುತ್ತದೆ.

ಕೆಲ ಭಾವನಾಜೀವರಾದ ಕವಿಗಳು ಕವಿಗೆ ವಿಚಾರಮಾಡುವ ಹಕ್ಕೇ ಇಲ್ಲ, ಅವನ ಕೆಲಸ ಕೇವಲ ನೋಡುವುದು ಮತ್ತು ಅನುಭವಿಸುವುದು, ಇಷ್ಟೇ ಎಂದು ನಂಬಿರುವಂತೆ ಕಾಣುತ್ತದೆ. ಕವಿಯು ವಿಚಾರದ ಸೊಬಗು, ಬೆಳಕು ಮತ್ತು ಶಕ್ತಿಗಳನ್ನು ಪ್ರಕಟಿಸಬಲ್ಲವನಾದರೆ ತತ್ವಜ್ಞಾನವು ಕಾವ್ಯದಲ್ಲಿ ಸಾಧಾರಣ ಸ್ಥಾನವನ್ನಲ್ಲ—ಅಗ್ರಸ್ಥಾನವನ್ನೇ ಆಕ್ರಮಿಸ ಬಲ್ಲದು ಎಂಬುದನ್ನವರು ಮರೆತುಬಿಡುತ್ತಾರೆ. ವಿಚಾರ ಮಾಡದಿರೆಂದು ಕವಿಗೆ ಹೇಳುವ ಸಿದ್ಧಾಂತವು ಅತಿಯಾದ ಭಾವನಾಜೀವದೃಷ್ಟಿಯದು. ಅದು 'ಪದ್ಯಕ್ಕೇನಾದರೂ ಅರ್ಥ ಇರಬೇಕೆಂದು ನೀನೇಕೆ ಬಯಸುವೆ?' ಎಂಬ ಅತಿ ವಾಸ್ತವಿಕತನ ಅತಿದಶೆಯನ್ನು ಒಂದುಕಡೆ ಮುಟ್ಟುತ್ತದೆ. ಮತ್ತೊಂದು ಕಡೆ ಹೌಸ್ಮನ್ನನ ಶುದ್ಧಪದ್ಯ ಪ್ರಶಂಸೆಯು ಮಟ್ಟಕ್ಕೇರುತ್ತದೆ. ಅತಿವಾಸ್ತವಿಕತೆಯು

(Surrealism) ಬಾಹ್ಯಚೇತನೆಯಿಂದ ತಪ್ಪಿಸಿಕೊಂಡು ಅಲ್ಲಿಲ್ಲದ ಗಭೀರತರ ವಸ್ತುಸತ್ಯದ ಸಂಶೋಧನೆಗಾಗಿ ಕತ್ತಲಲ್ಲಿ ಕೈತಡಹುವ ಯೂರೋಪಿಯನ್ ಮನದ ಹೆಚ್ಚು ಹೆಚ್ಚಾಗಿ ಬೆಳೆಯುತ್ತಿರುವ ಪ್ರಯತ್ನದ ಅಂಗ. ಆಂತರಿಕ ಅಥವಾ ಸ್ವಾಪ್ನಿಕ ಚೈತನ್ಯವು ತಪ್ಪಿಸಿಕೊಂಬ ಪ್ರಥಮ ಮಾರ್ಗವನ್ನು ತೋರಿಸುತ್ತದೆ; ಮತ್ತು ಅತಿವಾಸ್ತವವಾದಿಗಳು ಅದನ್ನು ಒತ್ತಾಯಿಸುತ್ತಿರುವಂತೆ ತೋರುತ್ತದೆ ಆದರೆ ಎಷ್ಟೋವೇಳೆ ಬಡಿದೆಚ್ಚರಿಸಿಕೊಳ್ಳಲಾಗುವ ಪ್ರಜ್ಞಾಪಟಲಗಳು ಕೆಲ ಅಸ್ಪಷ್ಟ (ಅವಚೇತನೆ) ಮತ್ತು ಅನೇಕಸಲ ಅಷ್ಟು ಸುರಕ್ಷಿತವಲ್ಲ ಎನಿಸುವಂಥವಾಗಿರುತ್ತವೆ. ಬಾಡಿಲೇರನಲ್ಲಿ ಬರುವ ಭೂತಲೀಲೆಗೂ ಆಂಗ್ಲರ ಅತಿವಾಸ್ತವ ಪದ್ಧತಿಯ ಕಾವ್ಯಗಳಲ್ಲಿ ಕಾಣುವ ಕೆಲ ವಿರಸಾಂಶಗಳಿಗೂ ಮೇಲೆ ಹೇಳಿದಂತೆ ಮಾಡಿದ್ದೇ ಕಾರಣ. ಅಸ್ಪಷ್ಟತೆಯೂ ದುರ್ಗಮತೆಯೂ ಯಾವ ಪದ್ಯದ ತಿರುಳೂ ಆಗಲಾರವು, ಯಾವುದರ ಗುರಿ ಅಥವಾ ತತ್ವವೂ ಎನಿಸಲಾರವು. ನಿಜವಾದ ಸ್ವಪ್ನಕಾವ್ಯದಲ್ಲಿ ಯಾವಾಗಲೂ ಅರ್ಥವತ್ತೆಯೂ ಸಾಂಗತ್ಯವೂ ಇದ್ದೇ ಇರುತ್ತದೆ ಮತ್ತು ಇರಲೇಬೇಕು. ಆದರೆ ಜಾಗ್ರನ್ಮನವನ್ನವಲಂಬಿಸಿ ಕೇವಲ ಅದರ ಸಂಬಂಧಗಳನ್ನೂ ತರ್ಕದ ಕಟ್ಟನ್ನೂ ಗ್ರಹಿಸುವವರಿಗೆ ಅದು ಸ್ವಾಭಾವಿಕವಾಗಿ ಅರ್ಥಹೀನ ಅಸ್ಪಷ್ಟ ಎನಿಸೀತು ಅಂಥ ಪದ್ಯದ ಗಭೀರತರ ಅರ್ಥವೂ ಆನುಕ್ರಮಿಕತೆಯೂ ಅಂತರ್ದೃಷ್ಟಿಗೆಮಾತ್ರ ಹೊಳೆದೀತು. ಅಂಥ ಪದ್ಯದಲ್ಲಿ ಒಂದು ಬಗೆಯ ಆನುಕ್ರಮಿಕತೆ, ತರ್ಕ. ಕಟ್ಟು ಇರುತ್ತದೆ. ಆದರದು ತರ್ಕಪ್ರಜ್ಞೆಯ ಸುಬದ್ಧನಿಯಮಕ್ಕೆ ತೃಪ್ತಿಕರವಾಗಿ ಹೊಂದಿರಲಾರದು, ಅಲ್ಲದೆ, ಸ್ವಪ್ನಾನುಕ್ರಮಿಕತೆಯಲ್ಲಿ ಅರಾಜಕ, ಅವ್ಯವಸ್ಥಿತವಾಗುವುದು ಕೇವಲ ಅವಚೇತನೆ ಅಥವಾ ಅಧಶ್ಚೇತನೆ. ಬೇರೆ ಬೇರೆ ಗೀತಗಳ ತುಂಡುಗಳನ್ನು ಸಂಕಲಿಸಿದ ಗ್ರಾಮೋಫೋನ್ ರಿಕಾರ್ಡಿನಂತೆ ಅದರ ಅನೇಕ ಭಾವಮುದ್ರೆಗಳು ಅಸಂಬದ್ಧ ಚೂರುಗಳಾಗಿರುತ್ತವೆ. ಆದರೆ ಜೈವಿಕ ಸ್ವಪ್ನಗಳೆಲ್ಲ ಸುಸಂಬದ್ಧವಾಗಿರುತ್ತವೆ. ಅವು ತೋರಿಕೆಗೆ ಅಸ್ತವ್ಯಸ್ತವಾಗಿ ಕಾಣುವುದು ಅವುಗಳ ತರ್ಕಕ್ರಮ, ನಿಯಮಗತಿ ಭಿನ್ನವಾಗಿರುವುದರಿಂದ. ಅಂತರ್ಜೈವಿಕ ಮತ್ತು ಅಂತಶ್ಚೈತಸ ಅನುಭವಗಳನ್ನು ಗ್ರಹಿಸುವ ಕನಸುಗಳು ಸಂಪೂರ್ಣ ಸುಸಂಗತವಾಗಿರುತ್ತವೆ. ನಿಜವಾದ ಪ್ರಾಂತರಿಕ ಚೇತನಾಸ್ವಪ್ನಗಳೂ ಇವೆ; ಅವು ಸಾಮಾನ್ಯವಾಗಿ ಬಹಳ ಸುಂದರವಾಗಿರುತ್ತವೆ. ಆದರೆ ಅವುಗಳಲ್ಲಿ ಹಲವು ಚೈಹ್ನಿಕ ಅಥವಾ ಸಾಂಕೇತಿಕ; ಅವುಗಳ ಸಂಕೇತ ಅಥವಾ ಸಂಜ್ಞೆಗಳ ಅರ್ಥಗ್ರಹಣ ಸೂಚಿಸಿದಾಗ ಮಾತ್ರ ಅವು ಅರ್ಥವಾದಾವು. ಆ ಸ್ವಪ್ನಗಳು ಸರಿಯಾದ ಬಗೆಯವಾದಲ್ಲಿ ಅವನ್ನು ಗದ್ಯರೂಪಕ್ಕೆ ತರಲು ಯಾವ ಕಲ್ಪನಾಶಕ್ತಿಯೂ ಬೇಕಾಗಿಲ್ಲ. ಆಂತರಿಕ ಚೈತನ್ಯದಲ್ಲಿ ಹೋಗುವುದರಿಂದ ಕೆಲವೊಮ್ಮೆ ಆ ಕವಿಗೆ ಕೂಡ ಕಾವ್ಯಸ್ಫೂರ್ತಿ ಕವಿತಾಶಕ್ತಿಗಳು ಉಂಟಾದಾವು. ಆದರೆ ಸಾಮಾನ್ಯವಾಗಿ ಕವಿಯಾಗಲು ಕೇವಲ ಕನಸಿಗನಾದರೆ ಸಾಲದು; ಪ್ರತಿಭೆ, ಸಂಸ್ಕಾರಗಳಿರುವುದು ಅಗತ್ಯ.

ಮೇಲೆ ಹೇಳಿದ ಮಾತುಗಳಿಂದ ಅತಿವಾಸ್ತವ ಪದ್ಧತಿಯ ಪದ್ಯಗಳಲ್ಲಿಯ ಭಾವ, ಪ್ರತಿಮೆ ಮತ್ತು ಪ್ರತೀಕಗಳು ಬೌದ್ಧಿಕ ಪ್ರಜ್ಞೆಯ, ಅದರ ತರ್ಕದ ಅಥವಾ ಅವರ ಪ್ರೈರಣಿಕ ಸಂಬಂಧಗಳ ಮಾರ್ಗವನ್ನು ಅನುಸರಿಸುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಯಾವುದೋ ಒಂದು ಅಸ್ಪಷ್ಟ ಆಂತರಿಕ ಗಭೀರಸ್ಥಲ ಅಥವಾ ಮುಸುಕು ಮೂಲೆಯಿಂದ ಮನದ ಮೇಲೆ ಅವು ಬಂದು ಬೀಳುತ್ತವೆ. ಅವಕ್ಕೆ ತಮ್ಮದೇ ಆದ ಸಂಬಂಧಗಳಿರುತ್ತವೆ; ಆದರೆ ಆ ಸಂಬಂಧಗಳು ಬಾಹ್ಯ ಬೌದ್ಧಿಕ ಚೇತನೆಯ ಸಂಬಂಧಗಳಾಗಿರುವುದಿಲ್ಲ. "ಅವನ್ನು ಆದಿತ್ಯ ಗ್ರಂಥಿಯಿಂದ ಅವಲೋಕಿಸಬೇಕಲ್ಲದೆ ಬುದ್ಧಿಬಲದಿಂದಲ್ಲ; ಅವುಗಳನ್ನು ತಿಳಿಯಲು ಹೋಗಬಾರದು, ಅರ್ಥವನ್ನು ಅನುಭವಿಸಲು ಪ್ರಯತ್ನಿಸಬೇಕು." (ಪು.೨೩೨. ಪ. ಮಾ. ೩.) ಆಂತರಿಕ ಆಳಗಳಿಂದ ಆ ಪ್ರಕಾರ ಮಹೋನ್ನತ ಕಾವ್ಯವನ್ನು ಬರೆಯಲಾದೀತು, ಉದಾ— ಮ್ಯಾಲಾರ್ಮ್, ಆದರೆ ಅಂಥ ಕಾವ್ಯ ನಿಜವಾಗಿ ಶಕ್ತವೂ ಸಮಾಧಾಯಕವೂ ಆಗಬೇಕಾದರೆ ಬ್ಲೇಕ್ ಅಥವಾ ಮ್ಯಾಲಾರ್ಮ್‌ಯಂಥ ಅತ್ಯುತ್ತಮ ವಾಗ್ವೈಖರಿಯಿರಬೇಕು; ಜೊತೆಗೆ ಅನುಭವದ ಪ್ರಾಮಾಣಿಕತೆಯೂ ಅರ್ಥಪೂರ್ಣ

ವಾದ ಲಯವೂ ಇರಬೇಕು (ಪು ೨೩.೨.ಪ ಮಾ.೩). ಆದರೆ ಮ್ಯಾಲಾರ್ಮ್ಮೆಯಷ್ಟು ಯಶಸ್ವಿಯಾಗಿ ಮಾಡಿದರೂ ಈ ಪ್ರಕಾರ ಮನ ನಿರ್ಮಿಸಿದ ಭಾಷೆಯನ್ನು ರೂಪಾಂತರಿಸಲು ಯತ್ನಿಸುವುದರಿಂದ ಫಲಿತಾಂಶವು ಬಹಳ ಚೆನ್ನಾಗಿಯೂ ಚೆಲುವಾಗಿಯೂ ಅಜ್ಞೇಯವಾಗುವ ಭಯವಿದೆ. ಪ್ರಯತ್ನವು ಸಾಮಾನ್ಯಮಟ್ಟದ್ದಾದಾಗ ಅಜ್ಞೇಯತೆ, ಅಸ್ಪಷ್ಟತೆಗಳು ನಮ್ಮನ್ನೆದುರಿಸುವುವು; ಬೇರೆ ಏನೂ ಸಿಗದು. ಒಮ್ಮೆ ಒಬ್ಬ ಸಂಪೂರ್ಣವಾಗಿ ಆಂತರಿಕ ಚೈತನ್ಯಕ್ಕೆ ಶರಣಾದನೆಂದರೆ ಮತ್ತು ಬುದ್ಧಿಶಕ್ತಿಯನ್ನು ಬಹಿಷ್ಕರಿಸಿ ಅದು ಕಾವ್ಯವಾಣಿಗೆ ಈಯುವ ನೆರವನ್ನು ಧಿಕ್ಕರಿಸಿದರೆ ಆಗುವುದೇ ಹೀಗೆ.

ಹೌಸ್ಮನ್ನನೇನೋ ಶುದ್ಧ ಪದ್ಯವನ್ನು ಪ್ರಶಂಸಿಸುತ್ತಾನೆ; ಆದರೆ ಭಾವನಾರಂಜಕತೆ ಶುದ್ಧ ಪದ್ಯದ ನಿಕಷ ಎಂದು ಅವನು ಅಭಿಪ್ರಾಯಪಟ್ಟಿದ್ದಾನೆ ಎನ್ನಕೂಡದು. ಅವನು ಭಾವನೆಯನ್ನು ಮಿತಿಮೀರಿ ಪ್ರಶಂಸೆ ಮಾಡಿಲ್ಲ. ಆದರವನು ಬೌದ್ಧಿಕ ಅರ್ಥವನ್ನು ತಿರಸ್ಕರಿಸುತ್ತಾನಲ್ಲದೆ, ಶುದ್ಧಪದ್ಯ ಆ ಬಗ್ಗೆ ಚಿಂತೆಹಚ್ಚಿಕೊಳ್ಳುವುದಿಲ್ಲ ಎಂದು ಉದ್ದೇಶಪೂರ್ವಕವಾಗಿ ಹೇಳುತ್ತಾನೆ. ಪದ್ಯದ ಹೆಸರು ಮತ್ತು ಸ್ವಭಾವಗಳ ಮೇಲಿನ ಅವನ ಭಾಷಣ ಆತನ ಅಭಿಪ್ರಾಯಗಳನ್ನು ಸಾಂಗೋಪಾಂಗವಾಗಿ ನಮ್ಮ ಮುಂದಿಡುತ್ತದೆ. ಬುದ್ಧಿಗೆ ಶುದ್ಧ ಪದ್ಯವು ಅರ್ಥರಹಿತ, ಅಸಂಬದ್ಧ ಪ್ರಲಾಪ ಎಂಬುದು ಅವನ ನಂಬಿಗೆ. ವಿರೋಧಾಭಾಸಿಕವಾಗಿ ಅವನು ಶುದ್ಧ ಪದ್ಯವನ್ನು ಬಣ್ಣಿಸಿದ್ದು ಇಂತಿದೆ: 'ಶುದ್ಧಪದ್ಯವೆಂದರೆ ಒಂದು ಬಗೆಯ ಉದಾತ್ತ ಅಸಂಬದ್ಧ ಪ್ರಲಾಪ; ಅದು ಮಾನಸಿಕ ಮೇಧಾ ಶಕ್ತಿಗೆ ಮೆಚ್ಚುಗೆಯಾಗುವಂಥದಲ್ಲ; ಆದರದು ಆದಿತ್ಯಗ್ರಂಥಿಗೆ ಬಡಿದು ಜೈವಿಕ ಮತ್ತು ಇಂದ್ರಿಯ ಚೈತನ್ಯಗಳನ್ನು ಎಬ್ಬಿಸುವುದಲ್ಲದೆ, ಬೌದ್ಧಿಕ ಸಂವೇದನೆಯನ್ನಾಗಲಿ ಪ್ರತಿಕ್ರಿಯೆಯನ್ನಾಗಲಿ ಉಂಟು ಮಾಡದು. ಬ್ಲೇಕನ ಪ್ರಸಿದ್ಧ ಪದ್ಯಗಳ ವಿವರಣೆ ಅವುಗಳನ್ನು ಹಾಳುಮಾಡುತ್ತದೆ; ಅವನ್ನು ಹಾಗೆ ಕ್ಷತವಿಕ್ಷತಗೊಳಿಸದಿರುವುದೇ ಲೇಸು !

ಶ್ರೀ ಅರವಿಂದರ ಪ್ರಕಾರ ಹೌಸ್ಮನ್ನನು ಶುದ್ಧಾಶುದ್ಧವೆಂದು ಪದ್ಯವಿಭಾಗ ಮಾಡುವುದು ತಪ್ಪು. ಈ ಬಗೆಯ (ಆಂತರಿಕ ಚೈತನ್ಯಜನ್ಯ) ಪದ್ಯದಲ್ಲಿ ಕಲ್ಪನಾ ವೈಶಾಲ್ಯ ಮತ್ತು ಮನಸ್ಸಿನ ಭಾವಪರ ದೃಷ್ಟಿಯ ತಿರಸ್ಕಾರ, ಅಲ್ಲದೆ ಅದರ ತಾರ್ಕಿಕ ಅನುಕ್ರಮಗಳ ಅಲಕ್ಷ್ಯ-ಇವೇ ಗಣ್ಯ. ಅದು ಉದ್ಬೋಧಿಸುವುದು ಮೇಧೋಮಾನಸವನ್ನಲ್ಲ, ಕವಿಪ್ರೌಢಿಯನ್ನು ಕೂಡ ಅಲ್ಲ; ಅದರ ಗುರಿ ಸೂಕ್ಷ್ಮ ಇಂದ್ರಿಯ ಚೈತನ್ಯ, ನರ ನಿಷ್ಠ ಪ್ರಜ್ಞೆ. ಜೈವಿಕ ಚೈತನ್ಯ ಅಥವಾ ಚಿತ್‌ಕೇಂದ್ರ. 'ಅಸಂಬದ್ಧ ಪ್ರಲಾಪ' ಎಂಬ ಪದವನ್ನು ಬಳಸುವಾಗಲೂ ಹೌಸ್ಮನ್ ತಪ್ಪಿದ್ದಾನೆ. ಶುದ್ಧ ಪದ್ಯವು ಸತ್ಯವೂ ಸಹಜವೂ ಆದುದನ್ನು ವ್ಯಕ್ತಗೊಳಿಸುತ್ತದೆ,— 'ಅಸಂಬದ್ಧ ಸಂಗತಿ'ಯನ್ನಲ್ಲ, ಆದರೆ ನಾವು ಬಲವಾಗಿ ಅನುಭವಿಸುವ ಯಾವುದೋ ಒಂದು ಆಂತರಿಕ ಭಾವನೆಯ ಮಹೋದ್ರೇಚನೆಯನ್ನು; ಆದರೆ ಅಂಥ ಭಾವಗಳನ್ನು ಜಾತಶುದ್ಧವಾದ ಬೌದ್ಧಿಕ ವಿವರಣೆ ಮಾಡಹೋದರೆ ಅವುಗಳ ಅರ್ಥ ಹತಪ್ರಾಯವಾಗಿಯೂ ಹೃದಯಂಗಮತೆ ನಷ್ಟವಾಗಿಯೂ ಹೋಗುತ್ತವೆ. ಹೌಸ್ಮನ್ ಹೇಳುವ ಶುದ್ಧ ಪದ್ಯ ರಚಿಸುವುದು ಕೇವಲ ಸಂವೇದನೆಗಲ್ಲ; ಅದರ ರಸಸ್ಪರ್ಶವಾಗುವುದು ನಮ್ಮ ಅಂತರ್ಜೀವಿತಕ್ಕೆ. ಆ ಅಂತರ್ಜೀವಿತ ಅಥವಾ "ಜೀವಿತಾತ್ಮವು" ವಿಚಾರ ಪ್ರಜ್ಞೆಗಿಂತ ಹೆಚ್ಚು ಆಳಗಳುಳ್ಳದ್ದು; ಅದರ ಪ್ರತಿಕ್ರಿಯೆ ಒಂದು ಬಗೆಯ ಆತ್ಮಕ್ಷೋಭೆ ಅಥವಾ ಆನಂದೋದ್ರೇಕ ರೂಪದ್ದು. ಹೌಸ್ಮನ್ ಒತ್ತಿ ಹೇಳುವ ಭೌತಿಕ ಸ್ಪಂದನಗಳು ಜೀವಿತದ ಯೌಗಿಕ ಪಟಲಗಳ ಮಡಿಕೆಯೊಳಗಣ ಝುಟಿತಿಕ್ಷೋಭದ ಬಾಹ್ಯ ಪರಿಣಾಮವಷ್ಟೇ. ಹೌಸ್ಮನ್ ತ್ಯಜಿಸಿದ ಮೇಧೋಮಾನದಂಡವು ಬ್ಲೇಕ್ ಮತ್ತು ಇತರ ಸ್ವಪ್ನಚೈತನ್ಯಪರ ಲೇಖಕರ ಕೃತಿಗಳ ಅವಲೋಕನದಲ್ಲೂ ತ್ಯಾಜ್ಯವೇ. ಅಂಥ ಆತ್ಮಸಂಭ್ರಮ ಅಥವಾ ಅತ್ಯುಲ್ಲಾಸವನ್ನು ಉಂಟುಮಾಡಬೇಕಾದರೆ ಪದ್ಯವು ಬೌದ್ಧಿಕ ಅರ್ಥವನ್ನು ಬಿಡುವುದು ಅಗತ್ಯವೋ

ಅಲ್ಲವೋ ಎಂಬುದು ಬೇರೆಯ ವಿಷಯ. ಯೌಗಿಕ ಕಾವ್ಯವು ಈ ಶುದ್ಧ ಪದ್ಯಕ್ಕೂ ಹೆಚ್ಚು ಆಳವಾಗಿ ಪರಿಣಾಮ ಮಾಡಬಲ್ಲುದು,-ಅದು ಏಕ ಕಾಲದಲ್ಲಿ ಅಂತರ್ಮನದ ಮತ್ತು ಜೀವಿತಾತ್ಮ ಅಥವಾ ಅಂತರಾತ್ಮನ ಅತ್ಯಾಂತರಿಕವೂ ಸೂಕ್ಷ್ಮತಮವೂ ಆದ ಮೂಲಗಳನ್ನು ಕವಡಬಲ್ಲುದು; ಅದು ಸರಿಯಾದ ಬಗೆಯದೇ ಆದರೆ, ಈ ಎಲ್ಲವನ್ನೂ ಮೀರಿ ಶುದ್ಧ ಚಿತ್‌ಸ್ಥಲವನ್ನು ಮುಟ್ಟಬಲ್ಲುದು. ಈ ಪರಿಣಾಮವನ್ನು ಸಾಧಿಸಲು ಅದು ವಿಚಾರವನ್ನು ಬಹಿಷ್ಕರಿಸಬೇಕೆಂದಿಲ್ಲ. ತದ್ವಿರುದ್ಧವಾಗಿ, ಅತ್ಯುನ್ನತ ಆಧ್ಯಾತ್ಮಿಕ ಕಾವ್ಯವು ಒಂದು ವಿಧದ ಓಜಸ್ಸು, ಋಜುಗತಿ ಮತ್ತು ಆಧ್ಯಾತ್ಮಿಕ ಅರ್ಥವ್ಯಕ್ತಿ ಮತ್ತು ಸಹಜತೆಗಳನ್ನು ಸಾಧಿಸಲು ಯತ್ನಿಸುತ್ತದೆ. ಅದು ಅರ್ಥವಾಗದಿರುವುದು ಸಾಮಾನ್ಯ ಮನಸ್ಸಿಗೆ ಅದು ಪ್ರಕಟಿಸುವ ಸತ್ಯಗಳು ಅಪರಿಚಿತವಾದುದರಿಂದ ಅಥವಾ ಅವು ಯೌಗಿಕಾನುಭವದ ಕ್ಷೇತ್ರವನ್ನು ಪ್ರವೇಶಿಸಿರುವುದರಿಂದ; ಹಾಗಲ್ಲದೆ ಅಲ್ಲೇನಾದರೂ ಮುಸುಕಾದ ಇಲ್ಲವೆ ಅಸ್ಪಷ್ಟವಾದ ಗಾಂಭೀರ್ಯವಿರುವುದು ಅಥವಾ ವಿಚಾರಮುಕ್ತತೆಯಿರುವುದು ಅದು, ಒಮ್ಮೆ, ಅರ್ಥವಾಗದಿರಲು ಕಾರಣವಲ್ಲ. ಅಲ್ಲಿ ಆಲೋಚಿಸುವುದು ಬೌದ್ಧಿಕವಾಗಿ ಅಲ್ಲ, ಪ್ರೈರಣಿಕ ರೀತಿಯಿಂದ; ಅದು ವ್ಯಕ್ತಗೊಳಿಸುವುದು ಯಾವಾಗಲೂ ಒಂದು ದರ್ಶನವನ್ನು, ಒಂದು ಆಧ್ಯಾತ್ಮಿಕ ಸಂಸ್ಪರ್ಶವನ್ನು ಅಥವಾ ತಾದಾತ್ಮ್ಯಭಾವದಿಂದ ನಿರ್ವಿಕಲ್ಪ ಪದಾರ್ಥದಲ್ಲಿ ಹೊಕ್ಕು ಪಡೆದ ಒಂದು ವಿಶಿಷ್ಟ ಜ್ಞಾನವನ್ನು. ಮಹಾ ಮಹಾ ಭಾವನಾಪ್ರಧಾನ ಕವಿಗಳು ಸಹ ವಿಚಾರವನ್ನು ಪರಿತ್ಯಜಿಸಲಿಲ್ಲ. ಅವರು ಅತಿಯಾಗಿ ವಿಚಾರ ಮಾಡಿದರು, ಅನಂತ ವಿಚಾರಗಳನ್ನು ಮಾಡಿದರು ಎನ್ನಬೇಕು. ಅವರಿಗೆ ಅವರದೇ ಆದ ಜಗದ್ದರ್ಶನವಿದೆ, ಅದನ್ನವರು ಪ್ರಕಾಶ ಪಡಿಸುತ್ತಾರೆ. ಕೆಲ ಬಗೆಗಳಲ್ಲಿ ಆಧ್ಯಾತ್ಮಿಕ ತತ್ತ್ವಾವಬೋಧಕ ಪದ್ಯ ಅವರ ಪದ್ಯದಿಂದ ಭಿನ್ನ. ರೊಮಾಂಟಿಕ್ ಅಥವಾ ಇನ್ನಿತರ ಸಾರ್ಥಕ ಕಾವ್ಯದಂತೆ ಪಂಚಸನಾತನ ಶಕ್ತಿಗಳಾದ ಆತ್ಮ, ಜೀವ, ಆನಂದ, ರಸ ಮತ್ತು ಸತ್ಯಗಳ ಸಮುಚ್ಛ್ರಿತಿಯ ಅಂಗವಾಗಿ ವಿಚಾರವನ್ನು ಅಂಗೀಕರಿಸುತ್ತದಲ್ಲದೆ ಅದನ್ನು ತ್ಯಜಿಸುವುದಿಲ್ಲ. ಆದರೆ ಅದು ''ಒಂದು ಸಕಲ ಸಮಗ್ರ ಮತ್ತು ವಿಶ್ವತೋಮುಖ ದರ್ಶನವನ್ನು ಅಸ್ತಿತ್ವದ ಸರ್ವ ಸ್ಥಲಗಳ ಅನುಭವವನ್ನೂ ಅವುಗಳ ಪರಸ್ಪರ ಕಾರ್ಯಗಳನ್ನೂ ವ್ಯಕ್ತಪಡಿಸುತ್ತದೆ. ಈ ದರ್ಶನವನ್ನೂ ಅನುಭವವನ್ನೂ ವ್ಯಕ್ತಪಡಿಸಲು ಭಾಷೆ, ನುಡಿಕಟ್ಟು, ಯಾವಯಾವುದುಬೇಕೋ ಅದನ್ನೆಲ್ಲ ಬಹಳ ಎಚ್ಚರಿಕೆಯಿಂದ ಬಳಸುತ್ತದೆ; ಆದರೆ ಹಾಗೆ ಬಳಸುವಾಗ ಯಾವುದು ಕವಿಸಹಜ, ಯಾವುದಲ್ಲ,ಎಂಬ ಮಾನಸ ನಿಯಮವನ್ನದು ಗಣಿಸದು. ಪಾರಿಭಾಷಿಕ ಪದಗಳು ಯಾವುದಾದರೊಂದನ್ನು ನೇರವಾಗಿ, ಸ್ಪಷ್ಟವಾಗಿ ಮತ್ತು ಸಮರ್ಥವಾಗಿ ಹೇಳಲು ಅನುಕೂಲಿಸಿದರೆ ಅವನ್ನು ಕೂಡ ಬಳಸಲು ಅದು ಹಿಂದುಮುಂದು ನೋಡುವುದಿಲ್ಲ.... ಗದ್ಯಸಹಜವೆಂದು ಕಂಡು ಬರುವ ಪದ ಮತ್ತು ಭಾವಗಳ ವಿರುದ್ಧ ಬೇಲಿಹಾಕುವ ಒಂದು ವಿಧದ ಕವಿತ್ವ ಶಕ್ತಿಯೂ ಅದಕ್ಕಿದೆ. ಆದರೆ ಅವನ್ನು ಯುಕ್ತವಾಗಿ ಬಳಸಿಕೊಳ್ಳಲು ಹೊರಟರೆ ಪದ್ಯದ ಪ್ರಭಾವಿತ್ವವನ್ನೂ ವಿಸ್ತಾರ ಗತಿಯನ್ನೂ ಹೆಚ್ಚಿಸಿಕೊಳ್ಳಬಹುದು. ಆದ್ದರಿಂದ ಆ ಪರಿಮಿತಿಯನ್ನು ನ್ಯಾಯವಾದುದೆಂದು ನಾನು ಒಪ್ಪಲಾರೆ'' (ಪು. ೪೩, ಪ. ಮಾ. ೨). ಹೀಗೆ ಶುದ್ಧ ಪದ್ಯದ ಪ್ರತ್ಯೇಕತೆಯ ಮತ್ತು ಅದು ಪಕ್ಷಪಾತ ವಹಿಸುವ 'ಶುದ್ಧ ಕಾವ್ಯಮಯ ವಸ್ತು ಮತ್ತು ಶೈಲಿ'ಗಳ ಕೋಟೆಯನ್ನು ಶ್ರೀ ಅರವಿಂದರು ಭೇದಿಸಿದ್ದಾರೆ. ಪದ್ಯದ ವಸ್ತು ಶೈಲಿಗಳ ಈ ಬಗೆಯ ವಿಸ್ತರಣಕ್ಕೆ ಅವರ ''ಸಾವಿತ್ರಿಯು'' ಒಂದು ಉಜ್ವಲ ಉದಾಹರಣೆ. ರೊಮಾಂಟಿಕ್ ಕವಿಗಳ ಭಾವನಾಮಯತೆಯ ವಾದದ ವಿರುದ್ಧ ಆಧುನಿಕ ಪಂಥದವರು ಬಂಡೆದ್ದುದನ್ನೂ ಆ ವಾದಿಗಳು ವಿಚಾರ ಮತ್ತು ತಾತ್ವಿಕ ವಿವೇಚನೆ ಪದ್ಯಕ್ಕೆ ವರ್ಜ್ಯವೆಂಬುದನ್ನು ವಿರೋಧಿಸುವ ಹೊಸಬರನ್ನೂ ಶ್ರೀ ಅರವಿಂದರು ಅಂಗೀಕರಿಸುತ್ತಾರೆ.

ಆದರೆ ಆಧುನಿಕ ಪಂಥಿಯು ತನ್ನ ದಂಗೆಕೋರತನವನ್ನು ಮಿತಿಮೀರಿ ಮುಂದೊಯ್ಯುತ್ತಾನೆ. ''ಸಮಕಾಲೀನರಾದ ಅನೇಕ ಕವಿಗಳು ತಮ್ಮ ಕಾವ್ಯಗಳನ್ನು ಸಂಸ್ಕೃತವೂ ಪ್ರಯತ್ನನಿಷ್ಠವೂ ಆದ ಮನಸ್ಸಿ

ನಿಂದ ಬರೆಯುತ್ತಾರೆ; ಅಂತರ್ಗತವಾದ ಮೂಲಭೂತ ಅಂತರಾತ್ಮ ಸ್ಫೂರ್ತಿಯಿಂದಲ್ಲ'' ಎನ್ನುತ್ತಾರೆ ಶ್ರೀ ಅರವಿಂದರು. (ಪ. ೨೨೯. ಪ. ಮಾ. ೩). ''ಇಂದು ಪದ್ಯವೆಂದು ಮುಂದಿಡಲಾಗುವ ಅತ್ಯಸಾಧಾರಣ ಶಬ್ದ ಜಾಲವನ್ನು" ಮತ್ತು ಬೌದ್ಧಿಕ ಪ್ರಜ್ಞೆಯ ಸಾರ ಅಲ್ಲಿರಬೇಕೆಂಬ ಹುಚ್ಚು ಅಥವಾ ಜೀವನದ ಸಂವೇದನೆಗಳ ಬಗ್ಗೆ ವ್ಯಾಮೋಹ ಇವನ್ನು ಶ್ರೀ ಅರವಿಂದರು ಸ್ವೀಕರಿಸುವುದಿಲ್ಲ. ಅವರ ಪ್ರಕಾರ ಆಧುನಿಕ ಪಥ ಹಿಡಿದವನು ಕೇವಲ ಕಾವ್ಯಮಯತೆಯನ್ನು ದೂರವಿಡುವ ಪ್ರಯತ್ನದಲ್ಲಿ ಕವಿಯೇ ಅಲ್ಲವಾಗಿ ಹೋದ. "ಅಲಂಕಾರಿಕ ಬರವಣಿಗೆಯನ್ನು ಶೈಲಿ ಮಹಾತ್ಮ್ಯತಾ-ಸೌಂದರ್ಯಗಳನ್ನು ವೃದ್ಧಿಗೊಳಿಸುವೆನೆಂಬ ವಾಗಾಡಂಬರವನ್ನು ತ್ಯಜಿಸಿ ದೂರ ಹೋಗುವ ಬಯಕೆಯಲ್ಲಿ ಆತನು ನಿಜ ಕವಿತ್ವದ ಪ್ರಭಾವಿಕತೆ ಮತ್ತು ರಸವತ್ತೆಗಳನ್ನು ಬಿಸುಟು ಉದ್ದೇಶಪೂರ್ವಕವಾದ ಕಾವ್ಯಶೈಲಿಯನ್ನುಳಿದು ಆಡುಮಾತಿನ ಶೈಲಿಗೆ ಹೊರಳಿ ಬೆಳ್ನುಡಿಯನ್ನು ಕೂಡ ಬಳಸ ಹೊರಟ; ಅದರಲ್ಲೂ ಕಾವ್ಯದ ಲಯಗತಿಯನ್ನು ಬಿಟ್ಟು ಗದ್ಯ ಅಥವಾ ಪದ್ಯಗಂಧಿ ಗದ್ಯಗಳ ಲಯವನ್ನು ಹಿಡಿದು, ಇಲ್ಲವೆ ಲಯವನ್ನೇ ಲಯಮಾಡಿ ಬರೆಯ ಹೊರಟದ್ದು ತೀರ ಅಸಮರ್ಪಕ. ಮತ್ತು ವಿಚಾರಕ್ಕೆ ಅತಿ ಪ್ರಾಧಾನ್ಯವಿತ್ತು ಆತನು ತನ್ನ ಪ್ರೈರಣಿಕ ನೇತ್ರದ ಮೂಲಕ ಕಾಣುವ ಅಭ್ಯಾಸವನ್ನು ಕಳೆದುಕೊಂಡಿದ್ದಾನೆ; ಕಾವ್ಯಭವನದಲ್ಲಿ ಭಾವನೆಯನ್ನು ಅದರ ಆಪ್ತ ಶಾಲೆಯಿಂದ ಹೊರಹೊರಡಿಸಿ ಪದ್ಯವನ್ನು ಶುಷ್ಕತೆಗೆಳೆದು, ಆ ಶುಷ್ಕತೆಯ ಪರಿಹಾರಕ್ಕಾಗಿ ಅಪರಿವೃತ್ತ ಅಥವಾ ಕೇವಲ ಅತಿಶಯೋಕ್ತಿ ಪರಿವೃತ್ತವಾದ ಚಮತ್ಕಾರೋದ್ವೇಗ ಉಂಟುಮಾಡುವ ಪ್ರತಿಕ್ರಿಯೆಗಳನ್ನು ಅಧೋ ಜೈವಿಕ ಪ್ರಜ್ಞೆಯ ಅತ್ಯತಿಶಾಯಿತ ಅಂಶಗಳನ್ನು ಅವನು ಪದ್ಯದಲ್ಲಿ ತರಬೇಕಾಯಿತು." (ಪು. ೪೧, ಪ. ಮಾ. ೩). ಬಹಳ ನೇರವಾದದ್ದನ್ನು ಹೇಳಲು ಹೋಗಿ, ಒಂದೇ ಇದ್ದದ್ದನ್ನು ಇದ್ದ ಹಾಗೇ ಇಡುವುದು ಅಥವಾ ಭಾವ-ಭಾವನೆಗಳ ಹೊದಿಕೆಯಿಲ್ಲದೆ ಯಾವುದಾದರೊಂದರ ನಿಕಟವೂ ಸಾರಭೂತವೂ ಆದ ಸತ್ಯವನ್ನು ಉಲ್ಲೇಖಿಸುವುದು, ಅವಶ್ಯಕ ರೂಪಕ ಪ್ರತಿಮೆ ಮತ್ತು ವಿಶೇಷಣಗಳನ್ನು ಬಳಸುವುದು ಮುಂತಾದವುಗಳಿಂದ ಆಧುನಿಕ ಮಾರ್ಗ ''ಬರಿ ಶುಷ್ಕ ವ್ಯಕ್ತಿನಿರಪೇಕ್ಷವಸ್ತುತತ್ವವನ್ನು, ಅದರಲ್ಲೂ ಬಹಳ ಅತಿಶಯೋಕ್ತಿಗೇರಿಸಿದ ಖಚಿತ ವಸ್ತುತಥ್ಯವನ್ನು ಹೇಳುವುದರಲ್ಲಿ ಕೊನೆಗೊಳ್ಳುತ್ತದೆ.'' (ಪು. ೨೩೦, ಪ. ಮಾ. ೩). ''ಹಗಲಿನ ಕೆಂಪು ಚೂರುಗಳು, ನೀಲ ಮತ್ತು ಹಸಿರು ಕಾಗದಗಳಿಂದ ಮಾಡಿದ ಗುಡ್ಡಗಳು, ಸೈತಾನ ಸಹಜ ಲೀಲೆ ಮತ್ತು ಅತಿಭೋಗಜನ್ಯ ಜಡತೆ, ಒಂದು ಕರಿ ಆಡು ಕಣ್ಣು ಬಿಟ್ಟುಕೊಂಡು ತಿರುಗುತ್ತದೆ ಮುಂತಾದ ಪ್ರತಿಮಾರೂಪಣಗಳು ಸ್ಪಷ್ಟವಾಗಿ ವರ್ಣಿತ ವಸ್ತುಗಳ ದೃಷ್ಟಿಯ ಮೂಲಕ ನರಮಂಡಲದ ಮೇಲೆ ಉಂಟಾದ ಅನುಭವ ಮುದ್ರೆಗಳನ್ನೇ ಪ್ರಕಟಿಸುತ್ತವೆ.

ಆಧುನಿಕ ಮಾರ್ಗವು ಪದ್ಯದಲ್ಲಿ ವಸ್ತುಗಳನ್ನು ಹೊಸ ದೃಷ್ಟಿಯಿಂದ ನೋಡಲಾಗುತ್ತದೆ ಎಂಬುದನ್ನು ಶ್ರೀ ಅರವಿಂದರು ಒಪ್ಪುವಂತಿದೆ--ಕೊನೆಯ ಪಕ್ಷ ಮೇಲೆ ವರ್ಣಿಸಿದ ಮುಟ್ಟಕ್ಕೊತ್ತಿದಾಗಲಾದರೂ. ಆದರೆ ಈ ಮಾರ್ಗವನ್ನು ಹೃದಯ ಮತ್ತು ಮಾನಸಿಕ ಕಲ್ಪನಾ ಫಲಕದ ಮೇಲೆ ವಸ್ತುಗಳು ಮೂಡಿಸುವ ಅನುಭವ ಮುದ್ರೆಗಳಿಗಿಂತ ಉತ್ಕೃಷ್ಟವಾಗಲೇಬೇಕೆಂಬ ನಿಯಮವಿಲ್ಲ ಎಂದು ಅವರ ಮತ. ಹೀಗಿದ್ದರೂ ಆಧುನಿಕ ಪಂಥದವರ ಪ್ರಯೋಗಗಳಲ್ಲಿ ಇನ್ನೂ ಯಶಸ್ವಿಯಾಗಿ ಸಾಧಿಸಲಾಗದ ನಿಜವಾದ ಪ್ರಗತಿಯ ಸಾಧ್ಯತೆಯಿದೆ ಎಂದು ತೋರುತ್ತದೆ. "ವಸ್ತುಗಳ ಬಗ್ಗೆ ಮಾಡಲಾಗುವ ಸಾಲಂಕೃತ ಮಾನಸರಚನೆಗಳಿಂದ ದೂರ ಹೋಗಿ, ನಮ್ಮಲ್ಲಿಯ ಗಭೀರತರ ದೃಷ್ಟಿಯಿಂದ ನೇರವಾಗಿ ನೋಡಿ ಸ್ವತಃ ವಸ್ತುಗಳ ನಿಕಟ ಸತ್ಯವನ್ನು ಉಲ್ಲೇಖಿಸುವ ಪ್ರಯತ್ನವೇ" ಆ ಪ್ರಗತಿಯ ಚಿಹ್ನ. (ಪು. ೨೩೧, ಪ. ಮಾ. ೩). ಆದರೆ ಈ ಗುರಿ ಒಂದೇ ಒಂದು ತಂತ್ರದಿಂದ ಸಾಧ್ಯ—ಮತ್ತು ಆಧುನಿಕ ಪದ್ಧತಿಯವನ ತಂತ್ರ ನಿಜವಾಗಿಯೂ ಒಂದು ಸ್ಖಾಲಿತ್ಯ, ಅಂಥ ಒಂದು ತಂತ್ರವೆಂದರೆ ಚೈತಸೋತ್ತರ ಪ್ರಜ್ಞೆಯದು. ಚೈತಸೋತ್ತರ ಪ್ರಜ್ಞೆಯು ತನ್ನದೇ ಆದ ಅಂತರ್ಗ್ರಾಹಕ ರೀತಿಯಿಂದ ಈ ಗುರಿಯನ್ನು ಸಾಧಿಸಲು ಯತ್ನಿಸುತ್ತದೆ.

ಪುನಃ ಆಧುನಿಕ ಪಂಥದವನು "ಬಹುಶಃ ವಿಚಾರ ಸ್ವಾತಂತ್ರ್ಯವನ್ನೂ ಶೈಲಿಯ ಒಂದು ಬಗೆಯ ಋಜುತ್ವವನ್ನೂ ಸ್ಫುಟತ್ವವನ್ನೂ ಕವಿಗೆ ಮತ್ತೆ ದೊರಕಿಸಿಕೊಟ್ಟಿದ್ದಾನೆ" (ಪು. ೪೪, ಪ. ಮಾ. ೩). ಈಗ ತನ್ನದೇ ಆದ ತಂತ್ರವನ್ನೂ ಶೈಲಿಯನ್ನೂ ರಚಿಸಿಕೊಳ್ಳಲು ಮತ್ತು ಹಾಗೆ ರಚಿಸಿಕೊಂಬಾಗ ವಿಷಯದ ಹೃದಯವಾದ ಆತ್ಮಸಂಭ್ರಮ ಅಥವಾ ಆನಂದೋದ್ರೇಕವನ್ನು ಕಳೆದುಕೊಳ್ಳದೆ ಇರಲು ಪ್ರೈರಣಿಕ ಮನದ ಕವಿ ಹೆಚ್ಚು ಸ್ವತಂತ್ರನಾಗಿದ್ದಾನೆ. ಗಾಂಭೀರ್ಯರಹಿತ ಮತ್ತು ಆ ಕಾರಣದಿಂದ ಕಾವ್ಯಾಸಹಜವೆನಿಸಬಹುದಾದ ಪದ ಮತ್ತು ಪ್ರತಿಮೆಗಳ ವಿರುದ್ಧ ಎತ್ತುವ ಪಾರಂಪರಿಕ ಆಕ್ಷೇಪ ಸರಿಯಾದುದಲ್ಲ. ಪರಿಣಾಮ ವಿಕಟ ಅಥವಾ ಕ್ಷುದ್ರ ಎನಿಸಿದಾಗ ಮಾತ್ರ ಅದಕ್ಕೆ ಬೆಲೆಯಿದೆ. ಉದಾಹರಣೆ ಬೇಕಾದರೆ, ಮಹಾಕಾವ್ಯದ ಅಥವಾ ಇನ್ನಿತರ ಉನ್ನತ ಶೈಲಿಯಲ್ಲಿ 'ಪ್ಲುತಗತಿ'ಯನ್ನು ತರಲು ಕಷ್ಟವಾಗುವುದನ್ನು ತೆಗೆದುಕೊಳ್ಳಬಹುದು. ಈ ಆಕರ್ಷಕ ಉದಾಹರಣೆಯನ್ನು ಎತ್ತಿಕೊಂಡ ಶ್ರೀಅರವಿಂದರು ಪ್ಲುತಿಯನ್ನು ಕೂಡ ತರಬಹುದೆಂದು ಸೂಚಿಸುತ್ತಾರೆ. ಮಿಲ್ಟನ್ನನ 'ಸದ್ದು' (din), 'ಗದ್ದಲ' (hubbub) ಮತ್ತು ಇತರ ಅಂಥ ಸಾಹಸಗಳನ್ನು ಬಹುಶಃ ನೆನೆದು, ಅವರು ಮಿಲ್ಟನ್ನನು ಆ ಕಾರ್ಯ ಸಾಧಿಸಬಲ್ಲವನಾಗುತ್ತಿದ್ದ ಎಂದು ಹೇಳುತ್ತಾರೆ. ಯೌಗಿಕ ಪಂಥದ ಕಾವ್ಯದಲ್ಲಿ ದೃಶ್ಯಪದಾರ್ಥದ ಸ್ಪಷ್ಟಸೂಚನೆ ತರುವುದು ಮತ್ತು ಪದ್ಯಗತಿಯ ಬಗೆಯ ಅರ್ಥವತ್ತೆಯನ್ನು ಮೂಡಿಸುವುದು — ಇದೇ ಗುರಿ.

"ಒಂದು ಚಿತ್ರದ ಸ್ಪರ್ಶಕವಾಗಿ ಪರಿಚಿತ ವಿಶೇಷಣವೊಂದು ಚೆನ್ನಾಗಿ ಅದರ ಉದ್ದೇಶವನ್ನು ಈಡೇರಿಸೀತು ಮತ್ತು ಎಷ್ಟೋ ವೇಳೆ ಇನ್ನಾವುದೂ ಅಷ್ಟು ಸಹಜವೂ ಚೈತನ್ಯಪೂರ್ಣವೂ ಎನಿಸದು ಅಥವಾ ಅಷ್ಟು ಚೆನ್ನಾಗಿ ಅವಶ್ಯವಾದ ಗತಿಯನ್ನು ಕೊಡಲಾರದು" (ಪು. ೧೩೬-೭, ಪ. ಮಾ ೩). ಯೌಗಿಕ ಕಾವ್ಯದಲ್ಲಿ ಅತ್ಯಲ್ಪಕಾಲಾಂತರದಲ್ಲಿ 'ವೈಪುಲ್ಯ' (Immensity) ದಂತಹ ಪದಗಳ ಪುನರುಪಯೋಗವನ್ನು ನಾವು ಆಕ್ಷೇಪಿಸಲಾರೆವು. ಆಧ್ಯಾತ್ಮಿಕ ಪದಾರ್ಥಗಳೊಡನೆ ವ್ಯವಹರಿಸುವ ಹೊಸಕಾವ್ಯಕ್ಕೆ ಹಳೆಯ ಕ್ರಮದ ಸಮಯಗಳು ಅನ್ವಯಿಸಲಾರವು. ಹೊಸ ಪ್ರಜ್ಞೆಯಿಂದ ಬರೆದ ಹೊಸ ಪದಕಲೆಗೆ ಹೊಸ ತಂತ್ರವೇ ಅವಶ್ಯಕ.

(ಪ್ರಕಟವಾಗಲಿರುವ 'Sri Aurobindo Memorial Volume' ಎಂಬ ಗ್ರಂಥಕ್ಕಾಗಿ ಶ್ರೀ. ವಿ. ಕೃ. ಗೋಕಾಕ ಅವರು ಬರೆದ ಆಂಗ್ಲ ಲೇಖನದ ೧೧ ನೆಯ ಭಾಗದ ಅನುವಾದ. ಈ ಲೇಖನದ ೧-೪ ಹಾಗೂ ೧೨ನೆಯ ಭಾಗಗಳು 'ಸಮರ್ಪಣದ' ೨ನೆಯ ಸಂಪುಟದಲ್ಲಿಯೂ ೫, ೬, ೭ ನೆಯ ಭಾಗಗಳು ೩ನೆಯ ಸಂಪುಟದಲ್ಲಿಯೂ ಈಗಾಗಲೇ ಅಚ್ಚಾಗಿವೆ).

— ಅನುವಾದಕ: ಬಿ. ಎಚ್. ಶ್ರೀಧರ

# ಜಗನ್ಮಾತೆ

ಈ ಸೃಷ್ಟಿಯ ಸ್ಥಿತಿಲಯಂಗಳಿಗೆ ಕಾರಣೀಭೂತನೂ, ಪರಾತ್ಪರ ಪುರುಷನೂ ಆದ ಜಗದೀಶ್ವರನನ್ನು ವಿವಿಧ ಜನಾಂಗದವರು ವಿವಿಧ ನಾಮರೂಪಗಳಲ್ಲಿ ಆರಾಧಿಸಿದ್ದಾರೆ, ಆರಾಧಿಸುತ್ತಲಿದ್ದಾರೆ. ಆತನೂ ಅವರವರ ಭಾವಕ್ಕನುಗುಣವಾಗಿ ಆಯಾ ನಾಮರೂಪಗಳಿಂದ ದರ್ಶನವಿತ್ತ ದೃಷ್ಟಾಂತಗಳೂ ವಿಪುಲವಾಗಿ ದೊರೆಯುತ್ತಲಿವೆ. ಆದರೆ ಜಗದೀಶ್ವರನನ್ನು ಜಗನ್ಮಾತೆಯ ರೂಪದಲ್ಲಿ ಆರಾಧಿಸುವ ಕುರಿತು ಇಲ್ಲಿ ಸಂಕ್ಷೇಪವಾಗಿ ಉಲ್ಲೇಖಿಸಲಾಗಿದೆ.

ಹಿಂದೂ ಧರ್ಮದಲ್ಲಿ ಪ್ರಾಮುಖ್ಯವಾಗಿ, ಜಗದೀಶ್ವರನ ಮೂರು ಪ್ರಕಟ ಸ್ವರೂಪಗಳು, ಬ್ರಹ್ಮ-ವಿಷ್ಣು ರುದ್ರರೆಂಬ ನಾಮಗಳಿಂದ ಪೂಜಿಸಲ್ಪಡುತ್ತಿದ್ದು, ಬ್ರಹ್ಮನು ಲೋಕ ಸೃಷ್ಟಾರನೂ, ವಿಷ್ಣುವು ರಕ್ಷಕನೂ, ರುದ್ರನು ಸಂಹಾರಕನೂ ಎಂಬ ಮಾತು ಸರ್ವಸ್ರುತವಾಗಿದೆಯಷ್ಟೆ? ಇದೇ ತೆರನಾಗಿ ಜಗದೀಶ್ವರನು ಸೃಷ್ಟಿಯ ಕಾರ್ಯ-ಪರಿಸರ ಮತ್ತು ಉಪಾಸಕರ ಭಕ್ತಿ-ಭಾವಗಳಿಗನುಸರಿಸಿ, ಅನೇಕ ಸಲ ಅನೇಕ ರೂಪಗಳಿಂದ ಪ್ರಕಟಗೊಂಡಿದ್ದಾನೆ.

ಜಗದೀಶ್ವರನನ್ನು ವೇದೋಪನಿಷತ್ತುಗಳು ಅವ್ಯಕ್ತನೆಂದೂ, ಅನಿರ್ವಚನೀಯನೆಂದೂ ವರ್ಣಿಸಿರುತ್ತವೆ. ಅದರಂತೆಯೇ ಮಹಮ್ಮದೀಯರು ರೂಪರಹಿತನೆಂದೂ,ಅಖಿಲಬ್ರಹ್ಮಾಂಡದ ಒಡೆಯ (ಮಾಲಿಕ) ನೆಂದೂ ಒಪ್ಪಿ ಎದೆದುಂಬಿದ ಭಕ್ತಿಯಿಂದ ಪ್ರಾರ್ಥಿಸಿದ್ದಾರೆ. ಕ್ರೈಸ್ತರು, ದಯಾಘನನಾದ ದೇವನನ್ನು ಸರ್ವಲೋಕಗಳ ಪರಮಪಿತನೆಂದು ನಂಬಿ ತಂದೆಯ ರೂಪದಲ್ಲಿ ಪೂಜಿಸಿದ್ದಾರೆ.

ಹಿಂದೂ ತಾಂತ್ರಿಕ ಸಾಂಪ್ರದಾಯದವರು, ಜಗದೀಶ್ವರನನ್ನು ಮುಖ್ಯವಾಗಿ ಮಹಾಶಕ್ತಿ (ಮಹಾಮಾತೆ)ಯ ರೂಪದಲ್ಲಿ ಆರಾಧಿಸಿದ್ದಾರೆ. ಆದರೆ ಅವರು ಕೇವಲ ಶಕ್ತಿಯ ಅಥವಾ ಪ್ರಕೃತಿಯ ದಾಸರಾಗಿ ಪುರುಷನನ್ನು ನಿರಾಕರಿಸಿದ ಮಾತು ಪೂರ್ಣತೆಯ ದೃಷ್ಟಿಯಿಂದ ಬಹು ದೊಡ್ಡ ಕೊರತೆಯೆಂದೇ ಹೇಳಬೇಕು. ಅದರಂತೆಯೇ ವೇದಾಂತಿಗಳು ಪುರುಷನನ್ನಷ್ಟೇ ಸ್ವೀಕರಿಸಿ ಪ್ರಕೃತಿಯನ್ನಲ್ಲಗಳೆದಿದ್ದಾರೆ, ಇದೂ ಕೂಡ ಅಷ್ಟೇ ನ್ಯೂನತೆಯಾಗಿದೆ. ಈ ಎರಡೂ ಪಂಥಗಳು ಸತ್ಯದ ಅರ್ಧ-ಅರ್ಧ ಭಾಗವನ್ನು ಮಾತ್ರ ಸ್ವೀಕರಿಸಿರುತ್ತವೆ. ಆದರೆ ಪೂರ್ಣ ದೆಶೆಯಲ್ಲಿ ಈ ಎರಡನ್ನೂ ಸ್ವೀಕರಿಸಬೇಕಾಗುತ್ತದೆ. ಪುರುಷನನ್ನು ಬಿಟ್ಟು ಪ್ರಕೃತಿಯಾಗಲಿ ಪ್ರಕೃತಿಯನ್ನು ಬಿಟ್ಟು ಪುರುಷನಾಗಲಿ ಇಲ್ಲವೇ ಇಲ್ಲವೆಂಬುದಕ್ಕೆ ಶಿವನು ಶಕ್ತಿಯಿಂದೊಡಗೂಡಿ ಅರ್ಧನಾರೀ ನಟೇಶ್ವರನಾದದ್ದು ತುಂಬಾ ಸಾಕ್ಷಿಗೊಡುತ್ತಲಿದೆ.

ಇನ್ನು ಜಗದೀಶ್ವರಿಯ ಅಥವಾ ಜಗನ್ಮಾತೆಯ ಉಪಾಸನೆಯ ಫಲ–ಪರಿಣಾಮಗಳನ್ನರಿಯಲು ಮೊದಲು ಮನೆಯ ತಂದೆ–ತಾಯಿಗಳ ಪ್ರೇಮ–ವಾತ್ಸಲ್ಯಗಳ ಬಗೆಗೆ ಅರಿತರೆ ಸಾಕು. ಏಕೆಂದರೆ ಇದೇ ಮಾತೂ ಜಗತ್ತಿನ ತಂದೆ–ತಾಯಿಗಳಾದ ಜಗದೀಶ್ವರ–ಜಗದೀಶ್ವರಿಯರಿಗೂ ಅನ್ವಯಿಸುತ್ತದೆ. ಮಕ್ಕಳು

ತಮ್ಮಿಂದಾದ ತಪ್ಪುಗಳನ್ನು ತಂದೆಯ ಮುಂದಾಗಲಿ ಬೇರೆ ಇನ್ನಾರ ಮುಂದಾಗಲಿ ಹೇಳಲಾರರು. ಆದರೆ ತಾಯಿಯ ಮುಂದೆ ಮಾತ್ರ ತೆರೆದ ಹೃದಯದಿಂದ ಏನೆಲ್ಲವನ್ನೂ ಬಿಚ್ಚಿ ಹೇಳುತ್ತಾರೆ. ಸ್ನೇಹಮಯಿಯಾದ ತಾಯಿಯೂ ಕೂಡ, ದಯಾರ್ದ್ರ ಹೃದಯದಿಂದ, ಮಕ್ಕಳ ಯಾವ ದೋಷಗಳನ್ನೂ ಗಣನೆಗೆ ತಾರದೆ, ಎಲ್ಲವನ್ನೂ ಕ್ಷಮಿಸಿ ತಂದೆಯ ಅನುಮತಿಯಿಂದ ಅವರಿಗೆ ಯೋಗ್ಯ ಕಡೆಗೆ ಸಾಗುವದಕ್ಕೆ ಪೂರ್ಣ ಸಹಾಯವನ್ನೀಯುತ್ತಾಳೆಂಬ ಮಾತು ಪ್ರತಿಯೊಬ್ಬರ ಅನುಭವಕ್ಕೆ ಬಂದಿರಲು ಸಾಕು. ಜಗನ್ಮಾತೆಯು ಕೂಡ ಜಗತ್ಪಿತನ ಅನುಮತಿಯಿಂದ, ಜಗಚ್ಚಾಲನೆಯ ಪೂರ್ಣ ಹೊಣೆಯನ್ನು ಹೊತ್ತು ಅದರ ಕ್ರಮಗತಿಯ ಕುರಿತು ಅತ್ಯಂತ ದಕ್ಷತೆಯಿಂದ ಕರ್ಮಕಾರಿಣಿಯಾಗುತ್ತಾಳೆ. ಈ ಜಗನ್ಮಾತೆಯೆಂದರೆ ಬೇರೆ ಏನೂ ಆಗಿರದೆ ಜಗದೀಶ್ವರನ ಒಂದಂಗವಾದ ಕೃಪಾಶಕ್ತಿಯೇ ಘನೀಭೂತವಾಗಿ ಮೈದಾಳಿ ಬಂದ ಅವನ ಮಹಾ ಪ್ರತಿನಿಧಿಯಾಗಿದ್ದಾಳೆ. ಅಂದಬಳಿಕ ಜಗದೀಶ್ವರನನ್ನು ಜಗದೀಶ್ವರಿಯ ಅಥವಾ ಜಗನ್ಮಾತೆಯ ರೂಪದಲ್ಲಿ ಆರಾಧಿಸುವುದು ಯಥಾರ್ಥವೂ, ಸತ್ಯಪರವೂ ಆಗಿದೆಯಷ್ಟೇ?

ಜಗನ್ಮಾತೆಯ ಪರಮ ಕೃಪೆಯಿಂದಲೇ ಪೂರ್ಣಯೋಗದ ಸಿದ್ಧಿಯು ಲಭಿಸಬಲ್ಲದೆಂಬುದನ್ನು ಶ್ರೀಅರವಿಂದರು ತಮ್ಮ (Mother) ಮದರ ಎಂಬ ಗ್ರಂಥದ ಪ್ರಥಮ ಭೂಮಿಕೆಯಲ್ಲಿ ಹೇಳಿದುದು ಹೇಗೆಂದರೆ-

"ಸಾಧಕನ ಆಂತರಿಕ ಕರೆಯು ಮೇಲೆ ಮೇಲೆ ಏಳಬೇಕು. ಮತ್ತು ಮೇಲಿನಿಂದ ಭಗವತೀ ಮಾತೆಯ ಕೃಪೆಯ ಅವತರಣವಾಗಬೇಕು'' ಭಗವತಿಯ ಕೃಪೆಯನ್ನು ಅಥವಾ ಭಗವತ್ಸಾಕ್ಷಾತ್ಕಾರವನ್ನು ಪಡೆಯಲು ಎರಡು ಮಾರ್ಗಗಳಿವೆ. ಒಂದು ತಪಸ್ಸು. ಇನ್ನೊಂದು ಸಮರ್ಪಣೆ. ತಪಸ್ಸಿನ ಮಾರ್ಗವು ಅತಿ ಕಠಿಣವಿದ್ದು ಆ ಮಾರ್ಗದಿಂದ ಎಲ್ಲರೂ ಕೊನೆ ಮುಟ್ಟಲಾರರೆಂಬುದನ್ನು ಬಹುಜನರು ಒಪ್ಪಿಕೊಂಡಿದ್ದಾರೆ. ಇನ್ನುಳಿದ ಸಮರ್ಪಣೆಯ ಮಾರ್ಗದಿಂದ ಸಾಗುವದರಲ್ಲಿಯೇ ನಮ್ಮ ಕಲ್ಯಾಣವಿದೆ. ಏಕೆಂದರೆ ನಾವು ಯಾವ ಶಕ್ತಿಗೆ ಸಮರ್ಪಿತರಾಗುವೆವೋ-ಆ ಶಕ್ತಿಯು, ನಮ್ಮ ಯೋಗ-ಕ್ಷೇಮದ ಭಾರವನ್ನೂ ವಹಿಸಿ ಸದಾ ಕಾರ್ಯಕಾರಿಯಾಗುತ್ತದೆ. ಆದುದರಿಂದ ಈ ಚರಾಚರ ಜಗತ್ತಿನ ಸೂತ್ರಧಾರಿಣಿಯಾದ ಆದಿ ಶಕ್ತಿಗೇ ನಮ್ಮನ್ನು ನಾವು ಪೂರ್ಣವಾಗಿ ಒಪ್ಪಿಸಿಕೊಟ್ಟರೆ, ನಮ್ಮದೆನ್ನುವದೆಲ್ಲವೂ ಸರ್ವತೋಪರಿ ಸುಖ-ಸಮೃದ್ಧಿಗಳಿಂದ ತುಂಬಿತುಳುಕುವದರಲ್ಲಿ ಆಶ್ಚರ್ಯವೇನು?

ಹಾಗಾದರೆ, ಬನ್ನಿರಿ! ಬನ್ನಿರಿ!! ಪೂರ್ಣಯೋಗದ ಸಾಧಕರೂ, ಪರಮಾ ಪ್ರಕೃತಿಯ ಸಂತಾನ ಪರಂಪರೆಯವರೂ ಆದ ನಾವೆಲ್ಲರೂ ಸಕಲ ಸಹಾಯಕಳೂ, ಜಗತ್ಪಾಲಕಳೂ ಆದ ಜಗನ್ಮಾತೆಯ ಶ್ರೀ ಚರಣಗಳಲ್ಲಿ, ನಮ್ಮ ಸಮಗ್ರ ಜೀವನವನ್ನೇ ಒಂದು ಕುಸುಮದೋಪಾದಿಯಲ್ಲಿ ಸಮರ್ಪಿಸೋಣ.

**ಜಯ! ಭಗವತಿ!!**

**— ಆದಮ ಸಾಹೇಬ,**

ಶ್ರೀ ಅರವಿಂದಾಶ್ರಮ, ಪಾಂಡಿಚೇರಿ.

### ಶ್ರೀ ಅರವಿಂದಾಶ್ರಮದ

# ಗೋವಳಕೊಂಡದಲ್ಲಿಯ ತಾವರೆಗೊಳ

ನೋಡು ತಾವರೆಗೊಳವ ಎನಿತು ಚೆಲುವಾಗಿಹುದು.
ಇದಕಿರುವಳೊಬ್ಬ ತಾಯಿ.
ಇದರಾಗು-ಹೋಗುಗಳ, ಬೈಗು-ಬೆಳಗುಗಳಲ್ಲಿ.
ನೋಡಿಕೊಳುವಂಥ ದೇವಿ.
ತಿಳಿಗೊಳದ ತಳದಲ್ಲಿ ತಂದಿಟ್ಟ ಮಡಿಕೆಯಲಿ
ಬೆಳೆದ ತಾವರೆಬಳ್ಳಿ ತನ್ನೆಲೆಯನು
ನೀರಮೇಲ್ ತೇಲ್ ಬಿಟ್ಟು ಸಂತಸದಿ ಕೊನರುತಿದೆ !
ತಿಳಿದೆಯಾ ಆದರ ಹಿಗ್ಗಿನ ನೆಲೆಯನು ?

ಹಳದಿ, ಬಿಳಿ, ನೀಲಿ ನೀರ್ಪೂವುಗಳು ಇಲ್ಲರಳಿ
ದಿನವು ಮುಗಿಯಲು ತಾವು ಸುಖದಿ ಮುಗಿಯುವವು.
ನೀರ ಮೇಲ್ ನಿಂತು ನೀಟಾಗಿ ಬೆಳಕನು ಚೆಲ್ಲಿ
ಮುಚ್ಚಿಕೊಳೆ ಬೇರೆ ಹೂ ಬಳಿಗೆ ಚಿಗಿಯುವವು.
ಯಾವ ಮಾಸವೆ ಇರಲಿ, ಯಾವ ಋತುವೇ ಇರಲಿ
ಎಂದಿಗೂ ಮಾಸದಿಹ ನಗೆಯ ಬೀರಿ
ಮರೆಯಾಗುವವು ನಳಿನ-ನೈದಿಲೆಗಳೆಲ್ಲವೂ
ಕೊಳಲೆಂದು ಬರೆ ಕಾಲಪುರುಷ ಸಾರಿ.

ಮತ್ತಿಲ್ಲಿ ಮೀನಗಳು ಕೆಂಪು ಕರೆ ಬಿಳಿ ಹಳದಿ
ಬೂದಿ, ನೀಲಿಮ ಬಣ್ಣಗಳನು ತಳೆದು
ಸಂತತವು ಸಂತಸದಿ ಲೀಲೆಯಲಿ ಬಾಳುವವು
ತಿಳಿಗೊಳದ ತೀರ ತಿಳಿ ನೀರಿನಲಿ ಹೊಳೆದು.
ಅವು ಕ್ರೀಡಿಸುವ ಪಥವ, ನಿರ್ಮಿಸುವ ವರ್ತುಲವ,
ಸುಳಿಗಳನ್ನಳೆದವನೆ ಭೂಮಿತಜ್ಞ
ಅವು ಒಗೆಯುತಿಹ ಲಾಗ, ಅವು ತಿರುಗುತಿಹ ತಿರುಪು,
ಅವು ಆಡುತಿಹ ಆಟ ಬಲ್ಲವನೆ ಪ್ರಾಜ್ಞ.

## ಶ್ರೀ ಅರವಿಂದಾಶ್ರಮದ ಗೋವಳಕೊಂಡದಲ್ಲಿಯ ತಾವರೆಗೊಳ

ಬಾಲವೇ ಚುಕ್ಕಾಣಿ; ತೇಲುವವು ಈ ಮೀನ :
ಮೇಲ್ ಕೆಳಗೆ, ಎಡಬಲಕೆ ಜೊತೆಗೆ ನಲಿಯುವವು.
ನಿತ್ಯ ನೇಮದಿ ತಮಗೆ ತಿನಿಸು ತರುತಿಹ ತಾಯಿ.
ಗೆಯ್ಯ ಗುರುತಿಸಿ ಸುತ್ತ ನೆರೆದು ಒಲಿಯುವವು.
ಮೀನಕಿಹ ಆನಂದ-ಶಾಂತಿಗಳ ನೆಲೆಯೆಲ್ಲಿ ?
ಕೊಳವ ರಚಿಸಿದ, ತಿನಿಸು ಕೊಡುವ, ಕರದಲ್ಲಿ.
ಜೀವ ತಂತಿಯ ಮೀಟ ದಿನದಿನವು ಅತ್ತಿತ್ತ
ಔತಣವನವಕೀವ ಮೌನಸ್ವರದಲ್ಲಿ !

ಎರಡು ಕೊಳಗಳ ನಡುವೆ ಒಂದು ಕಾಲುವೆ ಮಾಡಿ
ನೀರ ಸೇತುವೆ ತಾಯಿ ರಚಿಸಿದಳು ನೋಡು !
ಒಂದು ಪ್ರಜ್ಞೆಯ ಮಡಿಲಿನಿಂದ ಇನ್ನೊಂದರೊಳು
ಸಾಗಿವೆ: ನಿರಾಯಾಸ ಮೀನಗಳ ಪಾಡು !
ವಿಶ್ವ ಸಾಮ್ರಾಜ್ಞಿಯ ಕುಮಾರರಲ್ಲಿಹ ಗೆಲವು,
ಸುಕುಮಾರಿಯರ ವಿನಯ, ಹಿರಿಯ ಆನಂದ;
ಕ್ಷಣ ಕ್ಷಣಕೆ ಮೀನಗಳ ಬಾಳೊಂದು ಸಂಗೀತ
ಎಣೆಯಾವುದೀ ಕ್ರಮಕೆ : ಛಂದ ಸ್ವಚ್ಛಂದ !

ಲೋಕವನೆ ತಾಯಿ ತಾವರೆಗೊಳವ ಮಾಡಿ
ಮಾನವನ ಮೀನಾವತಾರಕೆಂದು
ಶ್ರಮಿಸುವಳು ನೋಂತು, ನಿಂತು, ಯಾತನೆಯ ಸಹಿಸಿ,
ಜನಜೀವನದಿ ಕಾಂತಿ ಶಾಂತಿ ಬಂದು
ಸಪ್ತಲೋಕಗಳಲ್ಲಿ ವ್ಯಾಪ್ತಿವಡೆದು
ಪ್ರೌಢ ಮಾನವ ಹಿಗ್ಗಿ ಬಾಳಲೆಂದು.
ಗುಪ್ತವೀಣೆಯ ನುಡಿಸುತಿಹಳು ತಾಯಿ;
ಬಾ, ಗೆಳೆಯ ಆ ಸ್ವರವ ಕೇಳಲೆಂದು !

—ವಿನಾಯಕ

## ಕನ್ನಡದಲ್ಲಿಯ
# ಶ್ರೀ ಅರವಿಂದ ಸಾಹಿತ್ಯ

| | | | |
|---|---|---|---|
| ೧. | ಸಮರ್ಪಣ (ಸಂಪುಟ ೧) | .... | ೫—೦—೦ |
| ೨. | ,, ( ,, ೨) | .... | ೩—೦—೦ |
| ೩. | ,, ( ,, ೩) | .... | ೩—೦—೦ |
| ೪. | ಶ್ರೀ ಅರವಿಂದರು | .... | ೧—೧೨—೦ |
| ೫. | ಶ್ರೀ ಅರವಿಂದರ ಪತ್ರಗಳು | .... | ೦—೮—೦ |
| ೬. | ಧರ್ಮ ಹಾಗೂ ರಾಷ್ಟ್ರೀಯತ್ವ | .... | ೧—೮—೦ |
| ೭. | ಧರ್ಮಕ್ಷೇತ್ರೇ ಕುರುಕ್ಷೇತ್ರೇ | .... | ೦—೮—೦ |
| ೮. | ಯೋಗ ದೀಕ್ಷೆ | .... | ೧—೦—೦ |
| ೯. | ಪೂರ್ಣಯೋಗ | .... | ೧—೮—೦ |
| ೧೦. | ಉತ್ತರಪಾಡಾ ಉಪನ್ಯಾಸ | .... | ೦—೬—೦ |
| ೧೧. | ಮಾತೃವಾಣಿ | .... | ೧—೮—೦ |
| ೧೨. | ಶ್ರೀ ಅರವಿಂದ ದರ್ಶನ | .... | ೩—೦—೦ |
| ೧೩. | ಆಶ್ರಮ ಮತ್ತು ಉಪದೇಶ | .... | ೦—೮—೦ |
| ೧೪. | ಶ್ರೀ ಅರವಿಂದರು | .... | ೦—೮—೦ |
| ೧೫. | ಭಾರತೀಯ ನವಜನ್ಮ | .... | ೧—೮—೦ |
| ೧೬ | ಶಿಕ್ಷಣ: ಶ್ರೀ ತಾಯಿಯವರು | .... | (ಅಚ್ಚಿನಲ್ಲಿ) |
| ೧೭. | ಶ್ರೀ ಅರವಿಂದರ ಸಂದೇಶ ಮತ್ತು ಆಶ್ರಮ | | ( ,, ) |
| ೧೭. | ಮಹಾಯೋಗಿ | .... | ( ,, ) |

## — ಪುಸ್ತಕಗಳು ಸಿಗುವ ಸ್ಥಳ —

**ಶ್ರೀ ಅರವಿಂದ ಆಶ್ರಮ, ಪಾಂಡಿಚೇರಿ.**

**ಶ್ರೀ ಅರವಿಂದ ಮತ್ತು ಶ್ರೀಮಾತಾ ಮಂಡಲ, ದೇಶಪಾಂಡೆ ನಗರ, ಹುಬ್ಬಳ್ಳಿ.**

**ಶ್ರೀ ಅರವಿಂದ ಮಂಡಲ, ಬಿಜಾಪುರ.**

**ಶ್ರೀ ಅರವಿಂದ ಗ್ರಂಥಾಲಯ, ಚಡಚಣ,** (ಬಿಜಾಪುರ ಜಿಲ್ಲೆ)

**ಶ್ರೀ ಅರವಿಂದ ಮಂಡಲ, ಹಲಸಂಗಿ,** (ಬಿಜಾಪುರ ಜಿಲ್ಲೆ)

ಪುಟ ೧೧೯

**ಇಂದಿನ ದಾರ್ಶನಿಕರಲ್ಲಿ ಶ್ರೀ ಅರವಿಂದರ ಸ್ಥಾನ:**

ಕಂಸೆಯಲ್ಲಿದ್ದ ಕೊನೆಯ ಮೂರು ಸಾಲುಗಳು ಲೇಖನದ ಭಾಗವಾಗಿರದೆ ಸಂಪಾದಕರ ಅಡಿಟಿಪ್ಪಣಿಯೆಂದು ತಿಳಿಯತಕ್ಕದು. ಅಲ್ಲಿ ಸೂಚಿಸಿದ ಸಾಹಿತ್ಯವಿಂತಿದೆ.

i) **Sri Aurobindo Mandir Annual, 1, 4, 5, 6, 9, 11** ಸಂಪುಟಗಳಲ್ಲಿ **S. K. Maitra** ಇವರು ಬರೆದ ಲೇಖಗಳು.
*Sri Aurobindo and Bergson*, *Sri Aurobindo and Nikolai Hartman*,
*Sri Aurobindo and Hegel*, *Sri Aurobindo and Plotinus*,
*Sri Aurobindo and Plato*, *Sri Aurobindo and Goethe*.
೩ನೆಯ ಸಂಪುಟದಲ್ಲಿ Anilbaran Roy ಇವರು *Sri. Aurobindo and Patanjala* ಹಾಗೂ ೪ನೆಯ ಸಂಪುಟದಲ್ಲಿ Vasant K Dhonde ಇವರು ಭೌತಿಕವಾದ ಮಾರ್ಕ್ಸ್ ವಾದಗಳನ್ನು ಕುರಿತು ಬರೆದಿರುವರು.

ii) Bombay Circle, 1ನೆಯ ಸಂಪುಟದಲ್ಲಿ (ಪ್ಲಾ, ಸ್ಪಿ. ಮೊದಲಾದವರೊಡನೆ ಹೋಲಿಸಲಾಗಿದ್ದ) *Sri Aurobindo's Vision of Supermanhood* ಎಂಬ ಲೇಖವೂ ೫ನೆಯ ಸಂಪುಟದಲ್ಲಿ *Our Yoga and the challenge of Pragmatism* ಎಂಬ ಲೇಖವೂ ಇವೆ.

iii) Mother India 1949, May 28, *June 11*, *June 25*, *July 9*, *July 23* ಸಂಚಿಕೆಗಳಲ್ಲಿ *Materialism Religion of Humanity*, *Atheism* ಮೊದಲಾದ ವಿವಿಧ ಜೀವನ ತತ್ವಗಳ ವಿವೇಚನೆ ಇದೆ.